ಶನಿವಾರ, ಅಕ್ಟೋಬರ್ 18, 2025 | ₹ 7.00
prajavani.net prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

‘ಸಿದ್ಧಿ ದಮಾಲ್’

ಜೈಪುರದಲ್ಲಿ ನಡೆಯುತ್ತಿರುವ ಲೋಕ್‌ರಂಗ್ ಹಬ್ಬದಲ್ಲಿ ಗುಜರಾತ್‌ನ ಬುಡಕಟ್ಟು ಜನರು ತಮ್ಮ ‘ಸಿದ್ಧಿ ದಮಾಲ್’ ಎಂಬ ನೃತ್ಯ ಪ್ರಕಾರವನ್ನು ಪ್ರದರ್ಶಿಸಿದರು



ಓದುಗರ ಗಮನಕ್ಕೆ

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ









ಮಕ್ಕಳ ಸೆಳೆಯುವ ಫ್ಯಾನ್ಸಿ ಪಟಾಕಿಗಳು

ಖಡ್ಗ, ಪಿಜ್ಜಾ, ಫಿಶ್, ಗಿಟಾರ್, ಜಂಗಲ್ ಫ್ಯಾಂಟಸಿ ಪಟಾಕಿಗೆ ಭಾರಿ ಬೇಡಿಕೆ

• ಬಾಲಕೃಷ್ಣಪಿ.ಎಚ್.

ಬೆಂಗಳೂರು: ದೀಪಾವಳಿಯ ಸಂಭ್ರಮಕ್ಕೆ ಕಳೆಗಟ್ಟುವ ಪಟಾಕಿಗಳು ಹೊಸೂರು ಮಾರುಕಟ್ಟೆಗೆ ಬಂದಿವೆ. ಮಕ್ಕಳನ್ನು ಸೆಳೆಯಲು ಫ್ಯಾನ್ಸಿ ಪಟಾಕಿಗಳೇ ಈ ಬಾರಿ ಹೆಚ್ಚಿವೆ. ಪಿಜ್ಜಾ, ಫಿಶ್, ಗಿಟಾರ್, ಗೋಲ್ಡನ್ ಡಕ್, ಜಂಗಲ್ ಫ್ಯಾಂಟಸಿ ಪಟಾಕಿಗಳು ಮಕ್ಕಳನ್ನು ಪ್ರಭಾವಿಸುತ್ತಿವೆ.

ಪ್ರತಿವರ್ಷದಂತೆ ಈ ವರ್ಷವೂ ಕರ್ನಾಟಕ– ತಮಿಳುನಾಡು ಗಡಿಭಾಗದಲ್ಲಿ ಇರುವ ಹೊಸೂರು ರಸ್ತೆಯಲ್ಲಿ ಅತ್ತಿಬೆಲೆ, ಸೂರ್ಯನಗರ ದಿಂದ ಹಿಡಿದು ಹೊಸೂರುವರೆಗೆ ರಸ್ತೆ ಬದಿಯಲ್ಲಿ ನೂರಾರು ಪಟಾಕಿ ಮಳಿಗೆಗಳು ತಲೆ ಎತ್ತಿವೆ.

ರಾಜ ಮಹಾರಾಜರ ಖಡ್ಗದಂತಿರುವ ನೈಫ್ ಪಟಾಕಿಯ ಗತ್ತು ಗೈರತ್ತೇ ಬೇರೆಯಾಗಿದ್ದರೂ ಯಾವುದೇ ಅಪಾಯವಿಲ್ಲದೇ ಪುಟ್ಟ ಮಕ್ಕಳೂ ಇದನ್ನು ಹೊತ್ತಿಸಬಹುದು. ಬಣ್ಣ ಬಣ್ಣದ ಬೆಳಕನ್ನು ಇದು ಚಿಮ್ಮಿಸುತ್ತದೆ. ನೈಫ್ ಬಿಟ್ಟರೆ ಪಿಜ್ಜಾ ಪಟಾಕಿಯನ್ನೇ ಮಕ್ಕಳು ಹೆಚ್ಚು ಖರೀದಿಸುತ್ತಿದ್ದಾರೆ ಎಂದು 'ಗಣಪತ್' ಪಟಾಕಿ ಮಳಿಗೆಯ ಆದಿತ್ಯ ನವನೀತ್ ವಿವರ ನೀಡಿದರು.

ಪ್ರಾಣಿಗಳನ್ನು ನೆನಪಿಸುವ ಜಂಗಲ್ ಫ್ಯಾಂಟಸಿ ಪಟಾಕಿ, ವರ್ಣಮಯ ಒಲಿಂಪಿಕ್ ಟಾರ್ಚ್, ವಿಶಲ್ ಶಬ್ದ ಮಾಡುವ ಭೂಚಕ್ರ, ಕಲ್ಲಂಗಡಿ ಪಟಾಕಿ, ಫಂಕಿ ಫಿಶ್‌ಗಳು ಮಕ್ಕಳನ್ನು ಸೆಳೆಯುವಲ್ಲಿ ಯಶಸ್ವಿಯಾಗಿವೆ ಎಂದು 'ತಾಮರಿ' ಟ್ರೇಡರ್ಸ್‌ನ ರಾಹುಲ್ ಮಾಹಿತಿ ನೀಡಿದರು.

ಪಿಸ್ತೂಲ್: ವಿಶಿಷ್ಟ, ವಿಭಿನ್ನ ಪಿಸ್ತೂಲ್, ಗನ್‌ಗಳು ಮಾರುಕಟ್ಟೆಯಲ್ಲಿ ಗಮನ ಸೆಳೆಯುತ್ತಿವೆ. ಕಡಿಮೆ ಬೆಲೆಯ ಪ್ಲಾಸ್ಟಿಕ್ ಪಿಸ್ತೂಲ್‌ಗಳಿಂದ ಹಿಡಿದು ಅಧಿಕ ಬೆಲೆಯ ಕಬ್ಬಿಣದ ಪಿಸ್ತೂಲ್‌ಗಳವರೆಗೆ ತರಹೇವಾರಿ ಇವೆ.

'ನೈಜ ಪಿಸ್ತೂಲಿನಂತೆ ಇರುವುದಕ್ಕೆ ₹600 ದರ ಇದೆ. ಇದೇ ಹೆಚ್ಚು ಬೆಲೆಯದ್ದು. ಉಳಿದಂತೆ ₹50, ₹100, ₹200ಕ್ಕೆ ಸಿಗುತ್ತವೆ' ಎಂದು ಮಾರಾಟಗಾರ ಅನ್ಬು ತಿಳಿಸಿದರು.

ಕನ್ನಡಿಗರೇ ಗ್ರಾಹಕರು: ಗಡಿಯಲ್ಲಿ ಕರ್ನಾಟಕದ ಭಾಗಕ್ಕಿಂತ ತಮಿಳುನಾಡಿನ ಭಾಗದಲ್ಲಿಯೇ ಪಟಾಕಿ ಅಂಗಡಿಗಳು ಹೆಚ್ಚಿದ್ದರೂ ಶೇ 90ಕ್ಕೂ ಅಧಿಕ ಗ್ರಾಹಕರು ಕನ್ನಡಿಗರೇ ಆಗಿದ್ದಾರೆ.


ಬೆಂಗಳೂರು, ಮೈಸೂರು, ಮಂಗಳೂರು, ಬೆಳಗಾವಿ ಸಹಿತ ರಾಜ್ಯದ ವಿವಿಧ ಭಾಗಗಳಿಂದ ಜನರು ಬಂದು ಪಟಾಕಿ ಖರೀದಿಸುತ್ತಾರೆ ಎಂದು ಕಲಾಮಂಗಲ್ ಪಟಾಕಿ ಮಳಿಗೆಯ ಭಾಸ್ಕರ್ ಮಾಹಿತಿ ನೀಡಿದರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ




ಕರ್ನಾಟಕ ತಮಿಳುನಾಡು ಗಡಿಭಾಗವಾದ ಹೊಸೂರು ಸಮೀಪ ಇರುವ ಪಟಾಕಿ ಅಂಗಡಿಗಳಲ್ಲಿ ಖರೀದಿ ನಿಧಾನವಾಗಿ ಆರಂಭವಾಗಿದೆ (ಎಡಚಿತ್ರ) ಮಕ್ಕಳನ್ನು ಸೆಳೆಯುವ ನೈಫ್ ಪಟಾಕಿ

ಚಿತ್ರಗಳು: ಕೃಷ್ಣಕುಮಾರ್ ಪಿ.ಎಸ್.





ಪ್ರತಿವರ್ಷ ಅಪ್ಪ ಖರೀದಿಸುತ್ತಿದ್ದರು. ಈ ಬಾರಿ ನಾನು ಬಂದಿದ್ದೇನೆ. ಬೆಂಗಳೂರಿನಲ್ಲಿ ಸ್ಟ್ಯಾಂಡರ್ಡ್ ಕಂಪನಿಯ ಪಟಾಕಿಗಳಿಗೆ ಶೇ 35ರಿಂದ ಶೇ 40 ರಿಯಾಯಿತಿ, ಲೋಕಲ್ ಕಂಪನಿಗಳಿಗೆ ಶೇ 45ರಷ್ಟು ರಿಯಾಯಿತಿ ದೊರೆತರೆ, ಇಲ್ಲಿ ಅದರ ಡಬಲ್ ರಿಯಾಯಿತಿ ಸಿಗುತ್ತದೆ

ಆದಿತ್ಯ, ಕೆಂಗೇರಿ



ಮಂಗಳೂರಿನಲ್ಲಿ ಪಟಾಕಿ ದರ ದುಬಾರಿ ಆಗಿರುವುದರಿಂದ ನಾವು ಮೂರ್ನಾಲ್ಕು ಸ್ನೇಹಿತರು ಸೇರಿ ಹೊಸೂರಿಗೆ ಬಂದು ಪ್ರತಿವರ್ಷ ಪಟಾಕಿ ಖರೀದಿಸಿ ಒಯ್ಯುತ್ತಿದ್ದೆವು. ಈ ಬಾರಿ ಉಪ್ಪಿನಂಗಡಿಯಲ್ಲಿ ಪಟಾಕಿ ಅಂಗಡಿಯನ್ನೇ ಹಾಕುತ್ತಿದ್ದೇವೆ.

ಸಚಿನ್, ಉಪ್ಪಿನಂಗಡಿ



ನಾವು ಕುಟುಂಬದ ಜೊತೆಗೆ ಬಂದಿದ್ದೇವೆ. ಮಕ್ಕಳಿಗೆ ಪಟಾಕಿ ಅಂದರೆ ಇಷ್ಟ. ಮಕ್ಕಳ ಇಷ್ಟವನ್ನೂ ನೋಡಿಕೊಂಡು, ಪರಿಸರಕ್ಕೂ ಹಾನಿಯಾಗದಂತೆ ಇರುವ ಪಟಾಕಿಗಳನ್ನು ಖರೀದಿ ಮಾಡಿದ್ದೇವೆ.

ಗೀತಾ ಸಂತೋಷ್‌ಕುಮಾರ್, ರಾಜರಾಜೇಶ್ವರಿ ನಗರ

ಶೇ 70ರಿಂದ ಶೇ 90 ರವರೆಗೆ ರಿಯಾಯಿತಿ

ಪಟಾಕಿ ತಯಾರಿಕೆಯಲ್ಲಿ ದೇಶದಲ್ಲಿಯೇ ನಂಬರ್ ಒನ್ ಸ್ಥಾನದಲ್ಲಿರುವ ಶಿವಕಾಶಿಯಿಂದ ಇಲ್ಲಿಗೆ ನೇರವಾಗಿ ಪಟಾಕಿಗಳನ್ನು ತಂದು ಮಾರಾಟ ಮಾಡುತ್ತಿರುವುದರಿಂದ ಗ್ರಾಹಕರಿಗೆ ವಿಶೇಷ ರಿಯಾಯಿತಿಗಳು ದೊರೆಯುತ್ತಿವೆ. ಸ್ಟ್ಯಾಂಡರ್ಡ್‌ನಂಥ ಕಂಪನಿಗಳ ಪಟಾಕಿಗಳಿಗೆ ಶೇ 70ರಷ್ಟು ರಿಯಾಯಿತಿ, ಎಲಿಫೆಂಟ್ ಸುಪ್ರೀಂ, ಸೋನಿ, ಅಜಂತ, ಆನಂದ, ಶ್ರೀವಿಜಯ, ಜೈರೋಬಿ, ತನಿಗೈ ಮುಂತಾದ ಸ್ಥಳೀಯ ಕಂಪನಿಗಳ ಪಟಾಕಿಗಳಿಗೆ ಶೇ 90ರಷ್ಟು ರಿಯಾಯಿತಿ ದೊರೆಯುತ್ತಿದೆ.

ಸುದ್ದಿ 2 ನಿಮಿಷ

ದಾಖಲೆಗಳ ಡಿಜಿಟಲೀಕರಣಕ್ಕೆ ಮಹೇಶ್ವರ ರಾವ್ ಸೂಚನೆ

ಬೆಂಗಳೂರು: ನಗರ ಪಾಲಿಕೆ ಮಟ್ಟದಲ್ಲಿ ಇ-ಆಫೀಸ್ ಮೂಲಕವೇ ಕಡತ ವಿಲೇವಾರಿಗೆ ಕ್ರಮವಹಿಸಬೇಕು. ಕಾಗದ ಸ್ವರೂಪದ ದಾಖಲೆಗಳನ್ನು ಕ್ರಮೇಣ ಡಿಜಿಟಲ್ ಸ್ವರೂಪಕ್ಕೆ ಪರಿವರ್ತಿಸಬೇಕು ಎಂದು ಜಿಬಿಎ ಮುಖ್ಯ ಆಯುಕ್ತ ಎಂ. ಮಹೇಶ್ವರ ರಾವ್ ಹೇಳಿದರು.

ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ಜಯನಗರ ಕಚೇರಿಯಲ್ಲಿ ಅಧಿಕಾರಿಗಳೊಂದಿಗೆ ಶುಕ್ರವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ಅಭಿವೃದ್ಧಿ ಕಾಮಗಾರಿಗಳು ಎರಡು ಅಥವಾ ಹೆಚ್ಚು ನಗರ ಪಾಲಿಕೆಗಳ ವ್ಯಾಪ್ತಿಯನ್ನು ಒಳಗೊಂಡಿದ್ದರೆ, ಅಧಿಕಾರಿಗಳು ಪರಸ್ಪರ ಸಮನ್ವಯ ಸಾಧಿಸಿ ಕಾಲಮಿತಿಯಲ್ಲಿ ಕಾಮಗಾರಿಗಳು ಪೂರ್ಣಗೊಳ್ಳುವಂತೆ ನೋಡಿಕೊಳ್ಳಬೇಕು ಎಂದು ಸೂಚನೆ ನೀಡಿದರು.

ನಗರ ಪಾಲಿಕೆ ಕಚೇರಿಗಳು ಹಾಗೂ ಉಪವಿಭಾಗಗಳಲ್ಲಿ ಮಾನವ ಸಂಪನ್ಮೂಲದ ಕೊರತೆ ಇರುವ ಸ್ಥಳಗಳನ್ನು ಗುರುತಿಸಿ, ಅಗತ್ಯ ಹುದ್ದೆಗಳನ್ನು ಭರ್ತಿ ಮಾಡುವ ಪ್ರಸ್ತಾವ ಸಲ್ಲಿಸಲು ನಿರ್ದೇಶನ ನೀಡಿದರು.

ಆಯಾ ನಗರ ಪಾಲಿಕೆಗಳಲ್ಲಿ ನಡೆಯುತ್ತಿರುವ ಕಾಮಗಾರಿಗಳ ಪ್ರಗತಿ ಕುರಿತ ಮಾಹಿತಿ ಪಡೆಯಲು ನೋಡಲ್ ಅಧಿಕಾರಿಗಳನ್ನು ನಿಯೋಜಿಸಬೇಕು. ಆ ನೋಡಲ್ ಅಧಿಕಾರಿ ಜಿಬಿಎ ಸಮನ್ವಯ ವಿಭಾಗದ ಜೊತೆ ಕಾಮಗಾರಿಗಳ ಕುರಿತು ಕಾಲ-ಕಾಲಕ್ಕೆ ಮಾಹಿತಿ ಪಡೆಯಲು ಅನುಕೂಲವಾಗಲಿದೆ ಎಂದು ತಿಳಿಸಿದರು.

ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ಆಯುಕ್ತ ಕೆ.ಎನ್. ರಮೇಶ್, ವಿಶೇಷ ಆಯುಕ್ತ ಕೆ. ಹರೀಶ್ ಕುಮಾರ್, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ ಸಿಇಒ ಕರೀಗೌಡ, ಜಂಟಿ ಆಯುಕ್ತ ಮಧು ಪಾಟೀಲ್, ಮುಖ್ಯ ಎಂಜಿನಿಯರ್ ಬಸವರಾಜ್ ಕಬಾಡೆ, ರಾಜೇಶ್, ರವಿ ಉಪಸ್ಥಿತರಿದ್ದರು.

ಪೌರಕಾರ್ಮಿಕರಿಗೆ ಸಿಹಿ ವಿತರಣೆ



ಬೆಂಗಳೂರು: ದೀಪಾವಳಿ ಹಬ್ಬದ ಪ್ರಯುಕ್ತ ಬಿ-ಪ್ಯಾಕ್ ವತಿಯಿಂದ ಪೌರಕಾರ್ಮಿಕರಿಗೆ ಜಿಬಿಎ ಮುಖ್ಯ ಆಯುಕ್ತ ಎಂ. ಮಹೇಶ್ವರ ರಾವ್ ಶುಕ್ರವಾರ ಸಿಹಿ ವಿತರಿಸಿದರು.

ಪೌರಕಾರ್ಮಿಕರ ಶ್ರಮವನ್ನು ಗುರುತಿಸಿ ಬಿ-ಪ್ಯಾಕ್ ಸಂಸ್ಥೆಯು ಸತತ 5 ವರ್ಷಗಳಿಂದ ಸಿಹಿ ವಿತರಿಸುತ್ತಿದೆ. ಈ ವರ್ಷ ನಗರದ ಸುಮಾರು 28,000 ಪೌರಕಾರ್ಮಿಕರಿಗೆ ಸಿಹಿ ತಿನಿಸು ನೀಡಿದ್ದಾರೆ ಎಂದು ಆಯುಕ್ತರು ಮಾಹಿತಿ ನೀಡಿದರು.

ಬಿ-ಪ್ಯಾಕ್ ಸಿವಿಕ್ ಪ್ರತಿನಿಧಿಗಳು, ಪೌರಕಾರ್ಮಿಕರು ಉಪಸ್ಥಿತರಿದ್ದರು.

ಮಿಂಟೊ ಕಣ್ಣಿನ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಪ್ರತ್ಯೇಕ ವಾರ್ಡ್

ಪಟಾಕಿ ಗಾಯಕ್ಕೆ 24 ಗಂಟೆಯೂ ಸೇವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀಪಾವಳಿ ಹಬ್ಬದ ಸಂದರ್ಭದಲ್ಲಿ ಪಟಾಕಿ ಅವಘಡಗಳು ಸಂಭವಿಸಿದಲ್ಲಿ ಕಣ್ಣಿಗೆ ಹಾನಿಯಾಗುವುದನ್ನು ತಪ್ಪಿಸಲು ನಗರದ ಕಣ್ಣಿನ ಆಸ್ಪತ್ರೆಗಳು ಅಗತ್ಯ ಸಿದ್ಧತೆ ಮಾಡಿಕೊಂಡಿದ್ದು, ಹಬ್ಬದ ಸಂದರ್ಭದಲ್ಲಿ ದಿನದ 24 ಗಂಟೆಯೂ ಸೇವೆ ನೀಡಲು ಸಜ್ಜಾಗಿವೆ.

ಮಿಂಟೊ, ನಾರಾಯಣ ನೇತ್ರಾಲಯ, ನೇತ್ರಧಾಮ, ಶಂಕರ, ಡಾ. ಅಗರವಾಲ್ಸ್ ಸೇರಿ ವಿವಿಧ ಕಣ್ಣಿನ ಆಸ್ಪತ್ರೆಗಳು ಚಿಕಿತ್ಸೆಗೆ ಬೇಕಾದ ಔಷಧಗಳನ್ನು ದಾಸ್ತಾನು ಮಾಡಿಕೊಂಡಿವೆ. ಅದೇ ರೀತಿ, ಪ್ರತ್ಯೇಕ ಹಾಸಿಗೆ ವ್ಯವಸ್ಥೆಯನ್ನು ಮಿಂಟೊ, ನಾರಾಯಣ ನೇತ್ರಾಲಯ ಸೇರಿ ಕೆಲ ಆಸ್ಪತ್ರೆಗಳಲ್ಲಿ ಮಾಡಲಾಗಿದೆ.

ಮಿಂಟೊ ಕಣ್ಣಿನ ಆಸ್ಪತ್ರೆಯಲ್ಲಿ ಒಟ್ಟು 25 ಹಾಸಿಗೆಗಳನ್ನು ಪಟಾಕಿ ಗಾಯಾಳುಗಳ ಚಿಕಿತ್ಸೆಗಾಗಿ ಮೀಸಲಿಡಲಾಗಿದೆ. ಇವುಗಳಲ್ಲಿ ತಲಾ 10 ಪುರುಷರು ಹಾಗೂ ಮಹಿಳೆಯರಿಗೆ, ಐದು ಹಾಸಿಗೆಗಳನ್ನು ಮಕ್ಕಳ ಚಿಕಿತ್ಸೆಗೆ ಬಳಸಿಕೊಳ್ಳಲಾಗುತ್ತದೆ.

'ಹಬ್ಬದ ದಿನಗಳಲ್ಲಿ 24 ಗಂಟೆಯೂ ಚಿಕಿತ್ಸೆ ಲಭ್ಯವಿರಲಿದ್ದು, ವೈದ್ಯರು ಹಾಗೂ ಸಿಬ್ಬಂದಿ ಹಾಜರಿರುತ್ತಾರೆ. ರೋಗಿಗಳ ಚಿಕಿತ್ಸೆಗೆ ಬೇಕಾದ ಸಲಕರಣೆ ಹಾಗೂ ಔಷಧಗಳನ್ನು ದಾಸ್ತಾನು ಮಾಡಿಕೊಳ್ಳಲಾಗಿದೆ. ದೀಪಾವಳಿ ಹಬ್ಬದ ಸಂದರ್ಭದಲ್ಲಿ ಪಟಾಕಿಗಳ ಹಾವಳಿ ಹೆಚ್ಚುತ್ತಿದ್ದು, ಮುನ್ನೆಚ್ಚರಿಕೆ ವಹಿಸದಿದ್ದಲ್ಲಿ ಬೆಳಕಿನ ಹಬ್ಬವು ಜೀವನದಲ್ಲಿ ಕತ್ತಲೆ ತರುವ ಸಾಧ್ಯತೆ ಇರುತ್ತದೆ' ಎಂದು ಮಿಂಟೊ ಕಣ್ಣಿನ ಆಸ್ಪತ್ರೆ ನಿರ್ದೇಶಕ (ಉಸ್ತುವಾರಿ) ಡಾ.ಎಸ್. ಶಶಿಧರ್ ತಿಳಿಸಿದರು.

'ಐದು ವರ್ಷದೊಳಗಿನ ಮಕ್ಕಳಿಗೆ ಪಟಾಕಿಗಳನ್ನು ಹೊಡೆಯಲು ಬಿಡಬಾರದು. ಬಯಲು ಪ್ರದೇಶದಲ್ಲಿ ಪಟಾಕಿಗಳನ್ನು ಬಿಸಾಡುವುದು ಸೇರಿ ವಿವಿಧ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು' ಎಂದರು.

ರಾಜಾಜಿನಗರದ ನಾರಾಯಣ ನೇತ್ರಾಲಯದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಕೆ. ಮಿತ್ತಲ್, 'ಪಟಾಕಿಗಳಿಂದ ಉಂಟಾದ ಗಾಯಗಳು ಕಣ್ಣುಗಳ ಮೇಲೆ ಪರಿಣಾಮ ಬೀರುತ್ತವೆ. ಈ ಗಾಯಗಳು ಗಂಭೀರ ಹಾನಿ ಅಥವಾ ಶಾಶ್ವತ ದೃಷ್ಟಿ ನಾಶಕ್ಕೆ ಕಾರಣವಾಗುತ್ತವೆ. ಹಬ್ಬದ ಸಂದರ್ಭದಲ್ಲಿ ಸಂಭವಿಸುವ ಪಟಾಕಿ ಗಾಯಗಳಿಗೆ ಇದೇ 19 ರಿಂದ 22ರವರೆಗೆ ದಿನದ 24 ಗಂಟೆಯೂ ನಾರಾಯಣ ನೇತ್ರಾಲಯದ ವಿವಿಧ ಶಾಖೆಗಳಲ್ಲಿ ಚಿಕಿತ್ಸೆ ದೊರೆಯಲಿದೆ' ಎಂದು ಹೇಳಿದರು.

ಸುಟ್ಟಗಾಯಕ್ಕೆ ಚಿಕಿತ್ಸೆ

ಪಟಾಕಿ ಅವಘಡದಿಂದ ಸಂಭವಿಸುವ ಸುಟ್ಟ ಗಾಯಗಳಿಗೆ ತುರ್ತು ಚಿಕಿತ್ಸೆ ನೀಡಲು ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿರುವ ಮಹಾಬೋಧಿ ಸುಟ್ಟ ಗಾಯಗಳ ಚಿಕಿತ್ಸಾ ಕೇಂದ್ರ ಅಗತ್ಯ ಸಿದ್ಧತೆ ಮಾಡಿಕೊಂಡಿದೆ. ಈ ಕೇಂದ್ರಕ್ಕೆ ಅಗತ್ಯ ವೈದ್ಯರು, ಶುಶ್ರೂಷಕರು ಹಾಗೂ ಸಹಾಯಕ ಸಿಬ್ಬಂದಿಯನ್ನು ನಿಯೋಜಿಸಲಾಗಿದ್ದು, ದಿನದ 24 ಗಂಟೆಯೂ ಇಲ್ಲಿ ವೈದ್ಯಕೀಯ ಸೇವೆ ಲಭ್ಯವಿರಲಿದೆ.

ಸಹಾಯವಾಣಿಗಳು
ಮಿಂಟೊ ಕಣ್ಣಿನ ಆಸ್ಪತ್ರೆ: 080 26707176 ಅಥವಾ 26706221
ನಾರಾಯಣ ನೇತ್ರಾಲಯ ರಾಜಾಜಿನಗರ ಶಾಖೆ- 080 66121641/1643 ಅಥವಾ 9902546046
ನಾರಾಯಣ ನೇತ್ರಾಲಯ, ಎನ್‌ಎಚ್ ಹೆಲ್ತ್ ಸಿಟಿ ಬೊಮ್ಮಸಂದ್ರ 080 66660658 ಅಥವಾ 9902821128
ನಾರಾಯಣ ನೇತ್ರಾಲಯ ಇಂದಿರಾನಗರ ಶಾಖೆ 080 66974000 ಅಥವಾ 9916024455
ನಾರಾಯಣ ನೇತ್ರಾಲಯ ಬನ್ನೇರುಘಟ್ಟ ರಸ್ತೆ ಶಾಖೆ 080 66121618 ಅಥವಾ 9035154170
ನಾರಾಯಣ ನೇತ್ರಾಲಯ ವೈಟ್‌ಫೀಲ್ಡ್ ಶಾಖೆ 080 66121658 ಅಥವಾ 9535258004
ಶಂಕರ ಕಣ್ಣಿನ ಆಸ್ಪತ್ರೆ: (ಮಾರತಹಳ್ಳಿ) 080 69038900 ಅಥವಾ 9739270477
ಜಯನಗರದ ನೇತ್ರಧಾಮ: 080 26088000 ಅಥವಾ 9448071816
ಡಾ. ಅಗರವಾಲ್ಸ್ ಕಣ್ಣಿನ ಆಸ್ಪತ್ರೆ ಬನ್ನೇರುಘಟ್ಟ ಶಾಖೆ 08048193419, ರಾಜರಾಜೇಶ್ವರಿ ನಗರ ಶಾಖೆ 918048193501

ಕಸಾಪ: ಷರತ್ತಿನೊಂದಿಗೆ ಅನುದಾನ

ಬೆಂಗಳೂರು: ಅನುದಾನ ಬಳಕೆಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆ ವರದಿ ಸಲ್ಲಿಕೆ ಸೇರಿ ವಿವಿಧ ಷರತ್ತುಗಳೊಂದಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡ ಸಾಹಿತ್ಯ ಪರಿಷತ್ತಿಗೆ (ಕಸಾಪ) ₹ 1.01 ಕೋಟಿ ಅನುದಾನ ಬಿಡುಗಡೆ ಮಾಡಿದೆ.

ಈ ಬಗ್ಗೆ ಇಲಾಖೆ ನಿರ್ದೇಶಕರು ಆದೇಶ ಹೊರಡಿಸಿದ್ದಾರೆ. ಪರಿಷತ್ತಿನ ಸಿಬ್ಬಂದಿಗೆ ಆರು ತಿಂಗಳ ವೇತನ ಪಾವತಿಗೆ ಈ ಅನುದಾನ ಬಳಕೆ ಮಾಡಿಕೊಳ್ಳಲು ಸೂಚಿಸಲಾಗಿದೆ.

ಕಸಾಪ 2025–26ನೇ ಸಾಲಿನ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಸಲ್ಲಿಸಬೇಕು. ಈ ಅನುದಾನವನ್ನು ಸಿಬ್ಬಂದಿ ವೇತನಕ್ಕೆ ಮಾತ್ರ ಬಳಕೆ ಮಾಡಿಕೊಳ್ಳಬೇಕು. ಈ ಹಣಕ್ಕೆ ಸಂಬಂಧಿಸಿದಂತೆ ಮೂರು ತಿಂಗಳ ಒಳಗೆ ಲೆಕ್ಕಪರಿಶೋಧನೆ ವರದಿಯನ್ನು ಇಲಾಖೆಗೆ ಸಲ್ಲಿಸಬೇಕು ಎಂಬುದು ಸೇರಿದಂತೆ ಹಲವು ಷರತ್ತುಗಳನ್ನು ವಿಧಿಸಲಾಗಿದೆ.

ಕೊಡಗಿನ ತಲಕಾವೇರಿಯಲ್ಲಿ ಈ ಬಾರಿ ಬಿಸಿಲು ನೆರಳಿನಾಟ

ಕಾವೇರಿ: ತೀರ್ಥೋದ್ಭವಕ್ಕೆ ಜನಸಾಗರ

• ಕೆ.ಎಸ್.ಗಿರೀಶ

ಮಡಿಕೇರಿ: ಹಸಿರುಹೊದ್ದ ಬೆಟ್ಟಗಳ ನಡುವೆ ಕಾವೇರಿ ಪವಿತ್ರ ತೀರ್ಥೋದ್ಭವವು ಮುಂಜಾನೆಯ ಚಳಿ ಹಾಗೂ ದಟ್ಟ ಮಂಜಿನ ಬದಲು ಅಪರೂಪಕ್ಕೆಂಬಂತೆ ಈ ಬಾರಿ ಮಧ್ಯಾಹ್ನದ ಬಿಸಿಲು–ನೆರಳಿನಾಟದಲ್ಲಿ ಒಡಮೂಡಿತು. ಈ ವಿಶೇಷ ಕ್ಷಣ ಕಣ್ತುಂಬಿಕೊಳ್ಳಲೆಂದೇ ಮೋಡಗಳ ನಡುವಿನಿಂದ ಸೂರ್ಯ ಆಗಾಗ ಇಣುಕುತ್ತಿದ್ದ.

ತಲಕಾವೇರಿಯ ಬ್ರಹ್ಮಕುಂಡಿಕೆಯಲ್ಲಿ ಅರ್ಚಕ ವೃಂದ ಶುಕ್ರವಾರ ಮಧ್ಯಾಹ್ನ 1.44ಕ್ಕೆ ಕಾವೇರಿ ಪವಿತ್ರ ತೀರ್ಥೋದ್ಭವವಾಯಿತೆಂದು ಘೋಷಿಸುತ್ತಿದ್ದಂತೆಯೇ ಸುತ್ತಲೂ ಸೇರಿದ್ದ ಅಪಾರ ಜನರು ಜಯಘೋಷ ಮೊಳಗಿಸಿತು. ಪವಿತ್ರ ಜಲವನ್ನು ಅರ್ಚಕರು ಪ್ರೋಕ್ಷಿಸುತ್ತಿದ್ದಂತೆಯೇ ಪುಳಕಿತರಾದ ಜನರು ಕೈಮುಗಿದರು. 'ಉಕ್ಕಿ ಬಾ ಕಾವೇರಮ್ಮೆ, ಕುಲದೇವಿ ಕಾವೇರಮ್ಮೆ' ಎಂದು ಜಯಘೋಷಗಳನ್ನು ಮೊಳಗಿಸಿದರು.

ಆಗೊಮ್ಮೆ, ಈಗೊಮ್ಮೆ ಆವರಿಸುತ್ತಿದ್ದ ದಟ್ಟ ಮೋಡಗಳು ಸೂರ್ಯನ ಉರಿಬಿಸಿಲಿನಿಂದ ಜನರನ್ನು ಬಸವಳಿಯದಂತೆ ನೋಡಿಕೊಂಡವು. ಮಳೆಗಾಗಿ ತಂದಿದ್ದ ಕೊಡೆಗಳನ್ನು ಜನರು ಬಿಸಿಲಿಗೆ ಹಿಡಿದು ತೀರ್ಥೋದ್ಭವದ ಕ್ಷಣಗಳನ್ನು ಕಣ್ತುಂಬಿಕೊಂಡರು. ಈ ಬಾರಿ ತೀರ್ಥೋದ್ಭವ ಮಧ್ಯಾಹ್ನ ನಡೆದಿದ್ದರಿಂದ ಎಲ್ಲಾ ವಯೋಮಾನದವರೂ ಭಾಗಿಯಾದರು.

ತೀರ್ಥೋದ್ಭವದ ನಂತರ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು, ಶುಭ್ರವಾಗಿದ್ದ ಕಲ್ಯಾಣಿಯಲ್ಲಿ ಮುಳುಗೆದ್ದರು. ತೀರ್ಥ ತುಂಬಿಸಿಕೊಳ್ಳಲು ಒಮ್ಮೆಗೆ ಮುಗಿಬಿದ್ದ ಜನರನ್ನು ನಿಯಂತ್ರಿಸಲು ಪೊಲೀಸರು ಪರದಾಡಿದರು.



ಕೊಡಗು ಜಿಲ್ಲೆಯ ತಲಕಾವೇರಿಯಲ್ಲಿ ಶುಕ್ರವಾರ ಕಾವೇರಿ ಪವಿತ್ರ ತೀರ್ಥೋದ್ಭವವಾಯಿತೆಂದು ಅರ್ಚಕ ವೃಂದ ಘೋಷಿಸಿ ತೀರ್ಥಪ್ರೋಕ್ಷಣೆ ಮಾಡುತ್ತಿದ್ದಂತೆಯೇ ತೀರ್ಥವನ್ನು ಪಡೆಯಲು ಜನರು ಮುಗಿಬಿದ್ದರು

ಚಿತ್ರ: ರಂಗಸ್ವಾಮಿ

ಇದಕ್ಕೂ ಮುನ್ನ ಹೆಚ್ಚಿನ ಜನರು ಭಾಗ ಮಂಡಲದಿಂದ ತಲಕಾವೇರಿ ಬೆಟ್ಟವನ್ನು ಸಾಂಪ್ರದಾಯಿಕ ದಿರಿಸು ತೊಟ್ಟು ಕಾಲ್ನಡಿಗೆಯಲ್ಲಿ ಏರಿ ಧನ್ಯತೆ ಅನುಭವಿಸಿದರು. ಹಾಳಾಗಿದ್ದ ರಸ್ತೆಯಲ್ಲೇ ಈ ವರ್ಷವೂ ಮಡಿಕೇರಿಯಿಂದ ಭಾಗಮಂಡಲದವರೆಗೂ ಪ್ರಯಾಣಿಸಿದರು.

ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಮುಖ್ಯಮಂತ್ರಿ ಅವರ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಕಾಲ್ನಡಿಗೆಯಲ್ಲಿ ತಲಕಾವೇರಿ ಬೆಟ್ಟ ಏರಿ ಗಮನ ಸೆಳೆದರು. ಹವಾಮಾನ ವೈಪರೀತ್ಯ ಕಾರಣಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಸಚಿವ ರಾಮಲಿಂಗಾರೆಡ್ಡಿ ತಮ್ಮ ಭೇಟಿಯನ್ನು ಕಡೆ ಗಳಿಗೆಯಲ್ಲಿ ರದ್ದುಪಡಿಸಿದರು.

ನಗರದಲ್ಲಿ ಇಂದು

ಮಕ್ಕಳ ವಚನ ಮೇಳ: ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಕಲಾಗ್ರಾಮ ಸಮುಚ್ಚಯ, ಮಲ್ಲತ್ತಹಳ್ಳಿ, ಬೆಳಿಗ್ಗೆ 9.30ರಿಂದ
ಪದವಿ ಪ್ರದಾನ ಸಮಾರಂಭ: ಅತಿಥಿ: ರಮೇಶ್ ಬಿ., ಪುಟ್ಟಣ್ಣ, ಅಧ್ಯಕ್ಷತೆ: ಕೆ.ಎಂ. ನಾಗರಾಜ್, ಆಯೋಜನೆ ಹಾಗೂ ಸ್ಥಳ: ಕಮ್ಯೂನಿಟಿ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಆ್ಯಂಡ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ಜಯನಗರ, ಬೆಳಿಗ್ಗೆ 10.30
ಸಂಸ್ಥಾಪಕರ ದಿನಾಚರಣೆ: ಅತಿಥಿಗಳು: ಸರೋಜ ಚಂದ್ರಶೇಖರ್, ಎಂ.ವಿ. ಪ್ರಕಾಶ್, ಬಿ.ಎನ್. ಬಚ್ಚೇಗೌಡ, ವಿ. ಗೋಪಾಲಗೌಡ, ಎ.ಜಿ. ಸದಾಶಿವ, ಬಿ.ಎಲ್. ಶಂಕರ್, ಸಿ. ನಾರಾಯಣಸ್ವಾಮಿ, ವಿನಯ್ ಲೂಥ್ರ, ಶರತ್ ಬಚ್ಚೇಗೌಡ, ವೂಡೇ ಪಿ. ಕೃಷ್ಣ, ಎಂ.ಚಂದ್ರಶೇಖರ್ ಮತ್ತು ಸಂಧ್ಯಾ ಅವರ ನೆನಪಿನ ಕೂಟ, ಅಭಿನಂದನೆ: ಪ್ರಶಾಂತ್ ಪ್ರಕಾಶ್, ಅಧ್ಯಕ್ಷತೆ: ಎಚ್.ಎನ್. ನಾಗಮೋಹನದಾಸ್, ಆಯೋಜನೆ: ಹುಲ್‌ಕುಲ್ ಮುನಿಸ್ವಾಮಪ್ಪ ಮುನಿವೆಂಕಟಮ್ಮ ಚಾರಿಟಬಲ್ ಟ್ರಸ್ಟ್, ಸ್ಥಳ: ಎಂ. ಚಂದ್ರಶೇಖರ ಭವನ, ಗೊಟ್ಟಿಗೆರೆ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 10.30
ಐದು ಪುಸ್ತಕಗಳ ಬಿಡುಗಡೆ: 'ನನ್ನ ಅಪ್ಪ ಕೆಎಸ್‌ನ', 'ಹಾಸ್ಯಾಲಾಪ', 'ಚಿರಂತನ ಭಾವಬಿಂದು', 'ಅಯೋಧ್ಯಾ ಕಾಶಿ ಭೂತಾನ್', 'ಕಥಾಸುಧೆಯ ಕಡಲು', ಅತಿಥಿಗಳು: ಬಿ.ಆರ್. ಲಕ್ಷ್ಮಣರಾವ್, ಕೆ.ಎನ್. ಗಣೇಶಯ್ಯ, ಅಧ್ಯಕ್ಷತೆ: ಬೆಂ.ಶ್ರೀ. ರವೀಂದ್ರ, ಪುಸ್ತಕ ಪರಿಚಯ: ಅರುಣ ಜಿ.ವಿ., ರಘುರಾಮ್ ಎನ್.ವಿ., ರಾಮಮೂರ್ತಿ ತೆಮ್ಮಮನೆ, ಸಂಧ್ಯಾ ರೆಡ್ಡಿ, ಆಯೋಜನೆ: ಸಮನ್ವಯ ಸಮಿತಿ, ಕನ್ನಡವೇ ಸತ್ಯ ಪ್ರತಿಷ್ಠಾನ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10.30
ಪುನರ್‌ಮನನ ಕಾರ್ಯಕ್ರಮ: ಉದ್ಘಾಟನೆ: ರಮೇಶ್ ಬಿ., ಅತಿಥಿಗಳು: ಧನಶೇಖರ ಪಾಂಡಿಯನ್, ಕೆಂಪೇಗೌಡ ಬಿ.ಕೆ., ಮಲ್ಲಿಕಾರ್ಜುನ, ಅಧ್ಯಕ್ಷತೆ: ರಿತಿಕಾ ಸಿನ್ಹಾ, ಆಯೋಜನೆ: ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಬೆಳಿಗ್ಗೆ 10.30
ಗಾಂಧಿ ಜಯಂತಿ ಮತ್ತು ಲಾಲ್‌ಬಹದ್ದೂರ್ ಶಾಸ್ತ್ರಿ ಅವರ ಜಯಂತಿ ಅಂಗವಾಗಿ ಕಾರ್ಯಕ್ರಮ ಹಾಗೂ ಡಾ.ಕೆ. ನಾಗಪ್ಪ ಆಳ್ವ ಮತ್ತು ಕಲ್ಯಾಣಿ ಆಳ್ವ ದತ್ತಿ ನಿಧಿ ಸ್ಪರ್ಧೆ: ಅಧ್ಯಕ್ಷತೆ: ಕೆ. ಮೋಹನ್ ದೇವ್ ಆಳ್ವ, ಪದ್ಮಿನಿ ನಾಗರಾಜು, ಆಯೋಜನೆ ಹಾಗೂ ಸ್ಥಳ: ಅಖಿಲ ಕರ್ನಾಟಕ ಮಕ್ಕಳ ಕೂಟ, ಕೋಟೆ, ಬೆಳಿಗ್ಗೆ 10.30
ನಮ್ಮ ಮೆಟ್ರೊಗೆ 'ನಾಡಪ್ರಭು ಕೆಂಪೇಗೌಡ ಮೆಟ್ರೊ' ಎಂದು ಮರುನಾಮಕರಣಕ್ಕೆ ಒತ್ತಾಯ: ಸಾನ್ನಿಧ್ಯ: ನಿಶ್ಚಲಾನಂದ ಸ್ವಾಮೀಜಿ, ಅಧ್ಯಕ್ಷತೆ: ಟಿ. ಕೋನಪ್ಪರೆಡ್ಡಿ, ಅತಿಥಿಗಳು: ಉದಯ್ ಬಿ. ಗರುಡಾಚಾರ್, ಕೆಂಚಪ್ಪಗೌಡ, ವಿವೇಕ್ ರೆಡ್ಡಿ, ರಾಧಾಕೃಷ್ಣ, ಆಯೋಜನೆ: ವಿಶ್ವ ಒಕ್ಕಲಿಗರ ಮಹಾ ವೇದಿಕೆ, ಸ್ಥಳ: ವಿಜ್ಞಾನ ಕಾಲೇಜು ಸಭಾಂಗಣ, ರಾಜ್ಯ ಒಕ್ಕಲಿಗರ ಸಂಘದ ಆವರಣ, ವಿವಿ ಪುರ, ಬೆಳಿಗ್ಗೆ 11
'ಶಿಕ್ಷಣಧಾರೆ' ಶೈಕ್ಷಣಿಕ ಸಾಕ್ಷ್ಯಚಿತ್ರ ಬಿಡುಗಡೆ: ಉದ್ಘಾಟನೆ: ಕೆ. ಚಿರಂಜೀವಿ, ಅಧ್ಯಕ್ಷತೆ: ಗೋಪಾಲಕೃಷ್ಣ, ಸಾಕ್ಷ್ಯಚಿತ್ರ ಬಿಡುಗಡೆ: ಎಲ್. ಬೈರಪ್ಪ, ಆಯೋಜನೆ: ಚಂದನ ಕ್ರಿಯೇಷನ್ಸ್, ಸ್ಥಳ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನ, ಮಧ್ಯಾಹ್ನ 2.30

'ಕನಕ ಕಾ ವ್ಯದೀವಿಗೆ' ಮೂರು ದಿನಗಳ ಕನಕ ನಡೆ-ನುಡಿ ಉತ್ಸವ: ಬೆಳಿಗ್ಗೆ 11ಕ್ಕೆ 'ಕನಕ ನಮ್ಮ ತನಕ' ವಿಚಾರ ಸಂಕಿರಣ, ಅಧ್ಯಕ್ಷತೆ: ಎಲ್.ಎನ್. ಮುಕುಂದರಾಜ್, ವಿಷಯ ಮಂಡನೆ: ಚ.ಹ. ರಘುನಾಥ, ವಿನೋದ, ಸಮನ್ವಯ: ಪಿ. ಚಂದ್ರಿಕ, ಮಧ್ಯಾಹ್ನ 3.30ಕ್ಕೆ ಕನಕ ಕಾವ್ಯ ವೈಭವ, ಸಂಜೆ 5ಕ್ಕೆ ಸಮಾರೋಪ ಸಮಾರಂಭ: ಅಧ್ಯಕ್ಷತೆ: ಕೆ. ಮರುಳಸಿದ್ದಪ್ಪ, ಸಮಾರೋಪ ನುಡಿ: ಎಸ್. ಜಿ. ಸಿದ್ಧರಾಮಯ್ಯ, ರಾಷ್ಟ್ರೀಯ ನಾಟಕ ಶಾಲೆಯಿಂದ 'ಕಥಾಗಾಯಕಿ ಕನಕ ನಮ್ಮ ತನಕ' ಪ್ರಸ್ತುತಿ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ



ಕೆ.ಮರುಳಸಿದ್ದಪ್ಪ

ನಾಕುತಂತಿ ಷಷ್ಟಿಪೂರ್ತಿ ನಾದ-9 ವಿಶೇಷ ವ್ಯಾಖ್ಯಾನ: ಜಿ. ಬಿ. ಹರೀಶ, ಅಧ್ಯಕ್ಷತೆ: ಎಂ.ಎಸ್. ನರಸಿಂಹಮೂರ್ತಿ, ಆಯೋಜನೆ: ಅಖಿಲ ಭಾರತೀಯ ಸಾಹಿತ್ಯ ಪರಿಷದ್, ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡ ನಗರ, ಸಂಜೆ 4.30
ಎಚ್. ಲಕ್ಷ್ಮೀನಾರಾಯಣಸ್ವಾಮಿ ಅವರ 'ಒಳಮೀಸಲಾತಿ ಮತ್ತು ಇತರೆ ಲೇಖನಗಳು', 'ತೊಗಲ ಚೀಲದ ಕರ್ಣ', 'ನೂಲ ಏಣಿಯ ನಡಿಗೆ' ಪುಸ್ತಕಗಳ ಬಿಡುಗಡೆ: ಗೋವಿಂದ ಕಾರಜೋಳ, ಎಲ್. ಹನುಮಂತಯ್ಯ, ಅಧ್ಯಕ್ಷತೆ: ಅಗ್ರಹಾರ ಕೃಷ್ಣಮೂರ್ತಿ, ಕೃತಿ ಬಗ್ಗೆ: ಕುಮಾರ್ ಇಂದ್ರಬೆಟ್ಟ, ಶಿವಣ್ಣ ಕೆಂಸಿ, ಅತಿಥಿಗಳು: ಸುಬ್ಬು ಹೊಲೆಯಾರ್, ಬಿ. ಗಂಗಾಧರ, ಆಯೋಜನೆ: ಶೂದ್ರ ಪ್ರತಿಷ್ಠಾನ, ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, ಸ್ಥಳ: ಬಾಪೂ ಸಭಾಂಗಣ, ಗಾಂಧಿ ಭವನ, ಶಿವಾನಂದ ವೃತ್ತ, ಸಂಜೆ 5.30
ಗೋವತ್ಸ ದ್ವಾದಶೀ: ಉದ್ಘಾಟನೆ: ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಅಧ್ಯಕ್ಷತೆ: ವ್ಯಾಸನಕೆರೆ ಪ್ರಭಂಜನಾಚಾರ್ಯ, ಅತಿಥಿಗಳು: ಕೆ. ಗೋಪಾಲಯ್ಯ, ತೇಜಸ್ವಿನಿ ಅನಂತಕುಮಾರ್, ಅಸಗೋಡು ಜಯಸಿಂಹ, ಆಯೋಜನೆ ಹಾಗೂ ಸ್ಥಳ: ಪೂರ್ಣಪ್ರಜ್ಞ ವಿದ್ಯಾಪೀಠ ಪ್ರತಿಷ್ಠಾನ, ಸಂಜೆ 6
ಗಾನ ಸೇವಾ ಕೈಂಕರ್ಯ: ವಯೋಲಿನ್: ಎಸ್. ಶಶಿಧರ್, ಗಾಯನ: ರೇಖಾ ಹರಿನಾಥ್, ಮೃದಂಗ: ಎನ್. ಮುರಳಿ, ಆಯೋಜನೆ ಹಾಗೂ ಸ್ಥಳ: ಯೋಗಾನರಸಿಂಹ ಸನ್ನಿಧಿ, ವೇಣುಗೋಪಾಲಸ್ವಾಮಿ ದೇವಸ್ಥಾನ, ಮಲ್ಲೇಶ್ವರ, ಸಂಜೆ 6.15
ಪದಗ್ರಹಣ ಸಮಾರಂಭ: ಅತಿಥಿಗಳು: ಅಲೆಕ್ಸಾಂಡರ್ ಥಾಮಸ್, ಎಚ್.ಡಿ. ರಂಗನಾಥ್, ಅಧ್ಯಕ್ಷತೆ: ಭರತ್ ರಾಜು ಜಿ., ಆಯೋಜನೆ: ಭಾರತೀಯ ವೈದ್ಯಕೀಯ ಸಂಘ ಬೆಂಗಳೂರು ಶಾಖೆ, ಸ್ಥಳ: ಹೋಟೆಲ್ ರಮಣಶ್ರೀ ರಿಚ್ಮಂಡ್, ಸಂಪಂಗಿರಾಮನಗರ, ಸಂಜೆ 7

ಜಾತಿ ನಿಂದನೆ: ಶಿಕ್ಷಕ ಅಮಾನತು

ಪ್ರಜಾವಾಣಿ ವಾರ್ತೆ

ಎಚ್.ಡಿ.ಕೋಟೆ: ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ,ಮಹದೇವಪ್ಪ ಅವರ ಜಾತಿ ನಿಂದನೆ ಮಾಡಿದ ಆರೋಪದಲ್ಲಿ ತಾಲ್ಲೂಕಿನ ಯರಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕ ರವಿ ಎಸ್.ಎಲ್. ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಅನ್ನಕ್ಕೆ ತೋರಿಸುವ ಅಹಂಕಾರ: ಮುಖ್ಯಮಂತ್ರಿ ಸಿದ್ದರಾಮಯ್ಯ

'ಬೆಂಗಳೂರಿನಲ್ಲಿ 943 ಟನ್ ಆಹಾರ ವ್ಯರ್ಥ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೊತ್ತಿದ್ದೂ ಗೊತ್ತಿದ್ದೂ ಆಹಾರ ವ್ಯರ್ಥ ಮಾಡುವುದು, ಅನ್ನಕ್ಕೆ ತೋರಿಸುವ ಅಹಂಕಾರ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ಆಹಾರ ಇಲಾಖೆ ಆಯೋಜಿಸಿದ್ದ 'ವಿಶ್ವ ಆಹಾರ ದಿನ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. 'ಪ್ರತಿವರ್ಷ ಬೆಂಗಳೂರು ಒಂದರಲ್ಲೇ 943 ಟನ್ ಆಹಾರ ವ್ಯರ್ಥವಾಗುತ್ತಿದೆ. ಅಂದಾಜು ₹ 360 ಕೋಟಿ ಮೌಲ್ಯದ ಆಹಾರವನ್ನು ನಾವು ವ್ಯರ್ಥ ಮಾಡುತ್ತಿದ್ದೇವೆ ಎಂದು ಜಿಕೆವಿಕೆ ಅಧ್ಯಯನ ಹೇಳಿದೆ' ಎಂದರು.

'ಅನ್ನ ಭಾಗ್ಯದ ಅಕ್ಕಿಯನ್ನು ಸಂಗ್ರಹಿಸಿ ಕಾಳಸಂತೆಯಲ್ಲಿ ಮಾರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಕಾಳಸಂತೆ ಮಾರಾಟ ತಪ್ಪಿಸಲು 5 ಕಿಲೋ ಅಕ್ಕಿ ಕೊಟ್ಟು, ಉಳಿದ ಐದು ಕಿಲೋ ಕಾಳು, ಬೇಳೆ ವಿತರಿಸಲು ತೀರ್ಮಾನಿಸಿದ್ದೇವೆ' ಎಂದರು.

'ನಾವು ಒಂದು ಕಾಲದಲ್ಲಿ ಆಹಾರ ಧಾನ್ಯಕ್ಕಾಗಿ ಅಮೆರಿಕದ ಮೇಲೆ ಅವಲಂಬಿತರಾಗಿದ್ದೆವು. ಈಗ ವಿದೇಶಗಳಿಗೆ ರಫ್ತು ಮಾಡುವ ಮಟ್ಟಕ್ಕೆ ಪ್ರಗತಿ ಸಾಧಿಸಿದ್ದೇವೆ. ಇದರ ಜೊತೆಗೆ ಊಟ ವ್ಯರ್ಥ ಮಾಡುವ ಪ್ರಮಾಣವೂ ಹೆಚ್ಚಾಗುತ್ತಿರುವುದು ಬೇಸರದ ಸಂಗತಿ' ಎಂದರು.

'ಹಸಿವಿನಿಂದ ಯಾರೂ ಮಲಗಬಾರದು ಎನ್ನುವುದು ಕಾಂಗ್ರೆಸ್ ಬದ್ಧತೆ. ಹೀಗಾಗಿ, ಬಡವರ ಪರವಾದ ಆಹಾರ ಭದ್ರತಾ ಕಾಯ್ದೆಯನ್ನು ಪ್ರಧಾನಿ ಮನಮೋಹನ್ ಸಿಂಗ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿತ್ತು' ಎಂದರು.

'ಅನ್ನ ಸುವಿಧಾ' ಜಾರಿ: '2024-25ನೇ ಸಾಲಿನ ಬಜೆಟ್ ಘೋಷಣೆಯಂತೆ 75 ವರ್ಷ ದಾಟಿದ ಫಲಾನುಭವಿಗಳಿಗೆ ಪಡಿತರ ವಿತರಣೆಯನ್ನು ಮನೆಯ ಬಾಗಿಲಿಗೆ ತಲುಪಿಸುವ 'ಅನ್ನ ಸುವಿಧಾ ಯೋಜನೆ'ಯನ್ನು ಜಾರಿಗೊಳಿಸಲಾಗಿದೆ' ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು.

ವಸತಿ ಸಚಿವ ಜಮೀರ್ ಅಹ್ಮದ್ ಖಾನ್, ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ನಜೀರ್ ಅಹ್ಮದ್, ವಿಧಾನ ಪರಿಷತ್ ಸದಸ್ಯರಾದ ಎಸ್. ರವಿ, ಬಸನಗೌಡ ಬಾದರ್ಲಿ, ಶ್ರೀನಿವಾಸ್, ಆರ್ಯ ವೈಶ್ಯ ನಿಗಮದ ಅಧ್ಯಕ್ಷ ರಾಮಪ್ರಸಾದ್, ಆಹಾರ ಇಲಾಖೆಯ ಆಯುಕ್ತರಾದ ವಾಸಿ ರೆಡ್ಡಿ ಜೋತ್ಸ್ನಾ, ಆಹಾರ ನಿಗಮದ ವ್ಯವಸ್ಥಾಪಕ ನಿರ್ದೇಶಕ ಜಗದೀಶ್ ಇದ್ದರು.

ಪ್ರತಿ ಅಗುಳಿಗೂ ಪ್ರಾಮುಖ್ಯ ನೀಡಿ: ಡಿ.ಕೆ. ಶಿವಕುಮಾರ್

'ಪ್ರತಿ ಹನಿ ನೀರಿಗೆ ಕೊಡುವ ಪ್ರಾಮುಖ್ಯವನ್ನು ಪ್ರತಿ ಅಗುಳು ಅನ್ನಕ್ಕೂ ನೀಡಬೇಕು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ಹಸಿದವನಿಗೆ ಮಾತ್ರ ಆಹಾರದ ಬೆಲೆ ಗೊತ್ತಿದೆ. ಎಲ್ಲರೂ ಕಷ್ಟಪಡುವುದೂ ಒಂದು ತುತ್ತು ಅನ್ನಕ್ಕಾಗಿ, ಒಂದು ಗೇಣು ಬಟ್ಟೆಗಾಗಿ. ಇದರ ಹೊರತಾಗಿ ನಾವು ಏನೇ ಮಾಡಿದರೂ ಅವು ತಾತ್ಕಾಲಿಕ ಮಾತ್ರ' ಎಂದರು.

'ಪ್ರಧಾನಿ ಮತ್ತು ಇತರೆ ನಾಯಕರು ನಮ್ಮ ಸರ್ಕಾರದ ಯೋಜನೆಗಳನ್ನು ಟೀಕೆ ಮಾಡಿದರೂ ಕೊನೆಗೆ ತಮ್ಮ ರಾಜಕೀಯ ಸ್ಥಾನಮಾನ ಉಳಿಸಿಕೊಳ್ಳಲು ಈ ಯೋಜನೆಗಳನ್ನು ನಕಲು ಮಾಡುತ್ತಿದ್ದಾರೆ. ನಮ್ಮ ಯೋಜನೆಗಳು ಇಡೀ ದೇಶಕ್ಕೆ ಮಾದರಿ' ಎಂದೂ ಹೇಳಿದರು.



'ಅನ್ನ ಸುವಿಧಾ ಯೋಜನೆ' ವಿಸ್ತರಿಸಿದ ಭಿತ್ತಿ ಪತ್ರ ಬಿಡುಗಡೆ ಸಂದರ್ಭದಲ್ಲಿ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಜಮೀರ್ ಅಹ್ಮದ್ ಖಾನ್, ಕೆ.ಎಚ್.ಮುನಿಯಪ್ಪ ಪಾಲ್ಗೊಂಡಿದ್ದರು

ಪ್ರಜಾವಾಣಿ ಚಿತ್ರ

ಬಡವರ ವಿರೋಧಿ ಸಿದ್ಧಾಂತ ಹೊಂದಿರುವ ಬಿಜೆಪಿ ಆಹಾರ ಭದ್ರತಾ ಕಾಯ್ದೆಯನ್ನು ವಿರೋಧಿಸಿತ್ತು. ಇದನ್ನು ಜನ ಅರ್ಥ ಮಾಡಿಕೊಳ್ಳಬೇಕು. ಅನ್ನದ ಪರ ಇರುವ ಕಾಂಗ್ರೆಸ್ ಬದ್ಧತೆಯನ್ನು ಅರ್ಥ ಮಾಡಿಕೊಳ್ಳಬೇಕು

ಸಿದ್ದರಾಮಯ್ಯ, ಮುಖ್ಯಮಂತ್ರಿ

ಶನಿವಾರ, ಅಕ್ಟೋಬರ್ 18, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 288 | ಪುಟ 32

prajavani.net prajavani www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಭದ್ರತಾ ತಯಾರಿ...
ದೀಪಾವಳಿ ಹಬ್ಬದ ಸಂದರ್ಭದಲ್ಲಿ ಭದ್ರತೆ ನೀಡಲು ಜಮ್ಮುವಿನಲ್ಲಿ ನಡೆಸಲಾದ ಅಣಕು ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದ ಯೋಧ



ಹಿಮಗಡ್ಡೆಗಳು ಕರಗಿ ರೂಪುಗೊಳ್ಳುವ ಕೆರೆಗಳ ವ್ಯಾಪ್ತಿ ದೇಶದಲ್ಲಿ ಏರಿಕೆಯಾಗಿದೆ



ಸೆನ್ಸೆಕ್ಸ್ 83,952 | ನಿಫ್ಟಿ 25,709 | $/₹ 88.02 | ಚಿನ್ನ (Std. 10g) ₹1,36,700 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,06,000 (ಬೆಂಗಳೂರು)

ಗುಜರಾತ್: 19 ಸಚಿವರ ಪ್ರಮಾಣ

ಗಾಂಧಿನಗರ (ಪಿಟಿಐ): ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರು ಶುಕ್ರವಾರ ತಮ್ಮ ಸಂಪುಟ ವಿಸ್ತರಣೆ ಮಾಡಿದ್ದು, ಹೊಸದಾಗಿ 19 ಶಾಸಕರಿಗೆ ಸಚಿವ ಸ್ಥಾನ ನೀಡಿದ್ದಾರೆ. ಸಚಿವ ಸ್ಥಾನಕ್ಕೆ ಗುರುವಾರ ರಾಜೀನಾಮೆ ನೀಡಿದ್ದ 16 ಜನರ ಪೈಕಿ ಆರು ಮಂದಿಯನ್ನು ಸಂಪುಟದಲ್ಲಿ ಉಳಿಸಿಕೊಂಡಿದ್ದಾರೆ.

4B

‘ನನಗೇನಾದರೂ ಆದರೆ ಪ್ರಿಯಾಂಕ್ ಖರ್ಗೆ ಹೊಣೆ’

4

ಧನತ್ರಯೋದಶಿ: ಚಿನ್ನ ₹3,200 ಏರಿಕೆ

6

ಚಿನಕುರುಳಿ ಪ್ರಕಾಶ್ ಶೆಟ್ಟಿ



ಮತಕಳವು ತನಿಖೆ ಚುರುಕು

ಬಿಜೆಪಿ ಮಾಜಿ ಶಾಸಕ ಸುಭಾಷ ಗುತ್ತೇದಾರ ಮನೆಯಲ್ಲಿ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು/ಕಲಬುರಗಿ: ಆಳಂದ ಕ್ಷೇತ್ರದಲ್ಲಿ ನಡೆದಿದೆ ಎನ್ನಲಾದ ಮತಕಳವು ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡವು (ಎಸ್‌ಐಟಿ) ಬಿಜೆಪಿ ಮಾಜಿ ಶಾಸಕ ಸುಭಾಷ ಗುತ್ತೇದಾರ ಅವರ ಮನೆ ಸೇರಿ ಕಲಬುರಗಿಯ ಹಲವೆಡೆ ಶುಕ್ರವಾರ ಶೋಧ ನಡೆಸಿದೆ. ಆಳಂದ-ದಲ್ಲಿರುವ ಗುತ್ತೇದಾರ ಅವರ ಮನೆಯ ಎದುರಲ್ಲಿ ಅಪಾರ ಸಂಖ್ಯೆಯ ಮತದಾರರ ಪಟ್ಟಿ, ಮತದಾರರ ಚೀಟಿಗಳನ್ನು ಸುಟ್ಟಿರುವುದು ಇದೇ ವೇಳೆ ಪತ್ತೆಯಾಗಿದೆ.

‘ಎಸ್‌ಐಟಿಯಲ್ಲಿರುವ ಸಿಐಡಿ ಎಸ್‌ಪಿ ಶುಭಾನ್ವಿತಾ ನೇತೃತ್ವದಲ್ಲಿ ಅಧಿಕಾರಿಗಳು ಮತ್ತು ಪೊಲೀಸರಿದ್ದ 100 ಮಂದಿಯ ತಂಡವು ಶುಕ್ರವಾರ ಮಧ್ಯಾಹ್ನ 1.30ರ ವೇಳೆಗೆ ಕಲಬುರಗಿ ನಗರದ ನಾಲ್ಕು ಸ್ಥಳಗಳಲ್ಲಿ ಏಕಕಾಲಕ್ಕೆ ದಾಳಿ ನಡೆಸಿದೆ. ಸುಭಾಷ ಗುತ್ತೇದಾರ ಅವರ ಮನೆ, ಅವರ ಮಕ್ಕಳಾದ ಹರ್ಷಾನಂದ ಗುತ್ತೇದಾರ ಮತ್ತು ಸಂತೋಷ ಗುತ್ತೇದಾರ ಅವರ ಕಚೇರಿಗಳಲ್ಲಿಯೂ ಶೋಧ ಕಾರ್ಯಾಚರಣೆ ನಡೆದಿದೆ’ ಎಂದು ಮೂಲಗಳು ಖಚಿತಪಡಿಸಿವೆ.

‘ಈ ದಾಳಿ ನಡೆಯುತ್ತಿದ್ದಂತೆಯೇ, ಅತ್ತ ಆಳಂದದ ಆರ್‌ಎಸ್‌ಕೆ ಕಾಲೊನಿಯಲ್ಲಿರುವ ಗುತ್ತೇದಾರ ಅವರ ಮತ್ತೊಂದು ಮನೆಯ ಎದುರು ಅಪಾರ ಪ್ರಮಾಣದ ಕಾಗದಪತ್ರಗಳ ರಾಶಿಗೆ ಬೆಂಕಿ ಹಚ್ಚಿ ಸುಡಲಾಗಿದೆ. ತೀವ್ರವಾಗಿದ್ದ ಬೆಂಕಿಯನ್ನು ನಂದಿಸಲು ನೀರು ಹಾಯಿಸುತ್ತಿದ್ದ ವೇಳೆ ಸ್ಥಳೀಯರು ಮೊಬೈಲ್‌ನಲ್ಲಿ ವಿಡಿಯೊ ಚಿತ್ರೀಕರಣ ಮಾಡಿ, ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

‘ದಾಖಲೆ ಸುಡುತ್ತಿರುವ ಮಾಹಿತಿ ದೊರೆತ ಕೂಡಲೇ ಎಸ್‌ಐಟಿ ಅಧಿಕಾರಿಗಳ ಒಂದು ತಂಡವು ಆಳಂದಕ್ಕೆ ತೆರಳಿತು. ಆದರೆ ಅಷ್ಟರಲ್ಲಾ-ಗಲೇ, ಅರೆಬರೆ ಸುಟ್ಟ ಕಾಗದಪತ್ರಗಳನ್ನು ಮಿನಿ ಟ್ರಕ್ ಒಂದರಲ್ಲಿ ಶಕಾಪುರ ಸೇತುವೆ ಬಳಿಗೆ ಕೊಂಡೊಯ್ದು ಅಮರ್ಜಾ ನದಿಗೆ ಸುರಿಯಲಾಗಿದೆ. ಮಿನಿ ಟ್ರಕ್ ಅನ್ನು ಬೆನ್ನಟ್ಟಿದ್ದ ಎಸ್‌ಐಟಿ ಅಧಿಕಾರಿಗಳು ಮತ್ತು ಪೊಲೀಸರು, ಅದರ ಚಾಲಕನನ್ನು ವಶಕ್ಕೆ ಪಡೆದಿದ್ದಾರೆ.

6

> **ಕಾಂಗ್ರೆಸ್ ಸುಳ್ಳು ಆರೋಪ ಹೊರಿಸಿ ಮುಂದಿನ ಚುನಾವಣೆ ಗೆಲ್ಲುವ ತಂತ್ರ ಹೂಡುತ್ತಿದೆ. ತನಿಖೆ ನಡೆಯಲಿ. ತನಿಖೆಗೆ ಸಂಪೂರ್ಣ ಸಹಕಾರ ನೀಡುತ್ತೇವೆ**
> **ಸುಭಾಷ್ ಆರ್. ಗುತ್ತೇದಾರ,** ಬಿಜೆಪಿ ಮಾಜಿ ಶಾಸಕ



ಕಲಬುರಗಿ ನಗರದ ಗುಬ್ಬಿ ಕಾಲೊನಿಯಲ್ಲಿರುವ ಬಿಜೆಪಿ ಮಾಜಿ ಶಾಸಕ ಸುಭಾಷ ಗುತ್ತೇದಾರ ಮನೆಯಲ್ಲಿ ಸಿಐಡಿ ಎಸ್‌ಐಟಿ ಅಧಿಕಾರಿಗಳು ಪರಿಶೀಲನೆ ನಡೆಸಿದರು. ಸಿಐಡಿ ಎಸ್‌ಪಿ ಶುಭನ್ವಿತಾ ಹಾಗೂ ಡಿವೈಎಸ್‌ಪಿ ಅಸ್ಲಂಪಾಷಾ ಇದ್ದಾರೆ
ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಕಾಲ್‌ಸೆಂಟರ್ ಚಟುವಟಿಕೆ ಪತ್ತೆ

ಮತದಾರರ ಹೆಸರಿನಲ್ಲಿ ಮತ್ತೊಬ್ಬ ಮತದಾರರ ಚೀಟಿಯನ್ನು (ಎಪಿಕ್) ರದ್ದುಪಡಿಸುವಂತೆ ನಮೂನೆ–7 ಅನ್ನು ಸಲ್ಲಿಸಲು ಕಲಬುರಗಿಯಲ್ಲಿ ವ್ಯವಸ್ಥಿತವಾದ ಕಾಲ್‌ಸೆಂಟರ್ ಒಂದನ್ನು ರೂಪಿಸಲಾಗಿತ್ತು. 2022ರ ಡಿಸೆಂಬರ್‌ನಿಂದ 2023ರ ಫೆಬ್ರುವರಿವರೆಗೆ ಈ ಕಾಲ್‌ಸೆಂಟರ್ ಕಾರ್ಯನಿರ್ವಹಿಸಿದ್ದು, ಇಲ್ಲಿಂದಲೇ 7,000ಕ್ಕೂ ಹೆಚ್ಚು ನಮೂನೆ–7 ಅಪ್‌ಲೋಡ್ ಮಾಡಲಾಗಿದೆ ಎಂಬುದು ಪತ್ತೆಯಾಗಿದೆ.

ಆಳಂದ ಕ್ಷೇತ್ರದಲ್ಲಿ ಅಕ್ರಮವಾಗಿ ಮತದಾರರ ಚೀಟಿ ರದ್ದತಿಗೆ ಅರ್ಜಿ ಸಲ್ಲಿಸಿದ ಪ್ರಕರಣದ ಸಂಬಂಧ ಇದೇ 14ರಂದು ಎಸ್‌ಐಟಿ ಅಧಿಕಾರಿಗಳು ಕಲಬುರಗಿ ಮತ್ತು ಆಳಂದದಲ್ಲಿ ದಾಳಿ ನಡೆಸಿದ್ದರು. ಆ ಕಾಲ್‌ಸೆಂಟರ್‌ನಲ್ಲಿ ಕಾರ್ಯನಿರ್ವಹಿಸಿದ್ದ ಅಸ್ಲಂ, ಅಕ್ರಂ, ಜುನ್ಯೆದ್, ಅಷ್ಫಾಕ್ ಮತ್ತು ನದೀಂ ಅವರ ಮನೆಗಳಲ್ಲಿ ಶೋಧ ನಡೆಸಲಾಗಿತ್ತು. ಅವರ ಮನೆಯಲ್ಲಿ ಮತದಾರರ ಪಟ್ಟಿ, ಎಪಿಕ್ ಕಾರ್ಡ್‌ಗಳು, ಪ್ರಿಂಟರ್‌ಗಳು ಪತ್ತೆಯಾಗಿದ್ದವು.

6

ಸುರಂಗ ರಸ್ತೆ ಮರುವಿನ್ಯಾಸ

ಬೆಂಗಳೂರು: ಕೇಂದ್ರ ರೇಷ್ಮೆ ಮಂಡಳಿ– ಹೆಬ್ಬಾಳ ನಡುವೆ ನಿರ್ಮಿಸಲು ಉದ್ದೇಶಿಸಿರುವ ಸುರಂಗ ರಸ್ತೆಗೆ, ಮೇಖ್ರಿ ಸರ್ಕಲ್ ಬಳಿ ಯೋಜಿಸಲಾಗಿದ್ದ ಪ್ರವೇಶ–ನಿರ್ಗಮನ ಬದಲಿಗೆ ಸ್ಯಾಂಕಿ ಟ್ಯಾಂಕಿ ರಸ್ತೆ ಬಳಿ ಪ್ರವೇಶ ನೀಡಲು ನಿರ್ಧರಿಸಲಾಗಿದೆ.

ವಿವರ 3

ಲೇಹ್: ನ್ಯಾಯಾಂಗ ತನಿಖೆಗೆ ಆದೇಶ

ನವದೆಹಲಿ (ಪಿಟಿಐ): ಲೇಹ್‌ನಲ್ಲಿ ಇತ್ತೀಚೆಗೆ ನಡೆದ ಹಿಂಸಾಚಾರದ ಬಗ್ಗೆ ನ್ಯಾಯಾಂಗ ತನಿಖೆಗೆ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಬಿ.ಎಸ್. ಚೌಹಾಣ್ ಅವರನ್ನು ನೇಮಿಸಿ, ಗೃಹ ಸಚಿವಾಲಯ ಶುಕ್ರವಾರ ಆದೇಶಿಸಿದೆ. ಲಡಾಖ್‌ಗೆ ರಾಜ್ಯದ ಸ್ಥಾನಮಾನ ನೀಡುವಂತೆ ಆಗ್ರಹಿಸಿ ಸೆಪ್ಟೆಂಬರ್ 24ರಂದು ಲೇಹ್‌ನಲ್ಲಿ ನಡೆದ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿತ್ತು. ಪೊಲೀಸರು ಮತ್ತು ಪ್ರತಿಭಟನಕಾರರ ಮಧ್ಯೆ ಸಂಘರ್ಷ ನಡೆದು ನಾಲ್ವರು ಮೃತಪಟ್ಟು, 90ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದರು.

ಲಡಾಖ್‌ಗೆ ರಾಜ್ಯದ ಸ್ಥಾನಮಾನ ನೀಡುವ ವಿಚಾರವಾಗಿ ಲೇಹ್ ಅಪೆಕ್ಸ್ ಬಾಡಿ (ಎಲ್‌ಎಬಿ) ಮತ್ತು ಕಾರ್ಗಿಲ್ ಪ್ರಜಾಸತ್ತಾತ್ಮಕ ಒಕ್ಕೂಟದ (ಕೆಡಿಎ) ಜತೆಗೆ ಉನ್ನತಾಧಿಕಾರ ಹೊಂದಿರುವ ಸರ್ಕಾರದ ಸಮಿತಿಯು ಚರ್ಚೆಗೆ ಸದಾ ಸಿದ್ಧವಿದೆ ಎಂದು ಗೃಹ ಸಚಿವಾಲಯ ಹೇಳಿದೆ.

ಕಿರುಕುಳ: ಕಚೇರಿ ಎದುರೇ ನೀರುಗಂಟಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಸಂತೇಮರಹಳ್ಳಿ (ಚಾಮರಾಜನಗರ): ತಾಲ್ಲೂಕಿನ ಹೊಂಗನೂರು ಗ್ರಾಮ ಪಂಚಾಯಿತಿಯ ನೀರುಗಂಟಿ ಚಿಕ್ಕೂಸ ನಾಯಕ, ಶುಕ್ರವಾರ ಕಚೇರಿ ಕಿಟಕಿ ಸರಳಿಗೆ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡರು.

‘ಗ್ರಾಮ ಪಂಚಾಯಿತಿ ಅಧ್ಯಕ್ಷೆ ರೂಪಾ ಅವರ ಪತಿ ಮೋಹನ್ ಕುಮಾರ್, ಪಿಡಿಒ ರಾಮೇಗೌಡ ಅವರು ನೀಡಿದ ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವೆ’ ಎಂದು ಪತ್ರ ಬರೆದಿಟ್ಟಿದ್ದಾರೆ. ಈ ಮೂವರ ವಿರುದ್ಧ ರಾಮಸಮುದ್ರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘2016ರಿಂದ ನೀರುಗಂಟಿ ಆಗಿದ್ದು, 27 ತಿಂಗಳ ಬಾಕಿ ವೇತನ ಪಾವತಿಸುವಂತೆ ಪಿಡಿಒ ಹಾಗೂ ಅಧ್ಯಕ್ಷರಿಗೆ ಮನವಿ ಸಲ್ಲಿಸಿದರೂ ಸ್ಪಂದಿಸಲಿಲ್ಲ. ಜಿಲ್ಲಾ ಪಂಚಾಯಿತಿ ಸಿಇಒ ಅವರಿಗೆ ತಿಳಿಸಿದರೂ ಪ್ರಯೋಜನವಾಗಲಿಲ್ಲ. ರಜೆ ಕೇಳಿದರೆ ಬೇರೊಬ್ಬರನ್ನು ಕೆಲಸಕ್ಕೆ ಕಳಿಸಿ ಎಂದು ಕಿರುಕುಳ ನೀಡುತ್ತಿದ್ದರು. ಸಂಜೆ 6ಗಂಟೆ ವರೆಗೂ ಕಚೇರಿಯಲ್ಲಿರ-ಬೇಕು ಎಂದು ತೊಂದರೆ ಕೊಡುತ್ತಿದ್ದರು’ ಎಂದು ಚಿಕ್ಕೂಸ ನಾಯಕ ಮರಣಪತ್ರದಲ್ಲಿ ಉಲ್ಲೇಖಿಸಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ. ಆತ್ಮಹತ್ಯೆಗೆ ಪ್ರಚೋದನೆ ಆರೋಪದ ಮೇಲೆ ಪಿಡಿಒ ರಾಮೇಗೌಡ ಅವರನ್ನು ಜಿಲ್ಲಾ ಪಂಚಾಯಿತಿ ಸಿಇಒ ಮೋನಾ ರೋತ್ ಅಮಾನತುಗೊಳಿಸಿದ್ದಾರೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಗುಡುಗುಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ.

‘ಮಾಲ್ಟಾ ಕಾನ್ಸುಲೇಟ್ ಕಚೇರಿ ಶೀಘ್ರ ಆರಂಭ’

ಪ್ರಜಾವಾಣಿ ವಾರ್ತೆ

ಕೆಂಗೇರಿ: ನಗರದಲ್ಲಿ ಮಾಲ್ಟಾ ದೇಶದ ಕಾನ್ಸುಲೇಟ್ ಕಚೇರಿ ಶೀಘ್ರ ಆರಂಭಿಸಲಾಗುವುದು ಎಂದು ಮಾಲ್ಟಾ ದೇಶದ ಹೈ ಕಮಿಷನರ್ ರೂಬೆನ್ ಗೌಸಿ ತಿಳಿಸಿದರು.

ಬೆಂಗಳೂರು ವಿಶ್ವವಿದ್ಯಾಲಯ ಕಾನೂನು ಕಾಲೇಜು, ಕಾನೂನು ಅಧ್ಯಯನ ವಿಭಾಗ ಮತ್ತು ರಾಜ್ಯಶಾಸ್ತ್ರ ವಿಭಾಗದ ಸಹಯೋಗದಲ್ಲಿ ಆಯೋಜಿಸಿದ್ದ ‘ಭಾರತ– ಮಾಲ್ಟಾ ಸಂಬಂಧಗಳು’ ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಭಾರತ ಮತ್ತು ಮಾಲ್ಟಾ ದೇಶಗಳು ಆರು ದಶಕಗಳ ರಾಜತಾಂತ್ರಿಕ ಸಂಬಂಧಗಳನ್ನು ಹೊಂದಿವೆ. ದೇಶಗಳ ನಡುವಿನ ವ್ಯಾಪಾರ, ವಹಿವಾಟು, ತಂತ್ರಜ್ಞಾನ ಸಹಕಾರ ಹಾಗೂ ಸಾಂಸ್ಕೃತಿಕ ವಿನಿಮಯಗಳು ಸ್ನೇಹವನ್ನು ಗಾಢಗೊಳಿಸುತ್ತವೆ’ ಎಂದರು.

‘ಯುರೋಪ್‌ನ ಅತಿ ಹೆಚ್ಚು ಜಿಡಿಪಿ ಹೊಂದಿದ ರಾಷ್ಟ್ರಗಳ ಪಟ್ಟಿಯಲ್ಲಿ 10ನೇ ಸ್ಥಾನದಲ್ಲಿದೆ. ಔಷಧ ಉತ್ಪಾದನೆ, ಮಾಹಿತಿ ತಂತ್ರಜ್ಞಾನ, ಮೈಕ್ರೋಚಿಪ್ ತಯಾರಿಕಾ ಕ್ಷೇತ್ರಗಳಲ್ಲಿ ಯುರೋಪಿಯನ್ ಮಾರುಕಟ್ಟೆ ಪ್ರವೇಶಿಸಲು ಬಯಸುವ ಭಾರತೀಯ ಉದ್ಯಮಗಳಿಗೆ ಮಾಲ್ಟಾ ಪ್ರಮುಖ ಕೇಂದ್ರವಾಗಿದೆ’ ಎಂದು ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಜಯಕರ ಎಸ್.ಎಂ. ಮಾತನಾಡಿ ‘ಬೆಂಗಳೂರು ವಿ.ವಿ ವಿದ್ಯಾರ್ಥಿ ವಿನಿಮಯ, ಸಂಶೋಧನಾ, ಅಧ್ಯಯನ ಕ್ಷೇತ್ರದಲ್ಲಿ ಮಾಲ್ಟಾ ದೇಶದ ವಿ.ವಿ.ಗಳ ಜೊತೆ ಕೈ ಜೋಡಿಸಲಿದ್ದು, ಎರಡೂ ದೇಶಗಳ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ’ ಎಂದರು.

ವಿಶ್ವವಿದ್ಯಾಲಯ ಕಾನೂನು ಕಾಲೇಜು ಪ್ರಾಂಶುಪಾಲ ಎನ್. ದಶರಥ್, ಕಾನೂನು ಅಧ್ಯಯನ ವಿಭಾಗದ ಮುಖ್ಯಸ್ಥೆ ಜ್ಯೋತಿ ವಿಶ್ವನಾಥ್, ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥೆ ಪ್ರೊ. ವೀಣಾದೇವಿ, ಪ್ರಾಧ್ಯಾಪಕರಾದ ಎಸ್.ವೈ. ಸುರೇಂದ್ರ, ಚಂದ್ರಕಾಂತಿ ಎಲ್, ನಿಮಿದ ಗ್ರೂಪ್ ಸಂಸ್ಥಾಪಕ ನಿರ್ದೇಶಕ ಗೌರವ್ ಮಂಚಂದ ಇದ್ದರು.



ಬೆಂಗಳೂರು ವಿಶ್ವವಿದ್ಯಾಲಯ ಕಾನೂನು ಕಾಲೇಜು ಆಯೋಜಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ರೂಬೆನ್ ಗೌಸಿ ಅವರನ್ನು ಸನ್ಮಾನಿಸಲಾಯಿತು. ಎಸ್.ಎಂ. ಜಯಕರ, ಎನ್.ದಶರಥ್, ಜ್ಯೋತಿ ವಿಶ್ವನಾಥ್ ಉಪಸ್ಥಿತರಿದ್ದರು

209 ಇ.ವಿ ಚಾರ್ಜಿಂಗ್ ಕೇಂದ್ರ ಮೇಲ್ದರ್ಜೆಗೆ

ಇ.ವಿ. ವಾಹನಗಳ ತ್ವರಿತ ಚಾರ್ಜಿಂಗ್ • ಹೆಚ್ಚು ಕಾಲ ಕಾಯುವುದು ತಪ್ಪಲಿದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ವ್ಯಾಪ್ತಿಯಲ್ಲಿ ಇರುವ 209 ಇ.ವಿ. ಚಾರ್ಜಿಂಗ್ ಕೇಂದ್ರಗಳ ಪೈಕಿ 184 ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಲಾಗಿದೆ. ಇದರಿಂದಾಗಿ ಎಲೆಕ್ಟ್ರಿಕ್ ವಾಹನಗಳ ಚಾರ್ಜ್ ವೇಗವಾಗಿ ಆಗಲಿದೆ ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಎನ್. ಶಿವಶಂಕರ್ ತಿಳಿಸಿದರು.

ಬಸ್, ಟ್ರಕ್ ಸೇರಿದಂತೆ ದೊಡ್ಡ ವಾಹನಗಳಿಗೆ ಚಾರ್ಜ್ ಮಾಡಲು 240 ಕಿ.ವಾ. ಸಾಮರ್ಥ್ಯದ ವೇಗದ ಚಾರ್ಜಿಂಗ್ ಪಾಯಿಂಟ್ ಹಾಗೂ ಕಾರು, ದ್ವಿಚಕ್ರ ವಾಹನಗಳಿಗೆ ಚಾರ್ಜ್ ಮಾಡಲು 60ರಿಂದ 120 ಕಿ.ವಾ. ಸಾಮರ್ಥ್ಯದ ಪಾಯಿಂಟ್‌ಗಳ ವ್ಯವಸ್ಥೆ ಮಾಡಲಾಗಿದೆ ಎಂದು ಶುಕ್ರವಾರ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

‘ರಾಜ್ಯದಲ್ಲಿ ಸದ್ಯಕ್ಕೆ 5,960 ಇ.ವಿ ಚಾರ್ಜಿಂಗ್ ಕೇಂದ್ರಗಳಿವೆ. ಇನ್ನೂ 1,500 ಕೇಂದ್ರಗಳನ್ನು ಸ್ಥಾಪಿಸಲು ಪಿ.ಎಂ ಇ-ಡ್ರೈವ್ ಯೋಜನೆಯಡಿ ಅನುದಾನ ನೀಡುವಂತೆ ಕೇಂದ್ರದ ಬೃಹತ್ ಕೈಗಾರಿಕಾ ಸಚಿವಾಲಯಕ್ಕೆ ಪ್ರಸ್ತಾವ ಸಲ್ಲಿಸಲಾಗುವುದು. ಈ ಕೇಂದ್ರಗಳಲ್ಲಿ 30ರಿಂದ 40 ನಿಮಿಷಗಳ ಒಳಗೆ ಚಾರ್ಜ್ ಆಗಲಿದೆ. ಹೀಗಾಗಿ ಹೆಚ್ಚು ಹೊತ್ತು ಕಾಯುವ ಅಗತ್ಯವಿಲ್ಲ’ ಎಂದು ಹೇಳಿದರು.

ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದ ಬಳಿಕ ಟೆಂಡರ್ ಕರೆಯಲಾಗುವುದು. ಸರ್ಕಾರಿ ಸಂಸ್ಥೆಗಳು ಇರುವ ಜಾಗಗಳಲ್ಲೇ ಇವುಗಳನ್ನು ಸ್ಥಾಪಿಸಲು ಆದ್ಯತೆ ನೀಡಲಾಗುವುದು. ವಿವಿಧ ತೈಲ ಕಂಪನಿಗಳ ಸಹಭಾಗಿತ್ವದಲ್ಲಿ 350ಕ್ಕೂ ಅಧಿಕ ಇ.ವಿ. ಚಾರ್ಜಿಂಗ್ ಕೇಂದ್ರಗಳನ್ನು ಆರಂಭಿಸುತ್ತಿದ್ದು, ಇವು ವಿವಿಧ ಹಂತಗಳಲ್ಲಿವೆ ಎಂದು ತಿಳಿಸಿದರು.


ಕೇಂದ್ರ ಸರ್ಕಾರದ ಪಿ.ಎಂ. ಸೂರ್ಯಘರ್ ಯೋಜನೆಯಡಿ ರಾಜ್ಯದಲ್ಲಿ ಒಂದು ಲಕ್ಷ ಮನೆಗಳ ಚಾವಣಿಯಲ್ಲಿ ಸೌರವಿದ್ಯುತ್ ಉತ್ಪಾದಿಸುವ ಗುರಿ ಇದೆ. ಬೆಸ್ಕಾಂ ವ್ಯಾಪ್ತಿಯಲ್ಲಿ 30 ಸಾವಿರ ಮನೆಗಳ ಗುರಿ ನಿಗದಿಪಡಿಸಲಾಗಿದೆ. ಕೇಂದ್ರ ಸರ್ಕಾರ ₹30 ಸಾವಿರದಿಂದ ಗರಿಷ್ಠ ₹78 ಸಾವಿರ ಸಹಾಯಧನ ನೀಡಲಿದೆ. ಗ್ರಾಹಕರು ಇದರ ಸದುಪಯೋಗ ಪಡೆದುಕೊಂಡು, ಸ್ವಯಂ ಆಗಿ ವಿದ್ಯುತ್ ಉತ್ಪಾದನೆ ಮಾಡಿಕೊಳ್ಳಬಹುದು. ಗ್ರಾಹಕರು ಬಳಕೆ ಮಾಡಿ, ಉಳಿಯುವ ವಿದ್ಯುತ್ ಅನ್ನು ಬೆಸ್ಕಾಂ ಖರೀದಿಸಲಿದೆ ಎಂದು ತಿಳಿಸಿದರು.

ಪಿಎಂ ಕುಸುಮ್–ಸಿ: ಈ ಯೋಜನೆಯಡಿ 3,900 ಮೆಗಾವಾಟ್ ಸೌರ ವಿದ್ಯುತ್ ಉತ್ಪಾದಿಸುವ ಗುರಿ ಹೊಂದಲಾಗಿದೆ. 389 ಉಪ ಕೇಂದ್ರಗಳ ವ್ಯಾಪ್ತಿಯಲ್ಲಿ 2,400 ಮೆಗಾವಾಟ್ ವಿದ್ಯುತ್ ಉತ್ಪಾದನೆಗೆ ಈಗಾಗಲೇ ಟೆಂಡರ್ ಕರೆಯಲಾಗಿದೆ. ಇನ್ನುಳಿದ 1,500 ಮೆಗಾವಾಟ್ ವಿದ್ಯುತ್ ಉತ್ಪಾದನೆಗೆ ಟೆಂಡರ್ ಆಗಬೇಕು.

ಬೆಸ್ಕಾಂ ವ್ಯಾಪ್ತಿಯ 50 ಸ್ಥಳಗಳಲ್ಲಿ ಡಿಸೆಂಬರ್ ವೇಳೆಗೆ 250ರಿಂದ 300 ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಗುರಿ ಇದೆ. ಒಂದು ಮೆಗಾವಾಟ್ ವಿದ್ಯುತ್ ಉತ್ಪಾದನೆಗೆ ನಾಲ್ಕು ಎಕರೆ ಜಾಗ ಬೇಕಾಗುತ್ತದೆ. ಖಾಸಗಿ ಜಾಗವನ್ನು ಗುತ್ತಿಗೆಗೆ ಪಡೆಯಲು ಅವಕಾಶ ಇದ್ದು, ಎಕರೆಗೆ ₹25 ಸಾವಿರ ಬಾಡಿಗೆ ನೀಡಲಾಗುತ್ತದೆ. ಈಗಾಗಲೇ 35 ಸ್ಥಳಗಳನ್ನು ಇದಕ್ಕಾಗಿ ಗುರುತಿಸಲಾಗಿದೆ ಎಂದು ತಿಳಿಸಿದರು.

ಮುಖ್ಯಾಂಶಗಳು

- ಪಿ.ಎಂ ಇ-ಡ್ರೈವ್ ಅಡಿ ನೆರವು ಕೋರಿ ಕೇಂದ್ರಕ್ಕೆ ಪ್ರಸ್ತಾವ
- ಸೋಲಾರ್ ಪಂಪ್‌ಸೆಟ್ ಅಳವಡಿಸಿಕೊಳ್ಳಲು ರೈತರಿಗೆ ಉತ್ತೇಜನ
- ರಾಜ್ಯದಲ್ಲಿವೆ 5,960 ಇ.ವಿ ಚಾರ್ಜಿಂಗ್ ಕೇಂದ್ರಗಳು



ಬೆಂಗಳೂರಿನ ಕೆ.ಆರ್. ವೃತ್ತದಲ್ಲಿ ಬೆಸ್ಕಾಂ ಸ್ಥಾಪಿಸಿರುವ ಇ.ವಿ. ಚಾರ್ಜಿಂಗ್ ಕೇಂದ್ರ (ಸಂಗ್ರಹ ಚಿತ್ರ)

ಕೆರೆ ಜಾಗ ಬಳಕೆ

ಖಾಸಗಿ ಜಾಗ ಸಿಗುತ್ತಿಲ್ಲ. ಹೀಗಾಗಿ ಲಭ್ಯವಿರುವ ಸರ್ಕಾರಿ ಜಾಗದ ಜೊತೆಗೆ, ಕೆರೆಗಳ ಹಿನ್ನೀರಿನ ಆಚೆಗೆ ಇರುವ ಖಾಲಿ ಜಾಗವನ್ನು ಬಳಸಿಕೊಂಡು ಸೌರವಿದ್ಯುತ್ ಉತ್ಪಾದಿಸಲು ನಿರ್ಧರಿಸಲಾಗಿದೆ. ಬೆಸ್ಕಾಂ ವ್ಯಾಪ್ತಿಯಲ್ಲಿ 15 ಕೆರೆಗಳನ್ನು ಗುರುತಿಸಿದ್ದು, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸೂಲಿಬೆಲೆ ಕೆರೆಯ ಜಾಗದಲ್ಲಿ 5 ಮೆಗಾವಾಟ್ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಕುಂದಾಣದಲ್ಲೂ ಉತ್ಪಾದನೆಗೆ ಸಿದ್ಧವಾಗಿದೆ ಎಂದು ಎನ್. ಶಿವಶಂಕರ್ ತಿಳಿಸಿದರು.

‘ಕುಸುಮ್ ಬಿ’

ಈ ಯೋಜನೆಯಡಿ ರಾಜ್ಯದಲ್ಲಿ 40 ಸಾವಿರ ರೈತರ ಕೊಳವೆ ಬಾವಿಗಳಿಗೆ ಸೋಲಾರ್ ಪಂಪ್‌ಸೆಟ್‌ಗಳನ್ನು ಅಳವಡಿಸುವ ಗುರಿ ಹೊಂದಲಾಗಿದೆ. ಈಗಾಗಲೇ ಬೆಸ್ಕಾಂ ವ್ಯಾಪ್ತಿಯಲ್ಲಿ 1,100 ಗ್ರಾಹಕರು ಸೋಲಾರ್ ಪಂಪ್‌ಸೆಟ್‌ಗಳನ್ನು ಅಳವಡಿಸಿಕೊಂಡಿದ್ದಾರೆ. ಬೆಸ್ಕಾಂ ವ್ಯಾಪ್ತಿಯಲ್ಲಿ 28 ಸಾವಿರ ಕೊಳವೆ ಬಾವಿಗಳಿಗೆ ಸೋಲಾರ್ ಪಂಪ್‌ಸೆಟ್‌ಗಳನ್ನು ಅಳವಡಿಸುವ ಗುರಿ ಹೊಂದಲಾಗಿದೆ ಎಂದು ಎನ್. ಶಿವಶಂಕರ್ ತಿಳಿಸಿದರು.

ಚೋಕ್ಸಿ ಹಸ್ತಾಂತರ ಬೆಲ್ಜಿಯಂ ಕೋರ್ಟ್ ಅಸ್ತು

ನವದೆಹಲಿ(ಪಿಟಿಐ): ಪಂಜಾಬ್ ನ್ಯಾಷನಲ್ ಬ್ಯಾಂಕಿಗೆ ಕೋಟ್ಯಂತರ ರೂಪಾಯಿ ವಂಚಿಸಿದ ಆರೋಪ ಎದುರಿಸುತ್ತಿರುವ, ದೇಶಭ್ರಷ್ಟ ವಜ್ರಾಭರಣ ವ್ಯಾಪಾರಿ ಮೆಹುಲ್ ಚೋಕ್ಸಿ ಅವರನ್ನು ಭಾರತಕ್ಕೆ ಹಸ್ತಾಂತರಿಸುವುದಕ್ಕೆ ಬೆಲ್ಜಿಯಂನ ಆ್ಯಂಟ್‌ವರ್ಪ್ ನ್ಯಾಯಾಲಯ ಶುಕ್ರವಾರ ಅನುಮತಿ ನೀಡಿದೆ.

‘ಭಾರತದ ಮನವಿಗೆ ಮೇರೆ ಬೆಲ್ಜಿಯಂ ಅಧಿಕಾರಿಗಳು ಚೋಕ್ಸಿ ಅವರನ್ನು ಬಂಧಿಸಿರುವುದು ಕ್ರಮಬದ್ಧವಾಗಿದೆ ಎಂಬುದಾಗಿ ಆ್ಯಂಟ್‌ವರ್ಪ್ ನ್ಯಾಯಾಲಯ ಆದೇಶದಲ್ಲಿ ತಿಳಿಸಿದೆ’ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ. ಪ್ರಕರಣ ಕುರಿತು ತನಿಖೆ ನಡೆಸುತ್ತಿರುವ ಸಿಬಿಐ ಮಾಡಿದ್ದ ಮನವಿ ಮೇರೆಗೆ, ಬೆಲ್ಜಿಯಂ ಅಧಿಕಾರಿಗಳು ಚೋಕ್ಸಿ ಅವರನ್ನು ಏಪ್ರಿಲ್ 11ರಂದು ಬಂಧಿಸಿದ್ದರು.

ಸುರಂಗ ರಸ್ತೆ ಮರುವಿನ್ಯಾಸ: ಪ್ರವೇಶ ಬದಲು

ಮೇಖ್ರಿ ವೃತ್ತದಲ್ಲಿ ಇದ್ದ ಮರು ಪ್ರವೇಶ ರದ್ದು, ಸ್ಯಾಂಕಿ ಟ್ಯಾಂಕಿ ರಸ್ತೆಯಲ್ಲಿ ಅವಕಾಶ

● ನವೀನ್ ಮಿನೇಜಸ್

ಮುಖ್ಯಾಂಶಗಳು

- ಮೇಖ್ರಿ ಸರ್ಕಲ್‌ನಲ್ಲಿ ಒಂದೇ ಪ್ರವೇಶ
- ಮೂರು ಪ್ರವೇಶ ಕೈಬಿಟ್ಟ ಬಿ–ಸ್ಮೈಲ್
- ಸ್ಯಾಂಕಿಟ್ಯಾಂಕಿ ರಸ್ತೆಯಲ್ಲಿ ಹೊಸ ಪ್ರವೇಶ


ಬೆಂಗಳೂರು: ಕೇಂದ್ರ ರೇಷ್ಮೆ ಮಂಡಳಿ–ಹೆಬ್ಬಾಳ ನಡುವೆ ನಿರ್ಮಿಸಲು ಉದ್ದೇಶಿಸಿರುವ ಸುರಂಗ ರಸ್ತೆಯ ವಿನ್ಯಾಸವನ್ನು ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಬಿ-ಸ್ಮೈಲ್) ಬದಲಿಸಿದೆ. ಮೇಖ್ರಿ ಸರ್ಕಲ್ ಬಳಿ ಯೋಜಿಸಲಾಗಿದ್ದ ಪ್ರವೇಶ–ನಿರ್ಗಮನವನ್ನು ಕೈಬಿಟ್ಟಿದೆ. ಸ್ಯಾಂಕಿ ಟ್ಯಾಂಕಿ ರಸ್ತೆ ಬಳಿ ಪ್ರವೇಶ ನೀಡುವುದಾಗಿ ಮರುವಿನ್ಯಾಸದಲ್ಲಿ ತಿಳಿಸಲಾಗಿದೆ.

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ ಇದಾಗಿದ್ದು, ರೇಷ್ಮೆ ಮಂಡಳಿಯಿಂದ ಹೆಬ್ಬಾಳದವರೆಗೆ 16.75 ಕಿ.ಮೀ. ಉದ್ದದ ಅವಳಿ ಸುರಂಗ ರಸ್ತೆಯ ಬಗ್ಗೆ ವಿಸ್ತೃತ ಯೋಜನಾ ವರದಿ ತಯಾರಿಸಲಾಗಿತ್ತು. ₹17,780 ಕೋಟಿ ಅಂದಾಜು ವೆಚ್ಚ ನಿಗದಿ ಮಾಡಲಾಗಿತ್ತು. ಮರುವಿನ್ಯಾಸದಿಂದಾಗಿ ₹419 ಕೋಟಿ ಉಳಿತಾಯವಾಗಬಹುದು ಎಂದು ನಿರೀಕ್ಷಿಸಲಾಗಿದೆ.

ಮೂಲ ಯೋಜನೆಯಡಿ ಉತ್ತರ-ದಕ್ಷಿಣ ಅವಳಿ ಸುರಂಗ ರಸ್ತೆಯ ವಿವಿಧ ಪ್ರದೇಶಗಳಲ್ಲಿ ಹೊರ ಸಂಪರ್ಕಕ್ಕಾಗಿ ಒಟ್ಟು 16 ಪ್ರವೇಶ–ನಿರ್ಗಮನ ದ್ವಾರಗಳು ಇದ್ದವು. ಹೆಬ್ಬಾಳ, ಮೇಖ್ರಿ ಸರ್ಕಲ್ ಮತ್ತು ವಿಧಾನಸೌಧದಲ್ಲಿ ತಲಾ ನಾಲ್ಕು, ಲಾಲ್‌ಬಾಗ್ ಮತ್ತು ಸೇಂಟ್ ಜಾನ್ಸ್ ಆಸ್ಪತ್ರೆಯ ಬಳಿ ತಲಾ ಎರಡು ಪ್ರವೇಶ/ನಿರ್ಗಮನ ದ್ವಾರಗಳು ಈ ಯೋಜನೆಯಡಿ ಇದ್ದವು.

ಪರಿಷ್ಕೃತ ವಿನ್ಯಾಸದಲ್ಲಿ ಮೆಖ್ರಿ ಸರ್ಕಲ್‌ನಲ್ಲಿರುವ ನಾಲ್ಕರಲ್ಲಿ ಮೂರನ್ನು ಬಿ-ಸ್ಮೈಲ್ ಕೈಬಿಟ್ಟಿದೆ. ಸಿ.ವಿ. ರಾಮನ್ ರಸ್ತೆ ಮತ್ತು ವಿಮಾನ ನಿಲ್ದಾಣದ ನಡುವಿನ ವಾಹನಗಳಿಗೆ ಉದ್ದೇಶಿಸಲಾದ ಎರಡು ಪ್ರವೇಶ/ನಿರ್ಗಮನ ಮತ್ತು ಜಯಮಹಲ್ ರಸ್ತೆಯ ಕಡೆಗೆ 820 ಮೀಟರ್ ನಿರ್ಗಮನವನ್ನು ಕೈಬಿಡಲಾಗಿದೆ.

ಹೆಬ್ಬಾಳ–ಕೇಂದ್ರ ರೇಷ್ಮೆ ಮಂಡಳಿ ಅವಳಿ ಸುರಂಗ ರಸ್ತೆ



ಜಯಮಹಲ್‌ನಿಂದ ಸಿಲ್ಕ್ ಬೋರ್ಡ್ ಕಡೆಗೆ ಮುಖ್ಯ ಸುರಂಗಕ್ಕೆ ಪ್ರವೇಶ ಯೋಜನೆಯನ್ನು ಮಾತ್ರ ಉಳಿಸಿಕೊಳ್ಳಲಾಗಿದೆ. ಸ್ಯಾಂಕಿ ಟ್ಯಾಂಕಿಯಲ್ಲಿ ಹೊಸ ಪ್ರವೇಶ ದ್ವಾರ ನಿರ್ಮಿಸಲು ನಿರ್ಧರಿಸಲಾಗಿದೆ.

ಸಿ.ವಿ. ರಾಮನ್ ರಸ್ತೆಯಲ್ಲಿ ನಿರ್ಗಮಿಸುವ ಬದಲು, ಕೇಂದ್ರ ರೇಷ್ಮೆ ಮಂಡಳಿಯಿಂದ (ಸೆಂಟ್ರಲ್ ಸಿಲ್ಕ್ ಬೋರ್ಡ್) ಉತ್ತರಕ್ಕೆ ಪ್ರಯಾಣಿಸುವ ವಾಹನ ಚಾಲಕರು ಈ ಯೋಜನೆ ಪ್ರಕಾರ ಬೆಂಗಳೂರು ಗಾಲ್ಫ್ ಕ್ಲಬ್ ಬಳಿ ಎಡಕ್ಕೆ ತಿರುಗಬೇಕು. ಸ್ಯಾಂಕಿ ಟ್ಯಾಂಕಿ ಬಳಿ ಸುರಂಗ ಮಾರ್ಗವನ್ನು ಪ್ರವೇಶಿಸಬೇಕು. ಈ ಭೂಗತ ಮಾರ್ಗವು ಸುಮಾರು 2.45 ಕಿ.ಮೀ. ಇರಲಿದೆ.

ಮರು ವಿನ್ಯಾಸ ಮಾಡಿ ₹ 419 ಕೋಟಿ ಉಳಿಸುವ ಬದಲು ಯೋಜನೆಯನ್ನೇ ಕೈಬಿಡುವ ಮೂಲಕ ಎಲ್ಲ ವೆಚ್ಚವನ್ನು ಉಳಿಸಬಹುದು. ವಾಹನದಟ್ಟಣೆ ಕಡಿಮೆ ಮಾಡಲು ಕಡಿಮೆ ವೆಚ್ಚದಲ್ಲಿ ಪರ್ಯಾಯ ವ್ಯವಸ್ಥೆಗಳನ್ನು ಮಾಡಬಹುದು ಎಂದು ಸ್ಥಳೀಯ ಸಂಘಟನೆಗಳ ಪ್ರತಿನಿಧಿಗಳು ಹೇಳಿದರು.

‘ಸ್ಯಾಂಕಿಟ್ಯಾಂಕಿ ಬಳಿ ಹೊಸದಾಗಿ ನಿರ್ಮಿಸಲು ಯೋಜಿಸಿರುವ ಪ್ರವೇಶವು ಪರಿಸರಕ್ಕೆ ತೊಂದರೆ ಉಂಟು ಮಾಡಲಿದೆ. ಕೆರೆಯ ಪರಿಸರ ವ್ಯವಸ್ಥೆಗೆ ಹಾನಿ ಉಂಟು ಮಾಡಲಿದೆ. ಮಲ್ಲೇಶ್ವರ 18ನೇ ಕ್ರಾಸ್, ಸಂಪಿಗೆ ರಸ್ತೆ ಮತ್ತು ಸ್ಯಾಂಕಿ ರಸ್ತೆಯಿಂದ ವಾಹನಗಳು ಸೇರುವ ಜಂಕ್ಷನ್‌ನಲ್ಲಿ ಸಂಚಾರ ವ್ಯವಸ್ಥೆ ಇನ್ನಷ್ಟು ಹದಗೆಡಲಿದೆ’ ಎಂದು ಸಿಟಿಜನ್ಸ್ ಫಾರ್ ಸ್ಯಾಂಕಿಯ ಪ್ರೀತಿ ಸುಂದರ್‌ರಾಜನ್ ಹೇಳಿದರು.

‘ಸ್ಯಾಂಕಿ ರಸ್ತೆಯ ಕೆಳಗಿರುವ ಕೆರೆದಂಡೆ ಎಷ್ಟು ಪ್ರಬಲವಾಗಿದೆ ಎಂದು ನಮಗೆ ತಿಳಿದಿಲ್ಲ. ಅಲ್ಲಿ ಸುರಂಗ ಕೊರೆಯುವುದು ಗಂಭೀರ ಅಪಾಯವನ್ನು ಉಂಟುಮಾಡಬಹುದು, ವಿಶೇಷವಾಗಿ ವೈಯಾಲಿಕಾವಲ್‌ನಂತಹ ತಗ್ಗು ಪ್ರದೇಶದಲ್ಲಿರುವ ವಸತಿಗಳಿಗೆ ತೊಂದರೆಯಾಗಬಹುದು’ ಎಂದು ಆತಂಕ ವ್ಯಕ್ತಪಡಿಸಿದರು.

ಬಿ-ಸ್ಮೈಲ್‌ನ ತಾಂತ್ರಿಕ ನಿರ್ದೇಶಕ ಬಿ.ಎಸ್. ಪ್ರಹ್ಲಾದ್ ಈ ಬಗ್ಗೆ ಪ್ರತಿಕ್ರಿಯಿಸಿದ್ದು, ‘ಸಣ್ಣ ಬದಲಾವಣೆ ಅವಶ್ಯವಾಗಿದ್ದು, ಹೊಸ ಪ್ರವೇಶ ನಿರ್ಮಿಸುವುದರಿಂದ ಸ್ಯಾಂಕಿಟ್ಯಾಂಕಿ ಕೆರೆಗೆ ಯಾವುದೇ ಅಪಾಯ ಉಂಟಾಗುವುದಿಲ್ಲ’ ಎಂದು ಸ್ಪಷ್ಟಪಡಿಸಿದ್ದಾರೆ.



‘ಇನ್ಫೊಸಿಸ್‌ನವರು ಬೃಹಸ್ಪತಿಗಳಾ?’

ಪ್ರಜಾವಾಣಿ ವಾರ್ತೆ

ಮೈಸೂರು: ‘ಇನ್ಫೊಸಿಸ್‌ನವರೇನು ಬೃಹಸ್ಪತಿಗಳಾ? ನಾವು ನಡೆಸುತ್ತಿರುವುದು ಹಿಂದುಳಿದವರ ಸಮೀಕ್ಷೆಯಲ್ಲ. ಅವರಿಗೆ ಅದು ಅರ್ಥವಾಗದಿದ್ದರೆ ನಾವೇನು ಮಾಡಕ್ಕಾಗುತ್ತೆ?’


ಸಿದ್ದರಾಮಯ್ಯ

– ‘ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಮಾಹಿತಿ ನೀಡುವುದಿಲ್ಲ’ ಎಂಬ ಇನ್ಫೊಸಿಸ್‌ನ ಸಹ ಸಂಸ್ಥಾಪಕ ನಾರಾಯಣಮೂರ್ತಿ ಹಾಗೂ ಸುಧಾಮೂರ್ತಿ ಅವರ ಕುರಿತ ವರದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೀಗೆ ಪ್ರತಿಕ್ರಿಯಿಸಿದರು.

ಇಲ್ಲಿನ ವಿಮಾನನಿಲ್ದಾಣದಲ್ಲಿ ಪತ್ರಕರ್ತರ ಪ್ರಶ್ನೆಗೆ ಶುಕ್ರವಾರ ಉತ್ತರಿಸಿದ ಅವರು, ‘ಅವರಿಗೆ ತಪ್ಪು ಮಾಹಿತಿ ಇರಬಹುದು. ಏನಿದ್ದರೂ ಅವರಿಗೆ ಸೇರಿದ್ದು’ ಎಂದರು.

‘ಇದು ಹಿಂದುಳಿದವರ ಸಮೀಕ್ಷೆಯಲ್ಲ. ಎಲ್ಲ ಏಳು ಕೋಟಿ ಜನರ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷೆ ಎಂದು ಇಪ್ಪತ್ತು ಬಾರಿ ಹೇಳಿದ್ದೇವೆ. ಜಾಹೀರಾತೂ ಕೊಟ್ಟಿದ್ದೇವೆ. ‘ಶಕ್ತಿ’, ‘ಗೃಹಲಕ್ಷ್ಮಿ’, ‘ಭಾಗ್ಯಲಕ್ಷ್ಮಿ’ ಯೋಜನೆಗಳ ಲಾಭವನ್ನು ಪ್ರಬಲ ಜಾತಿಯವರು ಪಡೆದುಕೊಳ್ಳೊಲ್ಲವೇ? ನಾರಾಯಣ ಮೂರ್ತಿ, ಸುಧಾ ಅಂಥವರು ಇದು ಹಿಂದುಳಿದವರ ಸಮೀಕ್ಷೆ ಎಂಬ ಭಾವನೆ ಹೊಂದಿದ್ದರೆ ತಪ್ಪು. ಮುಂದೆ ಕೇಂದ್ರ ಸರ್ಕಾರ ಜನಗಣತಿ ಮಾಡುತ್ತದೆ, ಆಗ ಇವರು ಏನು ಹೇಳುತ್ತಾರೆ’ ಎಂದು ಪ್ರಶ್ನಿಸಿದರು.

ಇಷ್ಟವಿದ್ದಲ್ಲಿಹೂಡುತ್ತಾರೆ: ಕೆಲವು ಕಂಪನಿಗಳು ಬೇರೆ ರಾಜ್ಯಗಳಿಗೆ ಹೋದ ಬಗ್ಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ‘ಉದ್ಯಮಿಗಳು ಎಲ್ಲಿ ಬೇಕೋ ಅಲ್ಲಿ ಹೂಡಿಕೆ ಮಾಡುತ್ತಾರೆ. ಕರ್ನಾಟಕದಲ್ಲಿ ಹೂಡಿದವರು ಸೌಕರ್ಯ ಇಲ್ಲವೆಂದು ಹಾಕಿದ್ದಾರಾ? ಐಫೋನ್ ತಯಾರಿಕಾ ಕಂಪನಿಯವರು ಕರ್ನಾಟಕದಲ್ಲಿ ಸ್ಥಾಪಿಸಿಲ್ಲವೇ? ಬೇರೆಡೆ ಮಾಡಿಲ್ಲವೇಕೆ ಎಂದು ಕೇಳಿದರೆ ಹೇಗೆ? ಅವರಿಗೆ ಇಷ್ಟವಾದಲ್ಲಿ ಬಂಡವಾಳ ಹಾಕುತ್ತಾರೆ’ ಎಂದರು.

‘ರಾಜ್ಯದಲ್ಲಿ ಬಹಳಷ್ಟು ಮಂದಿ ಹೂಡಿಕೆ ಮಾಡಿದ್ದಾರೆ. ಇಲ್ಲದಿದ್ದರೆ ಜಾಗತಿಕ ಹೂಡಿಕೆಯಲ್ಲಿ ಕರ್ನಾಟಕ ನಂ.1 ಹೇಗಾಗುತ್ತಿತ್ತು? ಕೆಲವರು ಹೇಳುತ್ತಾರೆ, ಮಾಧ್ಯಮದವರು ಉಪ್ಪು–ಖಾರ ಹಾಕುತ್ತೀರಷ್ಟೆ’ ಎಂದು ದೂರಿದರು.

‘ಬದಲಾವಣೆ ಕ್ರಾಂತಿಯಲ್ಲ’

ನವೆಂಬರ್ ಕ್ರಾಂತಿ ಕುರಿತ ಚರ್ಚೆ ಪ್ರಶ್ನೆಗೆ ಗರಂ ಆದ ಅವರು, ‘ಎಲ್ರೀ ಕ್ರಾಂತಿ ಇದೆ. ನಿಮ್ಮ ಪ್ರಕಾರ ಕ್ರಾಂತಿ ಎಂದರೇನು? ಬದಲಾವಣೆಯೇ ಕ್ರಾಂತಿಯಲ್ಲ. ರೆವಲ್ಯೂಷನ್ ಆಗುತ್ತದೆಯೇ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಳಿದರು.

‘ಬಿಜೆಪಿಯವರಿಗೆ ಕೆಲಸವಿಲ್ಲ. ಹೇಳುತ್ತಾರೆ. ಅದನ್ನೇ ನೀವೂ ಕೇಳುತ್ತೀರಿ. ಮಾಧ್ಯಮದವರು ಅಂತಹ ಹೇಳಿಕೆಗಳನ್ನು ನಿರ್ಲಕ್ಷಿಸಿದರೆ ಅವರೇ ಸುಮ್ಮನಾಗುತ್ತಾರೆ. ಕ್ರಾಂತಿಯೂ ಆಗುವುದಿಲ್ಲ; ಭ್ರಾಂತಿಯೂ ಆಗುವುದಿಲ್ಲ’ ಎಂದು ಪುನರುಚ್ಚರಿಸಿದರು.

‘ಸಿದ್ದರಾಮಯ್ಯ ಅವರೇ ಐದು ವರ್ಷ ಮುಖ್ಯಮಂತ್ರಿ ಆಗಿರುತ್ತಾರೆ’ ಎಂಬ ಪುತ್ರ, ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿಕೆಗೆ, ‘ಅವನನ್ನೇ ಕೇಳಿಕೊಳ್ಳಿ’ ಎಂದಷ್ಟೆ ಹೇಳಿದರು.

‘ಯಾವುದೇ ಸಂಘ–ಸಂಸ್ಥೆ ಸರ್ಕಾರಿ ಶಾಲೆ, ಮೈದಾನ, ಉದ್ಯಾನ, ಅನುದಾನಿತ ಶಾಲೆ ಮೊದಲಾದ ಜಾಗಗಳಲ್ಲಿ ಚಟುವಟಿಕೆ ನಡೆಸುವುದಕ್ಕೆ ನಿರ್ಬಂಧ ವಿಧಿಸಲು ಕ್ರಮ ಕೈಗೊಂಡಿದ್ದೇವೆ. ಹಿಂದೆ ಬಿಜೆಪಿ ಸರ್ಕಾರವಿದ್ದಾಗಲೇ, ಜಗದೀಶ ಶೆಟ್ಟರ್ ಮುಖ್ಯಮಂತ್ರಿ ಆಗಿದ್ದಾಗಲೇ ಈ ಬಗ್ಗೆ ಸುತ್ತೋಲೆ ಹೊರಡಿಸಲಾಗಿತ್ತು. ಇದು ಆರ್‌ಎಸ್‌ಎಸ್‌ಗೆ ಸೀಮಿತವಲ್ಲ, ಎಲ್ಲ ಸಂಘ–ಸಂಸ್ಥೆಗಳಿಗೂ ಅನ್ವಯಿಸುತ್ತದೆ’ ಎಂದು ಹೇಳಿದರು.

ಜನರು ಬದಲಾವಣೆ ಬಯಸಿದ್ದಾರೆ...

‘ಬಿಹಾರದಲ್ಲಿ ಜನರು ಬದಲಾವಣೆ ಬಯಸುತ್ತಿದ್ದಾರೆ. ಈ ಬಾರಿ ಚುನಾವಣೆಯಲ್ಲಿ ‘ಇಂಡಿಯಾ’ ಕೂಟ ಗೆಲ್ಲುತ್ತದೆ. ರಾಹುಲ್ ಗಾಂಧಿ ಅವರು ಪಾದಯಾತ್ರೆ ಮಾಡಿದಾಗ ಒಳ್ಳೆಯ ಪ್ರತಿಕ್ರಿಯೆ ಬಂದಿತ್ತು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.

‘ನನ್ನನ್ನು ಕರೆದರೆ, ಅಗತ್ಯವಿದ್ದರೆ ಪ್ರಚಾರಕ್ಕೆ ಹೋಗುತ್ತೇನೆ’ ಎಂದರು. ‘ಬಿಹಾರ ಚುನಾವಣೆ ಫಲಿತಾಂಶ ಕರ್ನಾಟಕದ ಮೇಲೆ ಪರಿಣಾಮ ಬೀರುವುದೇ’ ಎಂಬ ಪ್ರಶ್ನೆಗೆ, ‘ಯಾವ ರಾಜ್ಯದ್ದೂ ಯಾವ ರಾಜ್ಯದ ಮೇಲೂ ಪರಿಣಾಮ ಬೀರುವುದಿಲ್ಲ’ ಎಂದರು.

ಮೊಬೈಲ್ ಸ್ಫೋಟ: ಯುವಕನಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊಬೈಲ್ ಸ್ಫೋಟ ದಿಂದಾಗಿ ಗಂಭೀರ ಗಾಯಗೊಂಡಿದ್ದ ನಗರದ 19 ವರ್ಷದ ಯುವಕನನ್ನು ಪ್ರಾಣಾಪಾಯದಿಂದ ಪಾರು ಮಾಡುವಲ್ಲಿ ಸ್ಪರ್ಶ್ ಆಸ್ಪತ್ರೆ ವೈದ್ಯರು ಯಶಸ್ವಿಯಾಗಿದ್ದಾರೆ.

‘ಮನೆಯಲ್ಲಿ ಮೊಬೈಲ್ ವೀಕ್ಷಿಸುತ್ತಿದ್ದ ವೇಳೆ ಯುವಕನ ಮೊಬೈಲ್ ಸ್ಫೋಟಗೊಂಡಿತ್ತು. ಮುಖ ಹಾಗೂ ಬಲ ಕೈಗೆ ಗಾಯವಾಗಿ, ಪ್ರಜ್ಞೆ ತಪ್ಪಿದ್ದ ಆತನನ್ನು ಇನ್‌ಫೆಂಟ್ರಿ ರಸ್ತೆಯ ಸ್ಪರ್ಶ್ ಆಸ್ಪತ್ರೆಗೆ ಕರೆತರಲಾಗಿತ್ತು. ಮಧುಮೇಹ ಸಮಸ್ಯೆಯನ್ನೂ ಎದುರಿಸುತ್ತಿದ್ದ ಕಾರಣ, ಆತ ಗಂಭೀರ ಸ್ಥಿತಿಗೆ ತಲುಪಿದ್ದ. ವೈದ್ಯರ ತಂಡ ತೀವ್ರ ನಿಗಾ ಘಟಕಕ್ಕೆ ದಾಖಲಿಸಿ, ಚಿಕಿತ್ಸೆ ಒದಗಿಸಿತು’ ಎಂದು ಆಸ್ಪತ್ರೆ ತಿಳಿಸಿದೆ.

‘ಮೊಬೈಲ್ ಸ್ಫೋಟದಿಂದ ಸುಟ್ಟ ಗಾಯಗಳ ಜತೆಗೆ ಶ್ವಾಸಕೋಶಕ್ಕೂ ತೀವ್ರ ತರದ ಹಾನಿಯಾಗಿತ್ತು. ಮಧುಮೇಹದಿಂದಾಗಿ ಚಯಾಪಚಯ ಪ್ರಕ್ರಿಯೆಗೆ ತೊಂದರೆ ಉಂಟಾಗಿತ್ತು. ಮಧುಮೇಹ ಇರುವುದರಿಂದ ದೇಹದ ಅಂಗಾಂಗಗಳ ಮೇಲೆ ತೀವ್ರ ಪರಿಣಾಮ ಬೀರಿರುವುದನ್ನು ಮೊದಲೇ ಖಚಿತಪಡಿಸಿಕೊಂಡು, ಸೂಕ್ತ ಚಿಕಿತ್ಸಾ ಕ್ರಮ ಅನುಸರಿಸಲಾಯಿತು. ಇದರಿಂದ ಬಹುಅಂಗಾಂಗ ವೈಫಲ್ಯ ತಪ್ಪಿಸಲು ಸಾಧ್ಯವಾಯಿತು’ ಎಂದು ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ. ಹೇಮಂತ್ ಎಚ್.ಆರ್. ವಿವರಿಸಿದರು.

ಜಿಬಿಎ: ಶೇ 37ರಷ್ಟು ಸಮೀಕ್ಷೆ ಪೂರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗಗಳ ಆಯೋಗ ನಡೆಸುತ್ತಿರುವ ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆಯು ರಾಜ್ಯದಾದ್ಯಂತ ಶೇ 90 ದಾಟಿದ್ದರೆ ಗ್ರೇಟರ್ ಬೆಂಗಳೂರು (ಜಿಬಿಎ) ವ್ಯಾಪ್ತಿಯಲ್ಲಿ ಮಾತ್ರ ಕುಂಟುತ್ತಾ ಸಾಗಿದೆ. ಜಿಬಿಎ ವ್ಯಾಪ್ತಿಯಲ್ಲಿ ಶೇ 37ರಷ್ಟು ಪೂರ್ಣಗೊಂಡಿದ್ದು, ಇನ್ನೆರಡು ದಿನಗಳಲ್ಲಿ ಶೇ 63ರಷ್ಟು ಸಮೀಕ್ಷೆ ನಡೆಯಬೇಕಿದೆ. ನಗರದಲ್ಲಿ ಸುಮಾರು 46 ಲಕ್ಷ ಮನೆಗಳಿವೆ. ಅವುಗಳ ಸಮೀಕ್ಷೆಗೆ 21 ಸಾವಿರ ಸಮೀಕ್ಷಕರನ್ನು ನಿಯೋಜಿಸಲಾಗಿದೆ. ಇಲ್ಲಿಯವರೆಗೆ 17.20 ಲಕ್ಷ ಮನೆಗಳ ಸಮೀಕ್ಷೆ ಮುಗಿದಿದೆ. ಶುಕ್ರವಾರ ಒಂದೇ ದಿನ 5 ನಗರ ಪಾಲಿಕೆಗಳಲ್ಲಿ 76,695 ಮನೆಗಳ ಸಮೀಕ್ಷೆ ನಡೆಸಲಾಗಿದೆ.

ಸಮೀಕ್ಷಕರು ಮನೆಗಳಿಗೆ ಬಂದಾಗ ನಾಗರಿಕರು ಸಮೀಕ್ಷೆಯಲ್ಲಿ ಭಾಗವಹಿಸಿ, ಸಹಕಾರ ನೀಡಬೇಕು ಎಂದು ಜಿಬಿಎ ಕೋರಿದೆ. ಸ್ವತಃ ಆನ್‌ಲೈನ್ (https://kscbcselfdeclaration.karnataka.gov.in) ಮೂಲಕವೂ ಸಮೀಕ್ಷೆಯಲ್ಲಿ ಪಾಲ್ಗೊಳ್ಳಬಹುದು ಎಂದಿದೆ.

ಸಮೀಕ್ಷೆಯ ವಿವರ

ನಗರ ಪಾಲಿಕೆ	ಮನೆಗಳು
ಕೇಂದ್ರ	2,29,343
ಪೂರ್ವ	2,72,376
ಉತ್ತರ	4,19,033
ದಕ್ಷಿಣ	3,19,742
ಪಶ್ಚಿಮ	4,79,996


ದೀಪಾವಳಿ ಹಬ್ಬಕ್ಕಾಗಿ ಊರುಗಳಿಗೆ ಹೋಗುವವರ ಸಂಖ್ಯೆ ಹೆಚ್ಚಾಗಿದ್ದು ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಶುಕ್ರವಾರ ರಾತ್ರಿ ಹೆಚ್ಚಿನ ದಟ್ಟಣೆ ಕಂಡುಬಂತು ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಊರಿನತ್ತ ಜನ: ಸಂಚಾರ ದಟ್ಟಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯೋಗ, ವ್ಯಾಸಂಗ ಸೇರಿ ವಿವಿಧ ಕಾರಣಗಳಿಂದ ನಗರದಲ್ಲಿ ನೆಲಸಿರುವ ಲಕ್ಷಾಂತರ ಮಂದಿ ದೀಪಾವಳಿ ಹಬ್ಬದ ಅಂಗವಾಗಿ ಶುಕ್ರವಾರ ರಾತ್ರಿ ತಮ್ಮ ಊರುಗಳಿಗೆ ಹೊರಟರು. ಇದರಿಂದಾಗಿ ನಗರದ ಹಲವೆಡೆ ಸಂಚಾರ ದಟ್ಟಣೆ ಉಂಟಾಯಿತು.

ಭಾನುವಾರ ರಜಾ ದಿನ. ಹಬ್ಬದ ಕಾರಣ ಸೋಮವಾರ, ಬುಧವಾರ ಸರ್ಕಾರಿ ರಜೆ ಇರಲಿದೆ. ಖಾಸಗಿ ಕಂಪನಿಗಳ ಬಹುತೇಕ ಮಂದಿಗೆ ಶನಿವಾರವೂ ರಜೆ ಇದೆ. ಹೀಗಾಗಿ ಶುಕ್ರವಾರ ರಾತ್ರಿಯೇ ಕುಟುಂಬ ಸಮೇತ ಊರುಗಳತ್ತ ಮುಖ ಮಾಡಿದ್ದರು. ಮೆಜೆಸ್ಟಿಕ್ ಸುತ್ತಮುತ್ತ ಭಾರಿ ಸಂಚಾರ ದಟ್ಟಣೆ ಕಂಡು ಬಂತು. ರೈಲು ನಿಲ್ದಾಣ, ಶಾಂತಿನಗರ ಬಸ್ ನಿಲ್ದಾಣ, ಯಶವಂತಪುರ ರೈಲು ನಿಲ್ದಾಣ ಸೇರಿ ವಿವಿಧೆಡೆ ಭಾರಿ ಜನಜಂಗುಳಿ ಇತ್ತು. ಕೆಎಸ್‌ಆರ್‌ಟಿಸಿ ಹಾಗೂ ಖಾಸಗಿ ಬಸ್‌ಗಳು ಪ್ರಯಾಣಿಕರಿಂದ ತುಂಬಿ ತುಳುಕುತ್ತಿದ್ದವು. ಹೊಸೂರು ರಸ್ತೆ, ಮೈಸೂರು ರಸ್ತೆ, ತುಮಕೂರು ರಸ್ತೆ, ಬಳ್ಳಾರಿ ರಸ್ತೆಯುದ್ದಕ್ಕೂ ಸಾಲು-ಸಾಲಾಗಿ ಸಾಗುತ್ತಿದ್ದ ಖಾಸಗಿ ವಾಹನಗಳಿಂದ ಅಧಿಕ ದಟ್ಟಣೆ ಉಂಟಾಯಿತು. ಕಾರು, ದ್ವಿಚಕ್ರ ವಾಹನಗಳಲ್ಲೇ ಲಕ್ಷಾಂತರ ಮಂದಿ ರಾತ್ರಿ ಊರಿನತ್ತ ತೆರಳಿದ ಪರಿಣಾಮ, ವಾಹನಗಳು ತಾಸುಗಟ್ಟಲೆ ಟ್ರಾಫಿಕ್‌ನಲ್ಲಿ ಸಾಲುಗಟ್ಟಿ ನಿಂತಿದ್ದವು. ಸುಗಮ ಸಂಚಾರಕ್ಕೆ ಪೊಲೀಸರು ಹರಸಾಹಸಪಟ್ಟರು. ರೈಲು, ಬಸ್ ನಿಲ್ದಾಣಗಳಲ್ಲಿ ಬಿಗಿ ಬಂದೋಬಸ್ತ್ ಮಾಡಲಾಗಿತ್ತು.

ಬಿಹಾರದತ್ತ ಕಾರ್ಮಿಕರು

ಬೆಂಗಳೂರು: ಹಬ್ಬ ಮತ್ತು ಬಿಹಾರದಲ್ಲಿ ವಿಧಾನಸಭಾ ಚುನಾವಣೆ ಇರುವುದರಿಂದ ಕರ್ನಾಟಕದಲ್ಲಿ ಇರುವ ಬಿಹಾರಿ ಕಾರ್ಮಿಕರು ತಮ್ಮ ರಾಜ್ಯಕ್ಕೆ ಹೊರಟಿದ್ದಾರೆ. ಇದರಿಂದ ರೈಲು ನಿಲ್ದಾಣಗಳಲ್ಲಿ ನೂಕುನುಗ್ಗಲು ಉಂಟಾಯಿತು.

ನವೆಂಬರ್ 6 ಮತ್ತು 11ರಂದು ಬಿಹಾರದಲ್ಲಿ ಚುನಾವಣೆ ನಡೆಯಲಿದೆ. ಹಾಗಾಗಿ ಕಾರ್ಮಿಕರು ದೀರ್ಘ ರಜೆಯೊಂದಿಗೆ ತೆರಳುತ್ತಿದ್ದಾರೆ.

ಆರ್‌ಎಸ್‌ಎಸ್ ಕಚೇರಿಗೆ ಮುತ್ತಿಗೆಗೆ ಯತ್ನ

ಯುವ ಕಾಂಗ್ರೆಸ್ ಘಟಕದಿಂದ ಪ್ರತಿಭಟನೆ ಎಫ್‌ಐಆರ್ ದಾಖಲಿಸಲು ಬಿಜೆಪಿ ಆಗ್ರಹ

ಮುಖ್ಯಾಂಶಗಳು

- ಕೇಶವ ಕೃಪಾ ಮುಂಭಾಗ ಕೆಲಕಾಲ ಗೊಂದಲ ಸ್ಥಿತಿ
- ಸ್ಥಳಕ್ಕೆ ಪೊಲೀಸರ ಭೇಟಿ: ಪರಿಸ್ಥಿತಿ ಹತೋಟಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್‌ಎಸ್‌ಎಸ್ ರಾಜ್ಯ ಕಚೇರಿ ಕೇಶವ ಕೃಪಾಕ್ಕೆ ಮುತ್ತಿಗೆ ಹಾಕಲು ಯತ್ನಿಸಿದ ಯುವ ಕಾಂಗ್ರೆಸ್ ಘಟಕದ ಕಾರ್ಯಕರ್ತರನ್ನು ಪೊಲೀಸರು ಶುಕ್ರವಾರ ವಶಕ್ಕೆಪಡೆದು ಬಿಡುಗಡೆ ಮಾಡಿದರು.

ಕಾಂಗ್ರೆಸ್ ಕಾರ್ಯಕರ್ತರು ಮುತ್ತಿಗೆ ಹಾಕಲು ಯತ್ನ ನಡೆಸಿರುವ ವಿಚಾರ ತಿಳಿಯುತ್ತಿದ್ದಂತೆ ಆರ್‌ಎಸ್‌ಎಸ್‌ನ ಮುಖಂಡರು ಕಚೇರಿಗೆ ಧಾವಿಸಿದರು. ಆಗ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು.

ನಂತರ ಪೊಲೀಸರು ಸ್ಥಳಕ್ಕೆ ಬಂದು ಯಾವುದೇ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ವಹಿಸಿದರು. ಪ್ರತಿಭಟನಕಾರರನ್ನು ವಶಕ್ಕೆ ಪಡೆದುಕೊಂಡರು.

ಆರ್‌ಎಸ್‌ಎಸ್ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿರುವುದರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಬಿಜೆಪಿ ಕಾರ್ಯಕರ್ತರು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಅವರಿಗೆ ದೂರು ನೀಡಿದರು.

‘ಪೊಲೀಸ್ ಇಲಾಖೆ ಸ್ವತಂತ್ರವಾಗಿ ಕಾರ್ಯ ನಿರ್ವಹಿಸಬೇಕು. ಆದರೆ, ಇಲಾಖೆ ಯಾವುದೇ ಮುಂಜಾಗ್ರತೆ ವಹಿಸದೇ ನಿರ್ಲಕ್ಷ್ಯ ತೋರಿದೆ. ರಾಜ್ಯ ಸರ್ಕಾರವು ಇಲಾಖೆಗಳ ಕಾರ್ಯ ವ್ಯಾಪ್ತಿಯಲ್ಲಿ ಅನಗತ್ಯ ಹಸ್ತಕ್ಷೇಪ ನಡೆಸುತ್ತಿರುವುದು ವೈಫಲ್ಯಕ್ಕೆ ಕಾರಣವಾಗಿದೆ’ ಎಂದು ವಿಧಾನ ಪರಿಷತ್‌ನ ವಿರೋಧ ಪಕ್ಷದ ಮುಖ್ಯಸಚೇತಕ ಎನ್.ರವಿಕುಮಾರ್ ಅವರು ದೂರಿದರು.

‘ಶತಮಾನೋತ್ಸವ ಸಂಭ್ರಮದಲ್ಲಿ ವರ್ಷವಿಡೀ ನೂರಾರು ಜನಮುಖಿ ಕಾರ್ಯಕ್ರಮಗಳ ಯೋಜನೆಯಲ್ಲಿರುವ ಐತಿಹಾಸಿಕ ಸಂಘಟನೆಯ ಕಚೇರಿ ಎದುರು ಕಿಡಿಗೇಡಿತನಕ್ಕೆ ಪೊಲೀಸ್ ಇಲಾಖೆ ಅವಕಾಶ ಮಾಡಿಕೊಡಬಾರದು. ಆರ್‌ಎಸ್‌ಎಸ್ ಬಗ್ಗೆ ತಕರಾರುಗಳಿದ್ದರೆ ಮಾಧ್ಯಮಗಳಲ್ಲಿ ಚರ್ಚಿಸಲು ಮುಕ್ತ ಅವಕಾಶವಿದೆ’ ಎಂದರು.

‘ಆರ್‌ಎಸ್‌ಎಸ್ ರಾಜ್ಯ ಕಚೇರಿ ಮುಂದೆ ಕಾಂಗ್ರೆಸ್‌ನವರು ಗೂಂಡಾವರ್ತನೆ ತೋರಿದ್ದಾರೆ. ಅವರ ವಿರುದ್ಧ ಎಫ್‌ಐಆರ್ ದಾಖಲಿಸಬೇಕು’ ಎಂದು ಬಿಜೆಪಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ವಿ. ಸುನೀಲ್ ಕುಮಾರ್ ಆಗ್ರಹಿಸಿದರು.

‘ಸಂಘದ ಶತಮಾನೋತ್ಸವದ ಸಂದರ್ಭದಲ್ಲಿ ದೇಶದಾದ್ಯಂತ ನೂರಾರು ಕಾರ್ಯಕ್ರಮಗಳನ್ನು ಕಳೆದ 3-4 ತಿಂಗಳಲ್ಲಿ ಮಾಡುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಕೇಶವ ಕೃಪಾದ ಮುಂದೆ ಕೆಲವರು ಗೂಂಡಾವರ್ತನೆ ಮಾಡಿದ್ದು, ಪ್ರತಿಭಟನೆ ನೆಪದಲ್ಲಿ ಅವಾಚ್ಯ ಶಬ್ದಗಳಿಂದ ಕೂಗಿರುವುದನ್ನು ಸಹಿಸಲು ಸಾಧ್ಯವಿಲ್ಲ’ ಎಂದರು.

ಪೂರ್ವಾನುಮತಿ ಇಲ್ಲದೇ ಪ್ರತಿಭಟಿಸುವಂತಿಲ್ಲ. ಅನುಮತಿ ಪಡೆದು ಪ್ರತಿಭಟನೆ ಮಾಡುವುದಾದರೆ ಬೆಂಗಳೂರಿನಲ್ಲಿ ನಿರ್ದಿಷ್ಟ ಸ್ಥಳ ಇದೆ. ಅನುಮತಿ ಪಡೆಯದೇ ಪ್ರತಿಭಟನೆ ಮಾಡಿದ್ದರೆ ಅವರ ಮೇಲೆ ಎಫ್‌ಐಆರ್ ದಾಖಲಿಸಿ ಎಂದು ಆಗ್ರಹಿಸಿದರು. ಶಾಸಕ ಭರತ್ ಶೆಟ್ಟಿ, ಬಿಜೆಪಿ ಉತ್ತರ ಜಿಲ್ಲಾ ಘಟಕದ ಅಧ್ಯಕ್ಷ ಎಸ್. ಹರೀಶ್ ಹಾಗೂ ಬಿಜೆಪಿ ಬೆಂಗಳೂರು ಕೇಂದ್ರ ಜಿಲ್ಲಾ ಘಟಕದ ಅಧ್ಯಕ್ಷ ಸಪ್ತಗಿರಿ ಗೌಡ ಅವರು ಉಪಸ್ಥಿತರಿದ್ದರು.



ಆರ್‌ಎಸ್‌ಎಸ್ ಕಚೇರಿ ಎದುರು ಪ್ರತಿಭಟನೆ ನಡಸಿದವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಅವರಿಗೆ ಬಿಜೆಪಿ ಮುಖಂಡರು ಶುಕ್ರವಾರ ಮನವಿ ಸಲ್ಲಿಸಿದರು

ಡಿಜಿಟಲ್ ಅರೆಸ್ಟ್ ಹೆಚ್ಚಳ: ಸುಪ್ರೀಂ ಕೋರ್ಟ್ ಕಳವಳ

ನವದೆಹಲಿ (ಪಿಟಿಐ): ದೇಶದಲ್ಲಿ ‘ಡಿಜಿಟಲ್ ಅರೆಸ್ಟ್’ ಹೆಸರಿನಲ್ಲಿ ಬೆದರಿಸಿ ಸುಲಿಗೆ ಮಾಡುತ್ತಿರುವ ಪ್ರಕರಣಗಳು ಹೆಚ್ಚುತ್ತಿರುವುದರ ಬಗ್ಗೆ ಸುಪ್ರೀಂ ಕೋರ್ಟ್ ಕಳವಳ ವ್ಯಕ್ತಪಡಿಸಿದ್ದು, ಈ ಬಗ್ಗೆ ಕೇಂದ್ರ ಸರ್ಕಾರದ ಪ್ರತಿಕ್ರಿಯೆ ಕೋರಿದೆ.

ನ್ಯಾಯಾಲಯ ಮತ್ತು ತನಿಖಾ ಸಂಸ್ಥೆಗಳ ನಕಲಿ ಆದೇಶ ಪ್ರತಿಗಳನ್ನು ತೋರಿಸಿ ವಂಚಕರು ಹರಿಯಾಣದ ದಂಪತಿಯಿಂದ ₹1.05 ಕೋಟಿ ಸುಲಿಗೆ ಮಾಡಿರುವ ಘಟನೆಯನ್ನು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಜಾಯ್‌ಮಾಲ್ಯ ಬಾಗ್ಚಿ ಅವರ ಪೀಠವು ಗಂಭೀರವಾಗಿ ಪರಿಗಣಿಸಿದೆ.

ವಂಚನೆಗೆ ಒಳಗಾದ 73 ವರ್ಷದ ಮಹಿಳೆಯು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರಿಗೆ ಪತ್ರ ಬರೆದಿದ್ದರು. ಈ ಪತ್ರದ ಆಧಾರದಲ್ಲಿ ಸ್ವಯಂಪ್ರೇರಿತ ದೂರು ದಾಖಲಾದ ಪ್ರಕರಣದಲ್ಲಿ ಪೀಠವು ಕೇಂದ್ರ ಸರ್ಕಾರ ಮತ್ತು ಸಿಬಿಐನ ಪ್ರತಿಕ್ರಿಯೆ ಕೋರಿದೆ.

‘ಹಿರಿಯ ನಾಗರಿಕರು ಸೇರಿದಂತೆ ಅಮಾಯಕರನ್ನು ‘ಡಿಜಿಟಲ್ ಅರೆಸ್ಟ್’ ಹೆಸರಿನಲ್ಲಿ ಬೆದರಿಸಲು ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ನ ಆದೇಶಗಳು, ನ್ಯಾಯಾಧೀಶರ ಸಹಿಗಳನ್ನು ನಕಲಿ ಮಾಡುವುದು ನ್ಯಾಯಾಂಗ ವ್ಯವಸ್ಥೆಯಲ್ಲಿ ಜನರು ಇಟ್ಟಿರುವ ನಂಬಿಕೆಯ ಮೇಲೆ ಬಲವಾದ ಹೊಡೆತ ನೀಡುತ್ತದೆ. ಇಂತಹ ಕ್ರಮವು ನ್ಯಾಯಾಂಗದ ಘನತೆಯ ಮೇಲಿನ ನೇರ ದಾಳಿಯಾಗಿದೆ’ ಎಂದು ಪೀಠ ಹೇಳಿದೆ.

‘ಇಂತಹ ಪ್ರಕರಣ ಇದೊಂದೇ ಅಲ್ಲ ಎಂಬುದನ್ನು ನ್ಯಾಯಾಲಯ ಗಮನಕ್ಕೆ ತೆಗೆದುಕೊಂಡಿದೆ. ದೇಶದ ವಿವಿಧ ಭಾಗಗಳಲ್ಲಿ ಹಲವು ಪ್ರಕರಣಗಳು ನಡೆದಿರುವುದು ಮಾಧ್ಯಮಗಳಲ್ಲಿ ವರದಿಯಾಗಿವೆ. ನ್ಯಾಯಾಲಯದ ದಾಖಲೆಗಳನ್ನು ನಕಲಿ ಮಾಡುವುದು, ಹಿರಿಯ ನಾಗರಿಕರು ಸೇರಿದಂತೆ ಅಮಾಯಕರನ್ನು ಡಿಜಿಟಲ್ ಅರೆಸ್ಟ್ ಹೆಸರಲ್ಲಿ ಸುಲಿಗೆ ಮಾಡುವ ಜಾಲವನ್ನು ಪೂರ್ಣ ಪ್ರಮಾಣದಲ್ಲಿ ಬಯಲಿಗೆಳೆಯಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಘಟಿತ ಪ್ರಯತ್ನ ಅಗತ್ಯವೆಂದು ಭಾವಿಸುತ್ತೇವೆ’ ಎಂದಿದೆ.

ಇದಕ್ಕೆ ಸಂಬಂಧಿಸಿದಂತೆ ಅಟಾರ್ನಿ ಜನರಲ್ ಅವರ ಸಹಾಯವನ್ನು ಕೋರಿದ ಪೀಠ, ಹಿರಿಯ ದಂಪತಿಯನ್ನು ವಂಚಿಸಿದ ಪ್ರಕರಣದಲ್ಲಿ ಇದುವರೆಗಿನ ತನಿಖೆಯ ಸ್ಥಿತಿಗತಿ ವರದಿ ಸಲ್ಲಿಸುವಂತೆ ಹರಿಯಾಣ ಸರ್ಕಾರ ಮತ್ತು ಅಂಬಾಲ ಸೈಬರ್ ಅಪರಾಧ ವಿಭಾಗಕ್ಕೆ ನಿರ್ದೇಶನ ನೀಡಿತು.

ವಂಚಕರು ಸೆಪ್ಟೆಂಬರ್ 3ರಿಂದ 16ರ ನಡುವೆ ‘ಡಿಜಿಟಲ್ ಅರೆಸ್ಟ್’ ಹೆಸರಿನಲ್ಲಿ ಬೆದರಿಸಿದ್ದಾರೆ. ಅದಕ್ಕಾಗಿ, ನ್ಯಾಯಾಲಯದ ನಕಲಿ ದಾಖಲೆಗಳನ್ನು ತೋರಿಸಿರುವುದನ್ನು ದೂರುದಾರ ಮಹಿಳೆಯು ಪತ್ರದ ಮೂಲಕ ಸುಪ್ರೀಂ ಕೋರ್ಟ್ ಗಮನಕ್ಕೆ ತಂದಿದ್ದರು. ವಂಚಕರು ಸಿಬಿಐ ಮತ್ತು ಜಾರಿ ನಿರ್ದೇಶನಾಲಯದ ಅಧಿಕಾರಿಗಳೆಂದು ಹೇಳಿ ಆಡಿಯೊ ಮತ್ತು ವಿಡಿಯೊ ಕರೆ ಮಾಡಿ ನ್ಯಾಯಾಲಯದ ನಕಲಿ ದಾಖಲೆಗಳನ್ನು ತೋರಿಸಿದ್ದರು ಎಂದು ಪತ್ರದಲ್ಲಿ ತಿಳಿಸಿದ್ದರು.

‘ತೀರ್ಪಿಗಾಗಿ ಕಾಯಿರಿ’

ತಮಿಳುನಾಡು ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಶ್ವವಿದ್ಯಾಲಯ (ತಿದ್ದುಪಡಿ) ಮಸೂದೆಗೆ ರಾಜ್ಯಪಾಲ ಆರ್.ಎನ್.ರವಿ ಅವರು ಒಪ್ಪಿಗೆ ನೀಡುವ ಬದಲು ರಾಷ್ಟ್ರಪತಿಗೆ ಕಳುಹಿಸಿರುವ ನಿರ್ಧಾರವನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಯ ವಿಚಾರಣೆಗೆ ಸ್ವಲ್ಪ ಸಮಯ ಕಾಯಬೇಕು ಎಂದು ಸುಪ್ರೀಂ ಕೋರ್ಟ್ ತಮಿಳುನಾಡು ಸರ್ಕಾರಕ್ಕೆ ಶುಕ್ರವಾರ ತಿಳಿಸಿದೆ.

ರಾಜ್ಯ ವಿಧಾನಸಭೆಗಳು ಅಂಗೀಕರಿಸಿದ ಮಸೂದೆಗಳಿಗೆ ಅಂಕಿತ ಹಾಕಲು ಕಾಲಮಿತಿ ನಿಗದಿಪಡಿಸಬಹುದೇ ಎಂದು ರಾಷ್ಟ್ರಪತಿಯವರು ಉಲ್ಲೇಖಿಸಿರುವ ಸಾಂವಿಧಾನಿಕ ಪ್ರಶ್ನೆಗಳ ಕುರಿತ ತೀರ್ಪಿನ ನಂತರ ಈ ಅರ್ಜಿಯನ್ನು ಪರಿಗಣಿಸಲಾಗುವುದು ಎಂದು ಮುಖ್ಯ ನ್ಯಾಯಮೂರ್ತಿ ಬಿ.ಆರ್ ಗವಾಯಿ ಮತ್ತು ಕೆ.ವಿನೋದ ಚಂದ್ರನ್ ಅವರ ಪೀಠ ಹೇಳಿತು.

> **‘ಡಿಜಿಟಲ್ ಅರೆಸ್ಟ್’ನಂತಹ ಗಂಭೀರ ಅಪರಾಧ ಪ್ರಕರಣಗಳನ್ನು ವಂಚನೆ ಅಥವಾ ಸೈಬರ್ ಅಪರಾಧದಂತಹ ಸಾಮಾನ್ಯ ಪ್ರಕರಣವೆಂದು ಪರಿಗಣಿಸಲು ಅಸಾಧ್ಯ**
> ಸುಪ್ರೀಂ ಕೋರ್ಟ್ ಪೀಠ

ಗೋವಿಂದಪ್ಪ ಪ್ರಭಾರ ಕುಲಪತಿ

ಪ್ರಜಾವಾಣಿ ವಾರ್ತೆ

ಮಹಾರಾಣಿ ಕ್ಲಸ್ಟರ್ ವಿ.ವಿ

ಬೆಂಗಳೂರು: ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಪ್ರಭಾರ ಕುಲಪತಿಯಾಗಿ ವಾಣಿಜ್ಯ ಶಾಲೆಯ ನಿರ್ದೇಶಕ ಡಿ.ಗೋವಿಂದಪ್ಪ ಅವರನ್ನು ನೇಮಕ ಮಾಡಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಆದೇಶ ಹೊರಡಿಸಿದ್ದಾರೆ.

ಕುಲಪತಿಯಾಗಿದ್ದ ಎಲ್. ಗೋಮತಿದೇವಿ ಅವರ ಅವಧಿ 2024ನೇ ನವೆಂಬರ್‌ನಲ್ಲಿ ಮುಕ್ತಾಯವಾಗಿತ್ತು. ನೂತನ ಕುಲಪತಿಯ ನೇಮಕವಾಗದ ಕಾರಣ ಅಂದಿನಿಂದಲೂ ಪ್ರಭಾರ ಕುಲಪತಿಗಳೇ ಆಡಳಿತ ನಡೆಸುತ್ತಾ ಬಂದಿದ್ದಾರೆ. ಉಷಾದೇವಿ, ಮೀರಾ ಬಿ.ಕೆ, ಟಿ.ಎಂ.ಮಂಜುನಾಥ್ ಅವರು ಇದುವರೆಗೂ ಪ್ರಭಾರ ಕುಲಪತಿಗಳಾಗಿ ಕಾರ್ಯ ನಿರ್ವಹಿಸಿದ್ದಾರೆ.

ಟಿ.ಎಂ. ಮಂಜುನಾಥ್ ಅವರ ಅವಧಿಯು ಅಕ್ಟೋಬರ್ 16ಕ್ಕೆ ಕೊನೆಗೊಂಡ ಕಾರಣ ಗೋವಿಂದಪ್ಪ ಅವರಿಗೆ ಜವಾಬ್ದಾರಿ ನೀಡಲಾಗಿದೆ.

ಮಾದಪ್ಪನ ಸನ್ನಿಧಿ: ದೀಪಾವಳಿ ಜಾತ್ರೆ

ಪ್ರಜಾವಾಣಿ ವಾರ್ತೆ

ಮಹದೇಶ್ವರ ಬೆಟ್ಟ (ಚಾಮರಾಜನಗರ ಜಿಲ್ಲೆ): ಪ್ರಸಿದ್ಧ ಧಾರ್ಮಿಕ ಯಾತ್ರಾ ಸ್ಥಳ ಮಹದೇಶ್ವರನ ಬೆಟ್ಟದಲ್ಲಿ ಅ.18ರಿಂದ 22ರವರೆಗೆ ದೀಪಾವಳಿ ಜಾತ್ರಾ ಮಹೋತ್ಸವ ನಡೆಯಲಿದೆ.

ಉತ್ಸವದಲ್ಲಿ ಲಕ್ಷಾಂತರ ಭಕ್ತರು ಭಾಗವಹಿಸಲಿದ್ದಾರೆ. ಈಗಾಗಲೇ ರಾಜ್ಯದ ನಾನಾ ಭಾಗಗಳಿಂದ ಸಹಸ್ರಾರು ಭಕ್ತರು ಕಾಲ್ನಡಿಗೆಯಲ್ಲಿ ಕ್ಷೇತ್ರ ತಲುಪುತ್ತಿದ್ದು, ಮಾದಪ್ಪನ ಸ್ಮರಣೆ ಅನುರಣಿಸುತ್ತಿದೆ. ದೇವಸ್ಥಾನಕ್ಕೆ ವಿದ್ಯುತ್ ದೀಪಾಲಂಕಾರ ಮಾಡಲಾಗಿದ್ದು ಕಣ್ಮನ ಸೆಳೆಯುತ್ತಿದೆ.

18 ಹಾಗೂ 19ರಂದು ಮಹದೇಶ್ವರನಿಗೆ ಎಣ್ಣೆ ಮಜ್ಜನ ಸೇವೆ, ಉತ್ಸವ ನೆರವೇರಲಿದೆ. 20ರಂದು ನರಕ ಚತುರ್ದಶಿ, 21ರಂದು ಅಮಾವಾಸ್ಯೆ ಪ್ರಯುಕ್ತ ಹಾಲರವೆ ಉತ್ಸವ, 22ರಂದು ಮಹದೇಶ್ವರ ಸ್ವಾಮಿ ಮಹಾ ರಥೋತ್ಸವ ನಡೆಯಲಿದೆ. ಈಗಾಗಲೇ ಸಂಪ್ರದಾಯದಂತೆ ಕಾಡಿನಿಂದ ಬಿದಿರು ತಂದು ಅಚ್ಚೆಗಳನ್ನು ಜೋಡಿಸಿ 56 ಅಡಿ ಎತ್ತರದ ರಥ ನಿರ್ಮಿಸಲಾಗಿದೆ.

ರಥೋತ್ಸವದಂದು ಗುರು ಬ್ರಹ್ಮೋತ್ಸವ, ಅನ್ನ ಬ್ರಹ್ಮೋತ್ಸವ ಹಾಗೂ ರಾತ್ರಿ ಮಹಾ ನೈವೇದ್ಯ ಸಮರ್ಪಣೆಯಾಗಲಿದ್ದು ಅದ್ದೂರಿ ತೆಪ್ಪೋತ್ಸವದ ಮೂಲಕ ದೀಪಾವಳಿ ಜಾತ್ರೆಗೆ ತೆರೆ ಬೀಳಲಿದೆ.

ಸಾರಿಗೆ ವ್ಯವಸ್ಥೆ: ಕರ್ನಾಟಕ, ತಮಿಳುನಾಡಿನಿಂದಲೂ ಭಕ್ತರು ಬರುವುದರಿಂದ ತಮಿಳುನಾಡಿನಿಂದ 150 ಬಸ್‌ಗಳು, ಕೆಎಸ್‌ಆರ್‌ಟಿಸಿಯಿಂದ 300ಕ್ಕೂ ಹೆಚ್ಚು ಬಸ್ ವಿವಿಧೆಡೆಯಿಂದ ಸಂಚರಿಸಲಿವೆ.

‘ಮಾತು ತಪ್ಪಲು ನಾನು ಮೋದಿಯಲ್ಲ’

‘ಯುವನಿಧಿ’ ನಿಲ್ಲುವುದಿಲ್ಲ • ಬಿಜೆಪಿಗರ ಸುಳ್ಳುಗಳಿಗೆ ಕಿವಿಗೊಡಬೇಡಿ: ಮುಖ್ಯಮಂತ್ರಿ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಮೈಸೂರು: ‘ಕೊಟ್ಟ ಮಾತಿಗೆ ತಪ್ಪಿ ನಡೆಯಲು ನಾನು ಪ್ರಧಾನಿ ನರೇಂದ್ರ ಮೋದಿಯಲ್ಲ. ವರ್ಷಕ್ಕೆ 2 ಕೋಟಿ ಉದ್ಯೋಗ ನೀಡುವುದಾಗಿ ಅವರು ಹೇಳಿದ್ದರು. 11 ವರ್ಷದಲ್ಲಿ 22 ಕೋಟಿ ನೌಕರಿ ಕೊಟ್ಟಿದ್ದಾರೆಯೇ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಇಲ್ಲಿ ಪ್ರಶ್ನಿಸಿದರು.

‘ರಾಜ್ಯ ಸರ್ಕಾರದ ಯುವನಿಧಿ ಯೋಜನೆಯ ನೆರವು ಅರ್ಹ ಫಲಾನುಭವಿಗೆ ನಿಯಮದಂತೆ 2 ವರ್ಷ ಸಿಗಲಿದೆ. ಉದ್ಯೋಗ ಸಿಕ್ಕ ಬಳಿಕ ಯುವನಿಧಿ ನಿಲ್ಲಿಸಲಾಗುತ್ತದೆ. ಕೌಶಲಾಭಿವೃದ್ಧಿ ತರಬೇತಿಗೆ ಸೇರಿದರೆ ಪ್ರೋತ್ಸಾಹಧನ ನಿಲ್ಲುವುದೆಂಬ ಬಿಜೆಪಿಗರ ಸುಳ್ಳುಗಳಿಗೆ ಕಿವಿಗೊಡಬಾರದು’ ಎಂದೂ ಹೇಳಿದರು.

ಇಲ್ಲಿನ ಮಹಾರಾಜ ಕಾಲೇಜು ಮೈದಾನದಲ್ಲಿ ರಾಜ್ಯ ಕೌಶಲ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯು ಆಯೋಜಿಸಿದ್ದ ಮೈಸೂರು ವಿಭಾಗೀಯ ಮಟ್ಟದ ಬೃಹತ್ ಉದ್ಯೋಗ ಮೇಳವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮುಖ್ಯಾಂಶಗಳು

- ಎರಡೂವರೆ ವರ್ಷದಲ್ಲಿ 28 ಸಾವಿರ ಹುದ್ದೆ ಭರ್ತಿ
- 35 ಸಾವಿರ ಹುದ್ದೆಗಳ ಭರ್ತಿಗೆ ಅನುಮೋದನೆ

‘ನಮ್ಮದು ನುಡಿದಂತೆ ನಡೆಯುವ ಸರ್ಕಾರ. ಎರಡೂವರೆ ವರ್ಷದಲ್ಲಿ 28 ಸಾವಿರಕ್ಕೂ ಹೆಚ್ಚು ಹುದ್ದೆ ಭರ್ತಿ ಮಾಡಿದ್ದು, 35 ಸಾವಿರ ನೇಮಕಾತಿಗೆ ಅನುಮೋದನೆ ನೀಡಿದ್ದೇವೆ’ ಎಂದರು.

‘ಗ್ಯಾರಂಟಿ ಯೋಜನೆಗಳಿಗೆ ದುಡ್ಡಿಲ್ಲ ಎಂದು ಪ್ರತಿಪಕ್ಷಗಳು ಅಪಪ್ರಚಾರ ಮಾಡಿದ್ದವು. ಲೋಕಸಭೆ ಚುನಾವಣೆ ನಂತರ ಯೋಜನೆ ನಿಲ್ಲಿಸುತ್ತಾರೆ ಎಂದರು. ನಿಲ್ಲಿಸಿದ್ದೇವೆಯೇ? ಎಂದರು.

ಬಿಜೆಪಿ ಸರ್ಕಾರ ಕೊಡಲಿಲ್ಲ: ‘ರಾಜ್ಯದಲ್ಲಿ ಹಿಂದಿನ ಬಿಜೆಪಿ ಸರ್ಕಾರವೂ ಯಾರಿಗೂ ಉದ್ಯೋಗ ನೀಡಲಿಲ್ಲ. 7 ಲಕ್ಷ ಸರ್ಕಾರಿ ಹುದ್ದೆಗಳಿವೆ. ಉಳಿದವು ಖಾಸಗಿ ಕ್ಷೇತ್ರದಲ್ಲಿವೆ. ಮಾರುಕಟ್ಟೆ ಬೇಡಿಕೆಗೆ ಅನುಗುಣವಾಗಿ ಅಭ್ಯರ್ಥಿಗಳನ್ನು ರೂಪಿಸಲು ಸರ್ಕಾರ ಕೌಶಲ ತರಬೇತಿ ಕಾರ್ಯಕ್ರಮ ಹಮ್ಮಿಕೊಂಡಿದೆ’ ಎಂದರು.

‘ನಿರುದ್ಯೋಗ ಸಮಸ್ಯೆ ದೊಡ್ಡ ಸವಾಲಾಗಿದೆ. ಹೀಗಾಗಿ ವಿಭಾಗೀಯ, ಜಿಲ್ಲಾ ಮಟ್ಟದಲ್ಲಿ ಉದ್ಯೋಗ ಮೇಳ ಆಯೋಜಿಸಲಾಗುತ್ತಿದೆ. ಬೆಂಗಳೂರಿನಲ್ಲಿ ನಡೆದ ಉದ್ಯೋಗ ಮೇಳಗಳಲ್ಲಿ 58,892 ಅಭ್ಯರ್ಥಿಗಳು ಪಾಲ್ಗೊಂಡಿದ್ದು, 11,507 ಮಂದಿ ಕೆಲಸ ಗಿಟ್ಟಿಸಿದ್ದಾರೆ. 22,869 ಅಭ್ಯರ್ಥಿಗಳು ಉದ್ಯೋಗ ಆಯ್ಕೆ ಪಟ್ಟಿಯಲ್ಲಿದ್ದಾರೆ. ಜಿಲ್ಲಾ ಮಟ್ಟದಲ್ಲಿ ನಡೆದ ಮೇಳಗಳಲ್ಲಿ 1,20,563 ಮಂದಿ ಅಭ್ಯರ್ಥಿಗಳು ಭಾಗವಹಿಸಿದ್ದು, 24,391 ಉದ್ಯೋಗಿಗಳಾಗಿದ್ದಾರೆ. 48,232 ಮಂದಿ ಆಯ್ಕೆ ಪಟ್ಟಿಯಲ್ಲಿ ಸ್ಥಾನ ಪಡಿದಿದ್ದು, ಆದ್ಯತೆ ಮೇಲೆ ಭರ್ತಿ ಮಾಡಿಕೊಳ್ಳಲು ಸೂಚಿಸಲಾಗಿದೆ’ ಎಂದರು.

> ಉದ್ಯಮಗಳ ಬೇಡಿಕೆಗೆ ತಕ್ಕಂತೆ ಉದ್ಯೋಗಾಂಕ್ಷಿಗಳಿಗೆ ಕೌಶಲ ತರಬೇತಿ ನೀಡಿ, ಉದ್ಯೋಗ ಸೃಷ್ಟಿಸುವಲ್ಲಿ ಸರ್ಕಾರ ನುಡಿದಂತೆ ನಡೆಯುತ್ತಿದೆ
> **ಸಿದ್ದರಾಮಯ್ಯ,** ಮುಖ್ಯಮಂತ್ರಿ



ಉದ್ಯೋಗ ಮೇಳವನ್ನು ಉದ್ಘಾಟಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ‘ಪ್ರಜಾವಾಣಿ ದೀಪಾವಳಿ ವಿಶೇಷಾಂಕ’ದ ‘ವೈದ್ಯಕೀಯ ಶಿಕ್ಷಣ– ಕೌಶಲಾಭಿವೃದ್ಧಿ ಕ್ಷೇತ್ರದ ಗೇಮ್ ಚೇಂಜರ್ ಡಾ.ಶರಣಪ್ರಕಾಶ ಆರ್.ಪಾಟೀಲ’ ಕಿರು ಹೊತ್ತಗೆಯನ್ನು ಬಿಡುಗಡೆ ಮಾಡಿದರು. ಪುಷ್ಪಾ ಅಮರನಾಥ್, ಡಿ.ರವಿಶಂಕರ್, ಡಾ.ಶರಣಪ್ರಕಾಶ ಆರ್. ಪಾಟೀಲ, ಕಾಂತಾ ನಾಯಕ್, ಡಾ.ಎಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್, ಸಿ.ಪುಟ್ಟರಂಗಶೆಟ್ಟಿ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

43 ಸಾವಿರ ಆಕಾಂಕ್ಷಿಗಳು ನೋಂದಣಿ

ಉದ್ಯೋಗ ಮೇಳಕ್ಕಾಗಿ 43 ಸಾವಿರ ಉದ್ಯೋಗಾಂಕ್ಷಿಗಳು ನೋಂದಣಿ ಮಾಡಿಕೊಂಡಿದ್ದರು. 40ಸಾವಿರ ಮಂದಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. 235 ಕಂಪನಿಗಳು ಭಾಗಿಯಾಗಿದ್ದವು.

ಬೆಳಿಗ್ಗೆಯಿಂದಲೇ ಆಕಾಂಕ್ಷಿಗಳು ಸಾಲುಗಟ್ಟಿ ನಿಂತಿದ್ದರು. ಪ್ರತಿ ಅಭ್ಯರ್ಥಿ 5 ಕಂಪನಿಗೆ ಅರ್ಜಿ ಸಲ್ಲಿಸಲು ಅವಕಾಶವಿತ್ತು. ಹಲವರಿಗೆ ಸ್ಥಳದಲ್ಲೇ ಕೆಲಸ ಸಿಕ್ಕಿತು. ಉಳಿದವರಿಗೆ ಸಂದರ್ಶನದ ಸಂದೇಶ ಕಳುಹಿಸುವುದಾಗಿ ತಿಳಿಸಲಾಯಿತು.

ಮಹಾರಾಜ ಕಾಲೇಜು ಹಾಗೂ ಯುವರಾಜ ಕಾಲೇಜಿನ 80 ಕೊಠಡಿಗಳಲ್ಲಿ ಸಂದರ್ಶನ ನಡೆಯಿತು. ಟೆಕ್ನೊ ಟಾಸ್ಕ್, ಎಚ್‌ಡಿಎಫ್‌ಸಿ, ಕನೆಕ್ಟ್, ವೈಟ್‌ಗೋಲ್ಡ್ ಸೇರಿ ವಿವಿಧ ಕಂಪನಿಗಳಲ್ಲಿ ಉದ್ಯೋಗ ಪಡೆದ ನಮ್ರತಾ, ಪ್ರಶಾಂತ್, ಚಂದನ್, ಜಬೀರ್ ಪಾಷಾ, ತ್ರಿಶಾಲ, ಮೊಹಮ್ಮದ್ ರಿಯಾಜ್ ಸೇರಿದಂತೆ 10 ಮಂದಿಗೆ ಸಾಂಕೇತಿಕವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇಮಕಾತಿ ಆದೇಶ ಪತ್ರ ನೀಡಿದರು.

13,289 ಮಂದಿ ಪಾಲ್ಗೊಂಡಿದ್ದರು. ಇವರಲ್ಲಿ 3,303 ಮಂದಿ ಶಾರ್ಟ್‌ಲಿಸ್ಟ್ ಸಿದ್ಧ ಪಡಿಸಲಾಗಿತ್ತು. ಇದರಲ್ಲಿ 1,346 ಮಂದಿ ಆಯ್ಕೆಯಾದರು ಎಂದು ಇಲಾಖೆ ತಿಳಿಸಿದೆ.

ಸುದ್ದಿ 2 ನಿಮಿಷ

ಬೇಲೆಕೇರಿ: ₹12 ಕೋಟಿ ಆಸ್ತಿ ಮುಟ್ಟುಗೋಲು

ಬೆಂಗಳೂರು: ಲೋಕಾಯುಕ್ತ ತನಿಖಾ ತಂಡವು ಬೇಲೆಕೇರಿ ಬಂದರಿನಲ್ಲಿ ವಶಕ್ಕೆ ಪಡೆದು ಸಂಗ್ರಹಿಸಿದ್ದ ಕಬ್ಬಿಣದ ಅದಿರನ್ನು ಕದ್ದು, ರಫ್ತು ಮಾಡಿದ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯವು ₹12.48 ಕೋಟಿ ಮೌಲ್ಯದ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಂಡಿದೆ.

ಕಾಂಗ್ರೆಸ್ ಶಾಸಕ ಸತೀಶ್ ಸೈಲ್ ಅವರೂ ಭಾಗಿಯಾಗಿರುವ ಈ ಪ್ರಕರಣದಲ್ಲಿ ಇದೇ ಮೊದಲ ಬಾರಿಗೆ ದೆಹಲಿ ಮತ್ತು ಹರ್ಯಾಣದ ಗುರುಗ್ರಾಮದ ಹಲವು ಕಂಪನಿಗಳ ವಿರುದ್ಧ ಜಾರಿ ನಿರ್ದೇಶನಾಲಯವು (ಇ.ಡಿ) ತನಿಖೆ ಆರಂಭಿಸಿದೆ.

ಗಣಿಗಾರಿಕೆ ನಡೆಸುವವರು, ಅದಿರು ಸಾಗಿಸುವವರು, ಬಂದರು ಕಂಪನಿಗಳು, ಹಡಗು ಕಂಪನಿಗಳು ಮತ್ತು ರಫ್ತುದಾರರು ಸೇರಿ ದೊಡ್ಡ ಜಾಲವೊಂದನ್ನು ರೂಪಿಸಿಕೊಂಡು ಅದಿರು ಕಳ್ಳಸಾಗಣೆ ನಡೆಸಿದ್ದಾರೆ. ದೆಹಲಿ ಮತ್ತು ಗುರುಗ್ರಾಮದ ವಿಳಾಸಗಳಲ್ಲಿ ಹಲವು ಕಂಪನಿಗಳನ್ನು ಸ್ಥಾಪಿಸಿ, ಹಣಕಾಸು ವ್ಯವಹಾರ ನಡೆಸಲಾಗಿದೆ ಎಂದು ಇ.ಡಿ ತಿಳಿಸಿದೆ.



ಈ ಅದಿರಿನ ರಫ್ತಿನಿಂದ ಬಂದ ಹಣದ ವರ್ಗಾವಣೆ ಜಾಲವನ್ನು ಪತ್ತೆ ಮಾಡಲಾಗಿದೆ. ಎಂಎಸ್‌ಪಿಎಲ್ ಲಿಮಿಟೆಡ್, ಗ್ರೀನ್‌ಟೆಕ್ಸ್ಟ್ ಮೈನಿಂಗ್ ಇಂಡಸ್ಟ್ರೀಸ್, ಶ್ರೀನಿವಾಸ ಮಿನರಲ್ಸ್ ಟ್ರೇಡಿಂಗ್ ಕಂಪನಿ, ಅರ್ಶದ್ ಎಕ್ಸ್‌ಪೋರ್ಟ್ಸ್, ಎಸ್‌ವಿಎಂ ನೆಟ್ ಪ್ರಾಜೆಕ್ಟ್ ಸಲ್ಯೂಷನ್ಸ್ ಲಿಮಿಟೆಡ್, ಆಲ್ಫೈನ್ ಮಿನ–ಮೆಟಲ್ಸ್ ಇಂಡಿಯಾ ಲಿಮಿಟೆಡ್‌ಗಳಿಗೆ ಈ ಹಣ ವರ್ಗಾವಣೆ ಆಗಿರುವುದು ಪತ್ತೆಯಾಗಿದೆ. ಆ ಹಣದಿಂದ ಖರೀದಿಸಲಾದ ₹12.48 ಕೋಟಿ ಮೌಲ್ಯದಷ್ಟು ಸ್ಥಿರಾಸ್ತಿಗಳನ್ನು ಈಗ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದಿದೆ.

22 ಶಿಕ್ಷಕರಿಗಿಲ್ಲ ‘ಶಾಲಾ’ ಭಾಗ್ಯ ಸ್ಥಳ ನಿಯುಕ್ತಿಗಾಗಿ ಅಲೆದಾಟ

ಬೆಂಗಳೂರು: ವರ್ಗಾವಣೆಗೊಂಡ 22 ಪ್ರೌಢಶಾಲಾ ಸಹ ಶಿಕ್ಷಕರಿಗೆ ಶಾಲಾ ಶಿಕ್ಷಣ ಇಲಾಖೆ ಎರಡು ತಿಂಗಳಿನಿಂದ ಸ್ಥಳವನ್ನೇ ತೋರಿಸಿಲ್ಲ. ಅವರೆಲ್ಲ ಎರಡು ತಿಂಗಳಿನಿಂದ ಕಚೇರಿಗೆ ಅಲೆದಾಡುತ್ತಿದ್ದಾರೆ.

ಪ್ರೌಢಶಾಲೆಯ 55 ಶಿಕ್ಷಕರನ್ನು ಆ.22ರಂದು ಬೋಧಕೇತರ ಹುದ್ದೆಗಳಿಗೆ ವರ್ಗಾವಣೆ ಮಾಡಲಾಗಿತ್ತು. ಅದುವರೆಗೂ ಬೋಧಕೇತರ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದವರನ್ನು ಸ್ಥಳ ನಿಯುಕ್ತಿಗಾಗಿ ಆಯಕ್ತರು, ಹೆಚ್ಚುವರಿ ಆಯುಕ್ತರ ಕಚೇರಿಗೆ ವರದಿ ಮಾಡಿಕೊಳ್ಳಲು ಸೂಚಿಸಲಾಗಿತ್ತು. ಅವರಲ್ಲಿ 33 ಶಿಕ್ಷಕರಿಗೆ ಪ್ರೌಢಶಾಲೆಗಳಲ್ಲಿ ಖಾಲಿ ಇದ್ದ ಹುದ್ದೆಗಳನ್ನು ತೋರಿಸಿ, ಆದೇಶ ನೀಡಲಾಗಿತ್ತು. ಆದರೆ, ಬೆಂಗಳೂರು ವಿಭಾಗದ 14, ಬೆಳಗಾವಿ ವಿಭಾಗದ 7 ಕಲಬುರಗಿ ವಿಭಾಗದ ಒಬ್ಬರು ಶಿಕ್ಷಕರಿಗೆ ಇದುವರೆಗೂ ಸ್ಥಳ ತೋರಿಸಿಲ್ಲ.

‘ಶಿಕ್ಷಕರ ಸಾಮಾನ್ಯ ವರ್ಗಾವಣೆಯಲ್ಲಿ ಹೆಚ್ಚುವರಿ ಮತ್ತು ಮರು ಹೊಂದಾಣಿಕೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಸ್ಥಳ ನಿಯುಕ್ತಿಗೊಳಿಸುವುದಾಗಿ ಆಯುಕ್ತರು ಹೇಳಿದ್ದರು. ಸೆ.19ರಂದೇ ಈ ಎಲ್ಲ ಪ್ರಕ್ರಿಯೆಗಳು ಪೂರ್ಣಗೊಂಡರೂ ಸ್ಥಳ ನೀಡಿಲ್ಲ. ಗಣತಿ ಕಾರ್ಯಕ್ಕೂ ಬಳಸಿಕೊಂಡಿಲ್ಲ. ಸ್ಥಳ ನಿಯುಕ್ತಿಗಾಗಿ ನಿತ್ಯವೂ ಹೆಚ್ಚುವರಿ ಆಯುಕ್ತರು, ಜಿಲ್ಲಾ ಉಪ ನಿರ್ದೇಶಕರ ಕಚೇರಿಗೆ ಅಲೆಯುವಂತಾಗಿದೆ. ವೇತನವೂ ಇಲ್ಲದೆ ಕುಟುಂಬ ನಿರ್ವಹಣೆಗೆ ತೊಂದರೆಯಾಗಿದೆ. ಹಾಗಾಗಿ, ಸ್ಥಳ ನಿಯುಕ್ತಿಗೊಳಿಸಿ, ಬೋಧನಾ ಕಾರ್ಯಕ್ಕೆ ಅವಕಾಶ ಮಾಡಿಕೊಡಬೇಕು’ ಎಂದು ಶಿಕ್ಷಕರು ಶಾಲಾ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಬರೆದ ಪತ್ರದಲ್ಲಿ ಕೋರಿದ್ದಾರೆ.

ಚಿಟಿಕೆ ಸುದ್ದಿ

ಅಂಗನವಾಡಿಗಳಿಗೆ ಜನತಾ ಬಜಾರ್‌ನಿಂದ ಖರೀದಿಸಿ: ಅಶೋಕ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಸಂಸ್ಥೆಯಾದ ಜನತಾ ಬಜಾರ್ ಮೂಲಕ ಅಂಗನವಾಡಿಗಳಿಗೆ ಆಹಾರ ಪದಾರ್ಥಗಳನ್ನು ಪೂರೈಸಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಒತ್ತಾಯಿಸಿದ್ದಾರೆ.

ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಅವರು, ‘ರಾಜ್ಯದ ಅಂಗನವಾಡಿಗಳಿಗೆ ಹಿಂದೆ ಗುಣಮಟ್ಟದ ಆಹಾರ ಪೂರೈಕೆ ಆಗುತ್ತಿತ್ತು. ಈಗ ವಿತರಿಸುತ್ತಿರುವ ಕಳಪೆ ಆಹಾರವನ್ನು ಕೂಡಲೇ ನಿಲ್ಲಿಸಬೇಕು. ಮೊದಲಿನಂತೆ ಜನತಾ ಬಜಾರ್ ಮೂಲಕ ಗುಣಮಟ್ಟದ ಆಹಾರ ಪದಾರ್ಥಗಳನ್ನು ಪೂರೈಸಬೇಕು ಎಂದು ಕರ್ನಾಟಕ ವಿಧಾನಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯೂ ಶಿಫಾರಸು ಮಾಡಿದೆ’ ಎಂದಿದ್ದಾರೆ.

ಅಂಗನವಾಡಿಗಳಿಗೆ ಆಹಾರ ಪದಾರ್ಥ ಸರಬರಾಜು ಮಾಡುತ್ತಿರುವ ಸಂಸ್ಥೆಗೆ ನೀಡಿರುವ ಆದೇಶವನ್ನು ರದ್ದು ಮಾಡಬೇಕು’ ಎಂದಿದ್ದಾರೆ.

ಜಪಾನ್‌ನಲ್ಲಿ ಭಾರತೀಯ ರಾಯಭಾರಿಯಾಗಿ ಕಾಸರಗೋಡಿನ ಮಹಿಳೆ

ಕಾಸರಗೋಡು: ಜಪಾನ್‌ನಲ್ಲಿ ಭಾರತೀಯ ರಾಯಭಾರಿಯನ್ನಾಗಿ ಕಾಸರಗೋಡು ಮೂಲದ ನಗ್ಮಾ ಮಹಮ್ಮದ್ ಮಾಲಿಕ್ ಅವರನ್ನು ಕೇಂದ್ರ ಸರ್ಕಾರ ನೇಮಕಮಾಡಿದೆ.

ನಗರದ ಕೋಟೆರಸ್ತೆಯ ಮೂಲನಿವಾಸಿಗಳಾದ, ಈಗ ನವದೆಹಲಿಯಲ್ಲಿ ನೆಲೆಸಿರುವ ಮಹಮ್ಮದ್ ಹಬೀಬುಲ್ಲ-ಸುಲುಬಾನು ದಂಪತಿ ಪುತ್ರಿ ನಗ್ಮಾ, ಅವರು ನವದೆಹಲಿಯಲ್ಲಿ ಜನಿಸಿ ಅಲ್ಲಿನ ಸೇಂಟ್ ಸ್ಟಿಫನ್ ಕಾಲೇಜು ಮತ್ತು ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಶಿಕ್ಷಣ ಪಡೆದಿದ್ದಾರೆ. ಇಂಗ್ಲಿಷ್ ಮತ್ತು ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಗಳಿಸಿದ್ದಾರೆ. ಹಿಂದೆ ಪೋಲೆಂಡ್‌ನಲ್ಲಿ ಭಾರತೀಯ ರಾಯಭಾರಿಯಾಗಿದ್ದರು.

ಇವರು ಸಾಹಿತಿ ಸಾರಾ ಅಬೂಬಕ್ಕರ್ ಅವರ ಸಹೋದರಿಯ ಪುತ್ರಿ.

ಸತೀಶ ಜಾರಕಿಹೊಳಿ ಈಗಲೇ ಸಿ.ಎಂ ಆಗಲಿ: ರಾಜುಗೌಡ

ಮುಧೋಳ (ಬಾಗಲಕೋಟೆ): ‘ಸಚಿವ ಸತೀಶ ಜಾರಕಿಹೊಳಿ ಶಸ್ತ್ರ ಕೆಳಗಿಡದೇ ಇದೇ ಅವಧಿಯಲ್ಲಿ ಸಿ.ಎಂ ಆಗಬೇಕು ಎಂಬುದು ಜನರ ಆಶಯ’ ಎಂದು ಮಾಜಿ ಸಚಿವ ರಾಜುಗೌಡ ನಾಯಕ ಹೇಳಿದರು.

ಮುಧೋಳದಲ್ಲಿ ಶುಕ್ರವಾರ ಮಾತನಾಡಿ, ‘ಜಾರಕಿಹೊಳಿಯವರೂ ಮುಖ್ಯಮಂತ್ರಿಯಾಗುವ ಕಾರ್ಯ ಮುಂದುವರೆಸಬೇಕು’ ಎಂದರು

ಇದಕ್ಕೆ ಪ್ರತಿಕ್ರಿಯಿಸಿದ ಸತೀಶ ಜಾರಕಿಹೊಳಿ, ‘ನಾವು 40ರ ಸ್ಪೀಡ್‌ನಲ್ಲಿದ್ದೇವೆ. 2028ಕ್ಕೆ ಆಗದಿದ್ದರೆ 2033ರವರೆಗೆ ಕಾಯುವೆ’ ಎಂದರು.

ಧರ್ಮಸ್ಥಳ: ಸಾಕ್ಷಿ ದೂರುದಾರನ ವಿಚಾರಣೆಗೆ ಅನುಮತಿ

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ನಡೆದಿದೆ ಎನ್ನಲಾದ ಅಪರಾಧ ಪ್ರಕರಣಗಳ ಸಾಕ್ಷಿ ದೂರುದಾರನ ವಿಚಾರಣೆಗೆ ಒಳಪಡಿಸಲು ಬೆಳ್ತಂಗಡಿ ನ್ಯಾಯಾಲಯ ಎಸ್‌ಐಟಿಗೆ ಅನುಮತಿ ನೀಡಿದೆ.

ಅನುಮತಿ ಕೋರಿ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿತ್ತು. ಅದನ್ನು ಪರಿಶೀಲಿಸಿದ ನ್ಯಾಯಾಲಯ, ಎರಡು ದಿನ ವಿಚಾರಣೆ ಮಾಡಲು ಅವಕಾಶ ನೀಡಿದೆ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಬೆಂಗಾವಲು ರಕ್ಷಕರ ಭದ್ರತೆ ವಾಪಸ್ ಪಡೆದ ಸರ್ಕಾರ: ಛಲವಾದಿ ಆರೋಪ

‘ನನಗೇನಾದರೂ ಆದರೆ ಪ್ರಿಯಾಂಕ್ ಹೊಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನನಗೆ ನೀಡಿದ್ದ ಪೊಲೀಸ್ ಭದ್ರತೆಯನ್ನು ಸರ್ಕಾರವು ವಾಪಸ್ ಪಡೆದಿದೆ. ನನಗೇನಾದರೂ ಆದರೆ ಅದಕ್ಕೆ ಸರ್ಕಾರ ಮತ್ತು ಸಚಿವ ಪ್ರಿಯಾಂಕ್ ಖರ್ಗೆ ಹೊಣೆ’ ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು.

ಬಿಜೆಪಿ ಕಚೇರಿಯಲ್ಲಿ ಶುಕ್ರವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನನ್ನ ಮನೆಗೆ ಮೂವರು ಪೊಲೀಸರ ಭದ್ರತೆ ನೀಡಲಾಗಿತ್ತು. ಈಗ ಅದನ್ನು ವಾಪಸ್ ಪಡೆದಿದ್ದಾರೆ. ರಾಜ್ಯ ಸರ್ಕಾರದ ವಿರುದ್ಧ ನಾನು ಮಾತನಾಡದಂತೆ ಒತ್ತಡ ಸೃಷ್ಟಿಸಲು ಹೀಗೆ ಮಾಡಿದ್ದಾರೆ’ ಎಂದರು.

‘ನನಗೆ ನೀಡಲಾಗಿದ್ದ ಭದ್ರತೆಯನ್ನು ವಾಪಸ್ ಪಡೆದು, ರಾಜ್ಯ ವರ್ಗೀಕೃತ ಭದ್ರತಾ ಪುನರ್ ಪರಿಶೀಲನಾ ಸಮಿತಿಯು ಆದೇಶಿಸಿದೆ. ಇದು ಸಮಿತಿಯ ಆದೇಶವೋ ಅಥವಾ ಸರ್ಕಾರದ್ದೋ ಅಥವಾ ಪ್ರಿಯಾಂಕ್ ಖರ್ಗೆಯವರದ್ದೋ’ ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ನನಗೆ ನೀಡಿದ್ದ ಭದ್ರತೆ ವಾಪಸ್ ಪಡೆಯಲು ಯಾರು ಕಾರಣ ಎಂಬುದನ್ನು ಮುಖ್ಯಮಂತ್ರಿ ಮತ್ತು ಗೃಹಸಚಿವರು ಉತ್ತರಿಸಬೇಕು. ಇಲ್ಲದಿದ್ದಲ್ಲಿ, ನನಗೆ ನೀಡಿರುವ ಕಾರು ಮತ್ತಿತರ ಸೌಲಭ್ಯಗಳನ್ನು ವಾಪಸ್ ನೀಡುತ್ತೇನೆ’ ಎಂದು ಎಚ್ಚರಿಸಿದರು.

‘ನನ್ನನ್ನು ಸುಟ್ಟುಹಾಕುತ್ತೇವೆಂದು ಕೆಲವರು ಬೆದರಿಕೆ ಹಾಕಿದ್ದವರ ವಿರುದ್ಧ ಸಾಕ್ಷ್ಯ ಸಮೇತ ದೂರು ನೀಡಿದರೂ ಸರ್ಕಾರ ಕ್ರಮ ತೆಗೆದುಕೊಳ್ಳಲಿಲ್ಲ. ಆದರೆ ಪ್ರಿಯಾಂಕ್ ಖರ್ಗೆ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಷ್ಟಕ್ಕೇ ಆರೋಪಿಯನ್ನು ಬಂಧಿಸಿದ್ದಾರೆ. ಪ್ರಿಯಾಂಕ್ ಅವರ ಭದ್ರತೆಯನ್ನು ಹೆಚ್ಚಿಸಿದ್ದಾರೆ. ಅವರಿಗೊಂದು ನ್ಯಾಯ, ನಮಗೊಂದು ನ್ಯಾಯವೇ’ ಎಂದು ಪ್ರಶ್ನಿಸಿದರು.

> ರಾಜ್ಯದಲ್ಲಿ ಆರ್‌ಎಸ್‌ಎಸ್ ಸಂಘಟನೆಯನ್ನು ನಿಷೇಧಿಸುವ ಬಗ್ಗೆ ಯಾರೂ ಹೇಳಿಲ್ಲ. ಅದರ ಬಗ್ಗೆ ಚರ್ಚೆಯೂ ಇಲ್ಲ
> **ದಿನೇಶ್ ಗುಂಡೂರಾವ್,** ಆರೋಗ್ಯ ಸಚಿವ

> ಸಂಘಟನೆ ಕಟ್ಟುವ ಅವಕಾಶ ಸಂವಿಧಾನದಲ್ಲಿದೆ. ಆರ್‌ಎಸ್‌ಎಸ್ ನಿಷೇಧಿಸುವುದು ಸಂವಿಧಾನಕ್ಕೆ ವಿರುದ್ಧವಾಗುತ್ತದೆ
> **ಸಂತೋಷ ಹೆಗ್ಡೆ,** ನಿವೃತ್ತ ನ್ಯಾಯಮೂರ್ತಿ

‘ತಾಕತ್ತಿದ್ದರೆ ಚಿತ್ತಾಪುರದ ಪಥಸಂಚಲನ ತಡೆಯಲಿ’

ಕಲಬುರಗಿ: ‘ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಧಮ್, ತಾಕತ್ತು ಇದ್ದರೆ ಸರ್ಕಾರದ ಅಧಿಕಾರ ಬಳಸಿ ಅ.19ರಂದು ಚಿತ್ತಾಪುರದಲ್ಲಿ ನಡೆಯುವ ಆರ್‌ಎಸ್‌ಎಸ್ ಪಥಸಂಚಲನ ತಡೆಯಲಿ ನೋಡೋಣ’ ಎಂದು ಶಿವಸೇನಾ ಪಕ್ಷದ ಕರ್ನಾಟಕ ರಾಜ್ಯಾಧ್ಯಕ್ಷ ಆಂದೋಲಾದ ಸಿದ್ದಲಿಂಗ ಸ್ವಾಮೀಜಿ ಸವಾಲು ಹಾಕಿದರು.



ಆಂದೋಲಾ ಸ್ವಾಮೀಜಿ

‘ಪ್ರಿಯಾಂಕ್ ಅವರಿಗೆ ಆರ್‌ಎಸ್‌ಎಸ್ ಬಗೆಗೆ ಭಯ ಶುರುವಾಗಿದೆ. ತಂದೆ ಮಲ್ಲಿಕಾರ್ಜುನ ಖರ್ಗೆ ಅವರು ಆರ್‌ಎಸ್‌ಎಸ್‌ನಿಂದಲೇ ಸೋತಿದ್ದಾರೆ ಎಂಬ ಕಾರಣಕ್ಕೆ ಈಗ ನೆಪ ಮಾಡಿಕೊಂಡು ಆರ್‌ಎಸ್‌ಎಸ್ ಚಟುವಟಿಕೆಗಳನ್ನು ನಿಷೇಧಿಸಿದ್ದಾರೆ’ ಎಂದು ನಗರದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಟೀಕಿಸಿದರು.

‘ಸಚಿವ ಖರ್ಗೆ ಅವರು ಪ್ರಚೋದನಕಾರಿ ಹೇಳಿಕೆ ನೀಡುತ್ತಿದ್ದಾರೆ. ಆರ್‌ಎಸ್‌ಎಸ್ ಕುರಿತ ಖರ್ಗೆ ಅವರ ಮಾತುಗಳನ್ನು ಯಾವ ಹಿಂದೂವೂ ಕ್ಷಮಿಸಲಾರ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ವಿಜಯದಶಮಿ ಸಂದರ್ಭದಲ್ಲಿ ರಾಜ್ಯದಾದ್ಯಂತ ಆರ್‌ಎಸ್‌ಎಸ್‌ನಿಂದ 100ಕ್ಕೂ ಹೆಚ್ಚು ಪಥ ಸಂಚಲನ ನಡೆದಿವೆ. ಆರ್‌ಎಸ್‌ಎಸ್ ವೇದಿಕೆಯಿಂದ ಒಂದೂ ಪ್ರಚೋದನಕಾರಿ ಭಾಷಣ ಬಂದಿಲ್ಲ’ ಎಂದಿದ್ದಾರೆ.

ಆರ್‌ಎಸ್‌ಎಸ್ ನಿಷೇಧಿಸಲಾಗದು: ಕುಮಾರಸ್ವಾಮಿ

ಹಾಸನ: ‘ಆರ್‌ಎಸ್‌ಎಸ್ ನಿಷೇಧಿಸಲಾಗದು. ಸಂಘ– ಸಂಸ್ಥೆಗಳು ಸರ್ಕಾರಿ ಜಾಗದಲ್ಲಿ ಸಭೆ, ಸಮಾರಂಭ ಪರೇಡ್ ಮಾಡಬಾರದೆಂದು ಸರ್ಕಾರ ಹೇಳಿದೆ. ರಾಜಕೀಯ ಬಂಡವಾಳಕ್ಕಾಗಿ ಇಂಥ ವಿಷಯಗಳನ್ನು ಎಳೆದು ತರಲಾಗುತ್ತಿದೆ’ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಇಲ್ಲಿ ಆರೋಪಿಸಿದರು.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಗಾಂಧೀಜಿ ಅವರ ಹತ್ಯೆಯಾದಾಗ ನೆಹರೂ ಆರ್‌ಎಸ್‌ಎಸ್ ನಿಷೇಧಿಸಿದ್ದರು. ಬಳಿಕ ಆದೇಶ ವಾಪಸ್ ಪಡೆದರು. ಅವರಿಗಿಂತ ಖರ್ಗೆ, ಸಿದ್ದರಾಮಯ್ಯ ದೊಡ್ಡವರೇ? ಸಮಾಜದಲ್ಲಿ ಸರ್ಕಾರ ಸಂಘರ್ಷ ಸೃಷ್ಟಿಸುತ್ತಿದೆ’ ಎಂದು ದೂರಿದರು.

‘ಧರ್ಮಸ್ಥಳದ ಕುರಿತೂ ಇಂಥದ್ದೇ ನಡೆ ಅನುಸರಿಸಿದೆ. ಅರ್ಜಿ ಕೊಟ್ಟವರ ಬಿಟ್ಟು, ಚಿನ್ನಯ್ಯ ಎಂಬವನ ಸೃಷ್ಟಿಸಿ ನಾಟಕ ನಡೆಸಿದರು. ಎಸ್‌ಐಟಿ ರಚಿಸಿ ಆತನ ಹಿಡಿದಿಟ್ಟುಕೊಂಡು ಉಳಿದವರನ್ನು ಬಿಟ್ಟಿದ್ದಾರೆ. ಈ ನಡುವೆ ಎಸ್‌ಐಟಿಗೆ ಬಹುಮಾನ ನೀಡಲು ಹೊರಟಿರುವುದು ಎಷ್ಟು ಸರಿ’ ಎಂದು ಪ್ರಶ್ನಿಸಿದರು.

‘ಇವರೇ ದೊಡ್ಡ ದರೋಡೆಕೋರರು. ಚುನಾವಣೆಗೂ ಮುನ್ನವೇ ಕಾಂಗ್ರೆಸ್‌ಗೆ 136 ಸ್ಥಾನ ಬರಲಿವೆ ಎಂದು ಡಿ.ಕೆ.ಶಿವಕುಮಾರ್ ಹೇಳಿದ್ದರು. ಹಾಗಾದರೆ, ಮತಗಳವು ಮಾಡಿ ಗೆದ್ದರೆ’ ಎಂದು ಪ್ರಶ್ನಿಸಿದರು.

‘ಅಳಂದ ಕ್ಷೇತ್ರದಲ್ಲಿ ಮತಗಳ್ಳತನವಾಗಿದೆ ಎಂದು ಆರೋಪಿಸುತ್ತಾರೆ. ಆದರೆ, ಅಲ್ಲಿ ಗೆದ್ದಿರುವುದು ಕಾಂಗ್ರೆಸ್. ಮತಗಳ್ಳತನ ನಡೆದಿದ್ದರೆ ಬಿಜೆಪಿ ಗೆಲ್ಲಬೇಕಿತ್ತಲ್ಲವೇ? ಎಂದು ಪ್ರಶ್ನಿಸಿದರು.

‘ದೀಪಾವಳಿ ಮುಗಿದ ನಂತರ ಪಕ್ಷದ ಹಾಲಿ, ಮಾಜಿ ಶಾಸಕರನ್ನು ಒಳಗೊಂಡು ರಾಜ್ಯದಾದ್ಯಂತ ‘ಜನರೊಂದಿಗೆ ಜನತಾದಳ’ ಘೋಷಣೆಯೊಂದಿಗೆ ಪ್ರವಾಸ ನಡೆಸಲಿದ್ದೇವೆ’ ಎಂದು ತಿಳಿಸಿದರು.

ಮೂವರ ವಿರುದ್ಧ ಪೋಕ್ಸೊ ಪ್ರಕರಣ

ಪ್ರಜಾವಾಣಿ ವಾರ್ತೆ

ಯಾದಗಿರಿ: ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪದಡಿ ಮೂರು ಪ್ರತ್ಯೇಕ ಪ್ರಕರಣಗಳಲ್ಲಿ ಮೂವರ ವಿರುದ್ಧ ಪೋಕ್ಸೊ ಕಾಯ್ದೆ ಪ್ರಕರಣ ದಾಖಲಾಗಿವೆ.

ಯಾದಗಿರಿ ಮಹಿಳಾ ಠಾಣೆ ವ್ಯಾಪ್ತಿಯಲ್ಲಿ 17 ವರ್ಷದ ಬಾಲಕಿಗೆ ಮದುವೆ ಆಗುವುದಾಗಿ ಪುಸಲಾಯಿಸಿ ಶಿವರಾಜ ತಿಮ್ಮಣ್ಣಗೌಡ (22) ದೌರ್ಜನ್ಯ ಎಸಗಿದ್ದ.

ಪ್ರೀತಿಸುವ ನೆಪದಲ್ಲಿ 16 ವರ್ಷದ ಬಾಲಕಿಯನ್ನು ಅಶೋಕ ಬಾವೂರ (22) ತಡರಾತ್ರಿ ಕರೆದೊಯ್ದು ಲೈಂಗಿಕ ದೌರ್ಜನ್ಯ ಎಸಗಿದ್ದ ಪ್ರಕರಣ ಸೈದಾಪುರ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

2021ರಲ್ಲಿ ಸೈದಾಪುರದಲ್ಲಿ ಪರಿಚಯಸ್ಥ ಕೆ.ಗುರುಮಹೇಂದ್ರ ಕೊಟ್ಟಿದ್ದ ಪಾನೀಯ ಕುಡಿದು ಬಾಲಕಿ ತಲೆ ಸುತ್ತು ಬಿದ್ದಿದ್ದು, ನಂತರ ಲೈಂಗಿಕ ದೌರ್ಜನ್ಯ ಎಸಗಿದ್ದ. ಹಲವು ಬಾರಿ ಜೀವ ಬೆದರಿಕೆ ಹಾಕಿದ್ದ ಎಂದು ಪೊಲೀಸರು ತಿಳಿಸಿದರು.

ಪರಿಹಾರ ಕೊಡಿ: ಸಿಎಂ ತಾಕೀತು

ಪ್ರಜಾವಾಣಿ ವಾರ್ತೆ

ಮೈಸೂರು: ‘ಜಿಲ್ಲೆಯ ಬಡಗಲಪುರದಲ್ಲಿ ಹುಲಿ ದಾಳಿಗೆ ಒಳಗಾದ ಕೃಷಿಕ ಮಹದೇವ (ಮಾದೇಗೌಡ) ಅವರ ಚಿಕಿತ್ಸಾ ವೆಚ್ಚವನ್ನು ಸರ್ಕಾರವೇ ಭರಿಸಲಿದ್ದು, ಪರಿಹಾರದ ಸಂಪೂರ್ಣ ಮೊತ್ತ ಬಿಡುಗಡೆ ಮಾಡಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು.

ನಗರದ ಅಪೋಲೊ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಹದೇವ ಅವರ ಕುಟುಂಬದವರೊಂದಿಗೆ ಶುಕ್ರವಾರ ಚರ್ಚಿಸಿದ ಬಳಿಕ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

‘ಆ ವ್ಯಕ್ತಿಗೆ ಮತ್ತೆ ದೃಷ್ಟಿ ಬರುವ ಸಾಧ್ಯತೆ ಇಲ್ಲ ಎಂದು ವೈದ್ಯರು ತಿಳಿಸಿದ್ದಾರೆ. ಹೀಗಾಗಿ, ಬದುಕು ಕಳೆದುಕೊಂಡ ಹಾಗೂ ಕುಟುಂಬದ ಆಸರೆ ಕಳೆದುಕೊಂಡವರ ಲೆಕ್ಕದಲ್ಲಿ ಪರಿಹಾರ ಒದಗಿಸಬೇಕು’ ಎಂದು ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ ಅವರಿಗೆ ಸೂಚಿಸಿದರು.

ಮಹದೇವ ಅವರು ಗುರುವಾರ ಜಮೀನಿನಲ್ಲಿ ಹತ್ತಿ ಬಿಡಿಸುವಾಗ ಹುಲಿ ದಾಳಿ ನಡೆಸಿತ್ತು. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕಾಡಂಚಿನ ಗ್ರಾಮಗಳಲ್ಲಿ ವಾರದಿಂದ ಹುಲಿ ಕಾಣಿಸಿಕೊಂಡಿತ್ತು. ಹುಲಿ ಸೆರೆಗೆ ನಡೆಸಿದ ಕಾರ್ಯಾಚರಣೆ ವೇಳೆ, ಹುಲಿ ಜಮೀನಿನತ್ತ ನುಗ್ಗಿ ಮಹದೇವ ಅವರ ಮೇಲೆ ದಾಳಿ ಮಾಡಿತ್ತು.

ಕ್ರೈಸ್ತರ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಚಿವ ಜಮೀರ್ ಅಹಮದ್ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಎಲ್ಲ ಸಮುದಾಯಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರವು ಬದ್ಧವಾಗಿದ್ದು, ಅದಕ್ಕಾಗಿ ಪ್ರತ್ಯೇಕ ನಿಗಮಗಳನ್ನು ಸ್ಥಾಪಿಸಲಾಗಿದೆ. ಕ್ರೈಸ್ತ ಸಮುದಾಯದ ಜನರ ಅಭಿವೃದ್ಧಿಗೆ ಸ್ಥಾಪಿಸಲಾಗಿರುವ ನಿಗಮದ ಎಲ್ಲ ಕಾರ್ಯಕ್ರಮಗಳು ಜನರಿಗೆ ತಲುಪುವಂತೆ ಕ್ರಮ ವಹಿಸಲಾಗುತ್ತದೆ’ ಎಂದು ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹಮದ್ ಖಾನ್ ಹೇಳಿದರು.

ನಗರದ ಕೆಎಂಡಿಸಿ ಭವನದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ‘ಕರ್ನಾಟಕ ಕ್ರಿಶ್ಚಿಯನ್ ಸಮುದಾಯ ಅಭಿವೃದ್ಧಿ ನಿಗಮ’ದ ಹೊಸ ಯೋಜನೆಗಳಿಗೆ ಮತ್ತು ವೆಬ್ ಪೋರ್ಟಲ್‌ಗೆ ಚಾಲನೆ ನೀಡಿ ಅವರು ಮಾತನಾಡಿದರು.

‘ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬ ಧ್ಯೇಯದೊಂದಿಗೆ ನಮ್ಮ ಸರ್ಕಾರ ಕಾರ್ಯನಿರ್ವಹಿಸುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಿಗಮಕ್ಕೆ ₹250 ಕೋಟಿ ಅನುದಾನ ಒದಗಿಸಿದ್ದು, ಅದರಲ್ಲಿ ಪ್ರತಿ ರೂಪಾಯಿಯೂ ಸದುಪಯೋಗ ಆಗಬೇಕು’ ಎಂದು ಅವರು ಹೇಳಿದರು.



ಹಾಸನಾಂಬ ದೇಗುಲದ ಪ್ರವೇಶ ದ್ವಾರದ ಬಳಿ ಶುಕ್ರವಾರ ಸಾವಿರಾರು ಭಕ್ತರು ಸೇರಿದ್ದರು ಚಿತ್ರ/ಅತೀಖುರ್ ರಹಮಾನ್

ಮಾಜಿ ಸಂಸದ ಪ್ರತಾಪ್ ಸಿಂಹ ಸಲ್ಲಿಸಿದ್ದ ಅರ್ಜಿ ವಿಚಾರಣೆ: ಹೈಕೋರ್ಟ್ ಅತೃಪ್ತಿ

‘ಉದ್ದೇಶಪೂರ್ವಕ ದೋಷಾರೋಪ’

ಹೈಕೋರ್ಟ್ ಸುದ್ದಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚುನಾವಣಾ ಅಕ್ರಮಗಳಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಸಂಬಂಧಿಸಿದ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ದೋಷಪೂರಿತ ಮತ್ತು ಆರೋಪಿಗಳು ನುಣುಚಿಕೊಳ್ಳಲು ಸಹಾಯವಾಗುವಂತಹ ಆರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸುತ್ತಾರೆ. ಇದೆಲ್ಲಾ ಅವರಿಗೆ ಗೊತ್ತಿಲ್ಲ ಎಂದು ಹೇಳಲಾಗದು’ ಎಂದು ಹೈಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ತಮ್ಮ ವಿರುದ್ಧದ ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಪ್ರಕರಣ ರದ್ದುಪಡಿಸುವಂತೆ ಕೋರಿ ಬಿಜೆಪಿಯ ಮಾಜಿ ಸಂಸದ ಪ್ರತಾಪ್ ಸಿಂಹ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಅಧಿಕಾರಿಗಳ ಇಂತಹ ನಡೆಯ ಬಗ್ಗೆ ಎಚ್ಚರ ವಹಿಸಬೇಕಿದೆ’ ಎಂದು ಹೇಳಿದೆ.

‘ಪ್ರಕರಣ ದಾಖಲಿಸಬೇಕು, ಅದು ವಿಫಲವಾಗಲಿ ಎಂಬುದು ಅಧಿಕಾರಿಗಳ ಧೋರಣೆಯಾಗಿರುತ್ತದೆ. ಈ ಪ್ರಕರಣದಲ್ಲಿ ದೋಷಾರೋಪ ಪಟ್ಟಿಯಲ್ಲಿರುವ ಅಂಶಗಳು ಭಾರತೀಯ ದಂಡ ಸಂಹಿತೆ–1860ರ ಕಲಂ 171 (ಎಚ್) ಅಪರಾಧಕ್ಕೆ ಅನ್ವಯಿಸುವುದಿಲ್ಲ. ಆದರೆ, ಐಪಿಸಿ ಕಲಂ 188ರ ಅಡಿ ಒಳಪಡುತ್ತವೆ. ಹೀಗಾಗಿ, ನ್ಯಾಯಿಕ ಪ್ರಕ್ರಿಯೆ ಮುಂದುವರಿಸುವುದರಲ್ಲಿ ಅರ್ಥವಿಲ್ಲ’ ಎಂದು ಅಭಿಪ್ರಾಯಪಟ್ಟಿದೆ. ರಾಜ್ಯ ಪ್ರಾಸಿಕ್ಯೂಷನ್ ಪರ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ವಾದ ಮಂಡಿಸಿದರು.

ಏನಿದು ಪ್ರಕರಣ?: ಪ್ರತಾಪ್ ಸಿಂಹ ಅವರು ಕಳೆದ ವಿಧಾನಸಭೆ ಚುನಾವಣೆ ವೇಳೆ ಅನುಮತಿ ಪಡೆಯದೆ ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲ್ಲೂಕಿನ ರಂಗಸಮುದ್ರದ ಸಮೀಪ ತಮ್ಮ ಪಕ್ಷದ ಕಾರ್ಯಕರ್ತರ ಜೊತೆ ಬೈಕ್ ರ್‍ಯಾಲಿ ನಡೆಸಿದ್ದರ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು.

ಕಾಂಗ್ರೆಸ್ ಕಚೇರಿಗೆ ಸಿಎ ನಿವೇಶನ: ರಿಟ್

‘ಚಿಕ್ಕಬಳ್ಳಾಪುರದ ಸದಾಶಿವನಗರ ಬಡಾವಣೆಯಲ್ಲಿ ನಾಗರಿಕ ಸೌಲಭ್ಯಕ್ಕಾಗಿ (ಸಿಎ) ಮೀಸಲಿಟ್ಟ ನಿವೇಶನವನ್ನು ಕಾಂಗ್ರೆಸ್ ಭವನ ಟ್ರಸ್ಟ್‌ಗೆ ನೋಂದಣಿ ಮಾಡಿಕೊಟ್ಟಿರುವ ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರದ (ಸಿಯುಡಿಎ) ಕ್ರಮ ರದ್ದುಪಡಿಸಬೇಕು’ ಎಂದು ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ.

ಈ ಕುರಿತಂತೆ ಕಾವಲ್ ಬೈರಸಂದ್ರದ ನಿವಾಸಿ ಬಿ.ಕೃಷ್ಣಮೂರ್ತಿ ರಿಟ್ ಅರ್ಜಿ ಸಲ್ಲಿಸಿದ್ದು ಇದು ಇನ್ನಷ್ಟೇ ವಿಚಾರಣೆಗೆ ಬರಬೇಕಿದೆ. ಅರ್ಜಿಯಲ್ಲಿ ರಾಜ್ಯ ನಗರಾಭಿವೃದ್ಧಿ ಇಲಾಖೆ ಪ್ರಧಾನ ಕಾರ್ಯದರ್ಶಿ, ಸಿಯುಡಿಎ ಆಯುಕ್ತ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಮತ್ತು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ಆಕ್ಷೇಪ: ‘ನಾಗರಿಕ ಸೌಲಭ್ಯಕ್ಕಾಗಿ ಮೀಸಲಿಟ್ಟ 3,404.26 ಚದರ ಮೀಟರ್ ವಿಸ್ತೀರ್ಣದ ನಿವೇಶನವನ್ನು ಪ್ರಾಧಿಕಾರವು 2025ರ ಜುಲೈ 1ರಂದು ಕಾಂಗ್ರೆಸ್ ಭವನ ಟ್ರಸ್ಟ್ ಹೆಸರಿಗೆ ಮಾರಾಟ ಮಾಡಿ ಶುದ್ಧ ಕ್ರಯಕ್ಕೆ ನೋಂದಣಿ ಮಾಡಿಕೊಟ್ಟಿದೆ. ರಾಜಕೀಯ ಪಕ್ಷದ ಕಚೇರಿಗೆ ಭೂಮಿ ಮಂಜೂರು ಮಾಡಿರುವುದು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ-1987, ಕರ್ನಾಟಕ ನಗರಾಭಿವೃದ್ಧಿ (ನಾಗರಿಕ ಸೌಲಭ್ಯ ನಿವೇಶನಗಳ ಮಂಜೂರಾತಿ) ಅಧಿನಿಯಮಗಳು-1991ರ ಮತ್ತು ಸಾರ್ವಜನಿಕ ನಂಬಿಕೆ ತತ್ವಕ್ಕೆ ವಿರುದ್ಧವಾಗಿದೆ’ ಎಂದು ಅರ್ಜಿದಾರರು ಆಕ್ಷೇಪಿಸಿದ್ದಾರೆ.

ಹಾಸನಾಂಬ ದರ್ಶನಕ್ಕೆ ಒಂದೇ ದಿನ 4 ಲಕ್ಷ ಭಕ್ತರು

ಪ್ರಜಾವಾಣಿ ವಾರ್ತೆ

ಹಾಸನ: ಹಾಸನಾಂಬ ದರ್ಶನಕ್ಕೆ ಬರುತ್ತಿರುವ ಭಕ್ತರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಶುಕ್ರವಾರ ನಿರೀಕ್ಷೆಗೂ ಮೀರಿ ಭಕ್ತರು ಬಂದಿದ್ದರು.

ದರ್ಶನ ಆರಂಭವಾಗಿ ವಾರ ಕಳೆದಿದ್ದು, ಈಗಾಗಲೇ 15 ಲಕ್ಷಕ್ಕೂ ಅಧಿಕ ಭಕ್ತರು ದೇವಿಯ ದರ್ಶನ ಪಡೆದಿದ್ದಾರೆ. ಶುಕ್ರವಾರ ಒಂದೇ ದಿನ 4 ಲಕ್ಷಕ್ಕೂ ಹೆಚ್ಚು ಭಕ್ತರು ದೇವಿಯ ದರ್ಶನಕ್ಕೆ ಬಂದಿದ್ದರು.

₹1 ಸಾವಿರದ ಟಿಕೆಟ್ ಸಾಲು 2 ಕಿ.ಮೀ. ಇದ್ದರೆ, ₹ 300 ಟಿಕೆಟ್ ಸಾಲು 3 ಕಿ.ಮೀ. ದೂರದವರೆಗೂ ಇತ್ತು. ಟಿಕೆಟ್ ಪಡೆದವರು 3–4 ಗಂಟೆ ಕಾಯಬೇಕಿದ್ದು, ಸಾಮಾನ್ಯ ದರ್ಶನಕ್ಕಾಗಿ 6 ಗಂಟೆ ಕಾಯಬೇಕಿತ್ತು. ಟಿಕೆಟ್ ಖರೀದಿಗೂ ಮುಕ್ಕಾಲು ಗಂಟೆ ಸಾಲಿನಲ್ಲಿ ನಿಲ್ಲುವಂತಾಗಿತ್ತು.

ದಿಕ್ಕು ತೋಚದ ಆಡಳಿತ: ಭಕ್ತರು ಹೆಚ್ಚುತ್ತಿರುವುದರಿಂದ ಯಾವ ರೀತಿಯ ವ್ಯವಸ್ಥೆ ಮಾಡಬೇಕು ಎನ್ನುವುದು ಆಡಳಿತಕ್ಕೆ ತಲೆನೋವಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ನಗರದಲ್ಲಿಯೇ ವಾಸ್ತವ್ಯ ಹೂಡಿ, ಅಧಿಕಾರಿಗಳ ಜೊತೆಗೆ ನಿರಂತರ ಸಮಾಲೋಚನೆ ನಡೆಸುತ್ತಿದ್ದಾರೆ.

‘ಶುಕ್ರವಾರ 3 ಲಕ್ಷಕ್ಕೂ ಅಧಿಕ ಭಕ್ತರು ಬಂದಿದ್ದು, ದರ್ಶನಕ್ಕೆ ಕನಿಷ್ಠ 4 ಗಂಟೆ ತಗುಲುತ್ತಿದೆ. ಭಕ್ತರು ಇದನ್ನು ಅರಿತು ಯೋಜನೆ ರೂಪಿಸಬೇಕು’ ಎಂದು ಸಚಿವರು ಮನವಿ ಮಾಡಿದ್ದಾರೆ.

‘ಶಾಸ್ತ್ರದ ಪ್ರಕಾರ ಶನಿವಾರ ರಾತ್ರಿ ವಿಶೇಷ ಪೂಜೆ ಸಲ್ಲಿಸಬೇಕು. ಅದಕ್ಕಾಗಿ ಶನಿವಾರ ರಾತ್ರಿ 10 ಗಂಟೆಗೆ ದ್ವಾರ ಮುಚ್ಚಲಿದ್ದು, ಮಧ್ಯರಾತ್ರಿ 12 ಗಂಟೆಗೆ ದರ್ಶನ ಸ್ಥಗಿತಗೊಳ್ಳಲಿದೆ. ಭಾನುವಾರ ಬೆಳಿಗ್ಗೆ 6 ಗಂಟೆಗೆ ಮತ್ತೆ ಆರಂಭವಾಗಲಿದೆ. ಶನಿವಾರ ರಾತ್ರಿ ಬರುವುದನ್ನು ತಪ್ಪಿಸಿ. ಪ್ರತಿಯೊಬ್ಬರಿಗೂ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಭಕ್ತರು ಅಗತ್ಯ ಸಹಕಾರ ನೀಡಬೇಕು’ ಎಂದು ತಿಳಿಸಿದ್ದಾರೆ.

> ಹಾಸನಾಂಬ ಭಕ್ತರು ಹೆಚ್ಚಾಗುತ್ತಿದ್ದಾರೆ. ದರ್ಶನಕ್ಕೆ ಹೆಚ್ಚು ಹೊತ್ತು ಕಾಯಬೇಕಾಗುವುದರಿಂದ ಶಾಂತಚಿತ್ತರಾಗಿ ಸಜ್ಜಾಗಿ ಬನ್ನಿ
> **ಕೆ.ಎಸ್. ಲತಾಕುಮಾರಿ,** ಜಿಲ್ಲಾಧಿಕಾರಿ, ಹಾಸನ

> ಈಗ ಹೆಚ್ಚುವರಿ ಬ್ಯಾರಿಕೇಡ್ ಅಳವಡಿಸಲಾಗಿದೆ. ಸರದಿಯನ್ನು ನಿಯಂತ್ರಿಸಲು ಹೆಚ್ಚುವರಿ ಸಿಬ್ಬಂದಿಯನ್ನೂ ನಿಯೋಜಿಸಲಾಗಿದೆ
> **ಮೊಹಮ್ಮದ್ ಸುಜೀತಾ,** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

> ಜಿಲ್ಲಾಡಳಿತ ಉತ್ತಮ ವ್ಯವಸ್ಥೆ ಮಾಡಿದೆ. ಆದರೆ ಗರ್ಭಗುಡಿಯ ಬಳಿ ಮಹಿಳೆಯರೂ, ವೃದ್ಧರು ಎನ್ನದೇ ಸಿಬ್ಬಂದಿ ಎಳೆದಾಡುತ್ತಾರೆ
> **ರಾಧಿಕಾ ಶೆಣೈ,** ತುಮಕೂರಿನ ನಿವಾಸಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

'ಸ್ವಾಮೀಜಿ ಕ್ಷಮೆ ಕೇಳದಿದ್ದರೆ ನಿಷೇಧ'

ಕನೇರಿ ಸ್ವಾಮೀಜಿಗೆ ಲಿಂಗಾಯತ ಮಠಾಧಿಪತಿಗಳ ಒಕ್ಕೂಟ ಎಚ್ಚರಿಕೆ

ಬೆಂಗಳೂರು: 'ಮಹಾರಾಷ್ಟ್ರದ ಕೊಲ್ಹಾಪುರ ಕನೇರಿ ಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಅವರು ಸ್ತ್ರೀಯರ ಕುರಿತಾಗಿ ನೀಡಿರುವ ಹೇಳಿಕೆಗೆ ನಾಡಿನ ಜನರ ಕ್ಷಮೆ ಕೇಳಬೇಕು. ಇಲ್ಲದೇ ಇದ್ದರೆ ಅವರನ್ನು ಕರ್ನಾಟಕ ದಿಂದಲೇ ನಿಷೇಧಿಸುವ ಸನ್ನಿವೇಶ ಎದುರಾಗಬಹುದು' ಎಂದು ಕರ್ನಾಟಕ ಲಿಂಗಾಯಿತ ಮಠಾಧಿಪತಿಗಳ ಒಕ್ಕೂಟ ಎಚ್ಚರಿಸಿದೆ.

> ಬಸವ ಸಂಸ್ಕೃತಿ ಅಭಿಯಾನದಲ್ಲಿ ಎಲ್ಲೂ ನಾವು ಮಾಂಸ, ಮದ್ಯದ ವಿಚಾರವನ್ನು ಮಾತನಾಡಿಯೇ ಇಲ್ಲ. ಸುಳ್ಳು ಹೇಳಿ ಸಮಾಜವನ್ನು ದಿಕ್ಕು ತಪ್ಪಿಸುವ ಕೆಲಸವನ್ನು ಯಾರೂ ಮಾಡಬೇಡಿ
> **ಶಿವಾನಂದ ಸ್ವಾಮೀಜಿ**, ಸಿದ್ದೇಶ್ವರ ಮಠ, ಹಂದಿಗುಂದ

'ಬಸವ ಸಂಸ್ಕೃತಿ ಅಭಿಯಾನವನ್ನು ಟೀಕಿಸುವ ಭರದಲ್ಲಿ ಅವರು ಬಳಸಿರುವ ಅಶ್ಲೀಲ ಪದ ಬಳಕೆಯನ್ನು ಯಾವುದೇ ನಾಗರಿಕ ಸಮಾಜ ಒಪ್ಪುವುದಿಲ್ಲ. ತಾವೂ ಸಮಾವೇಶ ಆಯೋಜಿಸಿ ವಿಚಾರಗಳನ್ನು ಪ್ರಸ್ತಾಪಿಸಿದ್ದರೆ ಅದನ್ನು ಸ್ವಾಗತಿಸುತ್ತಿದ್ದೆವು. ಅದನ್ನು ಬಿಟ್ಟು ಲಘುವಾಗಿ ಮಾತನಾಡಿ ಇಡೀ ಸ್ವಾಮೀಜಿಗಳ ಸಮುದಾಯ, ಸಂಸ್ಕೃತಿಗೆ ಕಳಂಕ ತಂದಿದ್ದಾರೆ' ಎಂದು ಒಕ್ಕೂಟದ ಅಧ್ಯಕ್ಷ ಭಾಲ್ಕಿ ಹಿರೇಮಠದ ಬಸವಲಿಂಗ ಪಟ್ಟದ್ದೇವರು ಸ್ವಾಮೀಜಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ನಮ್ಮನ್ನು ಸಿದ್ದರಾಮಯ್ಯ ಕೃಪಾ ಪೋಷಿತ ಮಂಡಳಿ ಎಂದು ಟೀಕಿಸಿದ್ದಾರೆ. ನಾವು ಯಾವ ಪಕ್ಷಕ್ಕೂ ಅಂಟಿಕೊಂಡವರಲ್ಲ. ನಮ್ಮದು ಬಸವ ಪಕ್ಷ. ಬಸವ ತತ್ವದ ಘನತೆ ಉಳಿಸುವ ಪ್ರಯತ್ನ ಮಾಡಿದ್ದೇವೆ. ಅಭಿಯಾನವನ್ನು ನಮ್ಮ ಖರ್ಚಿನಲ್ಲೇ ನಡೆಸಿದ್ದೇವೆ. ಬಸವಣ್ಣನವರ ವಿಚಾರದಲ್ಲಿ ನಿರ್ಧಾರ ಕೈಗೊಳ್ಳಲು ಅಗ್ನಿ ಪರೀಕ್ಷೆ ಎದುರಿಸಿ ಇಚ್ಛಾಶಕ್ತಿಯನ್ನು ಸಿದ್ದರಾಮಯ್ಯ ಪ್ರದರ್ಶಿಸಿದ್ದರಿಂದ ಅವರನ್ನು ಅಭಿನಂದಿಸಿದ್ದೇವೆ. ಇದನ್ನೇ ಮುಂದಿಟ್ಟು ಹಯಿಲೆಬ್ಬಿಸಲಾಗುತ್ತಿದೆ' ಎಂದರು. ಬೆಳಗಾವಿ ರಾಯಭಾಗ ತಾಲ್ಲೂಕು ಹಂದಿಗುಂದ ಸಿದ್ದೇಶ್ವರ ಮಠದ ಶಿವಾನಂದ ಸ್ವಾಮೀಜಿ, 'ಸ್ತ್ರೀಯರ ಕುರಿತು ಅವಹೇಳನಕಾರಿಯಾಗಿ ಮಾತನಾಡಿರುವ ಸ್ವಾಮೀಜಿ ಅವರ ನಡವಳಿಕೆಯನ್ನು ಬಿಜೆಪಿ ನಾಯಕರು ಖಂಡಿಸಬೇಕಿತ್ತು. ಅದನ್ನು ಬಿಟ್ಟು ವಿಜಯಪುರ ಜಿಲ್ಲೆಗೆ ನಿಷೇಧ ಮಾಡಿದ್ದನ್ನು ವಿರೋಧಿಸುತ್ತಿದ್ದಾರೆ. ಬಿಜೆಪಿ ನಾಯಕರಿಗೂ ತಾಯಂದಿರಿದ್ದಾರೆ ಎನ್ನುವುದನ್ನು ಮರೆಯಬಾರದು. ಸಿದ್ದೇಶ್ವರ ಸ್ವಾಮೀಜಿ ಅವರ ಶಿಷ್ಯರಾಗಿ ಕನೇರಿ ಮಠದ ಸ್ವಾಮೀಜಿ ಮಾತನಾಡಿದ್ದನ್ನು ಸಮಾಜ ಒಪ್ಪುವುದಿಲ್ಲ' ಎಂದು ತಿಳಿಸಿದರು.

'ಕಲಾವಿದರಿಗೂ ಅವಮಾನ'

'ಧರ್ಮಗುರುಗಳನ್ನು ಅವಹೇಳನ ಮಾಡುವ ಭರದಲ್ಲಿ ನಾಟಕದವರು ಎಂದು ಕಲಾವಿದರಿಗೂ ಅವಮಾನ ಮಾಡಿದ್ದಾರೆ' ಎಂದು ಸಾಣೇಹಳ್ಳಿ ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

'ಗುರು ಸ್ಥಾನದಲ್ಲಿರುವವರು ಬಳಸುವ ಪದ ಇದಲ್ಲ. ಅವರೇ ದಾರಿ ತಪ್ಪಿದರೆ ಶಿಷ್ಯರ ಸ್ಥಿತಿ ಏನಾಗಲಿದೆ ಎನ್ನುವ ಅರಿವು ಇರಬೇಕು. ಈಗಾಗಲೇ ಅವರ ವಿಜಯಪುರ ಜಿಲ್ಲೆ ಪ್ರವೇಶಕ್ಕೆ ನಿರ್ಬಂಧ ಹೇರಲಾಗಿದ್ದು, ಮುಂದೆ ಕರ್ನಾಟಕ ಪ್ರವೇಶದಿಂದಲೂ ನಿರ್ಬಂಧಿಸುವ ಸ್ಥಿತಿ ನಿರ್ಮಾಣವಾಗಬಹುದು' ಎಂದು ಎಚ್ಚರಿಸಿದರು.

'ಲಿಂಗಾಯತ ರಾಜಕಾರಣಿಗಳು ಖಂಡಿಸಲಿ'

'ತಾಯಂದಿರ ಬಗ್ಗೆ ಅವಹೇಳನಕರ ರೀತಿಯಲ್ಲಿ ಮಾತನಾಡಿರುವ ಕನೇರಿ ಮಠದ ಸ್ವಾಮೀಜಿ ಅವರ ಹೇಳಿಕೆಯನ್ನು ಲಿಂಗಾಯತ ಸಮಾಜದ ರಾಜಕಾರಣಿಗಳು ಖಂಡಿಸಬೇಕು. ಸಮಾಜದಲ್ಲಿನ ಈ ವಿಚಾರ ಇಲ್ಲಿಗೆ ನಿಲ್ಲುವುದಿಲ್ಲ. ಈ ಬಗ್ಗೆ ಸಂತರಾದವರು ಹೇಳಿಕೆ ನೀಡುವ ಮುನ್ನ ಎಚ್ಚರಿಕೆ ವಹಿಸಬೇಕು. ಇದನ್ನು ಬೆಂಬಲಿಸುವ ರಾಜಕೀಯ ನೇತಾರರು ಗಮನಿಸಬೇಕು' ಎಂದು ಗದಗ ತೋಂಟದಾರ್ಯ ಮಠದ ಸಿದ್ದರಾಮ ಸ್ವಾಮೀಜಿ ಹೇಳಿದರು.

ವಿಡಿಯೊ ಮೂಲಕ ಆಶೀರ್ವಚನ

ಪ್ರಜಾವಾಣಿ ವಾರ್ತೆ



ಬಸವನಬಾಗೇವಾಡಿಯ ಬಸವೇಶ್ವರ ವೃತ್ತದಲ್ಲಿ ಬಿಜೆಪಿ ನಾಯಕರು, ಸಂತರ ಒಕ್ಕೂಟದ ಪ್ರಮುಖರು, ಭಕ್ತರು ಪ್ರತಿಭಟನೆ ನಡೆಸಿದರು

ವಿಜಯಪುರ: ಕನೇರಿ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಅವರಿಗೆ ವಿಜಯಪುರ ಜಿಲ್ಲಾ ಪ್ರವೇಶಕ್ಕೆ ನಿರ್ಬಂಧ ವಿಧಿಸಿರುವ ಕಾರಣ ಬಸವನಬಾಗೇವಾಡಿಯಲ್ಲಿ ಶುಕ್ರವಾರ ಪೂರ್ವ ನಿಗದಿಯಾಗಿದ್ದ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ.

ಸದ್ಗುರು ಸಿದ್ದೇರಾಮೇಶ್ವರ ಮಹಾರಾಜರ ಪುಣ್ಯತಿಥಿ ಉತ್ಸವದ ಪ್ರಯುಕ್ತ ಬಸವನಬಾಗೇವಾಡಿ ಪಟ್ಟಣದ ಬಸವ ಭವನದಲ್ಲಿ ಏರ್ಪಡಿಸಿದ್ದ ಧಾರ್ಮಿಕ ಕಾರ್ಯಕ್ರಮದಲ್ಲಿ ಕನೇರಿ ಶ್ರೀಗಳು ವರ್ಚುವಲ್ ಮೂಲಕ ಭಕ್ತರನ್ನು ಉದ್ದೇಶಿಸಿ ಮಾತನಾಡಿದರು.

ಅಪಾರ್ಥ ಬೇಡ: 'ಬೈಗುಳಗಳಿಂದ ಮಾತನಾಡುವುದು ನಮ್ಮ ಉತ್ತರ ಕರ್ನಾಟಕದ ಸೊಗಡು. ಇದು ಬೈದಂತಲ್ಲ. ತಿದ್ದಿಕೊಳ್ಳಲು ಆಡಿದ ಮಾತುಗಳು. ಅಪಾರ್ಥ ಮಾಡಿಕೊಳ್ಳಬೇಡಿ. ನಾನು ಏನು ಮಾತನಾಡಿರುವೆ ಎಂಬುದನ್ನು ಅರ್ಥ ಮಾಡಿಕೊಳ್ಳಿ' ಎಂದು ಅವರು ಹೇಳಿದರು.

ಪ್ರತಿಭಟನೆ: ಕನೇರಿ ಶ್ರೀಗಳಿಗೆ ವಿಜಯಪುರ ಜಿಲ್ಲಾ ಪ್ರವೇಶ ನಿರ್ಬಂಧ ಆದೇಶ ಹಿಂಪಡೆಯುವಂತೆ ಆಗ್ರಹಿಸಿ ಬಿಜೆಪಿ ನಾಯಕರು, ಸಂತರ ಒಕ್ಕೂಟ ಮತ್ತು ಸಾವಿರಾರು ಭಕ್ತರು ಬಸವನ ಬಾಗೇವಾಡಿ ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಶುಕ್ರವಾರ ವಿವಿಧ ಮಠಾಧೀಶರು, ಭಕ್ತರು ಪ್ರತಿಭಟನೆ ನಡೆಸಿದರು. ಸಂತರ ಒಕ್ಕೂಟದ ಅಧ್ಯಕ್ಷ ಶಂಕರಾನಂದ ಸ್ವಾಮೀಜಿ, ಬಿಜೆಪಿ ರಾಜ್ಯ ರೈತ ಮೋರ್ಚಾ ಅಧ್ಯಕ್ಷ ಎ.ಎಸ್. ಪಾಟೀಲ ನಡಹಳ್ಳಿ, ಮಾಜಿ ಸಚಿವ ಎಸ್. ಕೆ.ಬೆಳ್ಳುಬ್ಬಿ, ಡಾ.ಶ್ರದ್ಧಾನಂದ ಸ್ವಾಮೀಜಿ, ಬುರಣಾಪುರದ ಯೋಗೇಶ್ವರಿ ಮಾತಾಜಿ, ಬಂಜಾರಾ ಸಮುದಾಯದ ಗೋಪಾಲ ಮಹಾರಾಜ, ವಿಎಚ್‌ಪಿ ಮುಖಂಡ ಸುನೀಲ ಬೈರವಾಡಗಿ, ಬಿಜೆಪಿ ರಾಜ್ಯ ಕಾರ್ಯಕಾರಿ ಸದಸ್ಯ ಸುರೇಶ ಬಿರಾದಾರ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ನಿರ್ಬಂಧಕ್ಕೆ ಅರ್ಥವಿಲ್ಲ: ಸಚಿವ

ವಿಜಯಪುರ: 'ಕನೇರಿ ಶ್ರೀಗಳು ಆಡುಭಾಷೆಯಲ್ಲಿ ಬಾಯಿತಪ್ಪಿ ಆಡಿರುವ ಮಾತನ್ನು ದೀರ್ಘಕ್ಕೆ ಒಯ್ಯಬಾರದು. ಈ ವಿಷಯ ಇಲ್ಲಿಗೆ ಮುಗಿಸುವುದು ಒಳ್ಳೆಯದು. ಅವರಾಡಿದ ಮಾತನ್ನೇ ಇಟ್ಟುಕೊಂಡು ನಿರ್ಬಂಧ ಹೇರುವುದರಲ್ಲಿ ಅರ್ಥವಿಲ್ಲ' ಎಂದು ಸಚಿವ ಶಿವಾನಂದ ಪಾಟೀಲ ಹೇಳಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅಸಭ್ಯ, ಅಶ್ಲೀಲ ಪದಗಳು ಸ್ವಾಮೀಜಿಗಳು, ಮಠಾಧೀಶರು ಸೇರಿ ಯಾರ ಬಾಯಿಂದಲೂ ಬರಬಾರದು' ಎಂದರು. 'ಇತ್ತೀಚಿನ ದಿನಗಳಲ್ಲಿ ವೀರಶೈವ-ಲಿಂಗಾಯತ ಎಂದೆಲ್ಲ ಭಿನ್ನಾಭಿಪ್ರಾಯ ಕೇಳಿ ಬರುತ್ತಿರುವುದು ದುರದೃಷ್ಟಕರ. ಬಸವಾದಿ ಶರಣರ ಆಶಯ ಈಡೇರಿಸುವಲ್ಲಿ ಎಲ್ಲ ಮಠಾಧೀಶರು ಸೇರಿ ಸಾಮರಸ್ಯದಿಂದ ಹೋಗಬೇಕು ಎಂಬುದು ನನ್ನ ವಿನಂತಿ' ಎಂದರು.

> ಕಾಡಸಿದ್ದೇಶ್ವರ ಸ್ವಾಮೀಜಿಗೆ ಜಿಲ್ಲೆ ಪ್ರವೇಶಕ್ಕೆ ಹೇರಿರುವ ನಿರ್ಬಂಧವನ್ನು ಸರ್ಕಾರ ಹಿಂಪಡೆಯಬೇಕು. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬಹಿರಂಗವಾಗಿ ಕ್ಷಮೆಯಾಚಿಸಬೇಕು
> **ಪ್ರಮೋದ ಮುತಾಲಿಕ,** ಸಂಸ್ಥಾಪಕ ಅಧ್ಯಕ್ಷ, ಶ್ರೀರಾಮ ಸೇನೆ ಸಂಘಟನೆ

'ಜಿಲ್ಲೆಯಿಂದ ಹೊರಹೋಗಿ'

ಬಾಗಲಕೋಟೆ: 'ಜಿಲ್ಲೆಯಲ್ಲಿ ಶಾಂತಿ, ಸುವ್ಯವಸ್ಥೆ ರಕ್ಷಣೆಗಾಗಿ ಒಂದು ಗಂಟೆಯಲ್ಲಿ ಮಠದಿಂದ ಹೊರಡಬೇಕು' ಎಂದು ಕನೇರಿ ಕಾಡಸಿದ್ದೇಶ್ವರ ಸ್ವಾಮೀಜಿ ಅವರಿಗೆ ಜಿಲ್ಲಾಧಿಕಾರಿ ಆದೇಶ ಜಾರಿಗೊಳಿಸಿದ್ದಾರೆ.

ವಿಜಯಪುರ ಜಿಲ್ಲೆ ಪ್ರವೇಶಕ್ಕೆ ನಿರ್ಬಂಧ ವಿಧಿಸಿದ ಹಿನ್ನೆಲೆಯಲ್ಲಿ ಶುಕ್ರವಾರ ಬೀಳಗಿ ತಾಲ್ಲೂಕಿನ ಚಿಕ್ಕಾಲಗುಂಡಿಯಲ್ಲಿ ಇರುವ ಕನೇರಿ ಶಾಖಾ ಮಠದಲ್ಲಿ ಸ್ವಾಮೀಜಿ ಉಳಿದುಕೊಂಡಿದ್ದಾರೆ. ಜಿಲ್ಲಾಧಿಕಾರಿ ಸಂಗಪ್ಪ, ಡಿವೈಎಸ್‌ಪಿ ಗಜಾನನ ಸುತಾರ, ಬೀಳಗಿ ತಹಶೀಲ್ದಾರ್ ವಿನೋದ ಹತ್ತಳ್ಳಿ ಅವರು ಈ ಕುರಿತು ನೋಟಿಸ್ ನೀಡಿದರು.

ನೋಟಿಸ್ ಪಡೆದ ಸ್ವಾಮಿಜಿ, 'ಯಾವುದೇ ಕಾರಣಕ್ಕೂ ತೆರಳುವುದಿಲ್ಲ. ಬಂಧಿಸುವಂತಿದ್ದರೆ, ಬಂಧಿಸಿ. ಸಮಾಧಾನ ಆಗುವವರೆಗೆ ಜೈಲಿನಲ್ಲಿಡಿ. ಪರಿಣಾಮಕ್ಕೆ ನೀವೇ ಜವಾಬ್ದಾರರು' ಎಂದರು.

ದಲಿತರಿಂದ ದಲಿತರಿಗೆ ಬಹಿಷ್ಕಾರ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): 'ಇಲ್ಲಿನ ಗಂಜಾಂನಲ್ಲಿ ಕುಲಸ್ಥರ ಮಾತಿಗೆ ವಿರುದ್ಧವಾಗಿ ನಡೆದುಕೊಂಡರು ಎಂಬ ಕಾರಣಕ್ಕೆ ಏಳು ದಲಿತ ಕುಟುಂಬಗಳಿಗೆ ದಲಿತ ಕುಲದ ಯಜಮಾನರು ಬಹಿಷ್ಕಾರ ಹಾಕಿ ದಂಡ ವಿಧಿಸಿದ್ದಾರೆ' ಎಂದು ಸ್ಥಳೀಯರು ದೂರಿದ್ದಾರೆ.

'ಗಂಜಾಂನ ಅಂಬೇಡ್ಕರ್ ಬೀದಿಯ ಮಹೇಶ್, ಯಶವಂತಕುಮಾರ್ ಇತರರ ಕುಟುಂಬಗಳು ದೇವಾಲಯದ ಕಾರ್ಯಕ್ರಮಗಳಿಗೆ ವಂತಿಕೆ ಹಣ ಕೊಡದ ಕುಲದ ಯಜಮಾನರ ಮಾತಿಗೆ ವಿರುದ್ಧ ಮಾತನಾಡಿದ್ದಾರೆ ಎಂದು ಬಹಿಷ್ಕಾರ ಮತ್ತು ದಂಡದ ಶಿಕ್ಷೆ ವಿಧಿಸಲಾಗಿದೆ' ಎನ್ನಲಾಗಿದೆ.

'ಪುರಸಭೆ ಸದಸ್ಯೆ ಗೀತಾ ಮಹೇಶ್ ಅವರ ಕುಟುಂಬಕ್ಕೂ ಬಹಿಷ್ಕಾರ ಹಾಕಿದ್ದು, ದಂಡ ವಿಧಿಸಲಾಗಿದೆ. ಈ ಕುಟುಂಬಗಳೊಂದಿಗೆ ವ್ಯವಹಾರ ನಡೆಸದಂತೆ ಕೇರಿಯ ಜನರಿಗೆ ಕುಲಸ್ಥರು ಕಟ್ಟಪ್ಪಣೆ ವಿಧಿಸಿದ್ದಾರೆ. ಇದು ದಲಿತರು ದಲಿತರ ಮೇಲೆ ನಡೆಸಿರುವ ದೌರ್ಜನ್ಯ. ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆ ಮಧ್ಯ ಪ್ರವೇಶಿಸಿ ನ್ಯಾಯ ಕೊಡಿಸಬೇಕು' ಎಂದು ಯಶವಂತಕುಮಾರ್ ಕೋರಿದ್ದಾರೆ.



ದಲಿತ ಕುಲಸ್ಥರು ವಿಧಿಸಿದ ದಂಡದ ಹಣ ಕೊಟ್ಟಿಲ್ಲ ಎಂಬ ಕಾರಣಕ್ಕೆ ಗಂಜಾಂನ ಮಹೇಶ್ ಅವರಿಗೆ ಸೇರಿದ ಅಂಗಡಿ ಮಳಿಗೆಯನ್ನು ಮುಚ್ಚಿಸಿರುವ ದೃಶ್ಯ

ನಾಲ್ಕು ವರ್ಷಗಳ ಹಿಂದೆ ಅಂಬೇಡ್ಕರ್ ಬೀದಿಯಲ್ಲಿ, ಶಿವರಾತ್ರಿ ಆಚರಣೆಗೆಂದು ಪ್ರತಿ ಕುಟುಂಬಕ್ಕೆ ನಿಗದಿ ಮಾಡಿದ್ದ ₹100 ವಂತಿಕೆಯನ್ನು ಇನ್ನೂ ಕೊಟ್ಟಿಲ್ಲವೆಂಬ ಕಾರಣಕ್ಕೆ ಬಹಿಷ್ಕಾರ ಹಾಕಿದ್ದು, ಇಬ್ಬರಿಗೆ ಕ್ರಮವಾಗಿ ₹15 ಸಾವಿರ, ₹25 ಸಾವಿರ ದಂಡ ಹಾಕಿದ್ದಾರೆ ಎಂದು ದೂರಿದ್ದಾರೆ.

'ಸ್ಥಳೀಯರು ಮಾಹಿತಿ ನೀಡಿದ್ದು, ಕುಲಸ್ಥರು, ದೂರುದಾರರನ್ನು ಠಾಣೆಗೆ ಕರೆಸಿ ವಿಚಾರಣೆ ನಡೆಸಲಾಗುವುದು' ಎಂದು ಟೌನ್ ಪೊಲೀಸ್ ಠಾಣೆ ಸಿಪಿಐ ಬಿ.ಜಿ.ಕುಮಾರ್ ತಿಳಿಸಿದ್ದಾರೆ.

ಪ್ರಚೋದನಕಾರಿ ಪೋಸ್ಟ್: ಎಫ್‌ಐಆರ್

ಚಿಕ್ಕಮಗಳೂರು: ಸಾಮಾಜಿಕ ಜಾಲತಾಣಗಳಲ್ಲಿ ಪ್ರಚೋದನಕಾರಿ ಪೋಸ್ಟ್ ಹಾಕಿದ ಆರೋಪದಲ್ಲಿ ಬಿಜೆಪಿ ಯುವ ಮೋರ್ಚಾ ಜಿಲ್ಲಾ ಘಟಕದ ಅಧ್ಯಕ್ಷ ಸಂತೋಷ್ ಕೋಟ್ಯಾನ್ ಸೇರಿ ಐವರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಶ್ಯಾಮ್, ಅಮಿತ್, ಪುನೀತ್ ಮತ್ತು ದಿಲೀಪ್ ಶೆಟ್ಟಿ ವಿರುದ್ಧವೂ ಎಫ್‌ಐಆರ್ ದಾಖಲಿಸಲಾಗಿದೆ.

ಸಾರ್ವಜನಿಕ ಸ್ಥಳದಲ್ಲಿ ನಮಾಜ್‌ಗೆ ಅವಕಾಶ ಬೇಡ: ಯತ್ನಾಳ

ವಿಜಯಪುರ: 'ಸರ್ಕಾರದ ನಿಯಮಗಳ ಪ್ರಕಾರ ಸಾರ್ವಜನಿಕ ಸ್ಥಳಗಳಲ್ಲಿ, ಸರ್ಕಾರಿ ಜಾಗಗಳಲ್ಲಿ ನಮಾಜ್ ಮಾಡಲು ಅವಕಾಶ ಕೊಡಬಾರದು. ಕೂಡಲೇ ಕ್ರಮ ಕೈಗೊಳ್ಳಲಿ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಒತ್ತಾಯಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶುಕ್ರವಾರ ಪತ್ರ ಬರೆದಿರುವ ಅವರು, 'ಸಾರ್ವಜನಿಕ ಸ್ಥಳಗಳನ್ನು ಖಾಸಗಿ, ಸಾಂಸ್ಥಿಕ ಉದ್ದೇಶಗಳಿಗೆ ಬಳಸುವುದನ್ನು ನಿರ್ಬಂಧಿಸುವಲ್ಲಿ ನ್ಯಾಯಸಮ್ಮತವಾದ ಒಂದೇ ತತ್ವವನ್ನು ಏಕರೂಪವಾಗಿ ಜಾರಿಗೊಳಿಸುವುದು ಅತ್ಯಗತ್ಯ' ಎಂದು ಹೇಳಿದ್ದಾರೆ. 'ಸಾರ್ವಜನಿಕ ರಸ್ತೆಗಳು ಮತ್ತು ಸರ್ಕಾರಿ ಆವರಣದಲ್ಲಿ ನಮಾಜ್ ಮಾಡುವುದರಿಂದ ವಾಹನ ಮತ್ತು ಪಾದಚಾರಿಗಳ ಸಂಚಾರಕ್ಕೆ ಅಡ್ಡಿ ಆಗಲಿದೆ. ಹೀಗಾಗಿ, ಅವಕಾಶ ನೀಡಬಾರದು' ಎಂದು ಆಗ್ರಹಿಸಿದ್ದಾರೆ.

ಚೌಡಯ್ಯ ಮೂರ್ತಿ ಭಗ್ನ ಪ್ರಕರಣ ಮೂವರು ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಕಲಬುರಗಿ: ಶಹಾಬಾದ್ ತಾಲ್ಲೂಕಿನ ಮುತಗಾದಲ್ಲಿ ನಡೆದ ನಿಜಶರಣ ಅಂಬಿಗರ ಚೌಡಯ್ಯ ಮೂರ್ತಿ ವಿರೂಪ ಪ್ರಕರಣಕ್ಕೆ ಸಂಬಂಧಿಸಿ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.

'ತಾಲ್ಲೂಕಿನ ಜೀವಣಗಿ ಗ್ರಾಮದ ಮಲ್ಲಿಕಾರ್ಜುನ ಪಾಟೀಲ, ಮುತಗಾ ಗ್ರಾಮದ ಸಾಬಣ್ಣ ಪಟ್ಟೇದಾರ ಹಾಗೂ ಶಿವರಾಜ ನಾಟಿಕಾರ ಬಂಧಿತರು' ಎಂದು ಎಸ್ಪಿ ಅಡ್ಡೂರು ಶ್ರೀನಿವಾಸುಲು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಹಲವು ವರ್ಷಗಳಿಂದ ಮೂರ್ತಿ ಸುತ್ತಲಿನ ಪ್ರದೇಶ ಅಭಿವೃದ್ಧಿ ಆಗಿಲ್ಲ. ಮೂರ್ತಿ ಭಗ್ನಗೊಳಿಸಿದರೆ ಸುದ್ದಿಯಾಗುತ್ತದೆ. ಜನರ ಗಮನ ಸೆಳೆಯುವ ಜೊತೆಗೆ ಅಭಿವೃದ್ಧಿಗೆ ಹಣವೂ ಹರಿದು ಬರುತ್ತೆ ಎಂದುಕೊಂಡು ಆರೋಪಿಗಳು ಈ ಕೃತ್ಯ ಎಸಗಿದ್ದರು' ಎಂದು ತಿಳಿಸಿದರು.

ಗಮಕ ಸ್ಪರ್ಧೆ ಫಲಿತಾಂಶ ಪ್ರಕಟ

ಬೆಂಗಳೂರು: ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ ಹಮ್ಮಿಕೊಂಡಿದ್ದ 'ಕಿಶೋರ ಕನಕ ಕಾವ್ಯ ಗಮಕ ಸ್ಪರ್ಧೆ'ಯ ಫಲಿತಾಂಶ ಪ್ರಕಟವಾಗಿದ್ದು, ಉಡುಪಿಯ ಸ್ವಸ್ತಿ ಎಂ. ಭಟ್ ಪ್ರಥಮ ಸ್ಥಾನ ಪಡೆದಿದ್ದಾರೆ.

ಪ್ರಥಮ ಬಹುಮಾನವು ₹20 ಸಾವಿರ ನಗದು ಒಳಗೊಂಡಿದೆ. ಬೆಂಗಳೂರಿನ ಸುಮೇಧಾ ಸೋಮಯಾಜಿ ದ್ವಿತೀಯ ಬಹುಮಾನ (₹15 ಸಾವಿರ), ಮೈಸೂರಿನ ಚಾರ್ವಿ ಸತೀಶ್ ತೃತೀಯ ಬಹುಮಾನ (₹10 ಸಾವಿರ), ಹಾಸನದ ನಾಗಶ್ರೀ ಡಿ.ಎಸ್. ಮತ್ತು ದಕ್ಷಿಣ ಕನ್ನಡದ ಪ್ರಚೇತ್ ರಾಮ್ ಕಜೆ ಸಮಾಧಾನಕರ ಬಹುಮಾನ (ತಲಾ ₹5 ಸಾವಿರ) ಪಡೆದಿದ್ದಾರೆ ಎಂದು ಕೇಂದ್ರದ ಅಧ್ಯಕ್ಷ ಕಾ.ತ. ಚಿಕ್ಕಣ್ಣ ತಿಳಿಸಿದ್ದಾರೆ.

ಚಿಟಿಕೆ ಸುದ್ದಿ

ಮೋದಿ- ಶ್ರೀಲಂಕಾ ಪ್ರಧಾನಿ ಭೇಟಿ



ಪ್ರಧಾನಿ ನರೇಂದ್ರ ಮೋದಿ ಅವರನ್ನು ಶ್ರೀಲಂಕಾ ಪ್ರಧಾನಿ ಹರಿಣಿ ಅಮರಸೂರ್ಯ ಭೇಟಿ ಮಾಡಿದರು.

ನವದೆಹಲಿ (ಪಿಟಿಐ): ಶುಕ್ರವಾರ ದೆಹಲಿಯ ತಮ್ಮ ಅಧಿಕೃತ ನಿವಾಸಕ್ಕೆ ಭೇಟಿ ನೀಡಿದ್ದ ಶ್ರೀಲಂಕಾ ಪ್ರಧಾನಿ ಹರಿಣಿ ಅಮರಸೂರ್ಯ ಅವರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಸುದೀರ್ಘ ಚರ್ಚೆ ನಡೆಸಿದರು.

ಉಭಯ ದೇಶಗಳ ನಡುವಿನ ಸಹಕಾರ ವೃದ್ಧಿ, ಶಿಕ್ಷಣ, ಮಹಿಳಾ ಸ್ವಾವಲಂಬನೆ, ಸಂಶೋಧನೆ ಮತ್ತು ಭಾರತೀಯ ಮೀನುಗಾರರ ಸುರಕ್ಷತೆಯ ವಿಚಾರಗಳೂ ಸೇರಿದಂತೆ ಹಲವು ಅಂಶಗಳ ಬಗ್ಗೆ ಚರ್ಚೆ ನಡೆಯಿತು ಎಂದು ಮೋದಿ ಅವರು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

'ನಾಗರಿಕರ ಸಮೃದ್ಧಿಯ ಆಶೋತ್ತರ ಈಡೇರಿಸುವುದು ಮತ್ತು ಪ್ರಾದೇಶಿಕ ಸಹಕಾರಕ್ಕೆ ಮತ್ತಷ್ಟು ಮಹತ್ವ ನೀಡುವುದು ಎರಡೂ ಆತ್ಮೀಯ ನೆರೆಯ ದೇಶಗಳ ಮಹತ್ವದ ಉದ್ದೇಶವಾಗಿದೆ' ಎಂದು ಮೋದಿ ಹೇಳಿದ್ದಾರೆ.

'ಶಾಲೆಗೆ ಪ್ರವೇಶ ನಿರಾಕರಣೆ: ವಿಪರ್ಯಾಸ'

ತಿರುವನಂತಪುರ (ಪಿಟಿಐ): ಕೇರಳದ ಸಂತ ರೀಟಾ ಪಬ್ಲಿಕ್ ಸ್ಕೂಲ್‌ನಲ್ಲಿ ಶಿರವಸ್ತ್ರ (ಹೆಡ್ ಸ್ಕಾರ್ಫ್) ಧರಿಸಿದ್ದ ಕ್ರೈಸ್ತ ಸನ್ಯಾಸಿನಿಯೂ ಆದ ಶಿಕ್ಷಕಿ, ಹಿಜಾಬ್ ಧರಿಸಿದ್ದ ವಿದ್ಯಾರ್ಥಿನಿ ಪ್ರವೇಶವನ್ನು ನಿರಾಕರಿಸಿರುವುದು ವಿಪರ್ಯಾಸ ಎಂದು ಕೇರಳದ ಶಿಕ್ಷಣ ಸಚಿವ ವಿ. ಶಿವನ್‌ಕುಟ್ಟಿ ಅವರು ಹೇಳಿದ್ದಾರೆ.



ವಿ. ಶಿವನ್‌ಕುಟ್ಟಿ

ಪ್ರತಿಯೊಂದು ಖಾಸಗಿ ಶಾಲಾ ಆಡಳಿತ ಮಂಡಳಿಗಳು ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಬರುತ್ತವೆ. ಆದರೆ, ನಿಯಮಗಳು ಏಕರೂಪವಾಗಿ ಅನ್ವಯಿಸುವುದಿಲ್ಲ ಎಂದರು.

ಪಳ್ಳುರುತ್ತಿಯ ಶಾಲೆಯಲ್ಲಿ ಇತ್ತೀಚೆಗೆ ನಡೆದ ಹಿಜಾಬ್ ವಿವಾದದ ಕುರಿತು ಮಾತನಾಡಿದ ಅವರು, 'ಮಗುವೊಂದು ಹಿಜಾಬ್ ಧರಿಸಿದ ಕಾರಣಕ್ಕಾಗಿ ತರಗತಿಗೆ ಹಾಜರಾಗಲು ಅವಕಾಶ ಸಿಗದಿರುವುದನ್ನು ನೋಡಿ, ಸರ್ಕಾರ ಮೂಕ ಪ್ರೇಕ್ಷಕನಂತೆ ಇರುವುದಿಲ್ಲ' ಎಂದು ಅವರು ಹೇಳಿದರು.

ಶಾಲೆಯು ತನ್ನ ಹಟಮಾರಿತನ ಬಿಟ್ಟು ವಿದ್ಯಾರ್ಥಿನಿಯ ವಿದ್ಯಾಭ್ಯಾಸಕ್ಕೆ ನೆರವಾಗುವಂತಹ ಶಾಂತ ವಾತಾವರಣವನ್ನು ಕಲ್ಪಿಸಬೇಕಿತ್ತು ಎಂದರು.

ಕಲ್ಪಕಂ ರಿಯಾಕ್ಟರ್: ಇಂಧನ ಲೋಡಿಂಗ್ ಆರಂಭ

ನವದೆಹಲಿ (ಪಿಟಿಐ) ಕಲ್ಪಕಂನಲ್ಲಿ ದೇಶದ ಮೊದಲ 'ಫಾಸ್ಟ್ ಬ್ರೀಡರ್ ರಿಯಾಕ್ಟರ್ ಮಾದರಿ'ಗೆ (ಪಿಎಫ್‌ಬಿಆರ್) ಇಂಧನ ತುಂಬಿಸುವ ಕೆಲಸ ಆರಂಭಗೊಂಡಿದೆ.

ಭಾರತೀಯ ನಭಿಕಿಯಾ ವಿದ್ಯುತ್ ನಿಗಮ ಫಾಸ್ಟ್ ಬ್ರೀಡರ್ ರಿಯಾಕ್ಟರ್ ಅಭಿವೃದ್ಧಿಪಡಿಸಿದ್ದು, 500 ಮೆಗಾವ್ಯಾಟ್ ಸಾಮರ್ಥ್ಯದ ಇಂಧನ ತುಂಬಲು ಪರಮಾಣು ಇಂಧನ ನಿಯಂತ್ರಣ ಪ್ರಾಧಿಕಾರ (ಎಇಆರ್‌ಬಿ) ಅನುಮತಿ ನೀಡಿದೆ.

'ಕಳೆದ ವರ್ಷ ಮಾರ್ಚ್ ತಿಂಗಳಲ್ಲಿ ಇಂಧನ ತುಂಬಲು ತಾಂತ್ರಿಕ ಸಮಸ್ಯೆಗಳು ತಲೆದೋರಿದ್ದವು. ಈ ಸಮಸ್ಯೆಯನ್ನು ನಿವಾರಿಸಲಾಗಿದ್ದು, ನಿಯಂತ್ರಣ ಪ್ರಾಧಿಕಾರವು ಇಂಧನ ತುಂಬಲು ಗುರುವಾರ ಅನುಮೋದನೆ ನೀಡಿದೆ. ಕೆಲಸವು ಆರಂಭಗೊಂಡಿದೆ' ಎಂದು ಪರಮಾಣು ಇಂಧನ ಆಯೋಗದ ಮುಖ್ಯಸ್ಥ ಅಜಿತ್ ಕುಮಾರ್ ಮೊಹಾಂತಿ ತಿಳಿಸಿದ್ದಾರೆ.

ಕಳೆದ ವರ್ಷ ಇಂಧನ ತುಂಬುವ ಸಮಾರಂಭಕ್ಕೆ ಪ್ರಧಾನಿ ನರೇಂದ್ರ ಮೋದಿ ಕೂಡ ಸಾಕ್ಷಿಯಾಗಿದ್ದರು.

3 ಸೈನಿಕರಿಗೆ ಗಾಯ



ತಿನ್ಸುಕಿಯಾ (ಅಸ್ಸಾಂ) (ಪಿಟಿಐ): ಅಸ್ಸಾಂನ ತಿನ್ಸುಕಿಯಾ ಜಿಲ್ಲೆಯ ಕಾಕೋ-ಪಾಥರ್‌ನಲ್ಲಿರುವ ಸೇನಾ ನೆಲೆ ಮೇಲೆ ಉಗ್ರರು ದಾಳಿ ನಡೆಸಿದ್ದು, ಮೂವರು ಸೈನಿಕರು ಗಾಯಗೊಂಡಿದ್ದಾರೆ.

ಗುರುವಾರ ಮಧ್ಯರಾತ್ರಿ 12.30ರ ಸುಮಾರಿಗೆ ಚಲಿಸುತ್ತಿದ್ದ ವಾಹನದಲ್ಲಿದ್ದ ಉಗ್ರರು, ಸೇನಾ ನೆಲೆ ಮೇಲೆ ಸ್ವಯಂ ಚಾಲಿತ ಶಸ್ತ್ರಾಸ್ತ್ರಗಳಿಂದ ಗುಂಡಿನ ದಾಳಿ ನಡೆಸಿ, ಪರಾರಿಯಾಗಿದ್ದಾರೆ. ತಕ್ಷಣವೇ ಕಾರ್ಯನಿರತರಾದ ಸೈನಿಕರು ನಾಗರಿಕರ ಮನೆಗಳ ಮೇಲೆ ದಾಳಿ ನಡೆಯುವುದನ್ನು ತಪ್ಪಿಸಿದರು ಎಂದು ಸೇನಾ ವಕ್ತಾರರು ತಿಳಿಸಿದರು.

ಮೂವರು ಸೈನಿಕರಿಗೆ ಸಣ್ಣ ಗಾಯಗಳಾಗಿರುವುದನ್ನು ಹೊರತುಪಡಿಸಿ, ಬೇರೆ ಯಾವುದೇ ಹಾನಿಯಾಗಿಲ್ಲ. ಉಗ್ರರನ್ನು ಬಂಧಿಸಲು ಸೇನೆ ಮತ್ತು ಪೊಲೀಸರು ಜಂಟಿ ಶೋಧ ಕಾರ್ಯವನ್ನು ನಡೆಸುತ್ತಿದ್ದಾರೆ ಎಂದು ಅವರು ಹೇಳಿದರು.

ಗುಜರಾತ್: 19 ಸಚಿವರ ಪ್ರಮಾಣ

ಉಪ ಮುಖ್ಯಮಂತ್ರಿಯಾಗಿ ಹರ್ಷ ಸಾಂಘ್ವಿ ಸ್ಥಳೀಯ ಸಂಸ್ಥೆ ಚುನಾವಣೆ ಮೇಲೆ ಕಣ್ಣು

ಮುಖ್ಯಾಂಶಗಳು

- ಸಂಪುಟದ ಬಲ 26ಕ್ಕೆ ಏರಿಕೆ
- ಸಂಪುಟದಲ್ಲಿ ಮುಂದುವರಿದ ಆರು ಸಚಿವರು
- ಅಧಿಕಾರದ ಗೋಪ್ಯತೆ ಬೋಧಿಸಿದ ರಾಜ್ಯಪಾಲ

ಗಾಂಧಿನಗರ (ಪಿಟಿಐ): ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರು ಶುಕ್ರವಾರ ತಮ್ಮ ಸಂಪುಟ ವಿಸ್ತರಣೆ ಮಾಡಿದ್ದು, ಹೊಸದಾಗಿ 19 ಶಾಸಕರಿಗೆ ಸಚಿವ ಸ್ಥಾನ ನೀಡಿದ್ದಾರೆ. ಸಚಿವ ಸ್ಥಾನಕ್ಕೆ ಗುರುವಾರ ರಾಜೀನಾಮೆ ನೀಡಿದ್ದ 16 ಜನರ ಪೈಕಿ ಆರು ಮಂದಿಯನ್ನು ಸಂಪುಟದಲ್ಲಿ ಉಳಿಸಿಕೊಂಡಿದ್ದಾರೆ.

ಈ ಮೂಲಕ ಮುಖ್ಯಮಂತ್ರಿ ಸೇರಿದಂತೆ ಸಂಪುಟದ ಬಲ 26ಕ್ಕೆ ಏರಿಕೆಯಾಗಿದೆ. ರಾಜ್ಯಪಾಲ ಆಚಾರ್ಯ ದೇವವ್ರತ್ ಅವರು ಹೊಸ ಸಚಿವರಿಗೆ ಅಧಿಕಾರ ಮತ್ತು ಗೋಪ್ಯತೆಯ ಪ್ರಮಾಣ ವಚನ ಬೋಧಿಸಿದರು.

ಸಾಂಘ್ವಿಗೆ ಬಡ್ತಿ: ಗೃಹ ಖಾತೆ ರಾಜ್ಯ ಸಚಿವರಾಗಿದ್ದ ಹರ್ಷ್ ಸಾಂಘ್ವಿ ಅವರಿಗೆ ಈ ಬಾರಿ ಬಡ್ತಿ ದೊರೆತಿದ್ದು, ಉಪ ಮುಖ್ಯಮಂತ್ರಿ ಸ್ಥಾನ ಒಲಿದು ಬಂದಿದೆ. ಅವರು ಸೂರತ್ ನಗರದ ಮುಂಜಾರ ಕ್ಷೇತ್ರದ ಶಾಸಕ.

ಮುಖ್ಯಮಂತ್ರಿಯಾಗಿ ಭೂಪೇಂದ್ರ ಪಟೇಲ್ ಅವರ ನಾಲ್ಕು ವರ್ಷಗಳ ಅವಧಿಯಲ್ಲಿ ಇದೇ ಮೊದಲ ಬಾರಿಗೆ ಉಪ ಮುಖ್ಯಮಂತ್ರಿಯನ್ನು ನೇಮಕ ಮಾಡಲಾಗಿದೆ. 2021ರಲ್ಲಿ ವಿಜಯ್ ರೂಪಾನಿ ಮುಖ್ಯಮಂತ್ರಿಯಾಗಿದ್ದಾಗ, ಡಿಸಿಎಂ ಸ್ಥಾನದಲ್ಲಿ ನಿತಿನ್ ಪಟೇಲ್ ಇದ್ದರು.

ಸಾಂಘ್ವಿ ಅಲ್ಲದೆ, ಹಿಂದಿನ ಸಂಪುಟದಲ್ಲಿದ್ದ ಇತರ ಐವರು ಸಚಿವರಾಗಿ ಮುಂದುವರಿದಿದ್ದಾರೆ. ಈ ಆರು ಸಚಿವರ ರಾಜೀನಾಮೆಯನ್ನು ಮುಖ್ಯಮಂತ್ರಿ ಅನುಮೋದಿಸಲಿಲ್ಲ ಎಂದು ಮೂಲಗಳು ತಿಳಿಸಿವೆ.

ಈ ಪೈಕಿ ಕನುಭಾಯಿ ಪಟೇಲ್, ರುಶಿಕೇಶ್ ಪಟೇಲ್, ಕುನ್ವರ್ಜಿ ಬವಾಲಿಯಾ ಅವರು ಹಿಂದೆ ಸಂಪುಟ ದರ್ಜೆ ಸಚಿವರಾಗಿದ್ದರು. ಸಾಂಘ್ವಿ, ಪ್ರಫುಲ್ ಪನ್ಸೇರಿಯಾ, ಪುರುಷೋತ್ತಮ ಸೋಲಂಕಿ ಅವರು ರಾಜ್ಯ ಸಚಿವ ಸ್ಥಾನ ಹೊಂದಿದ್ದರು. ಇವರಲ್ಲಿ ಉಪ ಮುಖ್ಯ-ಮಂತ್ರಿಯಾಗಿ ಬಡ್ತಿ ಪಡೆದ ಸಾಂಘ್ವಿ ಮತ್ತು ರಾಜ್ಯ ಸಚಿವ ಸ್ಥಾನದ ಜತೆಗೆ ಸ್ವತಂತ್ರ ಸ್ಥಾನಮಾನ ಪಡೆದ ಪನ್ಸೇರಿಯಾ ಅವರೂ ಶುಕ್ರವಾರ ಪ್ರಮಾಣ ವಚನ ಸ್ವೀಕರಿಸಿದರು.

ಜಿತು ವಘಾನಿ, ಅರ್ಜುನ್ ಮೊದ್ವಾಡಿಯಾ ಮತ್ತು ಮನಿಶಾ ವಕೀಲ್ ಅವರೂ ಸೇರಿದಂತೆ 19 ಶಾಸಕರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಸ್ಥಳೀಯ ಸಂಸ್ಥೆಗಳ ಚುನಾವಣೆ ಮೇಲೆ ಕಣ್ಣು: ಗುಜರಾತ್‌ನಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಗೂ ಒಂದು ತಿಂಗಳು ಮುನ್ನ ಸಂಪುಟ ವಿಸ್ತರಣೆ ಮಾಡಲಾಗಿದೆ. ರಾಜ್ಯದಲ್ಲಿ ವಿಧಾನಸಭಾ ಚುನಾವಣೆ 2027ರಲ್ಲಿ ಎದುರಾಗಲಿದೆ. ಹೀಗಾಗಿ ಈ ಎರಡನ್ನೂ ಗಮನದಲ್ಲಿಟ್ಟುಕೊಂಡು ಸಂಪುಟ ವಿಸ್ತರಣೆ ನಡೆದಿದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಈ ತಿಂಗಳ ಆರಂಭದಲ್ಲಿ ರಾಜ್ಯ ಬಿಜೆಪಿ ಘಟಕದ ಹೊಸ ಅಧ್ಯಕ್ಷರಾಗಿ ನೇಮಕಗೊಂಡ ಜಗದೀಶ್ ವಿಶ್ವಕರ್ಮ ಅವರನ್ನೂ ಸಂಪುಟದಿಂದ ಕೈಬಿಡಲಾಗಿದೆ. ಒಬ್ಬರಿಗೆ ಒಂದು ಹುದ್ದೆ ಎಂಬುದು ಬಿಜೆಪಿ ನೀತಿ ಆಗಿರುವ ಕಾರಣ ಅವರನ್ನು ಸಂಪುಟದಲ್ಲಿ ಉಳಿಸಿಕೊಂಡಿಲ್ಲ ಎಂದು ಮೂಲಗಳು ತಿಳಿಸಿವೆ.



ಗುಜರಾತ್‌ನ ಗಾಂಧಿನಗರದಲ್ಲಿ ಶುಕ್ರವಾರ ನಡೆದ ಸಂಪುಟ ವಿಸ್ತರಣೆ ಕಾರ್ಯಕ್ರಮದಲ್ಲಿ ಕ್ರಿಕೆಟಿಗ ರವಿಂದ್ರ ಜಡೇಜ ಅವರ ಪತ್ನಿ ರಿವಾಬಾ ಜಡೇಜ ಅವರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಇದೇ ಸಂದರ್ಭದಲ್ಲಿ 19 ಶಾಸಕರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು —ಪಿಟಿಐ ಚಿತ್ರ

ಸಂಪುಟ ಸೇರಿದ ರಿವಾಬಾ ಜಡೇಜ

ಕ್ರಿಕೆಟಿಗ ರವಿಂದ್ರ ಜಡೇಜ ಅವರ ಪತ್ನಿ ರಿವಾಬಾ ಜಡೇಜ ಅವರಿಗೆ ಸಚಿವ ಸ್ಥಾನ ದೊರೆತಿರುವುದು ವಿಶೇಷವಾಗಿದೆ. ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮದಲ್ಲಿ ರವಿಂದ್ರ ಜಡೇಜ ಮತ್ತು ಪುತ್ರಿ ಭಾಗವಹಿಸಿದ್ದರು.

25 ಸಚಿವರ ಪೈಕಿ 9 ಮಂದಿಗೆ ಸಂಪುಟ ದರ್ಜೆ, ಮೂವರಿಗೆ ಸ್ವತಂತ್ರ ರಾಜ್ಯ ಸಚಿವ ಸ್ಥಾನ, 13 ಮಂದಿಗೆ ರಾಜ್ಯ ಸಚಿವ ಸ್ಥಾನ ದೊರೆತಿದೆ. ಹಿಂದಿನ ಸಂಪುಟದಲ್ಲಿ ಒಬ್ಬರು ಮಹಿಳೆಯಿದ್ದರು. ಸಂಪುಟ ವಿಸ್ತರಣೆ ಬಳಿಕ ಮಹಿಳೆಯರ ಸಂಖ್ಯೆ ಮೂರಕ್ಕೆ ಏರಿದೆ.


ಸುದ್ದಿ 2 ನಿಮಿಷ

'ಸೇನೆಯ ಹೆಗಲಿಗೆ ಹೆಗಲು ಕೊಟ್ಟು ಕೆಲಸ ಮಾಡಿದ್ದ ಪೊಲೀಸರು'

ಹೈದರಾಬಾದ್ (ಪಿಟಿಐ): ಪಾಕಿಸ್ತಾನ ಸೇನೆಯ ವಿರುದ್ಧ ಭಾರತ ನಡೆಸಿದ್ದ 'ಆಪರೇಷನ್ ಸಿಂಧೂರ'ದ ವೇಳೆ ಭದ್ರತಾ ಪಡೆಗಳ ಜೊತೆ ಪೊಲೀಸರು ಹೆಗಲಿಗೆ ಹೆಗಲು ನೀಡಿ ಕೆಲಸ ಮಾಡಿದ್ದರು' ಎಂದು ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಮಹಾ ನಿರ್ದೇಶಕ ದಲ್ಜಿತ್ ಸಿಂಗ್ ಚೌಧರಿ ತಿಳಿಸಿದ್ದಾರೆ.

ಇಲ್ಲಿನ ಸರ್ದಾರ್ ವಲ್ಲಭ್‌ಭಾಯಿ ಪಟೇಲ್ ರಾಷ್ಟ್ರೀಯ ಪೊಲೀಸ್ ಅಕಾಡೆಮಿಯಲ್ಲಿ ಶುಕ್ರವಾರ ನಡೆದ ಭಾರತೀಯ ಪೊಲೀಸ್ ಸೇವೆ (ಐಪಿಎಸ್) 77ನೇ ಬ್ಯಾಚ್‌ನ ಪ್ರೊಬೇಷನರಿ ಅಧಿಕಾರಿಗಳ ನಿರ್ಗಮನ ಪಥಸಂಚಲನದಲ್ಲಿ ಭಾಗವಹಿಸಿ ಮಾತನಾಡಿದ ಅವರು, 'ದೇಶಕ್ಕೆ ಎದುರಾಗುವ ಸವಾಲುಗಳ ಸಂದರ್ಭದಲ್ಲಿ ಪೊಲೀಸ್ ಏಕಾಂಗಿಯಾಗಿ ನಿಲ್ಲಲು ಸಾಧ್ಯವಿಲ್ಲ' ಎಂದು ಹೇಳಿದ್ದಾರೆ.

'ಆಪರೇಷನ್ ಸಿಂಧೂರದ ವೇಳೆ ಪೊಲೀಸರು ಕೂಡ ಸೇನೆಯ ಜೊತೆಗೆ ಹೆಗಲಿಗೆ ಹೆಗಲು ನೀಡಿ ಕೆಲಸ ಮಾಡಿದ್ದರು. ದೇಶದ ಭದ್ರತೆ ವಿಚಾರದಲ್ಲಿ ಇಂತಹ ಸಮನ್ವಯವು ಅಗತ್ಯವಾಗಿದೆ. ಕೇವಲ ಒಂದು ಸಂಸ್ಥೆಗಷ್ಟೇ ಇಂತಹ ಕೆಲಸ ಸೀಮಿತವಲ್ಲ, ಬದಲಾಗಿ ಜಂಟಿ ಹೊಣೆಗಾರಿಕೆಯಿಂದ ಕೆಲಸ ಮಾಡಬೇಕಿದೆ' ಎಂದು ಅವರು ತಿಳಿಸಿದ್ದಾರೆ.



'ಈಗಿನ ಕಾಲಘಟ್ಟದಲ್ಲಿ ಐಪಿಎಸ್ ಅಧಿಕಾರಿಗಳು ರಾಜ್ಯ ಹಾಗೂ ಜನರ ನಂಬಿಕೆ ಬೆಸೆಯುವ ಸೇತುವೆಯಾಗಿದ್ದಾರೆ. ಅಪರಾಧ ಪ್ರಕರಣಗಳನ್ನು ತಡೆಯುವುದರ ಜೊತೆಗೆ ಭಯೋತ್ಪಾದನೆ ನಿಗ್ರಹಕ್ಕೆ ಕ್ರಮ ಕೈಗೊಳ್ಳುವುದು, ಮಾದಕ ಪದಾರ್ಥಗಳ ಕಳ್ಳಸಾಗಣೆ ತಡೆದು ಸಾಮಾಜಿಕ ಹಾಗೂ ಆರ್ಥಿಕ ಕಾನೂನನ್ನು ಎತ್ತಿ ಹಿಡಿಯುವುದು ಐಪಿಎಸ್ ಅಧಿಕಾರಿಗಳ ಆದ್ಯ ಕರ್ತವ್ಯವಾಗಬೇಕು' ಎಂದಿದ್ದಾರೆ.

ಜನ ಸುರಾಜ್: ವಲಸಿಗರಲ್ಲಷ್ಟೆ ಜನಪ್ರಿಯ– ದೀಪಾಂಕರ್

ಪಟ್ನಾ (ಪಿಟಿಐ): 'ಪ್ರಶಾಂತ್ ಕಿಶೋರ್ ಅವರ ಜನ ಸುರಾಜ್ ಪಕ್ಷವು ರಾಜ್ಯದಲ್ಲಿ ವಾಸಿಸುವ ಜನರಿಗಿಂತಲೂ ಬಿಹಾರದ ವಲಸಿಗರಲ್ಲಿ ಹೆಚ್ಚಿನ ಜನಪ್ರಿಯತೆ ಹೊಂದಿದೆ' ಎಂದು ಸಿಪಿಐ (ಎಂಎಲ್) ಪ್ರಧಾನ ಕಾರ್ಯದರ್ಶಿ ದೀಪಾಂಕರ್ ಭಟ್ಟಾಚಾರ್ಯ ಹೇಳಿದ್ದಾರೆ.

ಪಿಟಿಐಗೆ ನೀಡಿದ ಸಂದರ್ಶನದಲ್ಲಿ, 'ಪ್ರಶಾಂತ್ ಕಿಶೋರ್ ಅವರು ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸದಿರಲು ನಿರ್ಧರಿಸಿರುವುದು ನನಗೆ ಆಶ್ಚರ್ಯ ಉಂಟುಮಾಡಿಲ್ಲ' ಎಂದು ಹೇಳಿದರು. ಜನ ಸುರಾಜ್ ಪಾರ್ಟಿಯನ್ನು 'ಬಿಜೆಪಿಯಂತೆ ಪ್ರಜಾ ಪ್ರಭುತ್ವಕ್ಕೆ ಬೆದರಿಕೆ'ಯಾಗಿ ಪರಿಗಣಿಸುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

'ದೆಹಲಿಯಂತಹ ನಗರದಲ್ಲಿ ವಾಸಿಸುವ ಬಿಹಾರದ ವಲಸೆ ಕಾರ್ಮಿಕರಲ್ಲಿ ಜನ ಸುರಾಜ್ ಪಾರ್ಟಿ ಪ್ರಮುಖವಾಗಿ ಸಂಚಲನ ಸೃಷ್ಟಿಸಿದೆ ಎಂಬುದನ್ನು ನಾನು ನಂಬುತ್ತೇನೆ. ಅಲ್ಲಿ ಅವರು (ಬಿಹಾರದ ವಲಸಿಗರು) ಅರವಿಂದ ಕೇಜ್ರಿವಾಲ್ ಮೇಲೆ ನಂಬಿಕೆ ಇಟ್ಟಿದ್ದರು ಮತ್ತು ಆಮ್ ಆದ್ಮಿ ಪಕ್ಷವು ನೀಡಿದ್ದ ಅದೇ ಭರವಸೆಯನ್ನು ಪ್ರಶಾಂತ್ ಕಿಶೋರ್ ಅವರಲ್ಲಿ ಕಂಡಿದ್ದರು' ಎಂದರು.

'ಆದರೆ, ಬಿಹಾರದಲ್ಲಿ, ಪರಿಸ್ಥಿತಿ ಭಿನ್ನವಾಗಿದೆ. ಜನ ಸುರಾಜ್ ಪಾರ್ಟಿಯು ಇಲ್ಲಿನ ಜನರಲ್ಲಿ ಅದೇ ರೀತಿಯ ಪ್ರಭಾವವನ್ನು ಹೊಂದಿಲ್ಲ. ಚುನಾವಣೆ ಸಮೀಪಿಸುತ್ತಿರುವ ಬಿಹಾರದಲ್ಲಿ ಹೋರಾಟವು ಮುಕ್ತವಾಗಿದೆ. ಪ್ರಶಾಂತ್ ಕಿಶೋರ್ ಅವರು ರಾಜ್ಯದಲ್ಲಿ ಹಲವು ತಿಂಗಳು ಪ್ರವಾಸ ಮಾಡಿದ ಕಾರಣ ವಾಸ್ತವವನ್ನು ಅರಿತುಕೊಂಡಿರ-ಬೇಕು. ಅವರು ಸ್ಪರ್ಧೆಯಿಂದ ಹೊರಗುಳಿಯಲು ನಿರ್ಧರಿಸಿರುವುದರ ಹಿಂದಿನ ಕಾರಣವೂ ಇದೇ ಇರಬಹುದು' ಎಂದರು.

ಬಿಹಾರ: ಆಮಿಷ ತಡೆಗೆ ಆಯೋಗ ಸೂಚನೆ

ನವದೆಹಲಿ (ಪಿಟಿಐ): ಬಿಹಾರ ಚುನಾವಣೆ ವೇಳೆ ಮತದಾರರನ್ನು ಓಲೈಸಲು ಮಾದಕವಸ್ತು, ಮದ್ಯ ಮತ್ತು ನಗದು ಬಳಕೆಯಾಗದಂತೆ ನೋಡಿಕೊಳ್ಳಬೇಕು ಎಂದು ಚುನಾವಣಾ ಆಯೋಗ ಶುಕ್ರವಾರ ಕಾನೂನು ಜಾರಿ ಸಂಸ್ಥೆಗಳು ಮತ್ತು ಭದ್ರತಾ ಪಡೆಗಳಿಗೆ ಸೂಚಿಸಿದೆ.



ಮತದಾರರಿಗೆ ಆಮಿಷ ಒಡ್ಡುವ ಕಾರ್ಯಗಳನ್ನು ತಡೆಗಟ್ಟುವ ಕಾರ್ಯತಂತ್ರಕ್ಕೆ ಅಂತಿಮ ರೂಪ ನೀಡುವ ಉದ್ದೇಶದಿಂದ ಆಯೋಗವು ಶುಕ್ರವಾರ ವಿವಿಧ ಕಾನೂನು ಜಾರಿ ಸಂಸ್ಥೆಗಳ ಮುಖ್ಯಸ್ಥರ ಜತೆಗೆ ಸಭೆ ನಡೆಸಿತು. ಅಕ್ರಮಗಳನ್ನು ತಡೆಗಟ್ಟಲು ತೆಗೆದುಕೊಂಡಿರುವ ಕ್ರಮಗಳ ಕುರಿತು ವಿವಿಧ ಸಂಸ್ಥೆಗಳ ಮುಖ್ಯಸ್ಥರು ಸಭೆಯಲ್ಲಿ ಮಾಹಿತಿ ನೀಡಿದರು.

ಅಭ್ಯರ್ಥಿಗಳು, ರಾಜಕೀಯ ಪಕ್ಷಗಳ ವೆಚ್ಚಗಳು ಹಾಗೂ ಗೋಪ್ಯವಾಗಿ ನಡೆಸುವ ವೆಚ್ಚಗಳ ಮೇಲೆ ನಿಗಾ ಇಡುವಂತೆ ಸೂಚಿಸಲಾಯಿತು. ಅಲ್ಲದೆ ಮತದಾರರಿಗೆ ಆಮಿಷ ಒಡ್ಡುವ ಪ್ರಯತ್ನಗಳನ್ನು ಪರಿಣಾಮಕಾರಿಯಾಗಿ ತಡೆಯಲು ತಿಳಿಸಲಾಯಿತು.

ಆರ್ಥಿಕ ಅಪರಾಧಗಳ ಕುರಿತ ಗುಪ್ತಚರ ಮಾಹಿತಿಯು ಕಾನೂನು ಜಾರಿ ಸಂಸ್ಥೆಗಳ ನಡುವೆ ಹಂಚಿಕೆಯಾಗಬೇಕು. ಅಲ್ಲದೆ ವಿವಿಧ ಸಂಸ್ಥೆಗಳ ನಡುವೆ ಸಮನ್ವಯ ಮತ್ತು ಸಹಕಾರ ಪ್ರಮುಖವಾಗಿರಬೇಕು ಎಂದು ತಿಳಿಸಲಾಯಿತು.

ಅಂತರರಾಜ್ಯ ಮತ್ತು ಅಂತರ ರಾಷ್ಟ್ರೀಯ (ನೇಪಾಳ) ಗಡಿಗಳ ಮೇಲೆ ಹದ್ದಿನ ಕಣ್ಣಿಡಬೇಕು. ವಾಹನಗಳನ್ನು ತಪಾಸಣೆಗೊಳಪಡಿಸಬೇಕು. ಅಕ್ರಮ ವಸ್ತುಗಳ ಸಾಗಣೆ, ಮಾದಕ ವಸ್ತುಗಳು, ಮದ್ಯ, ನಗದು, ನಕಲಿ ನೋಟುಗಳು ರಾಜ್ಯ ಪ್ರವೇಶಿಸುವ ಸಾಧ್ಯತೆಯಿದೆ. ಹೀಗಾಗಿ ಇವುಗಳ ಮೇಲೆ ನಿಗಾ ಇಟ್ಟು ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಸಭೆಯಲ್ಲಿ ಅಧಿಕಾರಿಗಳಿಗೆ ನಿರ್ದೇಶಿಸಲಾಯಿತು.

ಮುಕ್ತ ಮತ್ತು ನ್ಯಾಯಯುತ ಚುನಾವಣೆಗಾಗಿ ಶೂನ್ಯ ಸಹಿಷ್ಣು ನೀತಿಯನ್ನು ಖಚಿತಪಡಿಸಿಕೊಳ್ಳು-ವಂತೆ ತಿಳಿಸಲಾಯಿತು. ಬಿಹಾರದ ಮುಖ್ಯ ಕಾರ್ಯದರ್ಶಿ, ಡಿಜಿಪಿ ಹಾಗೂ ರಾಜ್ಯ ಮುಖ್ಯ ಚುನಾವಣಾ ಅಧಿಕಾರಿ ಆನ್‌ಲೈನ್ ಮೂಲಕ ಸಭೆಯಲ್ಲಿ ಭಾಗವಹಿಸಿದ್ದರು.

ಸಿಬಿಡಿಟಿ, ಸಿಬಿಐಸಿ, ಇ.ಡಿ, ಸಿಇಐಬಿ, ಎಫ್‌ಐಯು–ಐಎನ್‌ಡಿ, ಆರ್‌ಬಿಐ, ಐಬಿಎ, ಎನ್‌ಸಿಬಿ, ಸಿಐಎಸ್‌ಎಫ್, ಬಿಎಸ್‌ಎಫ್, ಸಿಆರ್‌ಪಿಎಫ್, ಎಸ್‌ಎಸ್‌ಬಿ, ಬಿಸಿಎಎಸ್, ಎಎಐ ಮತ್ತು ಇತರ ಇಲಾಖೆಗಳ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಬಿಹಾರ ವಿಧಾನಸಭೆಗೆ ನವೆಂಬರ್ 6 ಮತ್ತು 11ರಂದು ಎರಡು ಹಂತಗಳಲ್ಲಿ ಚುನಾವಣೆ ನಡೆಯಲಿದ್ದು, ನವೆಂಬರ್ 14ರಂದು ಮತ ಎಣಿಕೆ ನಡೆಯಲಿದೆ.

ಜನ ಸುರಾಜ್ ಸೇರಿದ ಆರ್‌ಜೆಡಿ ನಾಯಕ

ಬಿಹಾರ (ಪಿಟಿಐ): ಬಿಹಾರದ ಜೋಕಿಹಾಟ್ ಕ್ಷೇತ್ರದಿಂದ ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದ, ಮಾಜಿ ಸಂಸದ ಸರ್ಫರಾಜ್ ಆಲಂ ಅವರು ರಾಷ್ಟ್ರೀಯ ಜನತಾ ದಳಕ್ಕೆ (ಆರ್‌ಜೆಡಿ) ರಾಜೀನಾಮೆ ನೀಡಿ ಜನ ಸುರಾಜ್ ಪಾರ್ಟಿಗೆ ಸೇರಿದ್ದಾರೆ. ಆಲಂ ಅವರು ರಾಜ್ಯದ ಸೀಮಾಂಚಲ್ ಪ್ರದೇಶದ ಆರ್‌ಜೆಡಿ ನಾಯಕರಾಗಿದ್ದ ದಿವಂಗತ ತಸ್ಲೀಂ ಉದ್ದೀನ್ ಅವರ ಪುತ್ರ.

'ಸಂಸ್ಥಾಪಕ ಪ್ರಶಾಂತ್ ಕಿಶೋರ್ ಅವರ ದೂರದೃಷ್ಟಿ-ಯಲ್ಲಿ ಬಿಹಾರವನ್ನು ಬದಲಾಯಿಸಲು ಸಂಕಲ್ಪ ಮಾಡಿರುವ ಜನ ಸುರಾಜ್‌ಗೆ ನಾನು ಸೆಲ್ಯೂಟ್ ಮಾಡುತ್ತೇನೆ' ಎಂದು ಗುರುವಾರ ಪಕ್ಷಕ್ಕೆ ಸೇರ್ಪಡೆಯಾದ ನಂತರ ಅವರು ಹೇಳಿದ್ದಾರೆ.

ಸೀಮಾಂಚಲಕ್ಕಾಗಿ ಹೋರಾಟ ಮಾಡುವ ತಮ್ಮ ತಂದೆಯ ಪರಂಪರೆಯನ್ನು ಮುಂದುವರೆಸಲು ಪಕ್ಷವೂ ತಮಗೆ ಅನುಮತಿ ನೀಡಿದೆ ಎಂದು ಆಲಂ ಅವರು ಹೇಳಿದ್ದಾರೆ. 'ನನಗೆ ಬಹಳ ಸಮಯದಿಂದ ಉಸಿರುಗಟ್ಟಿದ ಅನುಭವವಾಗುತ್ತಿತ್ತು. ಅಲ್ಲಿ ಅದೇ ಹಳೆಯ ದಾಲ್ ಚಟ್ನಿ ಇತ್ತು' ಎಂದು ಅವರು ತಿಳಿಸಿದ್ದಾರೆ.

ಚೌಧರಿ ಶೈಕ್ಷಣಿಕ ಅರ್ಹತೆ: ವಿವಾದ



ಸಾಮ್ರಾಟ್ ಚೌಧರಿ

ಪಟ್ನಾ (ಪಿಟಿಐ): ಬಿಹಾರದ ಉಪ ಮುಖ್ಯಮಂತ್ರಿ, ಬಿಜೆಪಿ ನಾಯಕ ಸಾಮ್ರಾಟ್ ಚೌಧರಿ ಅವರ ಶೈಕ್ಷಣಿಕ ಅರ್ಹತೆ ಕುರಿತು ವಿವಾದ ಆರಂಭವಾಗಿದೆ. ಇತ್ತೀಚಿನ ದಿನಗಳಲ್ಲಿ ಈ ಬಗ್ಗೆ ಜನ ಸುರಾಜ್ ಪಕ್ಷದ ಪ್ರಶಾಂತ್ ಕಿಶೋರ್ ಹಲವು ಬಾರಿ ಹಲವು ಆರೋಪಗಳನ್ನು ಮಾಡಿದ್ದಾರೆ.

ತಾರಾಪುರ ವಿಧಾನಸಭಾ ಕ್ಷೇತ್ರದಿಂದ ಚೌಧರಿ ಅವರು ಸ್ಪರ್ಧಿಸುತ್ತಾರೆ. ನಾಮಪತ್ರದ ಜೊತೆ 23 ಪುಟಗಳ ಅಫಿಡೆವಿಟ್ ಅನ್ನೂ ಸಲ್ಲಿಸಿದ್ದಾರೆ. ಇದರಲ್ಲಿ ಚೌಧರಿ ಅವರ ಹುಟ್ಟಿದ ದಿನಾಂಕ ಮತ್ತು ಶೈಕ್ಷಣಿಕ ಮಾಹಿತಿಗಳ ಬಗ್ಗೆ ನಿರ್ದಿಷ್ಟ ಮಾಹಿತಿಗಳಿಲ್ಲ.

ಮತದಾರರ ಪಟ್ಟಿಯ ಪ್ರಕಾರ, ತಮ್ಮ ವಯಸ್ಸು 56 ಎಂದು ಅಫಿಡೆವಿಟ್‌ನಲ್ಲಿ ಹೇಳಿಕೊಂಡಿದ್ದಾರೆ. ಆದರೆ, ಇದಕ್ಕೆ ಸಂಬಂಧಿಸಿ ಯಾವುದೇ ಶಾಲಾ ದಾಖಲಾತಿಯನ್ನು ನೀಡಿಲ್ಲ.

'ಚೌಧರಿ ಅವರು 10ನೇ ತರಗತಿಯನ್ನೂ ಪೂರೈಸಿಲ್ಲ' ಎಂದು ಪ್ರಶಾಂತ್ ಕಿಶೋರ್ ಆರೋಪಿಸುತ್ತಾರೆ. ಆದರೆ, ಚೌಧರಿ ಅವರು ತಮ್ಮ ಅಫಿಡೆವಿಟ್‌ನಲ್ಲಿ ತಾವು ಕಾಮರಾಜ್ ವಿಶ್ವವಿದ್ಯಾಲಯದಿಂದ 'ಪಿಎಫ್‌ಸಿ' ಎಂಬ ಅತ್ಯುನ್ನತ ಪದವಿ ವ್ಯಾಸಂಗ ಮಾಡಿರುವುದಾಗಿ ಹೇಳಿಕೊಂಡಿದ್ದಾರೆ. ಜೊತೆಗೆ ತಮಗೆ ಗೌರವ ಡಿ.ಲಿಟ್ ಸಂದಿರುವುದಾಗಿಯೂ ಹೇಳಿಕೊಂಡಿದ್ದಾರೆ.

ಪ್ರಶಾಂತ್ ಅವರ ಆರೋಪಗಳ ಕುರಿತು ಈ ಹಿಂದೆಯೇ ಚೌಧರಿ ಅವರ ಪ್ರತಿಕ್ರಿಯೆಯನ್ನು ಪತ್ರಕರ್ತರು ಕೇಳಿದ್ದರು. ಆ ವೇಳೆ 'ಪಿಎಫ್‌ಸಿ' ಅಂದರೆ ಏನು ಎನ್ನುವುದನ್ನು ವಿವರಿಸಲು ಚೌಧರಿ ಅವರು ತಡಕಾಡಿರುವ ವಿಡಿಯೊಗಳು ಜಾಲತಾಣಗಳಲ್ಲಿ ಹರಿದಾಡಿವೆ. ಚೌಧರಿ ಅವರ ಬಳಿ ಚರಾಸ್ತಿ ಮತ್ತು ಸ್ಥಿರಾಸ್ತಿ ಮೌಲ್ಯ ಸೇರಿ ₹10 ಕೋಟಿಯಷ್ಟಿದೆ.

'ನಿತೀಶ್ ಕುಮಾರ್ ಕಾಕ್‌ಟೇಲ್'

ಪಟ್ನಾ:'ಬಿಜೆಪಿಯೊಂದಿಗೆ ಕೈ ಜೋಡಿಸಿದರೂ ಅಪರಾಧ, ಭ್ರಷ್ಟಾಚಾರ ಮತ್ತು ಕೋಮುವಾದದ (ಕ್ರೈಂ, ಕರಪ್ಷನ್, ಕಮ್ಯುನಲೈಸೇಷನ್– ಮೂರು 'ಸಿ') ವಿಚಾರಗಳಲ್ಲಿ ಯಾವುದೇ ರಾಜಿ ಇಲ್ಲ ಎಂದು ಮುಖ್ಯಮಂತ್ರಿ ನಿತೀಶ್ ಕುಮಾರ್ ಹೇಳಿದ್ದರು. ಆದರೆ, ಈಗ ಅವರು ಜನರಿಗೆ ಈ ಮೂರು 'ಸಿ'ಗಳನ್ನು ಮಿಶ್ರ ಮಾಡಿ, 'ಕಾಕ್‌ಟೇಲ್' ಮಾಡಿ ಕುಡಿಸುತ್ತಿದ್ದಾರೆ' ಎಂದು ಸಿಪಿಐ (ಎಂಎಲ್) ಪ್ರಧಾನ ಕಾರ್ಯದರ್ಶಿ ದೀಪಾಂಕರ್ ಟೀಕಿಸಿದರು.

'ಆರ್‌ಜೆಡಿ ಕಾಲದಲ್ಲಿ ಇದ್ದ ಜಂಗಲ್ ರಾಜ್ ಅನ್ನು ಅಂತ್ಯಗೊಳಿಸಿದ್ದೇನೆ ಎಂದು ನಿತೀಶ್ ಹೇಳುತ್ತಾರೆ. ಆದರೆ, ಅಪರಾಧಿಗಳು, ರಾಜಕಾರಣಿಗಳು ಮತ್ತು ಪೊಲೀಸರ ಜಾಲದಲ್ಲಿ ರಾಜ್ಯ ಸಿಲುಕಿದೆ' ಎಂದು ಆರೋಪಿಸಿದರು.

ಸಂಕ್ಷಿಪ್ತ ಸುದ್ದಿ

ಬ್ರಹ್ಮೋಸ್: ಹಸಿರು ನಿಶಾನೆ ಇಂದು



ರಾಜನಾಥ್ ಸಿಂಗ್

ಲಖನೌ (ಪಿಟಿಐ): ಲಖನೌದ ಸರೋಜಿನಿ ನಗರದಲ್ಲಿರುವ ಬ್ರಹ್ಮೋಸ್ ಏರೋಸ್ಪೇಸ್ ಘಟಕದಲ್ಲಿ ಮೊದಲ ಬ್ಯಾಚ್‌ನ ಬ್ರಹ್ಮೋಸ್ ಕ್ಷಿಪಣಿಗಳ ತಯಾರಿಕೆಯು ಯಶಸ್ವಿಯಾಗಿ ಪೂರ್ಣಗೊಂಡಿದೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹಾಗೂ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಇವುಗಳಿಗೆ ಶನಿವಾರ ಹಸಿರು ನಿಶಾನೆ ತೋರಲಿದ್ದಾರೆ.

ಇದೇ ಸಂದರ್ಭ ಬೂಸ್ಟರ್ ಘಟಕಕ್ಕೂ ಚಾಲನೆ ನೀಡಲಿದ್ದು, ಬೂಸ್ಟರ್ ಡಾಕಿಂಗ್ ಪ್ರಕ್ರಿಯೆಯ ಪ್ರದರ್ಶನಕ್ಕೂ ಸಾಕ್ಷಿಯಾಗಲಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

'ಉತ್ತರ ಪ್ರದೇಶ ರಕ್ಷಣಾ ಕೈಗಾರಿಕಾ ಕಾರಿಡಾರ್‌ನ (ಯುಪಿಡಿಐಸಿ) ಮಹತ್ವದ ಮೈಲಿಗಲ್ಲಾಗಿರುವ ಇದು, ರಕ್ಷಣಾ ಉತ್ಪನ್ನಗಳಲ್ಲಿ ಸ್ವಾವಲಂಬನೆ ಸಾಧಿಸುವ ದೇಶದ ಸಂಕಲ್ಪಕ್ಕೆ ನವಚೈತನ್ಯವನ್ನು ತುಂಬುತ್ತದೆ' ಎಂದಿದೆ.

ಬ್ರಹ್ಮೋಸ್ ಸೂಪರ್‌ಸಾನಿಕ್ ಕ್ಷಿಪಣಿಗಳ ತಯಾರಕರಾದ ಬ್ರಹ್ಮೋಸ್ ಏರೋಸ್ಪೇಸ್, ಲಖನೌದಲ್ಲಿನ ತನ್ನ ಘಟಕದಲ್ಲಿ ಮೊದಲ ಬ್ಯಾಚ್‌ನ ಕ್ಷಿಪಣಿಗಳನ್ನು ಯಶಸ್ವಿಯಾಗಿ ಉತ್ಪಾದಿಸಿದೆ. ಈ ಅತ್ಯಾಧುನಿಕ ಘಟಕವು ಸಕಲ ಸೌಲಭ್ಯಗಳನ್ನು ಒಳಗೊಂಡಿದ್ದು, 2025ರ ಮೇ 11ರಂದು ಆರಂಭಗೊಂಡಿತ್ತು.

ಕುರ್ಮಿಗಳಿಗೆ ಎಸ್‌ಟಿ ಸ್ಥಾನಮಾನ ವಿರೋಧಿಸಿ ಪ್ರತಿಭಟನಾ ರ‍್ಯಾಲಿ

ರಾಂಚಿ (ಪಿಟಿಐ): ಪರಿಶಿಷ್ಟ ಪಂಗಡದ (ಎಸ್‌ಟಿ) ಸ್ಥಾನಮಾನಕ್ಕಾಗಿ ಆಗ್ರಹಿಸುತ್ತಿರುವ ಕುರ್ಮಿ ಸಮುದಾಯದ ಬೇಡಿಕೆಯನ್ನು ವಿರೋಧಿಸಿ ಬುಡಕಟ್ಟು ಸಮುದಾಯಗಳ ಸಾವಿರಾರು ಮಂದಿ ಶುಕ್ರವಾರ ಪ್ರತಿಭಟನಾ ರ‍್ಯಾಲಿ ನಡೆಸಿದರು.

'ಆದಿವಾಸಿ ಬಚಾವೊ ಮೋರ್ಚಾ' ಬ್ಯಾನರ್‌ನಡಿ ಆಯೋಜಿಸಿದ್ದ 'ಆದಿವಾಸಿ ಹೂಂಕಾರ್ ಮಹಾರ‍್ಯಾಲಿ'ಯು ಧುರ್ವಾದ ಪ್ರಭಾತ್ ತಾರಾ ಮೈದಾನದಲ್ಲಿ ನಡೆಯಿತು. ರಾಜ್ಯದ ವಿವಿಧೆಡೆಗಳಿಂದ ಬಂದಿದ್ದ ಬುಡಕಟ್ಟಿನ 33 ಸಮುದಾಯಗಳು ರ‍್ಯಾಲಿಯಲ್ಲಿ ಪಾಲ್ಗೊಂಡಿದ್ದವು. 'ರ‍್ಯಾಲಿಯಲ್ಲಿ ಬುಡಕಟ್ಟು ಸಮುದಾಯವು ಒಗ್ಗಟ್ಟು ಪ್ರದರ್ಶಿಸಿದೆ. ಕುರ್ಮಿ ಸಮುದಾಯದ ಮನಸ್ಥಿತಿ ಬದಲಾಗುವವರೆಗೂ ಇಂತಹ ಚಳವಳಿಗಳು ಮುಂದುವರಿಯುತ್ತವೆ' ಎಂದು ಮಾಜಿ ಸಚಿವೆ, ಆದಿವಾಸಿ ಬಚಾವೊ ಮೋರ್ಚಾ ಸಂಚಾಲಕಿ ಗೀತಾಶ್ರೀ ಒರಾಯನ್ ತಿಳಿಸಿದರು.

'ಜಾರ್ಖಂಡ್‌ನ ಕುರ್ಮಿಗಳು ಎಂದಿಗೂ ಬುಡಕಟ್ಟು ಜನಾಂಗವಾಗಲು ಸಾಧ್ಯವಿಲ್ಲ. ಅವರು ಎಂದಿಗೂ ಬುಡಕಟ್ಟು ಸಮುದಾಯಕ್ಕೆ ಸೇರಿರಲಿಲ್ಲ ಎಂಬುದನ್ನು ಐತಿಹಾಸಿಕ ದಾಖಲೆಗಳು ಸಾಬೀತುಪಡಿಸುತ್ತವೆ. ಅವರ ಪೂರ್ವಜರು ಸತ್ಯವನ್ನು ಕಲಿತ ನಂತರ ಬುಡಕಟ್ಟು ಜನರಿಂದ ದೂರ ಸರಿದರು' ಎಂದು ಹೇಳಿದರು.

ಗರ್ಗ್ ಸಾವು: ಸತ್ಯ ಹೊರಬರಲಿ–ರಾಹುಲ್

ಗುವಾಹಟಿ (ಪಿಟಿಐ): ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಗಾಯಕ ಜುಬಿನ್ ಗರ್ಗ್ ಅವರ ಕುಟುಂಬಸ್ಥರನ್ನು ಶುಕ್ರವಾರ ಭೇಟಿಯಾಗಿ ಸಾಂತ್ವನ ಹೇಳಿದರು.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಿಂಗಪುರದಲ್ಲಿ ಗರ್ಗ್ ಅವರಿಗೆ ಏನಾಯಿತೆಂದು ತಿಳಿದುಕೊಳ್ಳುವ ಹಕ್ಕು ಅವರ ಕುಟುಂಬಸ್ಥರು ಹಾಗೂ ಅಸ್ಸಾಂನ ಜನರಿಗಿದೆ' ಎಂದರು.

'ಈ ಪ್ರಕರಣದಲ್ಲಿ ಸತ್ಯ ಆದಷ್ಟು ಬೇಗ ಹೊರಬರುವುದು ಉತ್ತಮ. ಏಕೆಂದರೆ, ಆ ಕುಟುಂಬಕ್ಕೆ ತೀವ್ರ ನೋವಿದೆ. ಸಿಂಗಪುರದಲ್ಲಿ ನಿಜವಾಗಿಯೂ ಆಗಿದ್ದೇನು? ಅವರ ಸಾವಿಗೆ ಕಾರಣವೇನು ಎಂಬುದರ ಕುರಿತು ಸಂಪೂರ್ಣ ತನಿಖೆಯನ್ನು ತ್ವರಿತ ಹಾಗೂ ಪಾರದರ್ಶಕವಾಗಿ ನಡೆಸಬೇಕು. ಅವರ ಸಾವಿಗೆ ನ್ಯಾಯ ದೊರಕಿಸಬೇಕು' ಎಂದು ಆಗ್ರಹಿಸಿದರು.

'ನಾನು ಗರ್ಗ್ ಅವರ ಕುಟುಂಬದ-ವರೊಂದಿಗೆ ಮಾತನಾಡಿದೆ. ಘಟನೆಗೆ ಅಸಲಿ ಕಾರಣ ಹೊರಬರಬೇಕೆಂದು ಆ ಕುಟುಂಬ ಬಯಸುತ್ತಿದೆ' ಎಂದು ಹೇಳಿದರು. ಇದಕ್ಕೂ ಮುನ್ನ, ರಾಹುಲ್ ಗಾಂಧಿ ಅವರು ಸೋನಾಪುರದಲ್ಲಿರುವ ಗರ್ಗ್ ಅವರ ಸಮಾಧಿಗೆ ಪುಷ್ಪನಮನ ಸಲ್ಲಿಸಿದ್ದರು.

'ತನಿಖೆಗೆ 3 ತಿಂಗಳು ಅವಶ್ಯ'

ಸಿಂಗಪುರ (ಪಿಟಿಐ): ಗಾಯಕ ಜುಬೀನ್ ಗರ್ಗ್ ಅವರ ಸಾವಿನ ಕುರಿತ ತನಿಖೆ ಪೂರ್ಣಗೊಳಿಸಲು ಮೂರು ತಿಂಗಳು ಬೇಕಾಗಬಹುದು ಎಂದು ಸಿಂಗಪುರ ಪೊಲೀಸ್ ಪಡೆ (ಎಸ್‌ಪಿಎಫ್) ಹೇಳಿದೆ.

ತನಿಖೆ ಬಳಿಕ ವರದಿಯನ್ನು ಸ್ಟೇಟ್ ಕೊರೋನರ್‌ಗೆ (ಹಠಾತ್ ಸಾವಿನ ಪ್ರಕರಣಗಳ ತನಿಖೆ ನಡೆಸುವ ನ್ಯಾಯಾಂಗ ಅಥವಾ ಸರ್ಕಾರಿ ಅಧಿಕಾರಿ) ಸಲ್ಲಿಸಲಾಗುವುದು ಎಂದು ತಿಳಿಸಿದೆ. 'ಈ ಪ್ರಕರಣದ ಸಮಗ್ರ ಮತ್ತು ವೃತ್ತಿಪರ ತನಿಖೆಗೆ ಎಸ್‌ಪಿಎಫ್ ಬದ್ಧವಾಗಿದೆ' ಎಂದು ಅದು ತಿಳಿಸಿದೆ.

ಗರ್ಗ್ ಅವರ ಮರಣೋತ್ತರ ಪರೀಕ್ಷಾ ವರದಿ ಮತ್ತು ಸಾವಿನ ಕುರಿತ ಪ್ರಾಥಮಿಕ ತನಿಖಾ ಅಂಶಗಳನ್ನು ಸಿಂಗಪುರ ಪೊಲೀಸ್ ಪಡೆಯು ಭಾರತದ ಹೈಕಮಿಷನ್ ಜೊತೆ ಹಂಚಿಕೊಂಡಿದೆ.

'ಸಿಬಿಐ ತನಿಖೆಗೆ ಆದೇಶಿಸುವುದು ಪ್ರವೃತ್ತಿ ಆಗಬಾರದು'

ನವದೆಹಲಿ (ಪಿಟಿಐ): ಸಾಂವಿಧಾನಿಕ ನ್ಯಾಯಾಲಯಗಳು ಪ್ರಕರಣಗಳನ್ನು ಸಿಬಿಐ ತನಿಖೆಗೆ ವಹಿಸುವುದನ್ನು ತನ್ನ ಪ್ರವೃತ್ತಿಯಾಗಿಸಿಕೊಳ್ಳಬಾರದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಉತ್ತರ ಪ್ರದೇಶ ವಿಧಾನ ಪರಿಷತ್‌ನ ಸಿಬ್ಬಂದಿ ನೇಮಕಾತಿ ಪ್ರಕ್ರಿಯೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಬಗ್ಗೆ ಸಿಬಿಐ ತನಿಖೆಗೆ ನಿರ್ದೇಶಿಸಿದ ಅಲಹಾಬಾದ್ ಹೈಕೋರ್ಟ್‌ನ ಆದೇಶವನ್ನು ರದ್ದುಗೊಳಿಸುವಾಗ ನ್ಯಾಯಮೂರ್ತಿಗಳಾದ ಜೆ.ಕೆ.ಮಾಹೇಶ್ವರಿ ಮತ್ತು ವಿಜಯ್ ಬಿಷ್ಣೋಯಿ ಅವರ ಪೀಠವು ಈ ಅಭಿಪ್ರಾಯ ವ್ಯಕ್ತಪಡಿಸಿತು.

ಸಿಬಿಐ ತನಿಖೆಗೆ ನಿರ್ದೇಶಿಸುವುದರ ಕುರಿತ ತನ್ನ ಅಧಿಕಾರವನ್ನು ಮಿತವಾಗಿ, ಎಚ್ಚರಿಕೆಯಿಂದ ಮತ್ತು ಅಪರೂಪದ ಸಂದರ್ಭಗಳಲ್ಲಿ ಮಾತ್ರ ಚಲಾಯಿಸಬೇಕು ಎಂದು ಪೀಠ ಹೇಳಿದೆ.

'ಕಕ್ಷಿದಾರರು ರಾಜ್ಯ ಪೊಲೀಸರ ಮೇಲೆ ವಿಶ್ವಾಸದ ಕೊರತೆ ಹೊಂದಿದ್ದಾರೆ ಅಥವಾ ಅವರ ವಿರುದ್ಧ ಆಪಾದನೆ ಹೊರಿಸಿದ್ದಾರೆ ಎಂಬ ಕಾರಣಕ್ಕಾಗಿ ತನಿಖೆಯನ್ನು ಸಿಬಿಐಗೆ ವಹಿಸುವುದನ್ನು ಪ್ರವೃತ್ತಿ-ಯಾಗಿಸಿಕೊಳ್ಳಬಾರದು ಎಂದು ಈ ನ್ಯಾಯಾಲಯವು ನಿರಂತರವಾಗಿ ಎಚ್ಚರಿಸಿದೆ' ಎಂದಿತು.

'ಸಾಂವಿಧಾನಿಕ ನ್ಯಾಯಾಲಯವು ಸಿಬಿಐ ತನಿಖೆ ನಡೆಸುವಂತೆ ನಿರ್ದೇಶನ ನೀಡುವುದನ್ನು ಕೊನೆಯ ಆಯ್ಕೆಯಾಗಿ ಪರಿಗಣಿಸಬೇಕು. ರಾಜ್ಯದ ಉನ್ನತ ಅಧಿಕಾರಿಗಳು ಅಥವಾ ರಾಜಕೀಯವಾಗಿ ಪ್ರಭಾವ ಹೊಂದಿರುವ ವ್ಯಕ್ತಿಗಳು ತನಿಖೆಯ ಮೇಲೆ ಹಸ್ತಕ್ಷೇಪ ನಡೆಸುತ್ತಿದ್ದಾರೆ ಎಂಬುದು ಮನವರಿಕೆಯಾದಾಗ ಅಥವಾ ಸ್ಥಳೀಯ ಪೊಲೀಸರು ನಿಷ್ಪಕ್ಷಪಾತ ತನಿಖೆ ನಡೆಸುವ ಬಗ್ಗೆ ಅನುಮಾನ ಮೂಡಿದ ಸಂದರ್ಭಗಳಲ್ಲಿ ಮಾತ್ರ ಸಿಬಿಐಗೆ ವಹಿಸುವುದನ್ನು ಪರಿಗಣಿಸಬಹುದು' ಎಂದು ಹೇಳಿತು.

ಮಹತ್ವದ ತೀರ್ಪಿನಲ್ಲಿ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ನಿರ್ದೇಶನ

ಲಿಂಗತ್ವ ಅಲ್ಪಸಂಖ್ಯಾತರಿಗೆ ನೀತಿ ರೂಪಿಸಿ

ನವದೆಹಲಿ (ಪಿಟಿಐ): ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಗೆ 2019ರಲ್ಲಿ ಕಾನೂನು ಜಾರಿಯಾದರೂ ಆ ಸಮುದಾಯದವರು ಎದುರಿಸು-ತ್ತಿರುವ ತಾರತಮ್ಯದ ಬಗ್ಗೆ ಸುಪ್ರೀಂ ಕೋರ್ಟ್ ತೀವ್ರ ಕಳವಳ ವ್ಯಕ್ತಪಡಿಸಿದೆ.

ಶುಕ್ರವಾರ ಪ್ರಕಟಿಸಿದ ಮಹತ್ವದ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್, ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದವರ ಸಮಸ್ಯೆಗಳನ್ನು ಬಗೆಹರಿಸಲು ಹೊಸ ನೀತಿಯನ್ನು ಜಾರಿಗೆ ತರುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿತು.

ನ್ಯಾಯಮೂರ್ತಿಗಳಾದ ಜೆ.ಬಿ ಪಾರ್ದೀವಾಲಾ ಮತ್ತು ಆರ್. ಮಹಾದೇವನ್ ಅವರ ಪೀಠವು, '2019ರ ಲಿಂಗತ್ವ ಅಲ್ಪಸಂಖ್ಯಾತ ವ್ಯಕ್ತಿಗಳ (ಹಕ್ಕುಗಳ ರಕ್ಷಣೆ) ಕಾಯ್ದೆ' ಮತ್ತು ಅದಕ್ಕೆ ಸಂಬಂಧಿಸಿದ ನಿಯಮಗಳು ಕಡತಗಳಲ್ಲಿ ಮಾತ್ರ ಉಳಿದಿವೆ' ಎಂದು ಹೇಳಿತು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾಯ್ದೆ ಜಾರಿ ಬಗ್ಗೆ 'ನಿರಾ-ಸಕ್ತಿ' ತೋರಿವೆ ಎಂದು ಅಸಮಾಧಾನ ವ್ಯಕ್ತಪಡಿಸಿತು.

ಲಿಂಗತ್ವ ಅಲ್ಪಸಂಖ್ಯಾತರು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ದೆಹಲಿ ಹೈಕೋರ್ಟ್‌ನ ಮಾಜಿ ನ್ಯಾಯಮೂರ್ತಿ ಆಶಾ ಮೆನನ್ ನೇತೃತ್ವದ ಸಲಹಾ ಸಮಿತಿಯನ್ನು ಸುಪ್ರೀಂ ಕೋರ್ಟ್ ರಚಿಸಿತು.

ಈ ತೀರ್ಪು ಹೊರಬಂದ ದಿನಾಂಕದಿಂದ ಆರು ತಿಂಗಳ ಒಳಗಾಗಿ ವರದಿ ಅಥವಾ ಕರಡು ನೀತಿಯನ್ನು ಸಿದ್ಧಪಡಿಸುವಂತೆ ಪೀಠವು ಸಮಿತಿಗೆ ಸೂಚಿಸಿತು. ಸಮಿತಿಯು ವರದಿ ಸಲ್ಲಿಸಿದ ಮೂರು ತಿಂಗಳ ಒಳಗಾಗಿ ತನ್ನದೇ ಆದ 'ಸಮಾನ ಅವಕಾಶ ನೀತಿ'ಯನ್ನು ಜಾರಿಗೆ ತರುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿತು.

'ಲಿಂಗತ್ವ ಅಲ್ಪಸಂಖ್ಯಾತರು ತಾರತಮ್ಯವನ್ನು ಎದುರಿಸುತ್ತಲೇ ಇದ್ದಾರೆ. ಆರೋಗ್ಯ ರಕ್ಷಣೆ, ಆರ್ಥಿಕ ಅವಕಾಶಗಳು ಮತ್ತು ಶೈಕ್ಷಣಿಕ ನೀತಿಯಿಂದ ಹೊರಗೆ ಇಟ್ಟಿರುವುದು ಅವರ ಸಂಕಷ್ಟ ಹೆಚ್ಚಲು ಕಾರಣವಾಗಿದೆ' ಎಂದು ಹೇಳಿತು.

ಉದ್ಯೋಗದಲ್ಲಿ ಎದುರಿಸಿದ ತಾರತಮ್ಯ ಮತ್ತು ಅವಮಾನದಿಂದ ನೊಂದ ಲಿಂಗತ್ವ ಅಲ್ಪಸಂಖ್ಯಾತರೊಬ್ಬರು ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಈ ತೀರ್ಪು ನೀಡಿದೆ. ಉತ್ತರ ಪ್ರದೇಶ ಮತ್ತು ಗುಜರಾತ್‌ನ ಎರಡು ಖಾಸಗಿ ಶಾಲೆಗಳಿಂದ ತಮ್ಮನ್ನು ವಜಾಗೊಳಿಸ-ಲಾಯಿತು ಎಂದು ಅವರು ಅರ್ಜಿಯಲ್ಲಿ ತಿಳಿಸಿದ್ದರು.

ವಿಧವೆಯ ಪಿತ್ರಾರ್ಜಿತ ಆಸ್ತಿ ಹಕ್ಕು ಎತ್ತಿಹಿಡಿದ 'ಸುಪ್ರೀಂ'



'ಆಸ್ತಿಯನ್ನು ಮಾರಾಟ ಮಾಡುವ ಒಪ್ಪಂದವು ಮಾಲೀಕತ್ವದ ಹಕ್ಕುಗಳನ್ನು ವರ್ಗಾಯಿಸುವು-ದಿಲ್ಲ' ಎಂದು ಹೇಳಿರುವ ಸುಪ್ರೀಂ ಕೋರ್ಟ್, 'ಮೃತ ವ್ಯಕ್ತಿಗೆ ಸೇರಿದ ಎಲ್ಲಾ ಸ್ವತ್ತುಗಳು ಮುಸ್ಲಿಂ ಕಾನೂನಿನ ಪ್ರಕಾರ ಹಂಚಬೇಕಾದ ಪಿತ್ರಾರ್ಜಿತ ಆಸ್ತಿಯ ಭಾಗವಾಗಿರುತ್ತವೆ' ಎಂದು ತೀರ್ಪು ನೀಡಿದೆ.

ಬಾಂಬೆ ಹೈಕೋರ್ಟ್ ತೀರ್ಪಿನ ವಿರುದ್ಧ ಜೊಹರಾಬಿ ಎಂಬ ಮಹಿಳೆ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಈ ತೀರ್ಪು ನೀಡಿದೆ. ಮೃತಪಟ್ಟ ಚಾಂದ್ ಖಾನ್ ಅವರಿಗೆ ಸೇರಿದ ಆಸ್ತಿಗಳಿಗೆ ಸಂಬಂಧಿಸಿದ ಕೌಟುಂಬಿಕ ವಿವಾದ ಇದಾಗಿದೆ. 'ಚಾಂದ್ ಖಾನ್ ಅವರ ಆಸ್ತಿಯು ಮುಸ್ಲಿಂ ಕಾನೂನಿನಡಿ ಪಿತ್ರಾರ್ಜಿತ ಆಸ್ತಿಯಾಗಿದೆ. ಆಸ್ತಿಯ ಮುಕ್ಕಾಲು ಭಾಗ ತಮಗೆ ಸೇರಬೇಕು' ಎಂಬುದು ವಿಧವೆ ಜೊಹರಾಬಿ ಅವರ ವಾದವಾಗಿದೆ.

ಆದರೆ, ಜೊಹರಾಬಿ ಅವರ ವಾದವನ್ನು ಚಾಂದ್ ಖಾನ್ ಅವರ ಸಹೋದರ ಇಮಾಮ್ ಖಾನ್ ಪ್ರಶ್ನಿಸಿದರು. 'ಚಾಂದ್ ಖಾನ್ ಅವರ ಜೀವಿತಾವಧಿಯಲ್ಲಿ ಆಸ್ತಿಗಳ ಮಾರಾಟದ ಒಪ್ಪಂದದ ಮೂಲಕ ಮೂರನೇ ವ್ಯಕ್ತಿಗೆ ವರ್ಗಾಯಿಸಲಾಗಿದೆ' ಎಂಬ ವಾದವನ್ನು ಇಮಾಮ್ ಮುಂದಿಟ್ಟರು.

'ಆಸ್ತಿಯನ್ನು ಮಾರಾಟ ಮಾಡುವ ಒಪ್ಪಂದವು ಮಾಲೀಕತ್ವದ ಹಕ್ಕುಗಳನ್ನು ವರ್ಗಾಯಿಸುವುದಿಲ್ಲ ಅಥವಾ ನಿರ್ದಿಷ್ಟ ಆಸ್ತಿಯನ್ನು ಖರೀದಿಸಲು ಮುಂದಾ-ಗಿರುವವರಿಗೂ ಆ ಆಸ್ತಿಯ ಮೇಲೆ ಯಾವುದೇ ಅಧಿಕಾರ ನೀಡುವುದಿಲ್ಲ' ಎಂದು ಪೀಠ ಹೇಳಿತು.

ಮಹಿಳೆ ಮೇಲೆ ಹಲ್ಲೆ ● ಜೈಲಿನಿಂದ ಹೊರಬಂದು ಕೃತ್ಯ

ಸರಗಳವು: ಇಬ್ಬರು ಆರೋಪಿಗಳ ಸೆರೆ

ಪ್ರಜಾವಾಣಿ ವಾರ್ತೆ



ಯೋಗಾನಂದ, ಪ್ರವೀಣ್

ಬೆಂಗಳೂರು: ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಮಹಿಳೆಯರ ಮೇಲೆ ಮಚ್ಚಿನಿಂದ ಹಲ್ಲೆ ಮಾಡಿ, ಚಿನ್ನದ ಸರಗಳನ್ನು ಕಿತ್ತುಕೊಂಡು ಪರಾರಿಯಾಗಿದ್ದ ಇಬ್ಬರು ಕಳ್ಳರನ್ನು ಗಿರಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಗೊಲ್ಲರಹಳ್ಳಿ ನಿವಾಸಿ ಯೋಗಾನಂದ ಹಾಗೂ ಆತನ ಸಹಚರ ಪ್ರವೀಣ್ ಎಂಬುವರನ್ನು ಬಂಧಿಸಿ, 80 ಗ್ರಾಂ ಚಿನ್ನಾಭರಣವನ್ನು ವಶಕ್ಕೆ ಪಡೆಯಲಾಗಿದೆ.

ಸೆಪ್ಟೆಂಬರ್ 13ರಂದು ದೂರುದಾರ ಮಹಿಳೆ ಉಷಾ ಹಾಗೂ ಸ್ನೇಹಿತೆ ವರಲಕ್ಷ್ಮಿ ಅವರು ಗಣೇಶ ಹಬ್ಬದ ನಿಮಿತ್ತ ಆಯೋಜಿಸಿದ್ದ ರಸಮಂಜರಿ ಕಾರ್ಯಕ್ರಮ ಮುಗಿಸಿ ಮನೆಗೆ ವಾಪಸ್ ಆಗುವಾಗ ಬೈಕ್‌ನಲ್ಲಿ ಬಂದ ಆರೋಪಿಗಳು ಮಚ್ಚು ತೋರಿಸಿದ್ದಾರೆ. ಗಾಬರಿಗೊಂಡ ಉಷಾ ಸರ ನೀಡಿದ್ದರು. ಪ್ರತಿರೋಧ ತೋರಿಸಿದ ವರಲಕ್ಷ್ಮಿಗೆ ಮಚ್ಚಿನಿಂದ ಹಲ್ಲೆ ನಡೆಸಿದಾಗ ಕೈ ಬೆರಳು ತುಂಡಾಗಿತ್ತು.

ಅದೇ ದಿನ ಕುಮಾರಸ್ವಾಮಿ ಲೇಔಟ್ ಹಾಗೂ ಕೋಣನಕುಂಟೆ ಠಾಣಾ ವ್ಯಾಪ್ತಿಯಲ್ಲಿ ಸರಗಳ್ಳತನ ಮಾಡಿದ್ದರು. ಪ್ರಕರಣ ದಾಖಲಿಸಿ ತನಿಖೆ ನಡೆಸಿ ಇಬ್ಬರು ಆರೋಪಿಗಳನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ನಗರದ ಗೊಲ್ಲರಹಳ್ಳಿಯಲ್ಲಿ ವಾಸವಾಗಿದ್ದ ಪ್ರಮುಖ ಆರೋಪಿ ಯೋಗಾನಂದ ಮೂಲತಃ ಮದ್ದೂರಿನ ಮಾರಸಿಂಗಹಳ್ಳಿ ನಿವಾಸಿ. 2010ರಿಂದ ಕೊಲೆ, ದರೋಡೆ ಹಾಗೂ ಸರಗಳ್ಳತನ ಸೇರಿ 25 ಪ್ರಕರಣಗಳಲ್ಲಿ ಭಾಗಿಯಾಗಿ, ಹಲವು ಬಾರಿ ಜೈಲಿಗೆ ಹೋಗಿ ಬಂದಿದ್ದ. ಪ್ರಕರಣವೊಂದರಲ್ಲಿ ಬಂಧಿತನಾಗಿ ಮೂರು ತಿಂಗಳ ಹಿಂದೆ ಜಾಮೀನಿನ ಮೇಲೆ ಹೊರಬಂದು ಮತ್ತೆ ಸರಗಳ್ಳತನ ಕೃತ್ಯಗಳಲ್ಲಿ ತೊಡಗಿಸಿಕೊಂಡಿದ್ದ.

ಕದ್ದ ಚಿನ್ನಾಭರಣಗಳನ್ನು ಮಾರಾಟ ಮಾಡಿ ಬಂದ ಹಣದಿಂದ ಮೋಜಿನ ಜೀವನ ನಡೆಸುತ್ತಿದ್ದರು. ಸೆಪ್ಟೆಂಬರ್ 13ರಂದು ಕೃತ್ಯವೆಸಗಿದ ಬಳಿಕ ಗೋವಾ, ಪುದುಚೇರಿ ಸೇರಿದಂತೆ ವಿವಿಧ ಕಡೆಗಳಲ್ಲಿ ಓಡಾಡಿ ಹಣ ಖಾಲಿಯಾದ ಬಳಿಕ ಊರಿಗೆ ವಾಪಸ್ ಆಗಿದ್ದರು. ಆರೋಪಿಗಾಗಿ ಹುಡುಕಾಟ ನಡೆಸಿದ್ದ ಪೊಲೀಸರು ತಕ್ಷಣ ಬಂಧಿಸಿದ್ದಾರೆ.

ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಬಿ.ಜಗಲಾಸರ್, 'ಮಹಿಳೆಯರ ಮೇಲೆ ಮಚ್ಚಿನಿಂದ ಹಲ್ಲೆ ಮಾಡಿ ಸರಗಳ್ಳತನ ಮಾಡಿದ್ದರು. ಈ ಸಂಬಂಧ ಪ್ರಕರಣ ದಾಖಲಿಸಿ ಇಬ್ಬರನ್ನು ಬಂಧಿಸಲಾಗಿದೆ' ಎಂದರು.

ವಿದ್ಯಾರ್ಥಿನಿ ಕೊಲೆ: ಆರೋಪಿ ಬಂಧನ

ವಿಘ್ನೇಶ್ ತಪ್ಪಿಸಿಕೊಳ್ಳಲು ನೆರವಾಗಿದ್ದ ವ್ಯಕ್ತಿಯನ್ನೂ ಸೆರೆ ಹಿಡಿದ ಪೊಲೀಸರು

ಪ್ರಜಾವಾಣಿ ವಾರ್ತೆ



ಯಾಮಿನಿ



ವಿಘ್ನೇಶ್



ಹರೀಶ್

ಅಪರಾಧ ಸುದ್ದಿ

ಬೆಂಗಳೂರು: ಪ್ರೀತಿಸಲು ನಿರಾಕರಿಸಿದ ಕಾರಣಕ್ಕೆ ವಿದ್ಯಾರ್ಥಿನಿಯ ಮುಖಕ್ಕೆ ಖಾರದ ಪುಡಿ ಎರಚಿ ಚಾಕುವಿನಿಂದ ಕತ್ತು ಕೊಯ್ದು ಕೊಲೆ ಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳನ್ನು ಉತ್ತರ ವಿಭಾಗದ ಶ್ರೀರಾಂಪುರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಕೃತ್ಯ ಎಸಗಿದ್ದ ವಿಘ್ನೇಶ್ (28) ಹಾಗೂ ಆತನಿಗೆ ನೆರವಾಗಿದ್ದ ಹರೀಶ್ (36) ಬಂಧಿತರು. ಕೃತ್ಯದ ಬಳಿಕ ಆರೋಪಿ ತಪ್ಪಿಸಿಕೊಳ್ಳಲು ಹರೀಶ್ ನೆರವಾಗಿದ್ದ ಎಂದು ಪೊಲೀಸರು ಹೇಳಿದರು.

ಶ್ರೀರಾಂಪುರ ಸಮೀಪದ ಸ್ವತಂತ್ರಪಾಳ್ಯ ನಿವಾಸಿ ಯಾಮಿನಿ ಪ್ರಿಯಾ (20) ಅವರನ್ನು ಕೊಲೆ ಮಾಡಿ ಆರೋಪಿಗಳು ಪರಾರಿ ಆಗಿದ್ದರು. ಆರೋಪಿಗಳ ಬಂಧನಕ್ಕೆ ಶ್ರೀರಾಂಪುರ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ನೇತೃತ್ವದಲ್ಲಿ ಎರಡು ವಿಶೇಷ ತಂಡಗಳನ್ನು ರಚಿಸಲಾಗಿತ್ತು. ತ್ವರಿತವಾಗಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಶ್ರೀರಾಂಪುರ ಬಳಿಯ ಸ್ವತಂತ್ರ ಪಾಳ್ಯದ ವಿಘ್ನೇಶ್, ತನಗೆ ಪರಿಚಯವಿದ್ದ ಯಾಮಿನಿ ಪ್ರಿಯಾ ಅವರನ್ನು ಪ್ರೀತಿಸುವಂತೆ ಒತ್ತಾಯಿಸುತ್ತಿದ್ದ. ವಿದ್ಯಾರ್ಥಿನಿ ನಿರಾಕರಿಸಿದ್ದರು. ಗುರುವಾರ ಸಂಜೆ ಕಾಲೇಜು ಮುಗಿಸಿಕೊಂಡು ಮನೆಗೆ ಬರುತ್ತಿದ್ದ ವೇಳೆ ಅಡ್ಡಗಟ್ಟಿ ಕೊಲೆ ಮಾಡಿ ಪರಾರಿಯಾಗಿದ್ದ ಎಂದು ಪೊಲೀಸರು ಹೇಳಿದರು.

ಚಾಕು, ಖಾರದ ಪುಡಿ ತಂದಿದ್ದ

ಯಾಮಿನಿ ಪ್ರಿಯಾ ಅವರನ್ನು ಕೊಲೆ ಮಾಡಲು ವಿಘ್ನೇಶ್ ಪೂರ್ವ ಸಿದ್ಧತೆ ಮಾಡಿಕೊಂಡಿದ್ದ. ಕೃತ್ಯಕ್ಕೆ ಬೇಕಾದ ಚಾಕು, ಖಾರದ ಪುಡಿಯನ್ನು ಜತೆಯಲ್ಲೇ ತಂದಿದ್ದ. ಕೊಲೆಗೂ ಮುನ್ನವೇ ದ್ವಿಚಕ್ರ ವಾಹನದಲ್ಲಿ ಮಲ್ಲೇಶ್ವರದ ಮಂತ್ರಿ ಮಾಲ್ ಬಸ್ ನಿಲ್ದಾಣದ ಬಳಿ ಬಂದಿದ್ದ ವಿಘ್ನೇಶ್ ಮತ್ತು ಹರೀಶ್ ಯಾಮಿನಿಯ ಬರುವಿಕೆಗಾಗಿ ಕಾದಿದ್ದರು.

ಬಿ.ಫಾರ್ಮಾ ಓದುತ್ತಿದ್ದ ಯಾಮಿನಿ, ಕಾಲೇಜು ಮುಗಿಸಿಕೊಂಡು ಬನಶಂಕರಿ ಮೂರನೇ ಹಂತದಿಂದ ಬಿಎಂಟಿಸಿ ಬಸ್‌ನಲ್ಲಿ ಮಂತ್ರಿ ಮಾಲ್‌ನ ಬಳಿ ಬಂದು ರೈಲ್ವೆ ಹಳಿಯ ಪಕ್ಕದ ಕಾಲು ದಾರಿಯಲ್ಲಿ ಮನೆಯತ್ತ ನಡೆದು ಹೊರಟಿದ್ದರು. ಆಗ ಹಿಂಬಾಲಿಸಿಕೊಂಡು ಹೋಗಿ ಕೃತ್ಯ ಎಸಗಿದ್ದರು. ರೈಲ್ವೆ ಹಳಿ ಪಕ್ಕದಲ್ಲೇ ಆರೋಪಿ ಮೊಬೈಲ್ ಎಸೆದು ಹೋಗಿದ್ದ. ಸೋಲದೇವನಹಳ್ಳಿ ಬಳಿ ಇಬ್ಬರನ್ನೂ ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ಮಿಷನ್ ಯಾಮಿನಿ' ವಾಟ್ಸ್‌ಆ್ಯಪ್ ಗ್ರೂಪ್

ಯಾಮಿನಿ ಅವರನ್ನು ಕೊಲೆ ಮಾಡಲು ವಿಘ್ನೇಶ್ ಪೂರ್ವ ಯೋಜಿತ ಸಂಚು ರೂಪಿಸಿದ್ದ. ಹಲವು ತಿಂಗಳುಗಳಿಂದ ಚಲನವಲನದ ಮೇಲೆ ಕಣ್ಣಿಟ್ಟಿದ್ದ ವಿಘ್ನೇಶ್, ಕೊಲೆ ಉದ್ದೇಶಕ್ಕಾಗಿಯೇ 'ಮಿಷನ್ ಯಾಮಿನಿ ಪ್ರಿಯಾ' ಎಂಬ ವಾಟ್ಸ್‌ಆ್ಯಪ್ ಗ್ರೂಪ್ ರಚಿಸಿದ್ದ. ಯಾಮಿನಿ ಎಲ್ಲಿಗೆ ಹೋಗುತ್ತಾರೆ, ಯಾರ ಜತೆ ಮಾತನಾಡುತ್ತಾರೆ ಎಂದು ಮಾಹಿತಿ ಕಲೆಹಾಕುವುದಕ್ಕಾಗಿ ಗ್ರೂಪ್ ರಚಿಸಿ ಕೊಂಡಿದ್ದ. ನಾಲ್ವರನ್ನು ಆ ಗ್ರೂಪ್‌ಗೆ ಸೇರಿಸಿದ್ದ. ಹರೀಶ್ ಹಾಗೂ ಇತರರು ಯಾಮಿನಿ ಚಲನವಲನದ ಬಗ್ಗೆ ಗ್ರೂಪ್‌ನಲ್ಲಿ ಮಾಹಿತಿ ಹಂಚಿಕೊಳ್ಳುತ್ತಿದ್ದರು ಎಂದು ಮೂಲಗಳು ತಿಳಿಸಿವೆ.

ಶಾಸಕ ಮುನಿರತ್ನ ಕಚೇರಿ ಮೇಲೆ ಪೊಲೀಸರ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜರಾಜೇಶ್ವರಿನಗರ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ಅವರು ತಮ್ಮ ಕ್ಷೇತ್ರದವರಿಗೆ ದೀಪಾವಳಿ ಹಬ್ಬಕ್ಕೆ ಪಟಾಕಿ ಹಂಚಲು ದಾಸ್ತಾನು ಮಾಡಿಕೊಂಡಿದ್ದಾರೆ ಎಂದು ಆರೋಪಿಸಿ ದೂರು ಬಂದ ಬೆನ್ನಲ್ಲೇ ಶುಕ್ರವಾರ ಮಧ್ಯಾಹ್ನ ಅವರ ಕಚೇರಿ ಮೇಲೆ ಪೊಲೀಸರು ದಾಳಿ ನಡೆಸಿ ಪರಿಶೀಲಿಸಿದರು.

ಈ ವೇಳೆ ಮುನಿರತ್ನ ಹಾಗೂ ಪೊಲೀಸರ ನಡುವೆ ವಾಗ್ವಾದ ನಡೆಯಿತು.

ಬಳಿಕ ಮುನಿರತ್ನ ಅವರು ಮಾತನಾಡಿ, 'ನನ್ನ ಕಚೇರಿಯಲ್ಲಿ ಪಟಾಕಿ ದಾಸ್ತಾನು ಮಾಡಿದ್ದಾರೆ ಎಂದು ಕುಸುಮಾ ಕಡೆಯವರು ದೂರು ಕೊಟ್ಟಿದ್ದಾರೆ. ಪೊಲೀಸರು ಕರೆ ಮಾಡಿ ಕಚೇರಿಯ ಬೀಗ ತೆಗೆಯುವಂತೆ ಕೋರಿದ್ದರು. ಕಚೇರಿ ಪರಿಶೀಲನೆ ನಡೆಸಿದ್ದಾರೆ. ಕಚೇರಿಯಲ್ಲಿ ಯಾವುದೇ ಪಟಾಕಿ ಬಾಕ್ಸ್ ಇರಲಿಲ್ಲ. ದೀಪಾವಳಿ ಸಂದರ್ಭದಲ್ಲಿ ನಾನೊಬ್ಬನೇ ಅಲ್ಲ, ಹಲವರು ಪಟಾಕಿ ಬಾಕ್ಸ್ ಹಂಚುತ್ತಾರೆ. ಬೇರೆಲ್ಲೂ ಇಲ್ಲದ ನಿಯಮ ನನಗೆ ಮಾತ್ರ ಏಕೆ' ಎಂದು ಪ್ರಶ್ನಿಸಿದರು.

'ಗಾರ್ಮೆಂಟ್ಸ್ ಹಾಗೂ ಮದುವೆ ಛತ್ರದಲ್ಲಿ ಕೆಲಸ ಮಾಡುವವರು ಪಟಾಕಿ ಕೊಡಿಸುವಂತೆ ಮನವಿ ಮಾಡಿದ್ದರು. ಪ್ರತಿವರ್ಷದ ಸಂಕ್ರಾಂತಿ ಹಾಗೂ ಗಣೇಶ ಹಬ್ಬದ ಸಂದರ್ಭದಲ್ಲಿ ಕಿಟ್ ಕೊಡಲಾಗುತ್ತಿದೆ. ವಿದ್ಯಾರ್ಥಿಗಳಿಗೂ ನೋಟ್‌ಬುಕ್ ವಿತರಣೆ ಮಾಡುತ್ತಿದ್ದೇವೆ. ಆದರೆ, ಈ ವರ್ಷ ಪಟಾಕಿ ಕೊಡದಂತೆ ಪೊಲೀಸರ ದಂಡೇ ಬಂದಿದೆ' ಎಂದರು.

'ಶಾಸಕರ ಕಚೇರಿಯನ್ನು ಪರಿಶೀಲನೆ ನಡೆಸಲಾಗಿದೆ. ಪಟಾಕಿ ಬಾಕ್ಸ್‌ಗಳು ಇರಲಿಲ್ಲ. ಪಟಾಕಿ ತಂದು ಹಂಚದಂತೆ ತಿಳಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಅತ್ಯಾಚಾರ: ಬಂಧಿತ ವಿದ್ಯಾರ್ಥಿ ಅಮಾನತು

ಬೆಂಗಳೂರು: ಬಸವನಗುಡಿಯ ಎಂಜಿನಿಯರಿಂಗ್ ಕಾಲೇಜೊಂದರಲ್ಲಿ ಪುರುಷರ ಶೌಚಾಲಯಕ್ಕೆ ವಿದ್ಯಾರ್ಥಿನಿಯನ್ನು ಎಳೆದೊಯ್ದು ಅತ್ಯಾಚಾರ ಎಸಗಿದ್ದ ಆರೋಪದಡಿ ಬಂಧನಕ್ಕೆ ಒಳಗಾಗಿರುವ ಜೀವನ್ ಗೌಡ (21) ಎಂಬಾತನನ್ನು ಕಾಲೇಜಿನಿಂದ ಅಮಾನತು ಮಾಡಲಾಗಿದೆ. ಶುಕ್ರವಾರ ನಡೆದ ಸಭೆಯಲ್ಲಿ ಕಾಲೇಜು ಆಡಳಿತ ಮಂಡಳಿ ಈ ತೀರ್ಮಾನ ತೆಗೆದುಕೊಂಡಿದೆ.

ಒತ್ತಡ ನಿವಾರಣೆ ಹಾಗೂ ಮಾನಸಿಕ ಆರೋಗ್ಯ ಕುರಿತು ಚರ್ಚೆ ನಡೆಸಲು 25ರಿಂದ 30 ವಿದ್ಯಾರ್ಥಿಗಳ ಗುಂಪು ರಚಿಸಲಾಗಿದೆ. ಪ್ರತಿ ತಂಡಕ್ಕೆ ಒಬ್ಬರು ಉಪನ್ಯಾಸಕರನ್ನು ನೇಮಿಸಲಾಗಿದೆ. ಪೊಲೀಸರಿಗೆ ದೂರು ನೀಡಿರುವ ವಿದ್ಯಾರ್ಥಿನಿ ಒಂದು ತಂಡದಲ್ಲಿ ಇದ್ದರು. ಕೃತ್ಯದ ಬಗ್ಗೆ ವಿದ್ಯಾರ್ಥಿನಿ ಉಪನ್ಯಾಸಕರ ಬಳಿ ಹೇಳಿಕೊಂಡಿರಲಿಲ್ಲ. ಪೋಷಕರ ಬಳಿ ನೀಡಿದ ಮಾಹಿತಿ ಮೇರೆಗೆ ದೂರು ನೀಡಲಾಗಿತ್ತು.

ಘಟನೆ ಖಂಡಿಸಿ ಕಾಲೇಜು ಎದುರು ಎಬಿವಿಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಮಸ್ಯೆ ಆಲಿಸಲು ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಘಟಕ ರಚಿಸಿಲ್ಲ ಎಂದು ಆಕ್ರೋಶ ಹೊರಹಾಕಿದರು.



ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಏರ್ಪಡಿಸಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು. ಕುಲಪತಿ ಬಿ.ರಮೇಶ್, ಕುಲಸಚಿವರಾದ ಎ.ನವೀನ್ ಜೋಸೆಫ್, ಕೆ.ಆರ್. ಜಲಜಾ, ಹಣಕಾಸು ಅಧಿಕಾರಿ ಎಂ.ವಿ.ವಿಜಯಲಕ್ಷ್ಮಿ, ದೇವರಾಜ್ ಹಾಜರಿದ್ದರು

ಕನೇರಿ ಸ್ವಾಮೀಜಿ ನಿರ್ಬಂಧಕ್ಕೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲಿಂಗಾಯತ ಮಠಾಧಿಪತಿಗಳ ವಿರುದ್ಧ ಆಕ್ಷೇಪಾರ್ಹ ಮಾತುಗಳನ್ನು ಆಡಿದ್ದಾರೆ' ಎಂಬ ಆರೋಪ ಹೊತ್ತಿರುವ ಕನೇರಿ ಮಠದ ಕಾಡಸಿದ್ದೇಶ್ವರ ಸ್ವಾಮೀಜಿಯವರು ಇದೇ 16ರಿಂದ ಡಿಸೆಂಬರ್ 14ರವರೆಗೆ ವಿಜಯಪುರ ಜಿಲ್ಲೆ ಪ್ರವೇಶಿಸಬಾರದು ಎಂದು ವಿಜಯಪುರ ಜಿಲ್ಲಾಧಿಕಾರಿ ನೀಡಿದ ಆದೇಶವನ್ನು ಹೈಕೋರ್ಟ್ ಎತ್ತಿಹಿಡಿದಿದೆ.

ಜಿಲ್ಲಾಧಿಕಾರಿ ಆದೇಶ ಪ್ರಶ್ನಿಸಿ ಸ್ವಾಮೀಜಿ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಂ ಅವರ ಏಕಸದಸ್ಯ ನ್ಯಾಯಪೀಠ (ಕಲಬುರಗಿ) ಶುಕ್ರವಾರ ಪ್ರಕಟಿಸಿತು.

'ಸ್ವಾಮೀಜಿ ಹಿತದೃಷ್ಟಿಯಿಂದಲೇ ಅವರ ವಿಜಯಪುರ ಜಿಲ್ಲೆಯ ಭೇಟಿಯನ್ನು ಪ್ರತಿಬಂಧಿಸಲಾಗಿದೆ' ಎಂದು ರಾಜ್ಯ ಸರ್ಕಾರದ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಮಂಡಿಸಿದ್ದ ವಾದವನ್ನು ಪುರಸ್ಕರಿಸಿರುವ ನ್ಯಾಯಪೀಠ, 'ಜಿಲ್ಲಾಧಿಕಾರಿ ಆದೇಶ ಏಕಪಕ್ಷೀಯವಾಗಿಲ್ಲ. ಸಾರ್ವಜನಿಕ ಶಾಂತಿ ಕಾಪಾಡುವ ದಿಸೆಯಲ್ಲಿ ಗುಪ್ತಚರ ಮತ್ತು ಪೊಲೀಸ್ ವರದಿಗಳನ್ನು ಆಧರಿಸಿಯೇ ಅನುಷ್ಠಾನಗೊಂಡಿದೆ' ಎಂಬ ವಾದಾಂಶವನ್ನು ಮನ್ನಿಸಿದೆ.

'ಸಂಭಾವ್ಯ ಅಶಾಂತಿಯನ್ನು ತಡೆಗಟ್ಟುವ ಉದ್ದೇಶದಿಂದ ಪ್ರತಿಬಂಧಕ ಆದೇಶ ಹೊರಡಿಸಲಾಗಿದೆ ಎಂಬ ಸರ್ಕಾರದ ವಾದವನ್ನು ಈ ಹಂತದಲ್ಲಿ ಪರಿಗಣಿಸಬೇಕಾಗುತ್ತದೆ. ಹಾಗಾಗಿ, ಅರ್ಜಿದಾರರು ಜಿಲ್ಲೆಗೆ ಭೇಟಿ ನೀಡುವುದರಿಂದ ದೂರವಿದ್ದರೆ ಅವರ ಅನುಯಾಯಿಗಳಿಗೆ ಉದಾತ್ತ ಮಾದರಿಯನ್ನು ಪ್ರದರ್ಶಿಸಿದಂತಾಗುತ್ತದೆ' ಎಂದು ತಿಳಿಸಿದೆ.

'ಆಧ್ಯಾತ್ಮಿಕ ನಾಯಕ ಎನಿಸಿಕೊಂಡವರು ಇತರರಿಗಿಂತಲೂ ಹೆಚ್ಚಾಗಿ ಸಹಿಷ್ಣುತೆ ಮತ್ತು ಸ್ವಯಂ ನಿಯಂತ್ರಿತ ಸಂಯಮವನ್ನು ಪ್ರದರ್ಶಿಸಬೇಕು. ಸಮುದಾಯಗಳಲ್ಲಿ ಸಾಮರಸ್ಯ ಮತ್ತು ಪರಸ್ಪರ ಗೌರವ ಉತ್ತೇಜಿಸಲು ವೈಯಕ್ತಿಕ ಕುಂದುಕೊರತೆಗಳನ್ನು ಮೀರಿ ನಿಲ್ಲಬೇಕು ಎಂಬುದನ್ನು ಎಲ್ಲರೂ ನಿರೀಕ್ಷಿಸುತ್ತಾರೆ. ಹಾಗಾಗಿ, ಸಂವಿಧಾನದ 19(1)(ಡಿ) ವಿಧಿಯಡಿ ಖಾತರಿಪಡಿಸಲಾದ ಹಕ್ಕನ್ನು ಪ್ರತ್ಯೇಕವಾಗಿ ನೋಡಲು ಆಗುವುದಿಲ್ಲ' ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

ಕಾಡಸಿದ್ದೇಶ್ವರ ಸ್ವಾಮೀಜಿ ಅವರು ಬಸವನ ಬಾಗೇವಾಡಿಯಲ್ಲಿ ನಡೆಯುತ್ತಿದ್ದ ಸಮರ್ಥ ಸದ್ಗುರು ಶ್ರೀ ಸಿದ್ದರಾಮೇಶ್ವರ ಮಹಾರಾಜರ ಪುಣ್ಯತಿಥಿ ಕಾರ್ಯಕ್ರಮದಲ್ಲಿ ಶುಕ್ರವಾರ (ಅ.17) ಭಾಗವಹಿಸಬೇಕಿತ್ತು.

ಏನಿದು ಪ್ರಕರಣ?

ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಪ್ರಸಿದ್ಧ ಕನೇರಿ ಅದೃಶ್ಯ ಕಾಡಸಿದ್ದೇಶ್ವರ ಮಠದ ಸ್ವಾಮೀಜಿ ಇದೇ 7ರಂದು ಮಹಾರಾಷ್ಟ್ರದ ಜತ್ತ ತಾಲ್ಲೂಕಿನ ಬೀಳೂರು ಗ್ರಾಮದ ಸಮಾರಂಭವೊಂದರಲ್ಲಿ ಮಾತನಾಡಿದ್ದರು.

ಈ ವೇಳೆ ಅವರು, 'ಲಿಂಗಾಯತ ಮಠಾಧಿಪತಿಗಳ ಒಕ್ಕೂಟವು, ಕಲಾವಿದರಿಂದ ಕೂಡಿದ ಮುಖ್ಯಮಂತ್ರಿಗಳ ಕೃಪಾಪೋಷಿತ ನಾಟಕ ಮಂಡಳಿ. ಇವರು ಬಸವ ಸಂಸ್ಕೃತಿ ಅಭಿಯಾನ ಎಂಬ ನಾಟಕವನ್ನು ತೆಗೆದುಕೊಂಡು ಕರ್ನಾಟಕದಾದ್ಯಂತ ತಿರುಗಾಡಿ, ದೇವರು ಗುಡ್ಯಾಗ ಇಲ್ಲ. ಗುಡೀಗೆ ಹೋಗಬ್ಯಾಡ್ರಿ, ಮನ್ಯಾಗಿನ ದೇವರುಗಳನ್ನು ತಗೊಂಡು ಹೊಳ್ಯಾಗ ಹಾಕ್ರಿ. ಹೋಟೆಲ್‌ದಾಗ ಹೋಗಿ ದಾರು ಕುಡೀರಿ. ಆರಾಮಾಗಿರಿ, ಮಾಂಸ ತಿನ್ರಿ... ಎಂದೆಲ್ಲಾ ಜನರಿಗೆ ಹೇಳುತ್ತಿದ್ದಾರೆ' ಎಂದು ಆಕ್ಷೇಪಿಸಿದ್ದರು.

ಲಿಂಗಾಯತ ಮಠಾಧಿಪತಿಗಳ ವಿರುದ್ಧ ಅವಹೇಳನಕಾರಿ ಮಾತುಗಳನ್ನು ಬಳಸಿ ಸಮಾಜದಲ್ಲಿ ಅಶಾಂತಿಗೆ ಕಾರಣವಾಗಿದ್ದಾರೆ ಎಂಬ ಕಾರಣದಿಂದ ವಿಜಯಪುರ ಜಿಲ್ಲಾಧಿಕಾರಿ ಸ್ವಾಮೀಜಿಯವರು ಜಿಲ್ಲೆಗೆ ಪ್ರವೇಶಿಸುವುದನ್ನು ಪ್ರತಿಬಂಧಿಸಿದ್ದಾರೆ.


ಅತ್ಯಾಚಾರ: ಪೋಕ್ಸೊ ಪ್ರಕರಣ ದಾಖಲು

ಬೆಂಗಳೂರು: ಐಸ್‌ಕ್ರೀಂ ಹಾಗೂ ಚಾಕೊಲೇಟ್ ಕೊಡಿಸುವ ನೆಪದಲ್ಲಿ 15 ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ಎಸಗಿ ಗರ್ಭಿಣಿಯಾಗಲು ಕಾರಣವಾಗಿರುವ ಬಾಲಕನೊಬ್ಬನ ವಿರುದ್ಧ ಪೋಕ್ಸೊ ಕಾಯ್ದೆ ಅಡಿ ಶಂಕರಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಜಸ್ಥಾನದ ಬಾಲಕ ಮತ್ತು ನೇಪಾಳದ ಸಂತ್ರಸ್ತೆ ಶಂಕರಪುರ ಠಾಣಾ ವ್ಯಾಪ್ತಿಯಲ್ಲಿ ವಾಸಿಸುತ್ತಿದ್ದರು. ಪಿಯುಸಿ ಓದುತ್ತಿದ್ದ ಬಾಲಕನಿಗೆ, ಎಸ್ಸೆಸ್ಸೆಲ್ಸಿ ವಿದ್ಯಾರ್ಥಿನಿಯ ಪರಿಚಯವಾಗಿತ್ತು. ಇತ್ತೀಚೆಗೆ ಬಾಲಕಿಗೆ ಐಸ್‌ಕ್ರೀಂ, ಚಾಕೊಲೇಟ್ ಕೊಡಿಸುವುದಾಗಿ ಪುಸಲಾಯಿಸಿದ ಬಾಲಕ, ಬಾಲಕಿಯನ್ನು ಲೈಂಗಿಕವಾಗಿ ಬಳಸಿಕೊಂಡಿದ್ದ. ನಂತರ, ಕಳೆದ 3 ತಿಂಗಳಿಂದ ಬಾಲಕಿಯ ಜೊತೆಗೆ ಮಾತು ಬಿಟ್ಟಿದ್ದ. ಇತ್ತ ಗುರುವಾರ ಬಾಲಕಿ ಮನೆಯಲ್ಲೇ ಗಂಡು ಮಗುವಿಗೆ ಜನ್ಮ ನೀಡಿದ್ದಳು. ಆದರೆ, ಹುಟ್ಟಿದ ಕೂಡಲೇ ಮಗು ಮೃತಪಟ್ಟಿತ್ತು. ಸಂತ್ರಸ್ತೆಯನ್ನು ಆಸ್ಪತ್ರೆಗೆ ಸೇರಿಸಲಾಗಿದೆ.


ಯುನಿಲೆಟ್®
ಎಲೆಕ್ಟ್ರಾನಿಕ್ಸ್ ಅಂಡ್ ಮೋರ್...
ಮಹಾ ದೀಪೋತ್ಸವ Sale
UPTO 65% OFF*
ASSURED BEST PRICES
Hisense 100 UHD
100" U7Q
NEW ARRIVAL
BUY 1 GET 3 FREE
FREE 43 UHD + 32 UHD + JUKE BAR 9520
₹262,990 ₹444,999
Cashback upto* ₹20,000
EMI* ₹8,666
0 PROCESSING FEES ZERO HIDDEN CHARGES INTEREST
UPTO ₹ 30,000 CASHBACK ON MAJOR CREDIT/DEBIT CARDS, BAJAJ FINANCE, IDFC FIRST, HDB & TVS CREDIT FINANCE
HDFC BANK FESTIVE TREATS UP TO ₹5000 INSTANT DISCOUNT* WITH HDFC BANK EASYEMI ON CARDS
EMI CARD EASY FINANCE CREDIT / DEBIT CARD EMI
BAJAJ FINSERV
IDFC FIRST Bank
HDB FINANCIAL SERVICES
TVS CREDIT
UPTO 24* MONTHS NO COST EMIs
1 EMI* OFF
ASSURED FREE GIFTS ON ALL PURCHASES*
FREE BLUETOOTH SPEAKER WORTH ₹11,990 ON PURCHASE OF TVs 65 AND ABOVE
FREE SAFARI TROLLEY WORTH ₹7,999 ON PURCHASE OF SIDE BY SIDE REFRIGERATOR OR WASHER & DRYER
FREE BLUETOOTH SPEAKER WORTH ₹7,890 ON PURCHASE OF 4K TVs 43 AND ABOVE
FREE SMART WATCH WORTH ₹4,999 ON PURCHASE OF AC OR 32 & 43 LEDs
FREE 24 PC DINNER SET WORTH ₹4,689 ON PURCHASE OF DISHWASHER
FREE KADAI, TAWA, FRY PAN WORTH ₹2,855 ON PURCHASE OF BIG SIZE FRIDGE OR FRONT LOADWASHING MACHINE
FREE KADAI WORTH ₹1,457 ON PURCHASE OF SINGLE DOOR REFRIGERATOR OR SEMI AUTO WASHING MACHINE
FREE TAWA, FRYPAN WORTH ₹1398 ON PURCHASE OF TOP LOAD WASHING MACHINE OR DOUBLE DOOR FRIDGE
FREE 5 PC HANDI SET WORTH ₹1125 ON PURCHASE OF BOTTOM MOUNTED REFRIGERATOR
FREE BOWL SET WORTH ₹990 ON PURCHASE OF MICROWAVE OVEN
75 UHD ₹69,990 Onwards | Cashback upto* ₹15,000 | EMI* ₹999 FREE: BLUETOOTH SPEAKER WORTH ₹11990
65 UHD ₹45,990 Onwards | Cashback upto* ₹15,000 | EMI* ₹999 FREE: BLUETOOTH SPEAKER WORTH ₹11990
55 UHD ₹30,990 Onwards | Cashback upto* ₹15,000 | EMI* ₹999 FREE: BLUETOOTH SPEAKER WORTH ₹7890
43 QLED ₹19,990 Onwards | Cashback upto* ₹5,000 | EMI* ₹999 FREE: BLUETOOTH SPEAKER WORTH ₹7890
32 LED ₹7,990 Onwards | Cashback upto* ₹3,000 | EMI* ₹999 FREE: SMART WATCH WORTH ₹4999
iPhone 17 256 GB ₹82,900 Onwards Cashback upto* ₹6,000 EMI* ₹3,454 FREE: OG SPEAKER + BACKCASE + TAMPER GLASS WORTH ₹11497
SIDE BY SIDE REFRIGERATOR ₹62,990 Onwards Cashback upto* ₹10,000 EMI* ₹2,999 FREE: SAFARI TROLLEY WORTH ₹7999
BOTTOM MOUNTED REFRIGERATOR ₹23,990 Onwards Cashback upto* ₹7,000 EMI* ₹1,499 FREE: 5 PC HANDI SET WORTH ₹1125
DOUBLE DOOR REFRIGERATOR ₹21,990 Onwards Cashback upto* ₹8,000 EMI* ₹994 FREE: TAWA, FRYPAN WORTH ₹1398
SINGLE DOOR REFRIGERATOR ₹12,990 Onwards Cashback upto* ₹1,500 EMI* ₹994 FREE: INDUCTION BASED KADAI WORTH ₹1457
14 PLACE DISH WASHER ₹46,990 Onwards Cashback upto* ₹5,000 EMI* ₹1,499 FREE: 24 PC. DINNER SET WORTH ₹4689
oppo F31 5G 8/128 ₹22,999 Onwards Cashback upto* ₹3,000 EMI* ₹1,917 FREE: OG NECK BAND WORTH ₹2490
FRONT LOAD WASHING MACHINE ₹27,990 Onwards Cashback upto* ₹12,000 EMI* ₹994 FREE: KADAI, TAWA & FRY PAN WORTH ₹2855
TOP LOAD WASHING MACHINE ₹15,490 Onwards Cashback upto* ₹2,500 EMI* ₹1,299 FREE: TAWA, FRYPAN WORTH ₹1398
SEMI AUTO WASHING MACHINE ₹9,490 Onwards EMI* ₹1,299 FREE: INDUCTION BASED KADAI WORTH ₹1457
WASHER & DRYER ₹52,990 Onwards Cashback upto* ₹10,500 EMI* ₹1,999 FREE: INDUCTION BASED KADAI WORTH ₹1457
AUDIO ₹9,990 Onwards | EMI* ₹999
vivo V60 8/128 ₹36,999 Onwards Cashback upto* ₹4,000 EMI* ₹2,056 FREE: OG NECK BAND WORTH ₹2490
SPLIT AIR CONDITIONER ₹24,990 Onwards | Cashback upto* ₹3,000 | EMI* ₹1,994 FREE: SMART WATCH WORTH ₹4999
DOMESTIC APPLIANCES ₹8,500 Onwards | Cashback upto* ₹10,000 | EMI* ₹1,300 FREE: ELECTRIC KETTLE WORTH ₹1799
MICROWAVE OVEN ₹5,490 Onwards | Cashback upto* ₹1,500 | EMI* ₹999 FREE: BOWL SET WORTH ₹990
WATER PURIFIER ₹8,999 Onwards | Cashback upto* ₹2,000 | EMI* ₹1,499 FREE: STEEL BOTTLES (2 NOS) WORTH ₹536
HOB & CHIMNEY FREE: KETTLE & 1 YR. EXTRA WARRANTY WORTH ₹2749 ₹16,990 Onwards | Cashback upto* ₹10,000
hp LAPTOP ₹35,990 Onwards | Cashback upto* ₹15,000 | EMI* ₹3,999 FREE: LAPTOP BAG WORTH ₹1999
50+ STORES
20 Years+
1Crore+ Happy CUSTOMERS
FREE DELIVERY
FREE BRAND INSTALLATION
9243 58 58 58
UNILETSTORES.COM
BENGALURU | MYSURU | TUMUKURU | HOSAKOTE | RAMANAGARA | KOLAR | NELAMANGALA | MANDYA | CHITRADURGA | DODDABALLAPURA | SHIVAMOGGA | HASSAN
SONY LG BPL Haier BOSCH SAMSUNG Hisense mi G realme ASUS & MANY MORE

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 25,585
ಇಂದಿನ ಅಂತ್ಯ: 25,709
ದಿನದ ಗರಿಷ್ಠ: 25,781
124

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು: 100 ಕ್ಕೆ ₹575; 12 ಕ್ಕೆ ₹78; ಮೈಸೂರು: 100 ಕ್ಕೆ ₹578

ರಾಮನಗರ ರೇಷ್ಮೆಗೂಡು: ಮಿಶ್ರತಳಿ(ಸಿ.ಬಿ) ₹318-623; ದ್ವಿತಳಿ (ಬಿ.ವಿ) ₹444-809

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿ): ಆರ್‌ಎಸ್‌ಎಸ್-4 ₹183; ಆರ್‌ಎಸ್‌ಎಸ್-5 ₹178; ಗುಡ್ ಲಾಟ್ ₹165

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್): ದೊಡ್ಡ ₹1000-1600; ಮಧ್ಯಮ ₹500-1000; ಸಣ್ಣ ₹100-500

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ) (10 ಕೆ.ಜಿ): ಶೇಂಗಾ (ರಿಫೈನ್ಡ್) ₹1405 (1405); ಸೋಯಾ (ರಿಫೈನ್ಡ್) ₹1285 (1280); ಸೂರ್ಯಕಾಂತಿ (ರಿಫೈನ್ಡ್) ₹1480 (1475); ಪಾಮೋಲಿನ್ ₹1290 (1285)

ಮುದ್ರಮನೆ ಕಾಫಿ: ಎಪಿ ₹30000; ಎಸಿ ₹15960; ಆರ್‌ಪಿ ₹20000; ಆರ್‌ಸಿ ₹11340

ಭಾರತದ ಗ್ರಾಹಕರಲ್ಲಿ ಹೊಸ ಹುರುಪು

ಜಿಎಸ್‌ಟಿ ಪರಿಷ್ಕರಣೆ ನಂತರದ ಸ್ಥಿತಿ ಬಗ್ಗೆ ಡೆಲಾಯ್ಟ್ ವರದಿ



ನವದೆಹಲಿ (ಪಿಟಿಐ): ಭಾರತದ ಗ್ರಾಹಕರು ಹೊಸ ಹುರುಪು ಮತ್ತು ವಿಶ್ವಾಸದೊಂದಿಗೆ ಹಬ್ಬದ ಋತುವನ್ನು ಬರ ಮಾಡಿಕೊಂಡಿದ್ದಾರೆ. ಹಣಕಾಸಿನ ವಿಚಾರವಾಗಿ ಅವರಲ್ಲಿ ಹೊಸ ಆಶಾವಾದ ಮೂಡಿದೆ ಎಂದು ಡೆಲಾಯ್ಟ್ ಇಂಡಿಯಾ ಸಿದ್ಧಪಡಿಸಿರುವ ವರದಿಯೊಂದು ಹೇಳಿದೆ.

'ಹಣದುಬ್ಬರದ ಪ್ರಮಾಣವು ಕಡಿಮೆ ಆಗಿದೆ, ಈಚೆಗೆ ಜಾರಿಗೆ ಬಂದಿರುವ ಜಿಎಸ್‌ಟಿ ದರ ಪರಿಷ್ಕರಣೆ ಕ್ರಮವು ಗ್ರಾಹಕರ ಕೊಳ್ಳುವ ಶಕ್ತಿಯನ್ನು ಹೆಚ್ಚು ಮಾಡಿದೆ. ಈ ಸಂದರ್ಭದಲ್ಲಿ ಬಂದಿರುವ ಹಬ್ಬಗಳ ಋತುವಿನ ಬೇಡಿಕೆಯು ಹೊಸ ಅಲೆಯನ್ನು ಸೃಷ್ಟಿಸಿದೆ' ಎಂದು ವರದಿಯಲ್ಲಿ ಹೇಳಲಾಗಿದೆ.

ಭಾರತದ ಹಣಕಾಸಿನ ಆರೋಗ್ಯ ಸೂಚ್ಯಂಕವು (ಎಫ್‌ಡಬ್ಲ್ಯುಬಿಐ) ಸೆಪ್ಟೆಂಬರ್‌ನಲ್ಲಿ 110.3ಕ್ಕೆ ಏರಿಕೆ ಆಗಿದೆ. ಇದು ಜಾಗತಿಕ ಸರಾಸರಿಯಾದ 103.6ಕ್ಕಿಂತ ಹೆಚ್ಚು. ಕೌಟುಂಬಿಕ ಮಟ್ಟದಲ್ಲಿ ಹಣಕಾಸಿನ ಸ್ಥಿರತೆ ಹೆಚ್ಚಾಗಿರುವುದನ್ನು ಹಾಗೂ ಗ್ರಾಹಕರಲ್ಲಿ ಆಶಾಭಾವ ಹೆಚ್ಚಿರುವುದನ್ನು ಇದು ಸೂಚಿಸುತ್ತಿದೆ.

ಆದಾಯ ಮಿತವ್ಯಯ ಸೂಚ್ಯಂಕವು (ಎಫ್‌ಎಫ್‌ಐ) ತೀವ್ರ ಪ್ರಮಾಣದಲ್ಲಿ ಕುಸಿತ ಕಂಡಿರುವುದು ವರದಿಯಲ್ಲಿ ಪ್ರಮುಖ ಅಂಶಗಳ ಪೈಕಿ ಒಂದು. ಈ ಸೂಚ್ಯಂಕವು ಈಗ ಮೂರು ವರ್ಷಗಳ ಅವಧಿಯಲ್ಲಿ ಕನಿಷ್ಠ ಮಟ್ಟದಲ್ಲಿ ಇದೆ. ಅಂದರೆ ಗ್ರಾಹಕರು ಖರೀದಿಯ ಸಂದರ್ಭದಲ್ಲಿ ಬಹಳ ಲೆಕ್ಕಾಚಾರ ಹಾಕುತ್ತಿಲ್ಲ. ಅದರ ಬದಲಿಗೆ ಅವರು, ಉತ್ತಮ ಮೌಲ್ಯದ ಉತ್ಪನ್ನಗಳನ್ನು ಖರೀದಿಸುತ್ತಿದ್ದಾರೆ.

ವಾಹನ ಖರೀದಿ ಉದ್ದೇಶವನ್ನು ಹೇಳುವ ಸೂಚ್ಯಂಕವು ಹಿಂದಿನ ವರ್ಷದ ಇದೇ ಅವಧಿಯಲ್ಲಿ ಇದ್ದ ಮಟ್ಟಕ್ಕೆ ಹೋಲಿಸಿದರೆ ಶೇಕಡ 6.6ರಷ್ಟು ಹೆಚ್ಚಳ ಕಂಡಿದೆ. ಅಂದರೆ, ದೊಡ್ಡ ಮೊತ್ತದ ಖರ್ಚುಗಳನ್ನು ಮಾಡುವ ವಿಶ್ವಾಸವು ಜನರಲ್ಲಿ ಹೆಚ್ಚಾಗಿದೆ ಎಂಬುದನ್ನು ಇದು ಹೇಳುತ್ತಿದೆ. ವಿದ್ಯುತ್ ಚಾಲಿತ (ಇ.ವಿ) ವಾಹನದ ಬಗ್ಗೆ ಒಲವು ಹೆಚ್ಚಾಗಿದೆ, ಶೇ 60ರಷ್ಟು ಗ್ರಾಹಕರು ಇ.ವಿ.ಗಳ ಬಗ್ಗೆ ಪರಿಶೀಲನೆ ನಡೆಸುತ್ತಿದ್ದಾರೆ.

ಪ್ರವಾಸ, ಮನರಂಜನೆ, ವೈಯಕ್ತಿಕ ಆರೈಕೆಯಂತಹ ಉದ್ದೇಶಗಳಿಗೆ ವೆಚ್ಚ ಮಾಡುವುದು ಹೆಚ್ಚಾಗುತ್ತಿದೆ. ಹಣದುಬ್ಬರ ಕಡಿಮೆ ಆಗಿರುವುದು ಹಾಗೂ ಜಿಎಸ್‌ಟಿ ದರವನ್ನು ತಗ್ಗಿಸಿರುವುದು ಈ ವೆಚ್ಚಗಳಿಗೆ ಪೂರಕವಾಗಿ ಒದಗಿಬಂದಿದೆ ಎಂದು ವರದಿಯು ವಿವರಿಸಿದೆ.

ಭಾರತದ ಗ್ರಾಹಕರು ಈಗ ಹಣಕಾಸಿನ ವಿಚಾರದಲ್ಲಿ ಹಿಂದೆಂದಿಗಿಂತಲೂ ಹೆಚ್ಚು ವಿಶ್ವಾಸ ಹೊಂದಿದ್ದಾರೆ ಎಂದು ಡೆಲಾಯ್ಟ್ ಸಂಸ್ಥೆಯ ದಕ್ಷಿಣ ಭಾರತ ವಲಯದ ಪಾಲುದಾರ ಆನಂದ್ ರಾಮನಾಥನ್ ಹೇಳಿದ್ದಾರೆ.

ಅಡಿಕೆ ಧಾರಣೆ

ಕುಮಟಾ		ಹೊಸತು	60009-67000	ಬಿಳಿಗೋಟು	26699-39599
ಚಾಲಿ	38999-46883	ರಾಶಿ	47099-67000	ಚಾಲಿ	42599-48299
ಚಿಪ್ಪು	27189-34029	ಸರಕು	54400-99996	ಕೆಂಪುಗೋಟು	35099-39099
ಕೋಕ	10169-30099	**ಸಿದ್ದಾಪುರ**		ರಾಶಿ	53518-60199
ಫ್ಯಾಕ್ಟರಿ	4079-26829	ಬಿಳಿಗೋಟು	26109-35699	**ಯಲ್ಲಾಪುರ**	
ಹೊಸಚಾಲಿ	41689-45999	ಚಾಲಿ	39099-46599	ಬಿಳಿಗೋಟು	21989-38089
ಪುತ್ತೂರು		ಕೋಕ	22099-32989	ಚಾಲಿ	38509-48299
ಕೋಕ	20000-30500	ಕೆಂಪುಗೋಟು	28119-38099	ಕೋಕ	12009-30612
ಹೊಸತು	26000-36000	ರಾಶಿ	50699-62099	ಕೆಂಪುಗೋಟು	18009-35213
ಹಳತು	45000-53000	ತಟ್ಟಿಬೆಟ್ಟೆ	36099-60099	ರಾಶಿ	50699-64111
ಶಿವಮೊಗ್ಗ		**ಶಿರಸಿ**		ತಟ್ಟಿಬೆಟ್ಟೆ	36309-50200
ಬೆಟ್ಟೆ	71599-76279	ಬೆಟ್ಟೆ	40900-52099		
ಗೊರಬಲು	35009-46299				

ರೈಲ್ವೆ ಸಿಬ್ಬಂದಿಗೆ ವೇತನ ಖಾತೆ: ಬಿಒಬಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೈರುತ್ಯ ರೈಲ್ವೆ ವಲಯದ ಕಾಯಂ ಸಿಬ್ಬಂದಿಗೆ ವೇತನ ಖಾತೆ ಸೇರಿ ವಿವಿಧ ಸೌಲಭ್ಯ ಒದಗಿಸಲು ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಬರೋಡಾ (ಬೆಂಗಳೂರು ವಲಯ) ನೈರುತ್ಯ ರೈಲ್ವೆಯೊಂದಿಗೆ ಒಪ್ಪಂದ ಮಾಡಿಕೊಂಡಿದೆ.

ಈ ಪಾಲುದಾರಿಕೆಯ ಅಡಿ ಬ್ಯಾಂಕ್ ಆಫ್ ಬರೋಡಾ (ಬಿಒಬಿ), ಶೂನ್ಯ ಬ್ಯಾಲೆನ್ಸ್ ಖಾತೆಯ ಸೇವೆ ಒದಗಿಸಲಿದೆ. ಜೊತೆಗೆ, ₹10 ಲಕ್ಷದವರೆಗೆ ಅವಧಿ ಜೀವ ವಿಮೆಯನ್ನು ಉಚಿತವಾಗಿ ನೀಡಲಾಗುತ್ತದೆ. ₹2.25 ಕೋಟಿವರೆಗಿನ ಮೌಲ್ಯದ ವೈಯಕ್ತಿಕ ಅಪಘಾತ ವಿಮೆ ಯೋಜನೆ ಸೇರಿದಂತೆ ಹಲವಾರು ಪ್ರಯೋಜನಗಳನ್ನು ಒದಗಿಸಲಾಗುತ್ತದೆ ಎಂದು ಬ್ಯಾಂಕ್ ತಿಳಿಸಿದೆ.

ಹುಬ್ಬಳ್ಳಿಯಲ್ಲಿನ ನೈರುತ್ಯ ರೈಲ್ವೆ ವಲಯದ ಪ್ರಧಾನ ಕಚೇರಿಯಲ್ಲಿ ಬ್ಯಾಂಕ್ ಮತ್ತು ರೈಲ್ವೆ ಇಲಾಖೆಯ ಅಧಿಕಾರಿಗಳು ಒಪ್ಪಂದಕ್ಕೆ ಸಹಿ ಹಾಕಿದರು.

ಬ್ಯಾಂಕ್ ಆಫ್ ಬರೋಡಾದ ಸಿಜಿಎಂ ಮತ್ತು ಬೆಂಗಳೂರು ವಲಯದ ಮುಖ್ಯಸ್ಥ ಮನೋಜ್ ಚಯಾನಿ, ನೈರುತ್ಯ ರೈಲ್ವೆಯ ಪ್ರಧಾನ ವ್ಯವಸ್ಥಾಪಕ ಮುಕುಲ್ ಶರಣ್ ಮಾಥುರ್, ಮುಖ್ಯ ಸಿಬ್ಬಂದಿ ಅಧಿಕಾರಿ ಸೂರ್ಯ ಪ್ರಕಾಶ್, ಉಪ ಮುಖ್ಯ ಸಿಬ್ಬಂದಿ ಅಧಿಕಾರಿ ಶಿರೀಶ್ ಎಸ್.ಕಾಂಬ್ಳೆ ಸೇರಿದಂತೆ ಬ್ಯಾಂಕ್ ಮತ್ತು ರೈಲ್ವೆ ಇಲಾಖೆಯ ಅಧಿಕಾರಿಗಳು ಇದ್ದರು.



ಹುಬ್ಬಳ್ಳಿಯಲ್ಲಿನ ನೈರುತ್ಯ ರೈಲ್ವೆ ವಲಯದ ಪ್ರಧಾನ ಕಚೇರಿಯಲ್ಲಿ ಬ್ಯಾಂಕ್ ಮತ್ತು ರೈಲ್ವೆ ಇಲಾಖೆಯ ಅಧಿಕಾರಿಗಳು ಒಪ್ಪಂದಕ್ಕೆ ಸಹಿ ಹಾಕಿದರು

ಟಿವಿಎಸ್ ಅಪಾಚೆ ಆರ್‌ಟಿಎಕ್ಸ್ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಹನ ತಯಾರಿಕಾ ಕಂಪನಿ ಟಿವಿಎಸ್ ಮೋಟರ್, ತನ್ನ ಹೊಸ ದ್ವಿಚಕ್ರ ವಾಹನ 'ಟಿವಿಎಸ್ ಅಪಾಚೆ ಆರ್‌ಟಿಎಕ್ಸ್' ಬಿಡುಗಡೆ ಮಾಡಿದೆ. ಈ ಮೂಲಕ ಕಂಪನಿಯು ಅಡ್ವೆಂಚರ್ ದ್ವಿಚಕ್ರ ವಾಹನ ಮಾರುಕಟ್ಟೆಯನ್ನು ಪ್ರವೇಶಿಸಿದೆ.

ಟಿವಿಎಸ್ ಅಪಾಚೆ ಆರ್‌ಟಿಎಕ್ಸ್‌ನ ಪರಿಚಯಾತ್ಮಕ ಬೆಲೆ ₹1.99 ಲಕ್ಷ. ಹೊಸ ವಾಹನವು ಅಡ್ವೆಂಚರ್ ದ್ವಿಚಕ್ರ ವಾಹನ ಸವಾರಿ ಕ್ಷೇತ್ರದಲ್ಲಿ ಸಂಚಲನ ಮೂಡಿಸಲು ರೂಪುಗೊಂಡಿದೆ ಎಂದು ಕಂಪನಿ ಹೇಳಿದೆ.

ಅಡ್ವೆಂಚರ್ ಬೈಕ್ ಸವಾರಿ ಪ್ರಿಯರಿಗೆ ಮತ್ತು ಪ್ರವಾಸಿಗರಿಗಾಗಿ ಈ ದ್ವಿಚಕ್ರ ವಾಹನ ರೂಪಿಸಲಾಗಿದೆ. ಇದು ಅತ್ಯುತ್ತಮ ಕಾರ್ಯಕ್ಷಮತೆ ಹೊಂದಿದ್ದು, ನೆಕ್ಸ್ಟ್‌ಜೆನ್ ಟಿವಿಎಸ್ ಆರ್‌ಟಿ-ಎಕ್ಸ್‌ಡಿ4 ಎಂಜಿನ್ ಪ್ಲಾಟ್‌ಫಾರ್ಮ್ ಮೇಲೆ ನಿರ್ಮಿಸಲಾದ ಮೊದಲ ವಾಹನ ಎಂದು ಕಂಪನಿ ತಿಳಿಸಿದೆ.



ಟಿವಿಎಸ್ ಮೋಟರ್ ಕಂಪನಿ, ತನ್ನ ಹೊಸ ಟಿವಿಎಸ್ ಅಪಾಚೆ ಆರ್‌ಟಿಎಕ್ಸ್ ಬಿಡುಗಡೆ ಮಾಡಿದೆ

ರಿಲಯನ್ಸ್ ಲಾಭ ಶೇ 9.6ರಷ್ಟು ಏರಿಕೆ

ಮುಂಬೈ (ಪಿಟಿಐ): ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಲಾಭವು ಶೇ 9.6ರಷ್ಟು ಹೆಚ್ಚಾಗಿದೆ. ಕಂಪನಿಯ ರಿಟೇಲ್ ವಹಿವಾಟು ಹಾಗೂ ದೂರಸಂಪರ್ಕ ವಹಿವಾಟಿನಲ್ಲಿ ಉತ್ತಮ ಸಾಧನೆ ಕಂಡುಬಂದಿದೆ.

ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಂಪನಿಯು ₹18,165 ಕೋಟಿ ಲಾಭ ಗಳಿಸಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹16,563 ಕೋಟಿ ಲಾಭ ಆಗಿತ್ತು. ಆದರೆ ಈ ವರ್ಷದ ಜುಲೈ ತ್ರೈಮಾಸಿಕದಲ್ಲಿ ಆಗಿದ್ದ ₹26,994 ಕೋಟಿ ಲಾಭಕ್ಕೆ ಹೋಲಿಸಿದರೆ ಈ ಬಾರಿಯ ಲಾಭ ಶೇ 33ರಷ್ಟು ಇಳಿದಿದೆ.

ದೂರಸಂಪರ್ಕ ಸೇವೆಗಳ ವರಮಾನದಲ್ಲಿ ಶೇ 13ರಷ್ಟು, ರಿಟೇಲ್ ವಹಿವಾಟುಗಳ ವರಮಾನದಲ್ಲಿ ಶೇ 22ರಷ್ಟು ಹೆಚ್ಚಳ ಆಗಿದೆ. ಜಿಯೊ ಪ್ಲಾಟ್‌ಫಾರ್ಮ್ಸ್‌ನ ಲಾಭ ಶೇ 13ರಷ್ಟು ಹೆಚ್ಚಾಗಿ ₹7,379 ಕೋಟಿಗೆ ತಲುಪಿದೆ. ಪ್ರತಿ ಗ್ರಾಹಕನಿಂದ ಕಂಪನಿಗೆ ತಿಂಗಳಿಗೆ ಸಿಗುವ ವರಮಾನವು ₹208 ಇದ್ದಿದ್ದು ₹211.4ಕ್ಕೆ ತಲುಪಿದೆ.

ಎಫ್‌ಎಂಸಿಜಿ ಉತ್ಪನ್ನಗಳನ್ನು ಗ್ರಾಹಕರ ಮನೆಬಾಗಿಲಿಗೆ ತಲುಪಿಸುವ ಸೇವೆಗಳನ್ನು ಒದಗಿಸುತ್ತಿರುವ ರಿಲಯನ್ಸ್ ಕಂಪನಿಯ ಜಿಯೊಮಾರ್ಟ್ ವೇದಿಕೆಯು ಈಗ ದೇಶದ ಒಂದು ಸಾವಿರಕ್ಕೂ ಹೆಚ್ಚು ನಗರಗಳಿಗೆ ವಿಸ್ತರಿಸಿದೆ ಎಂದು ಕಂಪನಿ ತಿಳಿಸಿದೆ.

ಬ್ಲಿಂಕಿಟ್, ಸ್ವಿಗ್ಗಿ ಇನ್‌ಸ್ಟಾಮಾರ್ಟ್, ಬಿಗ್‌ಬಾಸ್ಕೆಟ್‌ನಂತಹ ಕಂಪನಿಗಳ ಜೊತೆ ಜಿಯೊಮಾರ್ಟ್ ಪೈಪೋಟಿ ನಡೆಸುತ್ತಿದೆ. ಜಿಯೊಮಾರ್ಟ್ ಮೂಲಕ 10 ನಗರಗಳಲ್ಲಿ 30 ನಿಮಿಷಗಳ ಒಳಗೆ ಉತ್ಪನ್ನಗಳನ್ನು ಗ್ರಾಹಕರ ಮನೆ ಬಾಗಿಲಿಗೆ ತಲುಪಿಸಲಾಗುತ್ತಿದೆ.

ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಜಿಯೊಮಾರ್ಟ್ ಹೊಸದಾಗಿ 58 ಲಕ್ಷ ಗ್ರಾಹಕರನ್ನು ಪಡೆದುಕೊಂಡಿದೆ ಎಂದು ಕಂಪನಿ ತಿಳಿಸಿದೆ.

ಧನತ್ರಯೋದಶಿ: ಚಿನ್ನ ₹3,200 ಏರಿಕೆ



ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಚಿನ್ನದ ದರ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಏರಿಕೆ ಆಗಿದ್ದರೆ, ಬೆಳ್ಳಿ ಬೆಲೆ ಇಳಿಕೆಯಾಗಿದೆ.

10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹3,200 ಹೆಚ್ಚಳವಾಗಿ, ₹1,34,800ರಂತೆ ಮಾರಾಟವಾಗಿದೆ. ಆಭರಣ ಚಿನ್ನದ (ಶೇ 99.5ರಷ್ಟು ಪರಿಶುದ್ಧತೆ) ಬೆಲೆ ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿ, ₹1,34,200 ಆಗಿದೆ. ಆದರೆ, ಬೆಳ್ಳಿ ಧಾರಣೆ ಕೆ.ಜಿಗೆ ₹7 ಸಾವಿರ ಕಡಿಮೆಯಾಗಿ, ₹1.77 ಲಕ್ಷವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಚಿನ್ನಾಭರಣಗಳ ಖರೀದಿಗೆ ಶುಭ ದಿನ ಎಂದು ಧನತ್ರಯೋದಶಿ ಪರಿಗಣಿತವಾಗಿದೆ. ಇದು ಹತ್ತಿರವಾಗುತ್ತಿರುವ ಕಾರಣಕ್ಕೆ ಆಭರಣ ತಯಾರಕರು ಮತ್ತು ಮಾರಾಟಗಾರರಿಂದ ಚಿನ್ನದ ಖರೀದಿ ಹೆಚ್ಚಳವಾಗಿದೆ. ಇದರಿಂದ ಹಳದಿ ಲೋಹದ ಬೆಲೆ ಏರಿಕೆಯಾಗಿದೆ ಎಂದು ತಿಳಿಸಿದೆ.

ಚಿನ್ನದ ಮೀಸಲು ಸಂಗ್ರಹ ₹9 ಲಕ್ಷ ಕೋಟಿ

ಮುಂಬೈ (ಪಿಟಿಐ): ಅಕ್ಟೋಬರ್ 10ಕ್ಕೆ ಅಂತ್ಯಗೊಂಡ ವಾರದಲ್ಲಿ ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹದ ಪ್ರಮಾಣವು ₹19,153 ಕೋಟಿಯಷ್ಟು ಕಡಿಮೆ ಆಗಿದೆ. ಇದೇ ಅವಧಿಯಲ್ಲಿ ಆರ್‌ಬಿಐ ಬಳಿ ಇರುವ ಚಿನ್ನದ ಮೀಸಲು ಸಂಗ್ರಹದ ಪ್ರಮಾಣ ₹9 ಲಕ್ಷ ಕೋಟಿ ದಾಟಿದೆ.

ಒಟ್ಟು ಮೀಸಲು ಸಂಗ್ರಹ ₹61.41 ಲಕ್ಷ ಕೋಟಿಯಷ್ಟಾಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ತಿಳಿಸಿದೆ. ಆರ್‌ಬಿಐ ಬಳಿ ಇರುವ ವಿದೇಶಿ ಕರೆನ್ಸಿಗಳ ಸಂಪತ್ತಿನ ಮೌಲ್ಯ ₹49,333 ಕೋಟಿಯಷ್ಟು ಕಡಿಮೆಯಾಗಿದ್ದು, ₹50 ಲಕ್ಷ ಕೋಟಿಯಾಗಿದೆ. ಚಿನ್ನದ ಮೀಸಲು ಸಂಗ್ರಹವು ₹31,642 ಕೋಟಿ ಹೆಚ್ಚಳವಾಗಿದೆ.

ಮುಂಬೈ ಧಾರಣೆ (ಶೇಂಗಾ)

17-10-2025	
ಜಾವಾ 70/80(ಹೊಸ)	10400-10500
ಜಾವಾ 80/90(ಹೊಸ)	9700-9800
ದಪ್ಪ ಮಧ್ಯಪ್ರದೇಶ (ಹೊಸ)	7600-7700
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1415 (1415)
ಒಂದು ವಾರದ ಡೆಲಿವರಿ	1410 (1410)
ಪಾಮ್ ವಾರದ ಡೆಲಿವರಿ	1283 (1283)
ಸೂರ್ಯಕಾಂತಿ ಎಣ್ಣೆ ಕಚ್ಚಾ	1410 (1410)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,28,300 (1,27,500)
ಬೆಳ್ಳಿ ಕೆ.ಜಿಗೆ	1,71,300 (1,73,800)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಎಚ್‌1–ಬಿ ವೀಸಾ ಶುಲ್ಕ: ಕೋರ್ಟ್‌ನಲ್ಲಿ ಮೊಕದ್ದಮೆ

ವಾಷಿಂಗ್ಟನ್ (ಪಿಟಿಐ): ಎಚ್‌–1ಬಿ ವೀಸಾ ಅರ್ಜಿ ಶುಲ್ಕವನ್ನು 1 ಲಕ್ಷ ಡಾಲರ್‌ಗೆ (ಸುಮಾರು ₹88 ಲಕ್ಷ) ಏರಿಸುವ ಡೊನಾಲ್ಡ್ ಟ್ರಂಪ್ ನೇತೃತ್ವದ ಸರ್ಕಾರದ ನಿರ್ಧಾರದ ವಿರುದ್ಧ ಅಮೆರಿಕದ ಚೇಂಬರ್ ಆಫ್ ಕಾಮರ್ಸ್ ದೂರು ದಾಖಲಿಸಿದೆ.

ಸರ್ಕಾರದ ನಿರ್ಣಯವು ದಾರಿ ತಪ್ಪಿದ ಮತ್ತು ಕಾನೂನುಬಾಹಿರ ಕ್ರಮ ಎಂದು ಕಟುವಾಗಿ ಟೀಕಿಸಿದೆ. ಕೊಲಂಬಿಯಾದ ಜಿಲ್ಲಾ ಕೋರ್ಟ್‌ನಲ್ಲಿ ದೂರು ದಾಖಲಿಸಿದ್ದು, ಈ ನಿರ್ಣಯ ದೇಶದ ವಲಸೆ, ರಾಷ್ಟ್ರೀಯತೆ ಕಾಯ್ದೆಯನ್ನು ಉಲ್ಲಂಘಿಸುತ್ತದೆ ಎಂದು ದೂರಿದೆ.

ಮತಕಳವು ತನಿಖೆ ಚುರುಕು

ಒಂದನೇ ಪುಟದಿಂದ...

'ನದಿಗೆ ಎಸೆಯಲಾಗಿದ್ದ ಮತ್ತು ಶಕಾಪುರ ಸೇತುವೆ ಮೇಲೆ ಬಿದ್ದಿದ್ದ ಕಾಗದಪತ್ರಗಳಲ್ಲಿ ಮತದಾರರ ಪಟ್ಟಿಗಳು, ಮತದಾರರ ಚೀಟಿಗಳು ಮತ್ತು ಮತದಾರರ ಚೀಟಿ ರದ್ದತಿಗೆ ಸಲ್ಲಿಸಲಾಗುವ ನಮೂನೆ ಸಂಖ್ಯೆ 7ರ ಹಲವು ಪ್ರತಿಗಳು ಪತ್ತೆಯಾಗಿವೆ. ಸುಭಾಷ ಗುತ್ತೇದಾರ ಅವರ ಆಳಂದದ ಮನೆಯ ಎದುರು ಅರೆಬರೆ ಸುಟ್ಟ ಸ್ಥಿತಿಯಲ್ಲಿ ಮತದಾರರ ಚೀಟಿಗಳು ಸಿಕ್ಕಿವೆ.

'ರಾತ್ರಿ 8ರ ವೇಳೆಗೆ ಆಳಂದ ಡಿವೈಎಸ್‌ಪಿ ತಮ್ಮರಾಯ ಪಾಟೀಲ, ಸಿಪಿಐ ಪ್ರಕಾಶ್ ಯಾತನೂರು, ಸಿಐಡಿ ಇನ್‌ಸ್ಪೆಕ್ಟರ್ ಶರಣಗೌಡ ಅವರಿದ್ದ ತಂಡವು, ಅಮರ್ಜಾ ನದಿಯ ಬಳಿ ಮಹಜರು ನಡೆಸಿದೆ. ತಂಡದಲ್ಲಿ ವಿಧಿ ವಿಜ್ಞಾನ ತಜ್ಞರೂ ಇದ್ದು, ನದಿಗೆ ಎಸೆಯಲಾಗಿರುವ ಕಾಗದ ಪತ್ರಗಳನ್ನು ಮೊಬೈಲ್ ಬೆಳಕಿನಲ್ಲಿಯೇ ಸಂಗ್ರಹಿಸಿದೆ.

'ಇನ್ನೊಂದೆಡೆ, ಎಸ್‌ಪಿ ಶುಭಾನ್ವಿತಾ ಮತ್ತು ಡಿವೈಎಸ್‌ಪಿ ಅಸ್ಲಾಂ ಪಾಶಾ ಅವರ ನೇತೃತ್ವದ ತಂಡವು ಆಳಂದದಲ್ಲಿರುವ ಸುಭಾಷ ಗುತ್ತೇದಾರ ಅವರ ಮನೆಗೆ ರಾತ್ರಿ 9ರ ವೇಳೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದೆ ತಂಡದಲ್ಲಿರುವ ವಿಧಿ ವಿಜ್ಞಾನ ತಜ್ಞರು, ಮನೆಯ ಎದುರು ಸುಡಲಾಗಿರುವ ಕಾಗದಪತ್ರಗಳನ್ನು ಸಂಗ್ರಹಿಸುತ್ತಿದ್ದಾರೆ. ಅರೆಸುಟ್ಟ ಕಾಗದಪತ್ರಗಳನ್ನು ಮಿನಿಟ್ರಕ್‌ಗೆ ತುಂಬಿದವರು, ನದಿಗೆ ಎಸೆದವರನ್ನೂ ಪತ್ತೆ ಮಾಡಲಾಗಿದೆ. ಸುಭಾಷ ಗುತ್ತೇದಾರ ಅವರ ಆಳಂದ ಮನೆಯ ಕೆಲಸದವರು ಸೇರಿ ಎಲ್ಲರನ್ನೂ ವಿಚಾರಣೆ ನಡೆಸಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

ಕಾಲ್‌ಸೆಂಟರ್ ಚಟುವಟಿಕೆ ಪತ್ತೆ

ಒಂದನೇ ಪುಟದಿಂದ...

'ಈ ಐವರ ಮೊಬೈಲ್, ಲ್ಯಾಪ್‌ಟಾಪ್‌ಗಳು, ಬ್ಯಾಂಕ್ ಖಾತೆ ವಿವರಗಳನ್ನು ಪಡೆದು ಪರಿಶೀಲನೆ ನಡೆಸಲಾಗಿತ್ತು. ಬೇರೆ–ಬೇರೆ ರಾಜ್ಯಗಳಲ್ಲಿನ ಐ.ಪಿ. ವಿಳಾಸಗಳನ್ನು ಸೃಷ್ಟಿಸಿ, ಈ ಲ್ಯಾಪ್‌ಟಾಪ್‌ಗಳಿಂದ ಏಕಕಾಲಕ್ಕೆ ನಮೂನೆ–7 ಅನ್ನು ಚುನಾವಣಾ ಆಯೋಗದ ಜಾಲತಾಣಕ್ಕೆ ಅಪ್‌ಲೋಡ್ ಮಾಡಲಾಗಿದೆ ಎಂಬುದು ಪ್ರಾಥಮಿಕ ತನಿಖೆಯಲ್ಲಿ ಗೊತ್ತಾಗಿದೆ. ಈ ಲ್ಯಾಪ್‌ಟಾಪ್‌ಗಳನ್ನು ವಿಧಿ ವಿಜ್ಞಾನ ಪರೀಕ್ಷೆಗೆ ಕಳುಹಿಸಲಾಗಿದೆ' ಎಂದು ಮೂಲಗಳು ಮಾಹಿತಿ ನೀಡಿವೆ.

'ಈ ಐವರ ಬ್ಯಾಂಕ್ ವಿವರಗಳನ್ನು ಪರಿಶೀಲಿಸಿದಾಗ, ಚಾರ್ಟರ್ಡ್ ಅಕೌಂಟೆಂಟ್ ಮಲ್ಲಿಕಾರ್ಜುನ ಮಹಾಂತಗೋಳ ಅವರ ಖಾತೆಗಳಿಂದ ಹಣ ವರ್ಗಾವಣೆ ಆಗಿರುವುದು ಪತ್ತೆಯಾಗಿತ್ತು. ಅವರ ಖಾತೆಗಳ ವಹಿವಾಟನ್ನು ಪರಿಶೀಲಿಸಿದಾಗ ಸುಭಾಷ ಗುತ್ತೇದಾರ ಅವರ ಆಪ್ತರು ಮತ್ತು ಅವರ ಒಡೆತನದ ಬಾರ್ ಆ್ಯಂಡ್ ರೆಸ್ಟೋರೆಂಟ್ ಒಂದರ ನೌಕರರ ಜತೆಗೆ ಹಣಕಾಸು ವ್ಯವಹಾರ ನಡೆಸಿರುವುದು ಪತ್ತೆಯಾಗಿದೆ. ಈ ಆಧಾರದಲ್ಲಿ ಮಲ್ಲಿಕಾರ್ಜುನ ಅವರ ಮನೆ–ಕಚೇರಿ, ಆಪ್ತರ ಒಡೆತನದ ಬಾರ್ ಆ್ಯಂಡ್ ರೆಸ್ಟೋರೆಂಟ್‌ನಲ್ಲಿಯೂ ಶುಕ್ರವಾರ ಶೋಧ ನಡೆಸಲಾಗಿದೆ' ಎಂದು ತಿಳಿಸಿವೆ.

ಆರೋಪ

2023ರ ವಿಧಾನಸಭೆ ಚುನಾವಣೆಗೂ ಮುನ್ನ ಆಳಂದ ಮತಕ್ಷೇತ್ರದಲ್ಲಿ 6 ಸಾವಿರದಷ್ಟು ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಅಕ್ರಮವಾಗಿ ತೆಗೆದು ಹಾಕುವ ಯತ್ನ ನಡೆದಿದೆ ಎಂದು ಆರೋಪಿಸಲಾಗಿತ್ತು.

ಕಾಂಗ್ರೆಸ್ ಅಭ್ಯರ್ಥಿ ಬಿ.ಆರ್.ಪಾಟೀಲ ಈ ಬಗ್ಗೆ ಧ್ವನಿ ಎತ್ತಿದ್ದರು. ಬಳಿಕ ಚುನಾವಣೆ ಅಧಿಕಾರಿ ದೂರು ದಾಖಲಿಸಿದ್ದರು. ಚುನಾವಣೆ ಸಂದರ್ಭದಲ್ಲಿ ಬಿಜೆಪಿಯ ಸುಭಾಷ ಗುತ್ತೇದಾರ ಶಾಸಕರಾಗಿದ್ದರು. ಬಳಿಕ ನಡೆದ 2023ರ ಚುನಾವಣೆಯಲ್ಲಿ ಸುಭಾಷ ಗುತ್ತೇದಾರ ಸೋಲುವುದರೊಂದಿಗೆ ಬಿ.ಆರ್.ಪಾಟೀಲ ಶಾಸಕರಾಗಿ ಆಯ್ಕೆಯಾಗಿದ್ದರು. ಮತಗಳವು ಯತ್ನದ ತನಿಖೆಗಾಗಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದರು. ಬಳಿಕ ತನಿಖೆಯ ಜವಾಬ್ದಾರಿಯನ್ನು ಸಿಐಡಿಗೆ ವಹಿಸಲಾಗಿತ್ತು.

'ಸಿಐಡಿ ತನಿಖೆಗೆ ಚುನಾವಣಾ ಆಯೋಗ ಸಹಕಾರ ನೀಡುತ್ತಿಲ್ಲ' ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಈಚೆಗೆ ಧ್ವನಿ ಎತ್ತಿದ್ದು, ರಾಷ್ಟ್ರ ಮಟ್ಟದಲ್ಲಿ ಸುದ್ದಿಯಾಗಿತ್ತು. ಬಳಿಕ ರಾಜ್ಯ ಸರ್ಕಾರ ಪ್ರಕರಣದ ತನಿಖೆಗೆ ಎಸ್‌ಐಟಿ ರಚಿಸಿತ್ತು.

ಸುದ್ದಿ 2 ನಿಮಿಷ

ಡಿಸೆಂಬರ್‌ಗೆ ಸಾಗಣೆ ವೆಚ್ಚ ಒಂದಂಕಿಗೆ: ಸಚಿವ ಗಡ್ಕರಿ

ನವದೆಹಲಿ (ಪಿಟಿಐ): 'ಡಿಸೆಂಬರ್ ವೇಳೆಗೆ ದೇಶದಲ್ಲಿ ಸರಕು ಸಾಗಣೆ ವೆಚ್ಚವು ಒಂದಂಕಿಗೆ ಇಳಿಕೆಯಾಗಲಿದೆ' ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ಐಐಟಿ ಚೆನ್ನೈ, ಐಐಎಂ ಬೆಂಗಳೂರು ಮತ್ತು ಐಐಎಂ ಕಾನ್ಪುರ ಸಿದ್ಧಪಡಿಸಿದ ವರದಿ ಪ್ರಕಾರ, ದೇಶದಲ್ಲಿ ತ್ವರಿತಗತಿಯಲ್ಲಿ ಎಕ್ಸ್‌ಪ್ರೆಸ್ ವೇ ಮತ್ತು ಆರ್ಥಿಕ ವಲಯಗಳ (ಎಕನಾಮಿಕ್ ಕಾರಿಡಾರ್) ನಿರ್ಮಾಣ ಆಗುತ್ತಿದೆ. ಇದು ಸರಕು ಸಾಗಣೆ ವೆಚ್ಚವು ಶೇ 10ಕ್ಕೆ ಇಳಿಕೆಯಾಗಲು ನೆರವಾಗಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಸಾಗಣೆ ವೆಚ್ಚವು ಶೇ 16ರಷ್ಟಿತ್ತು ಎಂದು ಅವರು ತಿಳಿಸಿದರು. ಉತ್ತರ ಭಾರತೀಯ ವಾಣಿಜ್ಯೋದ್ಯಮ ಮಹಾಸಂಘ (ಅಸೋಚಾಂ) ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಗಡ್ಕರಿ ಹೇಳಿದ್ದಾರೆ.

ಡಿಸೆಂಬರ್ ವೇಳೆಗೆ ದೇಶದ ಸರಕು ಸಾಗಣೆ ವೆಚ್ಚವು ಶೇ 9ಕ್ಕೆ ಇಳಿಯಲಿದೆ. ಇದು ದೇಶದ ಸ್ಪರ್ಧಾತ್ಮಕತೆಯನ್ನು ಮತ್ತಷ್ಟು ಹೆಚ್ಚಿಸಲು ಸಹಾಯವಾಗಲಿದೆ. ಉದ್ಯಮ ವಲಯಕ್ಕೆ ಇದರ ಪೂರ್ಣ ಪ್ರಯೋಜನ ದೊರೆಯಲಿದೆ ಎಂದು ತಿಳಿಸಿದ್ದಾರೆ.



ಪ್ರಸ್ತುತ ಅಮೆರಿಕದಲ್ಲಿ ಸರಕು ಸಾಗಣೆ ವೆಚ್ಚವು ಶೇ 12ರಷ್ಟಿದೆ. ಯುರೋಪಿಯನ್ ದೇಶಗಳಲ್ಲಿ ಶೇ 12 ಮತ್ತು ಚೀನಾದಲ್ಲಿ ಶೇ 8ರಿಂದ ಶೇ 10ರಷ್ಟಿದೆ.

ಸಮಯ ಮಿತಿಯಲ್ಲಿ ಅಂಚೆ ಸೇವೆ

ನವದೆಹಲಿ (ಪಿಟಿಐ): 'ಭಾರತೀಯ ಅಂಚೆ ಇಲಾಖೆಯು ಅಂಚೆ ಮತ್ತು ಪಾರ್ಸೆಲ್ ಸೇವೆಗಳನ್ನು ನಿಗದಿತ ಗಡುವಿನಲ್ಲಿ ಗ್ರಾಹಕರಿಗೆ ತಲುಪಿಸುವ ಹೊಸ ಯೋಜನೆಗಳಿಗೆ ಜನವರಿಯಲ್ಲಿ ಚಾಲನೆ ನೀಡಲಿದೆ' ಎಂದು ಕೇಂದ್ರ ದೂರಸಂಪರ್ಕ ಸಚಿವ ಜ್ಯೋತಿರಾಧಿತ್ಯ ಸಿಂಧಿಯಾ ಶುಕ್ರವಾರ ಹೇಳಿದ್ದಾರೆ.

ಪತ್ರಗಳು ಮತ್ತು ಪಾರ್ಸೆಲ್‌ಗಳನ್ನು 24 ಗಂಟೆಗಳಲ್ಲಿ ತಲುಪಿಸುವ ಸೇವೆ ಹಾಗೂ ಇವುಗಳನ್ನು 48 ಗಂಟೆಗಳಲ್ಲಿ ತಲುಪಿಸುವ ಸೇವೆಯನ್ನು ಜನವರಿಯಲ್ಲಿ ಆರಂಭಿಸಲಾಗುತ್ತದೆ ಎಂದು ಅವರು ತಿಳಿಸಿದ್ದಾರೆ. ಈಗ ಕೆಲವು ಪಾರ್ಸೆಲ್‌ಗಳು ಗ್ರಾಹಕರನ್ನು ತಲುಪಲು 3ರಿಂದ 4 ದಿನ ತೆಗೆದುಕೊಳ್ಳುತ್ತಿದ್ದು, ಅವುಗಳನ್ನು ಮರುದಿನವೇ ಗ್ರಾಹಕರಿಗೆ ತಲುಪಿಸುವ ಸೇವೆ ಕೂಡ ಶುರುವಾಗಲಿದೆ ಎಂದು ಹೇಳಿದ್ದಾರೆ.

ಸೆನ್ಸೆಕ್ಸ್ 484 ಅಂಶ ಏರಿಕೆ



ಮುಂಬೈ (ಪಿಟಿಐ): ಬ್ಯಾಂಕಿಂಗ್ ಮತ್ತು ತೈಲ ಕಂಪನಿಗಳ ಷೇರು ಖರೀದಿ ಹೆಚ್ಚಳದಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಶುಕ್ರವಾರದ ವಹಿವಾಟಿನಲ್ಲಿ ಏರಿಕೆ ಕಂಡಿವೆ. ವಿದೇಶಿ ಬಂಡವಾಳದ ಒಳಹರಿವು ಸಹ ಸೂಚ್ಯಂಕಗಳ ಏರಿಕೆಗೆ ನೆರವಾಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 484 ಅಂಶ ಏರಿಕೆಯಾಗಿ 83,952ಕ್ಕೆ ಕೊನೆಗೊಂಡಿದೆ. ವಹಿವಾಟಿನ ನಡುವಿನಲ್ಲಿ 704 ಅಂಶಗಳವರೆಗೆ ಜಿಗಿದಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ 124 ಅಂಶ ಹೆಚ್ಚಳವಾಗಿ, 25,709ಕ್ಕೆ ವಹಿವಾಟು ಅಂತ್ಯಗೊಂಡಿದೆ. ಇದು 52 ವಾರಗಳ ಗರಿಷ್ಠ ಮಟ್ಟದ ಏರಿಕೆಯಾಗಿದೆ.

'ದಾಳಿ ಮುಂದುವರಿಸಿದರೆ ಹತ್ಯೆಗೈಯ್ಯುತ್ತೇವೆ'

ಹಮಾಸ್‌ಗೆ ಟ್ರಂಪ್ ಎಚ್ಚರಿಕೆ



ಡೊನಾಲ್ಡ್ ಟ್ರಂಪ್

ವಾಷಿಂಗ್ಟನ್ (ಎಪಿ): 'ಗಾಜಾದ ಒಳಗೆ ದಾಳಿ ಮುಂದುವರಿಸಿದರೆ ನಿಮ್ಮ ಹತ್ಯೆಗೈಯ್ಯುವುದು ಬಿಟ್ಟು ಬೇರೆ ದಾರಿಯಿಲ್ಲ' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹಮಾಸ್ ಬಂಡುಕೋರರಿಗೆ ಎಚ್ಚರಿಕೆ ನೀಡಿದ್ದಾರೆ.

'ಗಾಜಾದಲ್ಲಿ ವಿರೋಧಿ ಗುಂಪುಗಳ ಮೇಲೆ ಹಮಾಸ್ ದಾಳಿ ನಡೆಸಬಾರದು. ನನ್ನ ತಾಳ್ಮೆಗೂ ಮಿತಿಯಿದೆ. ಹಮಾಸ್ ಶಸ್ತ್ರಾಸ್ತ್ರಗಳನ್ನು ತ್ಯಜಿಸಬೇಕು. ಒಂದು ವೇಳೆ ತ್ಯಜಿಸದಿದ್ದರೆ, ಶಸ್ತ್ರಾಸ್ತ್ರ ತ್ಯಜಿಸುವಂತೆ ನಾವು ಮಾಡುತ್ತೇವೆ; ಅದೂ ಕ್ಷಿಪ್ರವಾಗಿ ಮತ್ತು ಹಿಂಸಾತ್ಮಕವಾಗಿ ಎಂದು ಟ್ರಂಪ್ ಎಚ್ಚರಿಸಿದ್ದಾರೆ.

ಗಾಜಾ ಕದನ ವಿರಾಮ ಬಹುತೇಕ ಫಲಿಸಿದ್ದು, ಇಸ್ರೇಲ್ ಮತ್ತು ಹಮಾಸ್ ನಡುವಿನ ಸಂಘರ್ಷ ಅಂತ್ಯಗೊಳಿಸುವ ವಿಶ್ವಾಸದಲ್ಲಿರುವ ಟ್ರಂಪ್ ಅವರು ಸಾಮಾಜಿಕ ಜಾಲತಾಣ 'ಟ್ರೂತ್'ನಲ್ಲಿ ಈ ಎಚ್ಚರಿಕೆಯನ್ನು ನೀಡಿದ್ದಾರೆ. ಈ ಕುರಿತು ಶ್ವೇತಭವನ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಕದನ ವಿರಾಮಕ್ಕೆ ಬದ್ಧ-ಹಮಾಸ್ **(ದೀರ್ ಅಲ್‌-ಬಲಾಹ್ (ಗಾಜಾಪಟ್ಟಿ) ವರದಿ):** ಇಸ್ರೇಲ್ ಒತ್ತೆಯಾಳುಗಳ ಮೃತದೇಹಗಳನ್ನು ಹಸ್ತಾಂತರ ಮಾಡುವುದೂ ಸೇರಿದಂತೆ ಎಲ್ಲ ನಿಯಮಗಳಿಗೆ ಬದ್ಧವಿರುವುದಾಗಿ ಶುಕ್ರವಾರ ಹೇಳುವ ಮೂಲಕ ಇಸ್ರೇಲ್ ಜೊತೆಗಿನ ಕದನ ವಿರಾಮ ಪಾಲಿಸುವ ನಿಲುವನ್ನು ಹಮಾಸ್ ಪುನರುಚ್ಚರಿಸಿದೆ.

ಅಮೆರಿಕ ಅಧ್ಯಕ್ಷ ಟ್ರಂಪ್ ಎಚ್ಚರಿಸಿದ ನಂತರ ಹಮಾಸ್ ಬಂಡುಕೋರರು ರಕ್ಷಣಾತ್ಮಕ ನಿಲುವು ತಳೆದಿದ್ದಾರೆ.

ಈ ಮಧ್ಯೆ, ಗಾಜಾಗಾಗಿಯೇ ಅಂತರರಾಷ್ಟ್ರೀಯ ಭದ್ರತಾ ಪಡೆಯನ್ನು ಸ್ಥಾಪಿಸಲು ಇಂಗ್ಲೆಂಡ್ ಮತ್ತು ಅಮೆರಿಕದ ಜೊತೆ ಸೇರಿ ವಿಶ್ವಸಂಸ್ಥೆಯಲ್ಲಿ ಪ್ರಸ್ತಾಪಿಸುವುದಾಗಿ ಫ್ರಾನ್ಸ್ ಹೇಳಿದೆ.

ಅರಬ್ ದೇಶಗಳು ವಿಶ್ವಸಂಸ್ಥೆ ಮಾನದಂಡದ ಅಂತರರಾಷ್ಟ್ರೀಯ ಪಡೆಗೆ ಪಟ್ಟು ಹಿಡಿದಿವೆ ಎಂದು ಫ್ರಾನ್ಸ್‌ನ ವಿದೇಶಾಂಗ ಇಲಾಖೆ ವಕ್ತಾರ ಪ್ಯಾಸ್ಕಲ್ ಕಾನ್‌ಫವ್ರೀಕ್ಸ್ ಗುರುವಾರ ಹೇಳಿದ್ದಾರೆ.

ಪುಟಿನ್ ಜೊತೆ ಮತ್ತೆ ಟ್ರಂಪ್ ಸಭೆ

ಉಕ್ರೇನ್‌ನಲ್ಲಿ ಯುದ್ಧ ಕೊನೆಗೊಳಿಸುವ ತನ್ನ ಪ್ರಯತ್ನವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ದ್ವಿಗುಣಗೊಳಿಸುತ್ತಿದ್ದು, ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರೊಂದಿಗೆ ಎರಡನೇ ಸಭೆ ನಡೆಸುವುದಾಗಿ ಗುರುವಾರ ಘೋಷಿಸಿದ್ದಾರೆ. ಶುಕ್ರವಾರ ಶ್ವೇತಭವನದಲ್ಲಿ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರೊಂದಿಗೆ ಅವರು ಸಭೆ ನಡೆಸಲಿದ್ದು, ಅದಕ್ಕೂ ಮುಂಚೆ ಈ ಹೇಳಿಕೆ ನೀಡಿದ್ದಾರೆ.

ಗುರುವಾರ ಪುಟಿನ್ ಜೊತೆ ಫೋನ್ ಮೂಲಕ ಮಾತುಕತೆ ನಡೆಸಿದ ಸ್ವಲ್ಪ ಸಮಯದಲ್ಲೇ ಅವರು ಈ ಘೋಷಣೆ ಮಾಡಿದ್ದಾರೆ. ಸಭೆಯ ದಿನಾಂಕವನ್ನು ನಿಗದಿಪಡಿಸಿಲ್ಲವಾದರೂ, ಸಭೆಯು ಸುಮಾರು ಎರಡು ವಾರಗಳಲ್ಲಿ ಹಂಗೇರಿಯ ಬುಡಾಪೆಸ್ಟ್‌ನಲ್ಲಿ ನಡೆಯಲಿದೆ ಎಂದು ಹೇಳಿದ್ದಾರೆ.

'ಇಂದಿನ ಫೋನ್ ಕರೆಯಲ್ಲಿ ಮಹತ್ವದ ಬೆಳವಣಿಗೆ ಸಂಭವಿಸಿದೆ ಎಂದು ಭಾವಿಸಿದ್ದೇನೆ' ಎಂದು ಟ್ರಂಪ್ ಸಾಮಾಜಿಕ ಮಾಧ್ಯಮದಲ್ಲಿ ಬರೆದಿದ್ದಾರೆ.

ಟೊಮಹಾಕ್ ಕ್ಷಿಪಣಿ ಕಳುಹಿಸಲು ಹಿಂದೇಟು

ವಾಷಿಂಗ್ಟನ್ (ಎಪಿ): 'ಉಕ್ರೇನ್‌ಗೆ ತೀವ್ರ ಅಗತ್ಯವಾಗಿರುವ ದೂರಗಾಮಿ ಸಾಮರ್ಥ್ಯವಿರುವ ಟೊಮಹಾಕ್ ಕ್ಷಿಪಣಿಗಳನ್ನು ಮಾರಾಟ ಮಾಡಲು ನಾನು ಇನ್ನೂ ಒಪ್ಪಿಗೆ ನೀಡಿಲ್ಲ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಹಾಗೂ ಡೊನಾಲ್ಡ್ ಟ್ರಂಪ್ ಜೊತೆಗೆ ಗುರುವಾರ ದೀರ್ಘಾವಧಿ ಫೋನ್ ಸಂಭಾಷಣೆ ನಡೆಯಿತು. ಒಂದು ದಿನದ ನಂತರ ಝೆಲೆನ್‌ಸ್ಕಿ ಜೊತೆಗೆ ಟ್ರಂಪ್ ಸಭೆ ನಿಗದಿಯಾಗಿದೆ.

'ಟೊಮಹಾಕ್ ಕ್ಷಿಪಣಿಗಳನ್ನು ಉಕ್ರೇನ್‌ಗೆ ಮಾರಾಟ ಮಾಡಲು ಟ್ರಂಪ್ ತೀವ್ರ ಆಸಕ್ತಿ ವಹಿಸಿದ್ದರು. ಆ ರೀತಿ ಮಾಡಿದರೆ, ಅಮೆರಿಕ ಹಾಗೂ ರಷ್ಯಾ ನಡುವಿನ ಸಂಬಂಧ ಮತ್ತಷ್ಟು ಹದಗೆಡಲಿದೆ' ಎಂದು ಪುಟಿನ್ ಎಚ್ಚರಿಕೆ ನೀಡಿದ್ದರು.

ಟೊಮಹಾಕ್ ಕ್ಷಿಪಣಿಗಳು 1,600 ಕಿ.ಮೀ. ದೂರದವರೆಗೆ ದಾಳಿ ನಡೆಸುವ ಸಾಮರ್ಥ್ಯ ಹೊಂದಿವೆ. ರಷ್ಯಾದ ಪ್ರಮುಖ ಸೇನಾ ನೆಲೆಗಳು, ಇಂಧನ ಕೇಂದ್ರಗಳು, ಪ್ರಮುಖ ಮೂಲಸೌಕರ್ಯಗಳ ಮೇಲೆ ದಾಳಿ ನಡೆಸಲು ಈ ಕ್ಷಿಪಣಿಗಳು ಉಕ್ರೇನ್‌ಗೆ ಅಗತ್ಯವಿದೆ ಎಂದು ಝೆಲೆನ್‌ಸ್ಕಿ ಆಗ್ರಹಿಸುತ್ತಿದ್ದಾರೆ.

ಜುಲೈ ಚಾರ್ಟರ್ ಜಂಟಿ ಘೋಷಣೆಗೆ ಸಹಿ ಹಾಕಿದ ವೇಳೆ ಅವಘಡ

ಬಾಂಗ್ಲಾದಲ್ಲಿ ಪ್ರತಿಭಟನೆ: ಲಾಠಿಚಾರ್ಜ್

ಢಾಕಾ (ಪಿಟಿಐ): ಜುಲೈ ಚಾರ್ಟರ್ (ಸನ್ನದು) ಜಂಟಿ ಘೋಷಣೆಗೆ ಸಹಿ ಹಾಕುವ ಅನಿಶ್ಚಿತತೆಯ ಮಧ್ಯೆ ಸಂಸತ್ತಿನ ಬಳಿ ಜಮಾಯಿಸಿದ ಪ್ರತಿಭಟನಕಾರರನ್ನು ಚದುರಿಸಲು ಬಾಂಗ್ಲಾ ಪೊಲೀಸರು ಲಾಠಿ ಬೀಸಿ, ಅಶ್ರುವಾಯು ಸಿಡಿಸಿದರು.

ಶೇಖ್ ಹಸೀನಾ ನೇತೃತ್ವದ ಅವಾಮಿ ಲೀಗ್ ಪಕ್ಷದ ಆಡಳಿತದ ವಿರುದ್ಧ 2024ರ ಆಗಸ್ಟ್‌ನಲ್ಲಿ ನಡೆದ ದಂಗೆಯಲ್ಲಿ ಗಾಯಗೊಂಡವರಿಗೆ ಹಾಗೂ ಭಾಗಿಯಾಗಿದ್ದವರಿಗೆ ಕಾನೂನಿನ ರಕ್ಷಣೆ ಮತ್ತು ಪುನರ್ವಸತಿ ಕಲ್ಪಿಸಬೇಕು ಎಂಬ ಬೇಡಿಕೆಯ ಜುಲೈ ಚಾರ್ಟರ್‌ಗೆ ಸಹಿ ಹಾಕುವ ವೇದಿಕೆ ಮುಂಭಾಗ ಶುಕ್ರವಾರ ನೂರಾರು ಪ್ರತಿಭಟನಕಾರರು ಜಮಾಯಿಸಿದ್ದರು ಎಂದು ಬಿಡಿನ್ಯೂಸ್‌24.ಕಾಮ್ ವರದಿ ಮಾಡಿದೆ.

ಪ್ರತಿಭಟನಕಾರರು ವೇದಿಕೆ ಮುಂಭಾಗ ಜಮಾಯಿಸುವುದಕ್ಕೂ ಮೊದಲು, ಮುಖ್ಯ ದ್ವಾರಗಳನ್ನು ಹತ್ತುವ ಮೂಲಕ ಸಂಸತ್ತಿನ ಆವರಣ ಪ್ರವೇಶಿಸಿದ್ದರು ಎಂದು ವರದಿಯಾಗಿದೆ.

ಭದ್ರತಾ ಸಿಬ್ಬಂದಿ ತಡೆಯಲು ಯತ್ನಿಸಿದರೂ ಪ್ರಯೋಜನವಾಗಲಿಲ್ಲ. ಪ್ರತಿಭಟನಕಾರರು ಅತಿಥಿಗಳಿಗಾಗಿ ಕಾಯ್ದಿರಿಸಿದ ಕುರ್ಚಿಗಳ ಮೇಲೆ ಕುಳಿತು ಘೋಷಣೆಗಳನ್ನು ಕೂಗಿದರು ಎಂದು ಪೋರ್ಟಲ್ ತಿಳಿಸಿದೆ.

ಉದ್ರಿಕ್ತಗೊಂಡಿದ್ದ ಪ್ರತಿಭಟನಕಾರರು ಪೊಲೀಸರ ಎರಡು ವಾಹನಗಳನ್ನು ಧ್ವಂಸಗೊಳಿಸಿದರು. ತಾತ್ಕಾಲಿಕ ಸ್ವಾಗತ ಕೊಠಡಿ, ನಿಯಂತ್ರಣ ಕೊಠಡಿ ಮತ್ತು ಸಂಸತ್ ಕಟ್ಟಡದ ಮುಂಭಾಗ ನಿರ್ಮಿಸಲಾಗಿರುವ ಪೀಠೋಪಕರಣಗಳಿಗೆ ಬೆಂಕಿ ಹಚ್ಚಿದರು.

ರೊಚ್ಚಿಗೆದ್ದಿದ್ದ ಪ್ರತಿಭಟನಕಾರರನ್ನು ನಿಯಂತ್ರಿಸಲು ಪೊಲೀಸರು ಲಾಠಿ ಬೀಸಿದರು. ಅಶ್ರುವಾಯು ಸಿಡಿಸಿ ಅವರನ್ನು ಸಂಸತ್ತಿನ ಆವರಣದಿಂದ ಹೊರಕಳುಹಿಸಿದರು.

ಮಧ್ಯಂತರ ಸರ್ಕಾರ ಸ್ಥಾಪಿಸಿದ ಆಯೋಗ ಮತ್ತು ರಾಜಕೀಯ ಪಕ್ಷಗಳ ನಡುವಿನ ಸುದೀರ್ಘ ಮಾತುಕತೆಯ ನಂತರ ಜುಲೈ ಚಾರ್ಟರ್ ರಚಿಸಲಾಗಿದೆ.

ಮುಖ್ಯ ಸಲಹೆಗಾರ ಮುಹಮ್ಮದ್ ಯೂನಸ್ ಆಡಳಿತದ ಪ್ರಮುಖ ಮಿತ್ರಪಕ್ಷ ನ್ಯಾಷನಲ್ ಸಿಟಿಜನ್ ಪಾರ್ಟಿ (ಎನ್‌ಸಿಪಿ) ಈ ದಾಖಲೆಗೆ ಸಹಿ ಹಾಕುವುದಿಲ್ಲ ಎಂದು ಹೇಳಿದೆ.

'ಚಾರ್ಟರ್ ಜಂಟಿ ಘೋಷಣೆಗೆ ಸಹಿ ನವ ಬಾಂಗ್ಲಾದೇಶ ಉದಯ'

ಮಿತ್ರಪಕ್ಷ ನ್ಯಾಷನಲ್ ಸಿಟಿಜನ್ ಪಾರ್ಟಿಯ (ಎನ್‌ಸಿಪಿ) ವಿರೋಧದ ನಡುವೆಯೂ ಜುಲೈ ಚಾರ್ಟರ್ (ಸನ್ನದು) ಜಂಟಿ ಘೋಷಣೆಗೆ ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಮುಖ್ಯಸ್ಥ ಮುಹಮ್ಮದ್ ಯೂನಸ್ ಸಹಿ ಹಾಕಿದರು.

ಸಂಸತ್ ಸಂಕೀರ್ಣದಲ್ಲಿ ನಡೆದ ಸಮಾರಂಭದಲ್ಲಿ ವಿವಿಧ ಪಕ್ಷಗಳ ನಾಯಕರು ಸಹಿ ಹಾಕುತ್ತಿದ್ದಂತೆ ಯೂನಸ್ ಅವರು, 'ನವ ಬಾಂಗ್ಲಾದೇಶ ಉದಯಿಸಿದೆ' ಎಂದು ಬಣ್ಣಿಸಿದರು.

ಮಧ್ಯಂತರ ಸರ್ಕಾರ ಸ್ಥಾಪಿಸಿದ್ದ ರಾಷ್ಟ್ರೀಯ ಒಮ್ಮತ ಆಯೋಗ ಹಾಗೂ ರಾಜಕೀಯ ಪಕ್ಷಗಳ ನಡುವೆ ಸತತ ಮಾತುಕತೆ ನಡೆಸಿದ ಬಳಿಕ ರಚಿಸಲಾದ ಜುಲೈ ಚಾರ್ಟರ್‌ನಲ್ಲಿ (ಸನ್ನದು) ವಿವಿಧ ವಲಯಗಳಿಗೆ ಸಂಬಂಧಿಸಿದಂತೆ 80 ಸುಧಾರಣಾ ಕ್ರಮಗಳನ್ನು ಪ್ರಸ್ತಾಪಿಸಲಾಗಿದೆ.



ಬೆಳೆ ಹಾನಿಗೆ ಪರಿಹಾರ ಒದಗಿಸಲು ಆಗ್ರಹಿಸಿ ಬಸವಕಲ್ಯಾಣದಲ್ಲಿ ನಡೆದ ಅರೆಬೆತ್ತಲೆ ಪ್ರತಿಭಟನೆ ಬಳಿಕ ಡಾ.ಅಂಬೇಡ್ಕರ್ ವೃತ್ತಕ್ಕೆ ಬಂದಾಗ ಕಂಡುಬಂದ ದೃಶ್ಯ

ಬಾರುಕೋಲು ಏಟು ತಿಂದ ಶಾಸಕ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ (ಬೀದರ್ ಜಿಲ್ಲೆ): ಅತಿವೃಷ್ಟಿ ಹಾನಿಗೆ ಪರಿಹಾರ ಒದಗಿಸಲು ಆಗ್ರಹಿಸಿ ನಗರದಲ್ಲಿ ಶುಕ್ರವಾರ ಬಿಜೆಪಿಯಿಂದ ನಡೆದ ಅರೆಬೆತ್ತಲೆ ಪ್ರತಿಭಟನೆಯಲ್ಲಿ ಶಾಸಕ ಶರಣು ಸಲಗರ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಮುಖವಾಡ ಧರಿಸಿದ್ದವರಿಂದ ಬಾರುಕೋಲಿನಿಂದ ಬೆನ್ನು ಮತ್ತು ಹೊಟ್ಟೆಗೆ ಬರೆ ಎಳುವಂತೆ ಹೊಡೆಸಿಕೊಂಡರು.

ಪಟ್ಟಿಗಳಿರುವ ಚಡ್ಡಿ ಕಾಣುವಂತೆ ಲುಂಗಿ ಧರಿಸಿ ತಲೆಗೆ ಹಸಿರು ಟವೆಲ್ ಸುತ್ತಿಕೊಂಡು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಮಹಾತ್ಮ ಗಾಂಧಿ ವೃತ್ತದಿಂದ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದವರೆಗೆ ಮೆರವಣಿಗೆ ನಡೆಯಿತು. ಅನೇಕರು ಪಕ್ಷದ ಧ್ವಜಗಳನ್ನು ಹಿಡಿದಿದ್ದರು.

ತೊಗರಿ ಮತ್ತಿತರ ಬೆಳೆಗಳ ಒಣಗಿದ ದಂಟುಗಳನ್ನು ಸಹ ಹಿಡಿಯಲಾಗಿತ್ತು. ಹಲಗೆ, ಡಿಜೆಯ ಸದ್ದಿನೊಂದಿಗೆ ಸರ್ಕಾರ ವಿರುದ್ಧ ಘೋಷಣೆ ಕೂಗುತ್ತ ಮೆರವಣಿಗೆಯಲ್ಲಿ ಸಾಗಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರು, 'ಸರ್ಕಾರ ಪರಿಹಾರ ನೀಡದೆ ಗಾಯದ ಮೇಲೆ ಮತ್ತೆ ಬರೆ ಹೇಗೆ ಎಳೆಯುತ್ತಿದೆ ಎಂಬುದನ್ನು ಬಾರುಕೋಲಿನಿಂದ ಹೊಡೆಸಿಕೊಂಡು ತೋರಿಸಿದ್ದೇನೆ' ಎಂದರು.

ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ಸೋಮನಾಥ ಪಾಟೀಲ ಹಾಗೂ ತಾಲ್ಲೂಕು ಘಟಕದ ಪದಾಧಿಕಾರಿಗಳು, ಅಪಾರ ಸಂಖ್ಯೆಯಲ್ಲಿ ಕಾರ್ಯಕರ್ತರು, ರೈತರು ಪಾಲ್ಗೊಂಡಿದ್ದರು.

ಆದ್ಯತಾ ವಲಯ: 5 ಉಪಸಮಿತಿ ರಚನೆ

ವರದಿ ಸಲ್ಲಿಸಲು ಒಂದು ತಿಂಗಳು ಅವಕಾಶ: ಬಿ.ಆರ್.ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಯೋಜನೆಗಳನ್ನು ಪರಿಣಾಮಕಾರಿಯಾಗಿ ಕೈಗೊಳ್ಳಲು ಐದು ಪ್ರಮುಖ ಆದ್ಯತಾ ವಲಯಗಳನ್ನು ಗುರುತಿಸಿ, ಉಪಸಮಿತಿಗಳನ್ನು ರಚಿಸಲಾಗಿದೆ. ಸಂಬಂಧಪಟ್ಟ ಇಲಾಖೆಗಳೊಂದಿಗೆ ಚರ್ಚಿಸಿ ಬಜೆಟ್ ಪೂರ್ವ ವರದಿ ಸಲ್ಲಿಸುವಂತೆ ಸೂಚಿಸಲಾಗಿದೆ ಎಂದು ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್.ಪಾಟೀಲ ಹೇಳಿದರು.

ಆದ್ಯತಾ ವಲಯಗಳಾದ ಶಿಕ್ಷಣ ಮತ್ತು ಕೌಶಲ, ಆರೋಗ್ಯ, ಪೋಷಣೆ, ನೈರ್ಮಲ್ಯ ಮತ್ತು ನೀರು ಸರಬರಾಜು, ಪರಿಸರ–ಹವಾಮಾನ ಬದಲಾವಣೆ, ಕೃಷಿ ಮತ್ತು ಕೃಷಿ ಸಂಬಂಧಿತ ವಲಯ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ದುರ್ಬಲ ವರ್ಗ ಮತ್ತು ಕಾರ್ಮಿಕ ವಲಯಕ್ಕೆ ಉಪಸಮಿತಿಗಳನ್ನು ರಚಿಸಿ, ಆಯೋಗದ ಸದಸ್ಯರು ಹಾಗೂ ತಜ್ಞರನ್ನು ನೇಮಕ ಮಾಡಲಾಗಿದೆ. ಮುಂದಿನ ಬಜೆಟ್‌ನೊಳಗೆ ಮುಖ್ಯಮಂತ್ರಿಗೆ ಶಿಫಾರಸುಗಳ ಸಹಿತ ವರದಿ ಸಲ್ಲಿಸಲಾಗುವುದು ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಉಪಸಮಿತಿಗಳು ಸಂಬಂಧಿಸಿದ ಇಲಾಖೆಗೆ ಐದೆ ಸಭೆ, ಚರ್ಚೆ ನಡೆಸಿ ಯೋಜನೆಗಳು, ನೀತಿ ನಿರ್ಧಾರಗಳ ಆಗತ್ಯದ ಬಗ್ಗೆ ಸ್ಪಷ್ಟ ಅಭಿಪ್ರಾಯದೊಂದಿಗೆ ಪ್ರಸ್ತಾವನೆಗಳನ್ನು ನವೆಂಬರ್ ಅಂತ್ಯದೊಳಗೆ ಸಲ್ಲಿಸಬೇಕು. ನಂತರ ಜಿಲ್ಲಾ ಯೋಜನಾ ಸಮಿತಿಗಳಿಗೆ ಕಳುಹಿಸಿ ವಿವರಣೆ ಪಡೆದು ಸಂಬಂಧಿಸಿದ ಸಚಿವರೊಂದಿಗೆ ಸಭೆಗಳನ್ನು ನಡೆಸಿ, ಬಜೆಟ್‌ಗೆ ಮುನ್ನ ಮುಖ್ಯಮಂತ್ರಿಗೆ ವರದಿ ಸಲ್ಲಿಸಲಾಗುವುದು. ನಂತರ ಅವರು ಯಾವ ಇಲಾಖೆಗೆ ಎಷ್ಟು ಅನುದಾನ ಎಂಬುದನ್ನು ನಿರ್ಧರಿಸುತ್ತಾರೆ ಎಂದು ಮಾಹಿತಿ ನೀಡಿದರು.

ಬಜೆಟ್‌ನಲ್ಲಿ ಆಯೋಗದ ಶಿಫಾರಸು, ವರದಿಯಲ್ಲಿನ ಅಂಶಗಳನ್ನು ಸೇರಿಸುವುದು ಅಥವಾ ಬಿಡುವುದು ಸರ್ಕಾರದ ವಿವೇಚನೆಗೆ ಬಿಟ್ಟಿದ್ದು. ಹಣಕಾಸಿನ ಲಭ್ಯತೆ ಆಧರಿಸಿ ಪರಿಗಣಿಸಲಾಗುತ್ತದೆ. ಜಿಲ್ಲಾ ಯೋಜನಾ ಸಮಿತಿಗೆ ಚುನಾವಣೆಯೇ ನಡೆದಿಲ್ಲ. ರಾಜ್ಯ ಬಜೆಟ್‌ಗೆ ತಳಮಟ್ಟದ ಮಾಹಿತಿ ನೀಡಬೇಕಾದ ಜಿಲ್ಲಾ ಯೋಜನಾ ಸಮಿತಿಗಳನ್ನು (ಡಿಪಿಸಿ) ರಚಿಸುವಲ್ಲಿ ಮತ್ತು ಸಭೆ ನಡೆಸುವಲ್ಲಿ ಸಚಿವರು ನಿರ್ಲಕ್ಷ್ಯ ತೋರುತ್ತಿದ್ದಾರೆ. ತಳಹಂತದ ಸಮಸ್ಯೆಗಳಿಗೆ ಬಜೆಟ್‌ನಲ್ಲಿ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗುತ್ತಿಲ್ಲ. ಈ ಸಮಸ್ಯೆ ಬಗ್ಗೆ ಮುಖ್ಯಮಂತ್ರಿ ಪತ್ರ ಬರೆದಿದ್ದು, ಡಿಪಿಸಿ ಪರ್ಯಾಯವಾಗಿ ವ್ಯವಸ್ಥೆ ರೂಪಿಸುವಂತೆ ಮನವಿ ಮಾಡಲಾಗಿದೆ ಎಂದರು.

ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆ ನಡೆಯದ ಕಾರಣ ಜನರು ಎಲ್ಲಾ ಸಮಸ್ಯೆಗಳಿಗೂ ಶಾಸಕರನ್ನು ಹುಡುಕಿಕೊಂಡು ಬರುತ್ತಾರೆ. ಹಾಗಾಗಿ ಚುನಾವಣೆ ನಡೆಸುವಂತೆ ಸರ್ಕಾರಕ್ಕೆ ಮನವಿ ಮಾಡಲಾಗಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್.ಪಾಟೀಲ ಮಾತನಾಡಿ, ರಾಜ್ಯದಲ್ಲಿ ಗದಗದಲ್ಲಿ ಮಾತ್ರ ಜಿಲ್ಲಾ ಯೋಜನಾ ಸಮಿತಿ ಚುನಾವಣೆ ನಡೆದಿದೆ. ಹಳ್ಳಿಗಳಲ್ಲಿ ಸ್ಮಶಾನಕ್ಕೆ ಜಾಗದ ಸಮಸ್ಯೆ ಇದೆ ಎಂದರು.

ಸದಸ್ಯರಾದ ಅಲಿಬಾಬಾ, ಎಸ್. ಮೋಹನ್ ದಾಸ್ ಹೆಗ್ಡೆ, ಡಾ.ರಝಾಕ್ ಉಸ್ತಾದ್ ಗೋಷ್ಠಿಯಲ್ಲಿ ಹಾಜರಿದ್ದರು.

ಮುಖ್ಯಾಂಶಗಳು

- ಆಯೋಗಕ್ಕೆ ಸದಸ್ಯರು, ತಜ್ಞರ ನೇಮಕಾತಿ
- ಸಮಿತಿಯಿಂದ ವರದಿ ಸಲ್ಲಿಕೆ– ಸರ್ಕಾರದಿಂದ ಅಂತಿಮ ನಿರ್ಧಾರ

ಖರ್ಗೆ–ಡಿಕೆಶಿ ರಹಸ್ಯ ಮಾತುಕತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಿವಾಸಕ್ಕೆ ಶುಕ್ರವಾರ ಭೇಟಿ ನೀಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸುಮಾರು ಒಂದೂವರೆ ಗಂಟೆ ಚರ್ಚೆ ನಡೆಸಿದ್ದಾರೆ.

ಅನಾರೋಗ್ಯ ಕಾರಣದಿಂದ ಬೆಂಗಳೂರಿನ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿರುವ ಖರ್ಗೆ ಅವರ ಆರೋಗ್ಯ ವಿಚಾರಿಸಿದ ಶಿವಕುಮಾರ್, ನಂತರ ತಮ್ಮ ಜತೆಗಿದ್ದ ಎಲ್ಲರನ್ನೂ ಹೊರಗೆ ಕಳುಹಿಸಿ ಅವರ ಜತೆ ಸುದೀರ್ಘ ಮಾತುಕತೆ ನಡೆಸಿದ್ದಾರೆ.

'ಸರ್ಕಾರಿ ಸ್ಥಳಗಳಲ್ಲಿ ಆರ್‌ಎಸ್‌ಎಸ್ ಚಟುವಟಿಕೆ ನಿಷೇಧಿಸುವ ಕುರಿತು ಪ್ರಿಯಾಂಕ್ ಖರ್ಗೆ ಬರೆದ ಪತ್ರ, ಅದಕ್ಕೆ ಪೂರಕವಾಗಿ ಸಂಪುಟ ತೆಗೆದುಕೊಂಡ ನಿರ್ಧಾರ, ನಂತರದ ಬೆಳವಣಿಗೆಗಳ ಕುರಿತು ಒಂದಷ್ಟು ಮಾತುಕತೆ ನಡೆಸಿದರು' ಎಂದು ಪಕ್ಷದ ಮೂಲಗಳು ಹೇಳಿವೆ.

ನಾಯಕತ್ವ ಬದಲಾವಣೆ ಕುರಿತು ಮೈಸೂರು ಹಾಗೂ ಹಾಸನದಲ್ಲಿ ಸಿದ್ದರಾಮಯ್ಯ ಅವರ ಹೇಳಿಕೆ, ಕೆಲ ಸಚಿವರು, ಶಾಸಕರ ಬಹಿರಂಗ ಮಾತುಗಳು, ಕಾಂಗ್ರೆಸ್ ಸಂಘಟನೆ, ಬಿಹಾರ ಚುನಾವಣೆ ಮೊದಲಾದ ವಿಷಯಗಳ ಕುರಿತು ಚರ್ಚೆ ನಡೆಸಿದ್ದಾರೆ ಎಂದೂ ಹೇಳಲಾಗಿದೆ.



ಮಲ್ಲಿಕಾರ್ಜುನ ಖರ್ಗೆ, ಡಿ.ಕೆ.ಶಿವಕುಮಾರ್ ಶುಕ್ರವಾರ ಚರ್ಚೆ ನಡೆಸಿದರು

ಕರ್ನಾಟಕ ಕೈತಪ್ಪಿದ ಇನಿಂಗ್ಸ್ ಮುನ್ನಡೆ

ರಣಜಿ ಟ್ರೋಫಿ ಕ್ರಿಕೆಟ್ • ಚೇತನ್–ದೊಡಿಯಾ ಜೊತೆಯಾಟದ ಮೋಡಿ • ಸ್ಪಿನ್ನರ್ ಶ್ರೇಯಸ್ ಗೋಪಾಲ್‌ಗೆ ಎಂಟು ವಿಕೆಟ್

ಪ್ರಜಾವಾಣಿ ವಾರ್ತೆ

ರಾಜ್‌ಕೋಟ್: ಸೌರಾಷ್ಟ್ರದ ಬಾಲಂಗೋಚಿ ಬ್ಯಾಟರ್‌ಗಳಾದ ಚೇತನ್ ಸಕಾರಿಯಾ ಮತ್ತು ಯುವರಾಜಸಿಂಹ ದೊಡಿಯಾ ಅವರು ಕರ್ನಾಟಕದಿಂದ ಇನಿಂಗ್ಸ್ ಮುನ್ನಡೆಯ ಅವಕಾಶವನ್ನು ಕಿತ್ತುಕೊಂಡರು.

ಕರ್ನಾಟಕದ ಸ್ಪಿನ್ನರ್ ಶ್ರೇಯಸ್ ಗೋಪಾಲ್ ಅವರು ಎಂಟು ವಿಕೆಟ್ ಗಳಿಸಿದರೂ ಸೌರಾಷ್ಟ್ರವು 4 ರನ್‌ಗಳ ಅಲ್ಪ ಅಂತರದ ಇನಿಂಗ್ಸ್ ಮುನ್ನಡೆ ಸಾಧಿಸಿತು. ಆದ್ದರಿಂದ ರಣಜಿ ಟ್ರೋಫಿ ಟೂರ್ನಿಯ ಬಿ ಗುಂಪಿನ ಮೊದಲ ಪಂದ್ಯದಲ್ಲಿ ಪೂರ್ಣ ಅಂಕ ಗಳಿಸಬೇಕಾದರೆ ಕರ್ನಾಟಕವು ಜಯ ಗಳಿಸಲೇಬೇಕಿದೆ. ಡ್ರಾ ಆದರೆ ಒಂದು ಹಾಗೂ ಸೌರಾಷ್ಟ್ರಕ್ಕೆ ಮೂರು ಅಂಕ ಸಿಗುತ್ತವೆ. ಪಂದ್ಯದಲ್ಲಿ ಒಂದು ದಿನ ಮಾತ್ರ ಬಾಕಿ ಇದೆ. ಮಯಂಕ್ ಅಗರವಾಲ್ ಬಳಗವು ಜಯದತ್ತ ಚಿತ್ತ ನೆಟ್ಟಿದ್ದು ಎರಡನೇ ಇನಿಂಗ್ಸ್‌ನಲ್ಲಿ ವೇಗವಾಗಿ ರನ್ ಗಳಿಸಲು ಬ್ಯಾಟರ್‌ಗಳು ಪ್ರಯತ್ನಿಸಿದರು.

ಮೂರನೇ ದಿನದಾಟದ ಮುಕ್ತಾಯಕ್ಕೆ ಎರಡನೇ ಇನಿಂಗ್ಸ್‌ನಲ್ಲಿ ಕರ್ನಾಟಕವು 28 ಓವರ್‌ಗಳಲ್ಲಿ 1 ವಿಕೆಟ್‌ಗೆ 89 ರನ್ ಗಳಿಸಿತು. ಅದರೊಂದಿಗೆ 85 ರನ್‌ಗಳ ಮುನ್ನಡೆ ಸಾಧಿಸಿತು. ಮಯಂಕ್ (ಬ್ಯಾಟಿಂಗ್ 31) ಮತ್ತು ದೇವದತ್ತ (ಬ್ಯಾಟಿಂಗ್ 18) ಕ್ರೀಸ್‌ನಲ್ಲಿದ್ದಾರೆ. ಸ್ಪಿನ್ನರ್‌ಗಳೇ ಮೇಲುಗೈ ಸಾಧಿಸುತ್ತಿರುವ ಪಿಚ್‌ನಲ್ಲಿ ಕೊನೆಯ ದಿನದಂದು 200 ರಿಂದ 250 ರನ್‌ಗಳ ಗುರಿಯನ್ನು ಯಶಸ್ವಿಯಾಗಿ ಮುಟ್ಟುವುದು ಕೂಡ ಕಠಿಣವಾಗಲಿದೆ.

ಸಕಾರಿಯಾ–ದೊಡಿಯಾ ಜೊತೆಯಾಟ: ಚೇತನ್ ಸಕಾರಿಯಾ (29; 72ಎಸೆತ) ಮತ್ತು ಯುವರಾಜಸಿಂಹ ದೊಡಿಯಾ (ಔಟಾಗದೇ 13; 34ಎ) ಅವರು ಕೊನೆಯ ವಿಕೆಟ್ ಜೊತೆಯಾಟದಲ್ಲಿ ಸೇರಿಸಿದ 34 ರನ್‌ಗಳು ಮಯಂಕ್ ಬಳಗಕ್ಕೆ ಕುತ್ತಾದವು.

ಕರ್ನಾಟಕ ತಂಡವು ಮೊದಲ ಇನಿಂಗ್ಸ್‌ನಲ್ಲಿ 372 ರನ್ ಗಳಿಸಿತ್ತು. ಅದಕ್ಕುತ್ತರವಾಗಿ ಸೌರಾಷ್ಟ್ರ ತಂಡವು 121.3 ಓವರ್‌ಗಳಲ್ಲಿ 376 ರನ್ ಗಳಿಸಿತು.

ಶ್ರೇಯಸ್ ಅವರ ಅಮೋಘ ದಾಳಿಯಿಂದಾಗಿ ಸೌರಾಷ್ಟ್ರ ತಂಡವು 342 ರನ್‌ಗಳಿಗೆ 9 ವಿಕೆಟ್ ಕಳೆದುಕೊಂಡಿತ್ತು. ಆದರೆ ಕೊನೆಯ ವಿಕೆಟ್ ಗಳಿಸುವಲ್ಲಿ ಬೌಲರ್‌ಗಳು ಬೇಗ ಯಶಸ್ಸು ಗಳಿಸಲಿಲ್ಲ. ಕೊನೆಗೆ ಶ್ರೇಯಸ್ ಅವರೇ ತಮ್ಮ ಎಂಟನೇ ವಿಕೆಟ್ ರೂಪದಲ್ಲಿ ಚೇತನ್ ಸಕಾರಿಯಾ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಬೀಳಿಸಿದರು. ಆದರೆ ಅದಕ್ಕಿಂತ ಮುಂಚೆ ಚೇತನ್ ತಮ್ಮ ಕೆಲಸವನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದರು. 72 ಎಸೆತಗಳನ್ನು ಎದುರಿಸಿದ ಅವರಿಗೆ ದೊಡಿಯಾ ಕೂಡ ಉತ್ತಮ ಬೆಂಬಲ ನೀಡಿದರು.

ತಂಡದ ಮೊತ್ತವು 366 ಆಗಿದ್ದ ಸಂದರ್ಭದಲ್ಲಿ ಅಭಿಲಾಷ್ ಶೆಟ್ಟಿ ಎಸೆತವೊಂದು ದೊಡಿಯಾ ಅವರ ಬ್ಯಾಟ್ ಅಂಚು ಸವರಿಕೊಂಡು ಸ್ಲಿಪ್ ಫೀಲ್ಡರ್‌ಗಳ ಪಕ್ಕದಿಂದ ಬೌಂಡರಿಗೆರೆ ದಾಟಿತು. ನಂತರದ ಓವರ್ ಬೌಲಿಂಗ್ ಮಾಡಲು ಮಯಂಕ್ ಅವರು ಶ್ರೇಯಸ್‌ಗೆ ನೀಡಿದರು. ಆದರೆ ನಾಯಕನ ನಿರೀಕ್ಷೆ ಕೈಗೂಡಲಿಲ್ಲ.

ಶ್ರೇಯಸ್ ಎಸೆತವನ್ನು ಸ್ಲಾಗ್ ಸ್ವೀಪ್ ಮಾಡಿದ ಚೇತನ್ ಸಿಕ್ಸರ್ ಗಳಿಸಿದರು. ಸೌರಾಷ್ಟ್ರ ಪಾಳೆಯದಲ್ಲಿ ಸಂಭ್ರಮ ಕುಡಿಯೊಡೆಯಿತು. ಚೇತನ್ ಕೂಡ ಮುಷ್ಟಿ ಕಟ್ಟಿ ಗಾಳಿಗೆ ಗುದ್ದಿ ಸಂತಸಪಟ್ಟರು. ಎರಡು ಎಸೆತಗಳ ನಂತರ ಶ್ರೇಯಸ್ ಸೇಡು ತೀರಿಸಿಕೊಂಡರು.

ಬೆಳಗಿನ ಅವಧಿಯಲ್ಲಿ ಅರ್ಪಿತ್ ವಸವದಾ (58 ರನ್) ಮತ್ತು ಸಮರ್ ಗಜರ್ (45 ರನ್) ತಂಡದ ಮೊತ್ತವನ್ನು 300ರ ಗಡಿ ದಾಟಿಸುವಲ್ಲಿ ಯಶಸ್ವಿಯಾದರು. ಶ್ರೇಯಸ್ ಅವರು ವಸವದಾ ವಿಕೆಟ್ ಗಳಿಸಿದರು. ಸಮರ್ ಮತ್ತು ಧರ್ಮೇಂದ್ರಸಿಂಹ ವಿಕೆಟ್‌ಗಳೂ ಶ್ರೇಯಸ್ ಬುಟ್ಟಿ ಸೇರಿದವು.

ಉನದ್ಕತ್ ವಿಕೆಟ್ ಪಡೆದ ಸ್ಪಿನ್ನರ್ ಶಿಖರ್ ಶೆಟ್ಟಿ ರಣಜಿ ಟೂರ್ನಿಯಲ್ಲಿ ತಮ್ಮ ಖಾತೆ ತೆರೆದರು.



ಎಂಟು ವಿಕೆಟ್ ಪಡೆದ ಕರ್ನಾಟಕದ ಶ್ರೇಯಸ್ ಗೋಪಾಲ್

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಕರ್ನಾಟಕ: 372 (117.3 ಓವರ್‌ಗಳಲ್ಲಿ)
ಸೌರಾಷ್ಟ್ರ: 376 (121.3 ಓವರ್‌ಗಳಲ್ಲಿ)
(ಗುರುವಾರ 4ಕ್ಕೆ200)
ವಸವದಾ ಎಲ್‌ಬಿಡಬ್ಲ್ಯು ಬಿ ಗೋಪಾಲ್ 58 (123ಎ, 4x3, 6x1)
ಪ್ರೇರಕ್ ಎಲ್‌ಬಿಡಬ್ಲ್ಯು ಬಿ ಗೋಪಾಲ್ 27 (65ಎ, 4x2)
ಗಜರ್ ಸ್ಟಂಪ್ ಶ್ರೀಜಿತ್ ಬಿ ಗೋಪಾಲ್ 45 (122ಎ, 4x3)
ಧರ್ಮೇಂದ್ರಸಿಂಹ ಸಿ ವೆಂಕಟೇಶ್ ಬಿ ಗೋಪಾಲ್ 10 (12ಎ, 4x1)
ಜಯದೇವ್ ಬಿ ಶಿಖರ್ 6 (12ಎ, 4x1)
ಚೇತನ್ ಎಲ್‌ಬಿಡಬ್ಲ್ಯು ಬಿ ಗೋಪಾಲ್ 29 (72ಎ, 6x3)
ಯುವರಾಜ್‌ಸಿಂಹ ಔಟಾಗದೇ 13 (34ಎ, 4x2)
ಇತರೆ: 35 (ಬೈ 13, ಲೆಗ್‌ಬೈ 16, ನೋಬಾಲ್ 1, ಪೆನಾಲ್ಟಿ 5)
ವಿಕೆಟ್ ಪತನ: 5-237 (ಪ್ರೇರಕ್ ಮಂಕಡ್, 72.3), 6-291 (ಅರ್ಪಿತ್ ವಸವದಾ, 88.5), 7-311 (ಧರ್ಮೇಂದ್ರಸಿಂಹ ಜಡೇಜ, 94.2), 8-318 (ಜಯದೇವ್ ಉನದ್ಕತ್, 99.2), 9-342 (ಸಮರ್ ಗಜರ್, 106.6), 10-376 (ಚೇತನ್ ಸಕಾರಿಯಾ, 121.3)
ಬೌಲಿಂಗ್: ಅಭಿಲಾಷ್ ಶೆಟ್ಟಿ 12–4–24–0, ಎಂ.ವೆಂಕಟೇಶ್ 12–3–34–0, ಶಿಖರ್ ಶೆಟ್ಟಿ 24–3–84–1, ಶ್ರೇಯಸ್ ಗೋಪಾಲ್ 39.3–7–110–8, ಮೊಹ್ಸಿನ್ ಖಾನ್ 34–1–90–1
ಎರಡನೇ ಇನಿಂಗ್ಸ್:
ಕರ್ನಾಟಕ: 1ಕ್ಕೆ 89 (28 ಓವರ್‌ಗಳಲ್ಲಿ)
ನಿಕಿನ್ ಎಲ್‌ಬಿಡಬ್ಲ್ಯು ಬಿ ಗಜರ್ 34 (57ಎ, 4x1, 6x1)
ಮಯಂಕ್ ಔಟಾಗದೇ 31 (74ಎ, 4x1)
ಪಡಿಕ್ಕಲ್ ಔಟಾಗದೇ 18 (37ಎ, 4x2)
ಇತರೆ: 6 (ಬೈ 4, ಲೆಗ್‌ಬೈ 2)
ವಿಕೆಟ್ ಪತನ: 1–52 (ನಿಕಿನ್ ಜೋಸ್, 16.6)
ಬೌಲಿಂಗ್: ಧರ್ಮೇಂದ್ರಸಿಂಹ ಜಡೇಜ, 10–4–15–0, ಉನದ್ಕತ್ 5–0–16–0, ಯುವರಾಜ್‌ಸಿಂಹ ದೊಡಿಯಾ 6–0–26–0, ಚೇತನ್ ಸಕಾರಿಯಾ 3–0–8–0, ಸಮರ್ ಗಜರ್ 4–0–18–1

ಮಳೆಯಿಂದಾಗಿ 20–20 ಓವರ್‌ಗಳಿಗೆ ಆಟ ಮೊಟಕು

ಲಂಕಾ ಮೇಲೆ ಹರಿಣಗಳ ಸವಾರಿ

ಕೊಲಂಬೊ (ಪಿಟಿಐ): ಮಳೆಯಿಂದ ಅಡಚಣೆಗೊಳಗಾದ ಮಹಿಳಾ ಏಕದಿನ ವಿಶ್ವಕಪ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವು ಶುಕ್ರವಾರ ಡಕ್ವರ್ಥ್ ಲೂಯಿಸ್ ನಿಯಮದ (ಡಿಎಲ್‌ಎಸ್) ಅಡಿ ಆತಿಥೇಯ ಶ್ರೀಲಂಕಾ ತಂಡವನ್ನು 10 ವಿಕೆಟ್‌ಗಳಿಂದ ಸುಲಭವಾಗಿ ಮಣಿಸಿತು.

ಪ್ರೇಮದಾಸ ಕ್ರೀಡಾಂಗಣದಲ್ಲಿ ಮಳೆಯಿಂದಾಗಿ ಸುಮಾರು ಐದು ಗಂಟೆ ಆಟ ಸಾಧ್ಯವಾಗಲಿಲ್ಲ. ಹೀಗಾಗಿ, ಪಂದ್ಯವನ್ನು 20-20 ಓವರುಗಳಿಗೆ ಸೀಮಿತಗೊಳಿಸಲಾಯಿತು.

ಎಡಗೈ ಸ್ಪಿನ್ನರ್ ನೊನ್‌ಕುಲುಲೆಕೊ ಮ್ಲಾಬಾ (30ಕ್ಕೆ3) ಅವರ ಉತ್ತಮ ಬೌಲಿಂಗ್ ನೆರವಿನಿಂದ ದಕ್ಷಿಣ ಆಫ್ರಿಕಾ ತಂಡ ಶುಕ್ರವಾರ ಆತಿಥೇಯ ಶ್ರೀಲಂಕಾವನ್ನು 7 ವಿಕೆಟ್‌ಗೆ 105 ರನ್‌ಗಳಿಗೆ ಸೀಮಿತಗೊಳಿಸಿತು. ಡಿಎಲ್‌ಎಸ್ ನಿಯಮದಡಿ ಎದುರಾಳಿಗೆ ಗೆಲುವಿನ ಗುರಿಯನ್ನು 121 ರನ್‌ಗಳಿಗೆ ಪರಿಷ್ಕರಿಸಲಾಯಿತು.

ಗುರಿಯನ್ನು ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ತಂಡವು ಇನ್ನೂ 31 ಎಸೆತಗಳು ಬಾಕಿ ಇರುವಂತೆ ವಿಕೆಟ್ ನಷ್ಟವಿಲ್ಲದೆ 125 ರನ್ ಗಳಿಸಿ ಭರ್ಜರಿ ಗೆಲುವು ಸಾಧಿಸಿತು. ನಾಯಕಿ ಲಾರಾ ವೊಲ್ವಾರ್ಟ್ (ಔಟಾಗದೇ 60;47ಎ) ಮತ್ತು ತಾಜ್ಮಿನ್ ಬ್ರಿಟ್ಸ್ (ಔಟಾಗದೇ 55;42ಎ) ಅವರಿಬ್ಬರೂ ಆಕರ್ಷಕ ಅರ್ಧಶತಕಗಳನ್ನು ದಾಖಲಿಸಿ ತಂಡವನ್ನು ಆರಾಮವಾಗಿ ಗೆಲುವಿನ ದಡ ಸೇರಿಸಿದರು.

ಇದಕ್ಕೂ ಮೊದಲು ಟಾಸ್ ಗೆದ್ದು ಬ್ಯಾಟಿಂಗ್ ಮಾಡಲು ನಿರ್ಧರಿಸಿದ ಶ್ರೀಲಂಕಾ 10 ಓವರುಗಳಲ್ಲಿ 37 ರನ್ ಗಳಿಸುವಷ್ಟರಲ್ಲಿ ಎರಡು ವಿಕೆಟ್ ಕಳೆದುಕೊಂಡಿತ್ತು. ಮುಂದಿನ ಎರಡು ಓವರ್ ಆಗುವಷ್ಟರಲ್ಲಿ ಮಳೆ ಶುರುವಾಗಿ ಆಟಗಾರ್ತಿಯರು ಪೆವಿಲಿಯನ್ ಸೇರಿಕೊಂಡರು.

ಆರಂಭ ಆಟಗಾರ್ತಿ ವಿಶ್ಮಿ ಗುಣರತ್ನೆ 33 ಎಸೆತಗಳಲ್ಲಿ 6 ಬೌಂಡರಿಗಳಿದ್ದ 34 ರನ್ ಗಳಿಸಿದರು. ಮಳೆ ವಿರಾಮದ ನಂತರ ಎಂಟು ಓವರುಗಳಲ್ಲಿ ಲಂಕಾದ ಆಟಗಾರ್ತಿಯರು 63 ರನ್‌ಗಳಿಸಿದರು.

ಸ್ಕೋರುಗಳು: ಶ್ರೀಲಂಕಾ: 20 ಓವರುಗಳಲ್ಲಿ 7 ವಿಕೆಟ್‌ಗೆ 105 (ವಿಶ್ಮಿ ಗುಣರತ್ನೆ 34, ಕವಿಶಾ ದಿಲಾರಿ 14, ನಿಲಾಕ್ಷಿಕಾ ಸಿಲ್ವ 18; ಮಸಬಾತಾ ಕ್ಲಾಸ್ 18ಕ್ಕೆ2, ಎನ್.ಮ್ಲಾಬಾ 30ಕ್ಕೆ3) **ದಕ್ಷಿಣ ಆಫ್ರಿಕಾ** (ಗುರಿ 121): 14.5 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 125 (ಲಾರಾ ವೊಲ್ವಾರ್ಟ್ ಔಟಾಗದೇ 60, ತಾಜ್ಮಿನ್ ಬ್ರಿಟ್ಸ್ ಔಟಾಗದೇ 55). **ಫಲಿತಾಂಶ:** ದಕ್ಷಿಣ ಆಫ್ರಿಕಾಕ್ಕೆ 10 ವಿಕೆಟ್‌ಗಳ ಜಯ (ಡಿಎಲ್‌ಎಸ್ ನಿಯಮ). **ಪಂದ್ಯದ ಆಟಗಾರ್ತಿ:** ಲಾರಾ ವೊಲ್ವಾರ್ಟ್



ಅಜೇಯ ಅರ್ಧಶತಕ ದಾಖಲಿಸಿದ ಲಾರಾ ವೊಲ್ವಾರ್ಟ್ ಎಎಫ್‌ಪಿ ಚಿತ್ರ

ಐಸಿಸಿ ಮಹಿಳಾ ಏಕದಿನ ವಿಶ್ವಕಪ್

ಮಹಿಳೆಯರ ವಿಶ್ವಕಪ್ ಕ್ರಿಕೆಟ್: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಆಸ್ಟ್ರೇಲಿಯಾ	5	4	0	1	9	1.818
ದಕ್ಷಿಣ ಆಫ್ರಿಕಾ	5	4	1	0	8	-0.440
ಇಂಗ್ಲೆಂಡ್	4	3	1	0	7	1.864
ಭಾರತ	4	2	2	0	4	0.682
ನ್ಯೂಜಿಲೆಂಡ್	4	1	2	1	3	-0.245
ಬಾಂಗ್ಲಾದೇಶ	5	1	4	0	2	-0.676
ಶ್ರೀಲಂಕಾ	5	0	3	2	2	-1.564
ಪಾಕಿಸ್ತಾನ	4	0	3	1	1	-1.887

ಚುಟುಕು ಸುದ್ದಿ

ಜೂನಿಯರ್ ಹಾಕಿ ಭಾರತ ಫೈನಲ್‌ಗೆ

ಜೊಹರ್, ಮಲೇಷ್ಯಾ (ಪಿಟಿಐ): ಭಾರತ ಜೂನಿಯರ್ ಪುರುಷರ ಹಾಕಿ ತಂಡವು ಶುಕ್ರವಾರ ಸುಲ್ತಾನ್ ಆಫ್ ಜೋಹರ್ ಕಪ್ ಟೂರ್ನಿಯಲ್ಲಿ ತನ್ನ ಗುಂಪು ಹಂತದ ಕೊನೆಯ ಪಂದ್ಯದಲ್ಲಿ 2–1 ಗೋಲುಗಳಿಂದ ಆತಿಥೇಯ ಮಲೇಷ್ಯಾ ತಂಡವನ್ನು ಮಣಿಸಿ, ಫೈನಲ್ ಪ್ರವೇಶಿಸಿತು.

ಭಾರತದ ಪರ ಗುರ್‌ಜೋತ್ ಸಿಂಗ್ (22ನೇ ನಿಮಿಷ) ಮತ್ತು ಸೌರಭ್ ಆನಂದ್ ಕುಶ್ವಾಹ (48ನೇ) ಗೋಲು ಗಳಿಸಿದರು. ಭಾರತ ತಂಡವು ಶನಿವಾರ ಫೈನಲ್‌ನಲ್ಲಿ ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದೆ.

ಏಷ್ಯನ್ ಕಪ್ ಭಾರತ ಅರ್ಹತೆ

ಬಿಷ್ಕೆಕ್, ಕಿರ್ಗಿಸ್ ರಿಪಬ್ಲಿಕ್ (ಪಿಟಿಐ): ಭಾರತ ವನಿತೆಯರ ತಂಡವು ಶುಕ್ರವಾರ 2–1 ಗೋಲುಗಳಿಂದ ಉಜ್ಬೇಕಿಸ್ತಾನ ತಂಡವನ್ನು ಮಣಿಸಿ, ಎಎಫ್‌ಸಿ 17 ವರ್ಷದೊಳಗಿನವರ ಏಷ್ಯನ್ ಕಪ್ ಟೂರ್ನಿಗೆ ಮೊದಲ ಬಾರಿ ಅರ್ಹತೆ ಪಡೆಯಿತು.

ಭಾರತದ ಪರ ತಂಡಮೋನಿ ಬಾಸ್ಕಿ (55ನೇ ನಿಮಿಷ) ಮತ್ತು ಅನುಷ್ಕಾ ಕುಮಾರಿ (66ನೇ ನಿ) ಗೋಲು ದಾಖಲಿಸಿದರು. ಎದುರಾಳಿ ತಂಡದ ಪರ ಶಖ್ಜೋಡಾ ಅಲಿಖೋನೋವಾ (38ನೇ) ಚೆಂಡನ್ನು ಗುರಿ ಸೇರಿಸಿದರು.

ಈ ಗೆಲುವಿನೊಂದಿಗೆ ಭಾರತ ಆರು ಅಂಕಗಳೊಂದಿಗೆ ಗ್ರೂಪ್ ಗುಂಪಿನಲ್ಲಿ ಅಗ್ರಸ್ಥಾನ ಗಳಿಸಿತು. ಮುಂದಿನ ವರ್ಷ ಚೀನಾದಲ್ಲಿ ನಡೆಯಲಿರುವ ಎಎಫ್‌ಸಿ ಟೂರ್ನಿಗೆ ಅರ್ಹತೆ ಪಡೆಯಿತು.

ಪ್ರಖರ್ ಚತುರ್ವೇದಿ ದ್ವಿಶತಕ

ಸಿ.ಕೆ. ನಾಯ್ಡು ಟ್ರೋಫಿ ಕ್ರಿಕೆಟ್: ಧನುಷ್‌ಗೆ ಮೂರು ವಿಕೆಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಖರ್ ಚತುರ್ವೇದಿ (225;368ಎ, 4x31, 6x3) ಅವರ ದ್ವಿಶತಕದ ನೆರವಿನಿಂದ ಕರ್ನಾಟಕ ತಂಡವು ಕರ್ನಲ್ ಸಿ.ಕೆ. ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ರೈಲ್ವೇಸ್ ತಂಡದ (ಆರ್‌ಎಸ್‌ಪಿಬಿ) ವಿರುದ್ಧ ಬೃಹತ್ ಮೊತ್ತ ಕಲೆಹಾಕಿದೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಎರಡನೇ ದಿನವಾದ ಶುಕ್ರವಾರ ಕರ್ನಾಟಕ ಮೊದಲ ಇನಿಂಗ್ಸ್‌ನಲ್ಲಿ 135.4 ಓವರ್‌ಗಳಲ್ಲಿ 7 ವಿಕೆಟ್‌ಗೆ 529 ರನ್ ಗಳಿಸಿ ಡಿಕ್ಲೇರ್ಡ್ ಮಾಡಿದೆ. ಇ.ಜೆ. ಜಸ್ಪರ್ (105;201ಎ) ಶತಕ ದಾಖಲಿಸಿದರೆ, ಕಾರ್ತಿಕೇಯ ಕೆ.ಪಿ. (56) ಮತ್ತು ಧ್ರುವ್ ಪ್ರಭಾಕರ್ (ಔಟಾಗದೇ 53) ಅರ್ಧಶತಕಗಳ ಕಾಣಿಕೆ ನೀಡಿದರು.


ಇದಕ್ಕೆ ಉತ್ತರವಾಗಿ ಇನಿಂಗ್ಸ್ ಆರಂಭಿಸಿದ ರೈಲ್ವೇಸ್ ತಂಡವು 36 ಓವರ್‌ಗಳಲ್ಲಿ 3 ವಿಕೆಟ್‌ಗೆ 82 ರನ್ ಗಳಿಸಿದೆ. ಅಭಿಷೇಕ್ ಕೌಶಲ್ (ಔಟಾಗದೇ 27) ಮತ್ತು ಗರ್ವ್ ಸಾಂಗ್ವನ್ (ಔಟಾಗದೇ 41) ಮೂರನೇ ದಿನಕ್ಕೆ ಆಟ ಕಾಯ್ದುಕೊಂಡಿದ್ದಾರೆ. ಧನುಷ್ ಗೌಡ ಮೂರು ವಿಕೆಟ್ ಪಡೆದು ಮಿಂಚಿದರು.

ಸಂಕ್ಷಿಪ್ತ ಸ್ಕೋರ್: ಕರ್ನಾಟಕ ತಂಡ: 135.4 ಓವರ್‌ಗಳಲ್ಲಿ 7 ವಿಕೆಟ್‌ಗೆ 529 ಡಿಕ್ಲೇರ್ಡ್ (ಇ.ಜೆ. ಜಸ್ಪರ್ 105, ಪ್ರಖರ್ ಚತುರ್ವೇದಿ 225, ಕಾರ್ತಿಕೇಯ ಕೆ.ಪಿ. 56, ಅನೀಶ್ವರ್ ಗೌತಮ್ 38, ಧ್ರುವ್ ಪ್ರಭಾಕರ್ ಔಟಾಗದೇ 53; ಎಸ್.ಕೆ. ಜಾನಿ ಬಾಷಾ 83ಕ್ಕೆ 3, ವಿರಾಟ್ ಜೈಸ್ವಾಲ್ 63ಕ್ಕೆ 2). **ರೈಲ್ವೇಸ್ ತಂಡ:** 36 ಓವರ್‌ಗಳಲ್ಲಿ 3 ವಿಕೆಟ್‌ಗೆ 82 (ಗರ್ವ್ ಸಾಂಗ್ವನ್ ಔಟಾಗದೇ 41; ಧನುಷ್ ಗೌಡ 17ಕ್ಕೆ 3).



ದ್ವಿಶತಕ ದಾಖಲಿಸಿದ ಪ್ರಖರ್ ಚತುರ್ವೇದಿ
ಪ್ರಜಾವಾಣಿ ಚಿತ್ರ: ಕೃಷ್ಣಕುಮಾರ್ ಪಿ.ಎಸ್

ಭಾರತ ಪ್ರವಾಸ: ದಕ್ಷಿಣ ಆಫ್ರಿಕಾ 'ಎ' ತಂಡದಲ್ಲಿ ಬವುಮಾ



ಜೊಹಾನೆಸ್‌ಬರ್ಗ್ (ಪಿಟಿಐ): ದಕ್ಷಿಣ ಆಫ್ರಿಕಾ ಟೆಸ್ಟ್ ತಂಡದ ನಾಯಕ ತೆಂಬಾ ಬವುಮಾ ಅವರು ಈ ತಿಂಗಳ ಕೊನೆಯಲ್ಲಿ ಭಾರತ ಪ್ರವಾಸ ಕೈಗೊಳ್ಳುವ ದೇಶದ 'ಎ' ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಇದರಿಂದ ನವೆಂಬರ್ 14 ರಂದು ಭಾರತ ವಿರುದ್ಧ ಆರಂಭವಾಗುವ ಎರಡು ಟೆಸ್ಟ್‌ಗಳ ಸರಣಿಗೆ ಮೊದಲು ಒಗ್ಗಿಕೊಳ್ಳಲು ಅವರಿಗೆ ಸಾಧ್ಯವಾಗಲಿದೆ.

ಮೀನಖಂಡದ ಗಾಯದಿಂದ ಚೇತರಿಸಿಕೊಳ್ಳುತ್ತಿರುವ ಬವುಮಾ ಪಾಕಿಸ್ತಾನ ವಿರುದ್ಧ ಹಾಲಿ ಟೆಸ್ಟ್ ಸರಣಿಯಲ್ಲಿ ಆಡಿರಲಿಲ್ಲ. ಪೂರ್ಣ ಗುಣಮುಖರಾಗಲು ಅವರನ್ನು ಏಕದಿನ ಸರಣಿಗೂ ಆಯ್ಕೆ ಮಾಡಿಲ್ಲ.

'ಎ' ತಂಡವು ಅಕ್ಟೋಬರ್ 30 ರಿಂದ ನವೆಂಬರ್ 9ರ ಅವಧಿಯಲ್ಲಿ ಬೆಂಗಳೂರಿನ ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ ನಾಲ್ಕು ದಿನಗಳ ಅವಧಿಯ ಎರಡು ಟೆಸ್ಟ್ ಪಂದ್ಯಗಳನ್ನು ಆಡಲಿದೆ.

ನಿತೀಶ್ ಮಿಂಚು: ಕರ್ನಾಟಕಕ್ಕೆ ಜಯ

ಡೆಹ್ರಾಡೂನ್: ನಿತೀಶ್ ಆರ್ಯ ಅರ್ಧಶತಕ ಮತ್ತು ಕುಲದೀಪ್ ಸಿಂಗ್ ಪುರೋಹಿತ್ ಅವರ ಅಮೋಘ ಬೌಲಿಂಗ್ ಬಲದಿಂದ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ತಂಡವು ವಿನೂ ಮಂಕಡ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಛತ್ತೀಸಗಡ ಕ್ರಿಕೆಟ್ ಸಂಸ್ಥೆ ಎದುರು 15 ರನ್‌ಗಳಿಂದ ಜಯಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ಕರ್ನಾಟಕದ ತಂಡವು ನಿತೀಶ್ (59 ರನ್) ಹಾಗೂ ರಿಹಾನ್ ಮೊಹಮ್ಮದ್ (42 ರನ್) ಅವರ ಬ್ಯಾಟಿಂಗ್‌ನಿಂದ 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 246 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಛತ್ತೀಸಗಢ ತಂಡಕ್ಕೆ 49.3 ಓವರ್‌ಗಳಲ್ಲಿ 231 ರನ್ ಗಳಿಸಲು ಮಾತ್ರ ಸಾಧ್ಯವಾಯಿತು.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 50 ಓವರ್‌ಗಳಲ್ಲಿ 7ಕ್ಕೆ246 (ಎಲ್. ನಿತೀಶ್ ಆರ್ಯ 59, ರಿಹಾನ್ ಮೊಹಮ್ಮದ್ 42, ಧನಂಜಯ್ ನಾಯಕ 25ಕ್ಕೆ2, ಆದಿತ್ಯ ಅಗರವಾಲ್ 46ಕ್ಕೆ2) ಛತ್ತೀಸಗಢ: 49.3 ಓವರ್‌ಗಳಲ್ಲಿ 231 (ಬಿ. ಬಾಲಾಜಿರಾವ್ 61, ಯಶ್ ಕುಮಾರ್ ವರ್ದಾ 46, ಕೃಷ್ಣ ಟಾಂಕ್ 47, ಸಿದ್ಧಾರ್ಥ್ ಅಖಿಲ್ 31ಕ್ಕೆ2, ಮಣಿಕಾಂತ ಶಿವಾನಂದ 49ಕ್ಕೆ2, ಕುಲದೀಪ್ ಸಿಂಗ್ ಪುರೋಹಿತ್ 35ಕ್ಕೆ3).

ಪ್ರೀತಿ, ನೇಹಾ ಅಮೋಘ ಆಟ

ಗ್ವಾಲಿಯರ್: ನೇಹಾ ಬದ್ವೈಕ್ ಅರ್ಧಶತಕ ಮತ್ತು ಪ್ರೀತಿ ಯಾದವ್ ಅವರ ಉತ್ತಮ ಬೌಲಿಂಗ್ ಬಲದಿಂದ ಛತ್ತೀಸಗಡ ಕ್ರಿಕೆಟ್ ಸಂಸ್ಥೆ ತಂಡವು ಇಲ್ಲಿ ನಡೆಯುತ್ತಿರುವ ಸೀನಿಯರ್ ಮಹಿಳಾ ಟಿ20 ಟ್ರೋಫಿ ಕ್ರಿಕೆಟ್ ಟೂರ್ನಿ ಪಂದ್ಯದಲ್ಲಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಎದುರು ಗೆದ್ದಿತು.

ಮೊದಲು ಬ್ಯಾಟಿಂಗ್ ಮಾಡಿದ ಕರ್ನಾಟಕ ತಂಡವು ಪ್ರೀತಿ ಯಾದವ್ (22ಕ್ಕೆ3) ಅವರ ಬೌಲಿಂಗ್ ಮುಂದೆ 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 103 ರನ್ ಗಳಿಸಿತು. ಅದಕ್ಕುತ್ತರವಾಗಿ ಛತ್ತೀಸಗಡ ತಂಡವು 17.4 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 105 ರನ್ ಗಳಿಸಿ ಗೆದ್ದಿತು. ನೇಹಾ (ಔಟಾಗದೇ 62; 52ಎ, 4X8, 6X2) ಅವರು ಅರ್ಧಶತಕ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಕೆಎಸ್‌ಸಿಎ: 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 103 (ವೃಂದಾ ದಿನೇಶ್ 26, ನಿಕಿ ಪ್ರಸಾದ್ 28, ಮೆಹಕ್ ನರ್ವಾಸೆ 12ಕ್ಕೆ2, ಪ್ರೀತಿ ಯಾದವ್ 33ಕ್ಕೆ3) ಛತ್ತೀಸಗಡ: 17.4 ಓವರ್‌ಗಳಲ್ಲಿ 3ಕ್ಕೆ105 (ನೇಹಾ ಬದವೈಕ್ ಔಟಾಗದೇ 62) **ಫಲಿತಾಂಶ:** ಛತ್ತೀಸಗಡ ತಂಡಕ್ಕೆ 7 ವಿಕೆಟ್‌ಗಳ ಜಯ.

ಇಂಡಿಯನ್ ಓಪನ್ ಅಥ್ಲೆಟಿಕ್ಸ್: ರಾಜ್ಯದ ಕೃಷಿಕ್‌ಗೆ ಚಿನ್ನ

ಲಾಂಗ್‌ಜಂಪ್: 8 ಮೀ. ಕ್ಲಬ್‌ಗೆ ಅನುರಾಗ್

ಹನಮಕೊಂಡ (ತೆಲಂಗಾಣ), (ಪಿಟಿಐ): ಕೇರಳದ ಲಾಂಗ್‌ಜಂಪರ್ ಸಿ.ವಿ.ಅನುರಾಗ್ ಅವರು ಶುಕ್ರವಾರ ಇಂಡಿಯನ್ ಓಪನ್ 23 ವರ್ಷದೊಳಗಿನವರ ಅಥ್ಲೆಟಿಕ್ ಕೂಟದಲ್ಲಿ 8.06 ಮೀ. ದೂರ ಜಿಗಿದು ಚಿನ್ನ ಗೆದ್ದರು. ಎಂಟು ಮೀಟರ್ ಜಿಗಿದವರ ಕ್ಲಬ್‌ಗೆ ಸಾಲಿಗೆ ಹೊಸದಾಗಿ ಸೇರ್ಪಡೆಯಾದರು.

ಇದು 21 ವರ್ಷ ವಯಸ್ಸಿನ ಅನುರಾಗ್ ಅವರ ವೈಯಕ್ತಿಕ ಶ್ರೇಷ್ಠ ಸಾಧನೆಯಾಗಿದ್ದು ಎರಡನೇ ಯತ್ನದಲ್ಲಿ ಈ ದೂರ ದಾಖಲಿಸಿದರು. ಆ ಮೂಲಕ 2024ರಲ್ಲಿ ತಾವೇ ಸ್ಥಾಪಿಸಿದ್ದ 7.87 ಮೀ.ಗಳ ದಾಖಲೆಯನ್ನು ಅವರು ಸುಧಾರಿಸಿದರು.

ಮೊದಲ ಯತ್ನದಲ್ಲಿ 7.88 ಮಿ. ಜಿಗಿದಿದ್ದರು. ಎರಡನೇ ಯತ್ನದಲ್ಲಿ 8.06 ಮೀ. ಜಿಗಿದ ಅವರು ನಂತರದ ಯತ್ನಗಳಲ್ಲಿ ಕ್ರಮವಾಗಿ 7.96 ಮೀ, 6.62 ಮೀ ಮತ್ತು 7.88 ಮೀ. ದೂರ ಜಿಗಿದರು.

ತಮಿಳುನಾಡಿನ ಶರನ್ ಜೆ. (7.82 ಮೀ.) ಮತ್ತು ಪೊಲೀಸ್ ತಂಡದ ಆರ್ಯನ್ ಚೌಧರಿ (7.67 ಮೀ.) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರು.

ಕರ್ನಾಟಕಕ್ಕೆ ಐದು ಪದಕ

ಎರಡನೇ ದಿನ ಕರ್ನಾಟಕದ ಅಥ್ಲೀಟುಗಳು ಒಂದು ಚಿನ್ನ, ಮೂರು ಬೆಳ್ಳಿ, ಒಂದು ಕಂಚಿನ ಪದಕ ಗೆದ್ದುಕೊಂಡರು.

ಐಒಸಿಎಲ್ ತಂಡವನ್ನು ಪ್ರತಿನಿಧಿಸಿದ್ದ ರಾಜ್ಯದ ಕೃಷಿಕ್ ಎಂ. ಅವರು ಪುರುಷರ 110 ಮೀಟರ್ ಹರ್ಡಲ್ಸ್‌ನಲ್ಲಿ ಚಿನ್ನದ ಪದಕ ಗೆದ್ದರು. ಅವರು 13.84 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು.

ಪುರುಷರ ಡಿಸ್ಕಸ್ ಥ್ರೋನಲ್ಲಿ ನಾಗೇಂದ್ರ ಎ. ಅವರು 52.48 ಮೀ. ದೂರಕ್ಕೆ ಡಿಸ್ಕ್ ಎಸೆದು ಬೆಳ್ಳಿ ಗೆದ್ದುಕೊಂಡರು. ಹೈಜಂಪ್‌ನಲ್ಲಿ ಸುದೀಪ್ 2.11 ಮೀ. ಜಿಗಿದು ಬೆಳ್ಳಿ ಗೆದ್ದರು. ಮಹಿಳೆಯರ ವಿಭಾಗದ 400 ಮೀ. ಓಟವನ್ನು 54.71 ಸೆ.ಗಳಲ್ಲಿ ಪೂರೈಸಿದ ಪ್ರಿಯಾ ಬೆಳ್ಳಿ ಗೆದ್ದರು. 100 ಮೀ ಹರ್ಡಲ್ಸ್‌ನಲ್ಲಿ ಶ್ರೀಯಾ ರಾಜೇಶ್ 13.90 ಸೆ.ಗಳಲ್ಲಿ ದೂರ ಕ್ರಮಿಸಿ ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಆಸ್ಟ್ರೇಲಿಯಾ ತಂಡಕ್ಕೆ ಲಾಬುಷೇನ್ ಸೇರ್ಪಡೆ

ಲಾಬುಷೇನ್ (ಎಎಫ್‌ಪಿ): ಉತ್ತಮ ಲಯದಲ್ಲಿರುವ ಮಾರ್ನಸ್ ಲಾಬುಷೇನ್ ಅವರನ್ನು ಭಾರತ ವಿರುದ್ಧ ಏಕದಿನ ಸರಣಿಯನ್ನು ಆಡುವ ಆಸ್ಟ್ರೇಲಿಯಾ ತಂಡಕ್ಕೆ ಸೇರ್ಪಡೆಗೊಳಿಸಲಾಗಿದೆ. ಪಕ್ಕೆಲುಬಿನ ನೋವಿನಿಂದ ಬಳಲುತ್ತಿರುವ ಆಲ್‌ರೌಂಡರ್ ಕ್ಯಾಮೆರಾನ್ ಗ್ರೀನ್ ಬದಲು ಲಾಬುಷೇನ್ ಅವಕಾಶ ಪಡೆದಿದ್ದಾರೆ.

ಮೂರು ಪಂದ್ಯಗಳ ಸರಣಿಯ ಮೊದಲ ಪಂದ್ಯ ಇದೇ 19ರಂದು (ಭಾನುವಾರ) ಪರ್ತ್‌ನಲ್ಲಿ ನಡೆಯಲಿದೆ.

ಲಾಬುಷೇನ್ ದೇಶಿ ಕ್ರಿಕೆಟ್‌ನಲ್ಲಿ ಇತ್ತೀಚೆಗೆ ಐದು ಇನಿಂಗ್ಸ್‌ಗಳಲ್ಲಿ ನಾಲ್ಕು ಶತಕಗಳನ್ನು ಬಾರಿಸಿದ್ದಾರೆ. ಇದರಲ್ಲಿ ಎರಡು ಶತಕಗಳು ಏಕದಿನ ಮಾದರಿಯಲ್ಲಿ ಬಂದಿವೆ. ಆ ಮೂಲಕ ಅವರು ಆ್ಯಷಸ್ ಸರಣಿಗೂ ರೇಸ್‌ನಲ್ಲಿದ್ದಾರೆ.

ಪಟ್ನಾ ಗೆಲುವಿನಲ್ಲಿ ಮಿಂಚಿದ ಅಯಾನ್

ನವದೆಹಲಿ (ಪಿಟಿಐ): ಉತ್ತಮ ಲಯದಲ್ಲಿರುವ ರೇಡರ್ ಅಯಾನ್ ಲೋಚಬ್ ಅವರ ಜೀವನಶ್ರೇಷ್ಠ 27 ಅಂಕಗಳ ನೆರವಿನಿಂದ ಪಟ್ನಾ ಪೈರೇಟ್ಸ್ ತಂಡ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಶುಕ್ರವಾರ ಬೆಂಗಾಲ್ ವಾರಿಯರ್ಸ್ ತಂಡವನ್ನು 51–49 ಅಂಕಗಳಿಂದ ಸೋಲಿಸಿತು.

ತ್ಯಾಗರಾಜ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ವಾರಿಯರ್ಸ್ ವಿರಾಮದ ವೇಳೆ 26–23 ಅಂಕಗಳಿಂದ ಮುಂದಿತ್ತು. ಆದರೆ ಉತ್ತರಾರ್ಧದ ನಂತರ ಪಟ್ನಾ ತಂಡ 28 ಅಂಕಗಳನ್ನು ಗಳಿಸಿ ಗೆಲುವು ಸಾಧಿಸಿತು.

ವಾರಿಯರ್ಸ್ ಪರ ನಾಯಕ ಹಾಗೂ ಪ್ರಮುಖ ರೇಡರ್ ದೇವಾಂಕ್ ಮತ್ತೊಮ್ಮೆ ಮಿಂಚಿ 25 ಅಂಕ ಗಳಿಸಿದರು. ಅವರಿಗೆ ಹಿಮಾಂಶು ನರ್ವಾಲ್ (7) ಅವರಿಂದ ಮಾತ್ರ ಬೆಂಬಲ ದೊರೆಯಿತು.

ಈ ಗೆಲುವಿನಿಂದ ಪಟ್ನಾ ತಂಡ 12ನೇ ಸ್ಥಾನದಿಂದ 11ನೇ ಸ್ಥಾನಕ್ಕೆ ಏರಿತು. ಎರಡೂ ತಂಡಗಳು (ಪಟ್ನಾ ಮತ್ತು ಬೆಂಗಾಲ್) ತಲಾ 10 ಅಂಕ ಗಳಿಸಿವೆ.

ಇನ್ನೊಂದು ಪಂದ್ಯದಲ್ಲಿ ದಬಂಗ್ ಡೆಲ್ಲಿ 37–31 ರಲ್ಲಿ ಆರು ಅಂಕಗಳಿಂದ ತಮಿಳು ತಲೈವಾಸ್ ತಂಡವನ್ನು ಮಣಿಸಿತು. ಡೆಲ್ಲಿ ಪರ ಸಬ್‌ಸ್ಟಿಟ್ಯೂಟ್ ಅಕ್ಷಿತ್ 12 ಅಂಕ ಗಳಿಸಿ ಮಿಂಚಿದರು. ತಲೈವಾಸ್ ಪರ ನಾಯಕ ಅರ್ಜುನ್ ದೇಶ್ವಾಲ್ 11 ಅಂಕ ಗಳಿಸಿ ಮತ್ತೊಮ್ಮೆ ಸೂಪರ್ ಟೆನ್ ಸಾಧಿಸಿದರು.

ದಿನದ ಮೂರನೇ ಪಂದ್ಯದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವು 42–29ರಿಂದ ಯು.ಪಿ ಯೋಧಾಸ್ ತಂಡವನ್ನು ಮಣಿಸಿತು. ಜೈಪುರ ತಂಡಕ್ಕೆ 15 ಪಂದ್ಯಗಳಲ್ಲಿ ಇದು ಏಳನೇ ಗೆಲುವಾಗಿದೆ.

ಪ್ರಶಸ್ತಿ ಸುತ್ತಿಗೆ ಆರವ್, ಯಶಸ್ ಲಗ್ಗೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಮೊದಲ ಗೇಮ್‌ನಲ್ಲಿ ಸೋಲು ಎದುರಾದರೂ ಎದೆಗುಂದದೇ ಛಲದಿಂದ ಹೋರಾಡಿದ ಮೂರನೇ ಶ್ರೇಯಾಂಕಿತ ಆಟಗಾರ ಆರವ್ ಬಾಸಕ್, ಇಲ್ಲಿ ನಡೆಯುತ್ತಿರುವ 15 ಮತ್ತು 17 ವರ್ಷದೊಳಗಿನವರ ರಾಜ್ಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಸುತ್ತಿಗೆ ಲಗ್ಗೆ ಇಟ್ಟಿದ್ದಾರೆ.

ರಾಜ್ಯ ಬ್ಯಾಡ್ಮಿಂಟನ್ ಸಂಸ್ಥೆ (ಕೆಬಿಎ) ಹಾಗೂ ದಾವಣಗೆರೆ ಜಿಲ್ಲಾ ಬ್ಯಾಡ್ಮಿಂಟನ್ ಸಂಸ್ಥೆಯ (ಡಿಡಿಬಿಎ) ಆಶ್ರಯದಲ್ಲಿ ನೇತಾಜಿ ಸುಭಾಷ್‌ಚಂದ್ರ ಬೋಸ್ ಒಳಾಂಗಣ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ 17 ವರ್ಷದೊಳಗಿನ ಬಾಲಕರ ಸಿಂಗಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ ಬೆಂಗಳೂರಿನ ಆರವ್ 15-21, 21-19, 21-17ರಿಂದ ಮೆಹುಲ್ ಮಾನವ್ ಅವರನ್ನು ಪರಾಭವಗೊಳಿಸಿದರು.

ಫೈನಲ್‌ನಲ್ಲಿ ಆರವ್‌ಗೆ ಚಿಕ್ಕಮಗಳೂರಿನ ಯಶಸ್ ಎಂ.ರೆಡ್ಡಿ ಸವಾಲು ಎದುರಾಗಲಿದೆ. 5ನೇ ಶ್ರೇಯಾಂಕಿತ ಯಶಸ್ 21–13, 21–7 ರಿಂದ ಶ್ಯಾಮ್ ಬಿಂಡಿಗನವಿಲೆ ಅವರನ್ನು ಮಣಿಸಿದರು.

ಬಾಲಕಿಯರ ಸಿಂಗಲ್ಸ್ ಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ಹಿತೈಶ್ರೀ ಎಲ್. ರಾಜಯ್ಯ ಮತ್ತು ಬೆಂಗಳೂರಿನ ನಿಧಿ ಆತ್ಮಾರಾಮ್ ಮುಖಾಮುಖಿಯಾಗಲಿದ್ದಾರೆ. ಮೊದಲ ಸೆಮಿಫೈನಲ್‌ನಲ್ಲಿ ಹಿತೈಶ್ರೀ 21–17, 22–20ರಿಂದ ಆಶಿ ದಾಸ್ ಎದುರು ಗೆದ್ದರೆ, ನಿಧಿ 21–17, 21–8ರಿಂದ ನಾಲ್ಕನೇ ಶ್ರೇಯಾಂಕದ ನೇಹಾ ಕೃಪೇಶ್‌ಗೆ ಆಘಾತ ನೀಡಿದರು.

ಬಾಲಕರ ಡಬಲ್ಸ್ ಸೆಮಿಫೈನಲ್ ಪಂದ್ಯಗಳಲ್ಲಿ ಮೆಹುಲ್ ಮಾನವ್ ಮತ್ತು ಸಾತ್ವಿಕ್ ಎಸ್.ಪ್ರಭು 18-21, 21-16, 25-23 ರಿಂದ ಕೆ.ಯದುನಂದನ್ ಮತ್ತು ಯಶಸ್ ಎಂ.ರೆಡ್ಡಿ ಎದುರು, ಗೌರವ್ ಆರ್ ಮತ್ತು ಹಾರ್ದಿಕ್ ಮೊಹಂತಿ 21-17, 21-18 ರಿಂದ ಇವಾನ್ ಫರ್ನಾಂಡೀಸ್ ಮತ್ತು ವಿಹಾನ್ ಅರೋರಾ ವಿರುದ್ಧ ಗೆಲುವು ಗಳಿಸಿದರು.

ಬಾಲಕಿಯ ಡಬಲ್ಸ್ ಸೆಮಿಫೈನಲ್‌ನಲ್ಲಿ ನಿಧಿ ಆತ್ಮಾರಾಮ್ ಮತ್ತು ಸೆಲ್ವಸಮೃದ್ಧಿ ಸೆಲ್ವಪ್ರಭು 21-18, 21-14 ರಿಂದ ಸಾಯಿ ಅಕ್ಷರ ಸಿಸ್ಟಾ ಮತ್ತು ಸುಮೇಧಾ ಶ್ರೀನಿವಾಸ್ ಎದುರು ಗೆದ್ದರು.

ಫೈನಲ್‌ಗೆ ಏಡ್ರಿಯಾನ್, ಈಶ್ವರ್ ಸಾಯಿ: 15 ವರ್ಷದೊಳಗಿನ ಬಾಲಕರ ಸಿಂಗಲ್ಸ್ ವಿಭಾಗದಲ್ಲಿ ಏಡ್ರಿಯಾನ್ ಎಡ್ವರ್ಡ್ ಮತ್ತು ಈಶ್ವರ್ ಸಾಯಿ ಪ್ರಶಸ್ತಿ ಸುತ್ತಿಗೆ ಮುನ್ನಡೆದರು.

ಸೆಮಿ ಫೈನಲ್‌ನಲ್ಲಿ ಏಡ್ರಿಯಾನ್ 21-17, 21-17 ರಿಂದ ಅಗ್ರ ಶ್ರೇಯಾಂಕದ ವಿಹಾನ್ ಸಿ.ಗೆ ಆಘಾತ ನೀಡಿದರು. ಈಶ್ವರ್ ಸಾಯಿ 21-13, 21-11ರಿಂದ ಸಿದ್ದಾರ್ಥ್ ಎಸ್.ನಾಯರ್ ಅವರನ್ನು ಮಣಿಸಿದರು.

ಬಾಲಕಿಯರ ಸಿಂಗಲ್ಸ್ ವಿಭಾಗದ ನಾಲ್ಕರ ಘಟ್ಟದ ಪಂದ್ಯಗಳಲ್ಲಿ ಅದಿತಿ ಸುಶಾಂತ್ 21-18, 17-21, 21-16 ರಿಂದ ಸ್ಮೃತಿ ಎಸ್ ಎದುರು, ಮಹಿತಾ ನಾಯ್ಡು ಸೂರಿಶೆಟ್ಟಿ 21-14, 22-20 ರಿಂದ ಕಂಡಿಬಿಲ್ಲಾ ಶ್ರೇಯಾ ಎದುರು ಗೆಲುವು ಕಂಡರು.



17 ವರ್ಷದೊಳಗಿನ ಬಾಲಕರ ಡಬಲ್ಸ್ ವಿಭಾಗದಲ್ಲಿ ಫೈನಲ್ ಪ್ರವೇಶಿಸಿದ ಮೆಹುಲ್ ಮಾನವ್ ಮತ್ತು ಸಾತ್ವಿಕ್ ಎಸ್‌.ಪ್ರಭು ಆಟದ ವೈಖರಿ ಪ್ರಜಾವಾಣಿ ಚಿತ್ರ

ಬಿಡಬ್ಲ್ಯುಎಫ್ ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್: ಉನ್ನತಿ ಹೂಡಾಗೆ ನಿರಾಸೆ

ಪದಕ ಖಚಿತಪಡಿಸಿಕೊಂಡ ತನ್ವಿ

ಗುವಾಹಟಿ (ಪಿಟಿಐ): ಉದಯೋನ್ಮುಖ ಆಟಗಾರ್ತಿ ತನ್ವಿ ಶರ್ಮಾ ಅವರು ಸೆಮಿಫೈನಲ್ ಪ್ರವೇಶಿಸುವ ಮೂಲಕ ಬಿಡಬ್ಲ್ಯುಎಫ್ ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ಪದಕ ಖಚಿತಪಡಿಸಿಕೊಂಡರು. ಈ ಮೂಲಕ ಬಾಲಕಿಯರ ಸಿಂಗಲ್ಸ್‌ನಲ್ಲಿ 17 ವರ್ಷಗಳಲ್ಲಿ ಪದಕ ಜಯಿಸಿದ ಭಾರತದ ಮೊದಲ ಆಟಗಾರ್ತಿ ಎಂಬ ಹಿರಿಮೆಗೆ ಅವರು ಪಾತ್ರವಾದರು.

ಮೊದಲ ಗೇಮ್‌ನ ಹಿನ್ನಡೆಯಿಂದ ಅಮೋಘವಾಗಿ ಚೇತರಿಸಿಕೊಂಡ 16 ವರ್ಷದ ತನ್ವಿ ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ 13-15, 15-9, 15-10ರಿಂದ ಜಪಾನ್‌ನ ಸಾಕಿ ಮಾಟ್ಸುಮೊಟೊ ಅವರನ್ನು ಸೋಲಿಸಿ ನಾಲ್ಕರ ಘಟ್ಟಕ್ಕೆ ಮುನ್ನಡೆದರು. ಈ ಟೂರ್ನಿಯಲ್ಲಿ ಸೆಮಿಫೈನಲ್‌ನಲ್ಲಿ ಸೋತವರಿಗೂ ಕಂಚಿನ ಪದಕ ಲಭಿಸುತ್ತದೆ.

ರಾಷ್ಟ್ರೀಯ ಶ್ರೇಷ್ಠತಾ ಕೇಂದ್ರದಲ್ಲಿ ಪ್ರೇಕ್ಷಕರನ್ನು ತುದಿಗಾಲಿನಲ್ಲಿ ನಿಲ್ಲಿಸಿದ್ದ ಈ ಪಂದ್ಯವನ್ನು ಆತಿಥೇಯ ದೇಶದ ಆಟಗಾರ್ತಿ 47 ನಿಮಿಷದಲ್ಲಿ ಗೆದ್ದುಕೊಂಡರು. ಒತ್ತಡವನ್ನು ಮೆಟ್ಟಿನಿಂತ ಅಗ್ರ ಶ್ರೇಯಾಂಕದ ತನ್ವಿ ಕ್ರಾಸ್ ಕೋರ್ಟ್ ಸ್ಲೈಸ್ ಹಿಟ್‌ಗಳ ಮೂಲಕ ಎದುರಾಳಿಯನ್ನು ತಬ್ಬಿಬ್ಬುಗೊಳಿಸಿದರು. ಮುಂದಿನ ಸುತ್ತಿನಲ್ಲಿ ಅವರಿಗೆ ಚೀನಾದ ಲಿಯು ಸಿ ಯಾ ಎದುರಾಳಿಯಾಗಿದ್ದಾರೆ.

2008ರ ಟೂರ್ನಿಯಲ್ಲಿ ಸೈನಾ ನೆಹ್ವಾಲ್ ಅವರು ಬಾಲಕಿಯರ ಸಿಂಗಲ್ಸ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದರು. ನಂತರ ಈ ವಿಭಾಗದಲ್ಲಿ ಯಾರೂ ಪದಕ ಗೆದ್ದಿರಲಿಲ್ಲ. ಸೈನಾ 2006ರಲ್ಲೂ ಬೆಳ್ಳಿ ಗೆದ್ದಿದ್ದರು. ಅದಕ್ಕೂ ಮುನ್ನ ಅಪರ್ಣಾ ಪೊಪಟ್ (1996ರಲ್ಲಿ ಬೆಳ್ಳಿ) ಭಾರತದ ಪರ ಮೊದಲ ಪದಕ ಜಯಿಸಿದ್ದರು.



ಭಾರತದ ತನ್ವಿ ಶರ್ಮಾ ಪಿಟಿಐ ಚಿತ್ರ

ಈ ವರ್ಷದ ಆರಂಭದಲ್ಲಿ ಬ್ಯಾಡ್ಮಿಂಟನ್ ಏಷ್ಯಾ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದಿದ್ದ ತನ್ವಿ ಇಲ್ಲಿ ಉತ್ತಮ ಆರಂಭ ಪಡೆದರು. ಮೊದಲ ಗೇಮ್‌ನಲ್ಲಿ 10-6 ಮುನ್ನಡೆ ಹೊಂದಿದ್ದ ಅವರು ಸುಲಭ ಗೆಲುವಿನ ಹಾದಿಯಲ್ಲಿದ್ದರು. ಆದರೆ, ಅವರು ಎಸಗಿದ ತಪ್ಪುಗಳ ಲಾಭ ಪಡೆದ ಜಪಾನ್ ಆಟಗಾರ್ತಿ ಮೊದಲ ಗೇಮ್‌ನಲ್ಲಿ ಮೇಲುಗೈ ಸಾಧಿಸಿದರು.

ಎರಡನೇ ಗೇಮ್‌ನಲ್ಲಿ ಪುಟಿದೆದ್ದ ತನ್ವಿ, ಸಮಬಲ ಸಾಧಿಸುವಲ್ಲಿ ಯಶಸ್ವಿಯಾದರು. ರೋಚಕವಾಗಿದ್ದ ನಿರ್ಣಾಯಕ ಗೇಮ್‌ನಲ್ಲಿ ತನ್ವಿ ಒಂದು ಹಂತದಲ್ಲಿ 5-8 ಹಿನ್ನಡೆಯಲ್ಲಿದ್ದರು. ಅಮೋಘವಾಗಿ ಚೇತರಿಸಿಕೊಂಡು ಗೆಲುವು ಸಾಧಿಸಿದರು.

'ಮಾಟ್ಸುಮೊಟೊ ಅವರ ರ‍್ಯಾಲಿಯಲ್ಲಿ ವೇಗ ಮತ್ತು ಮಂದಗತಿ ಇದ್ದುದರಿಂದ ಅದನ್ನು ಎದುರಿಸುವುದು ಕಷ್ಟ. ಆದ್ದರಿಂದ, ನಾನು ಆಕ್ರಮಣಕಾರಿಯಾಗಿ ಆಡಿ ಯಶಸ್ವಿಯಾದೆ. ಪದಕ ಖಚಿತವಾಗಿರುವುದಕ್ಕೆ ಸಂತೋಷವಾಗಿದೆ' ಎಂದು ತನ್ವಿ ಹೇಳಿದರು.

ಹೂಡಾಗೆ ನಿರಾಸೆ: ಭಾರತದ ಭರವಸೆಯ ಮತ್ತೊಬ್ಬ ಆಟಗಾರ್ತಿ, ಎಂಟನೇ ಶ್ರೇಯಾಂಕದ ಉನ್ನತಿ ಹೂಡಾ ನಿರಾಸೆ ಮೂಡಿಸಿದರು. 2022ರ ಒಡಿಶಾ ಓಪನ್‌ನಲ್ಲಿ ಸೂಪರ್ 100 ಪ್ರಶಸ್ತಿ ಗೆದ್ದಿದ್ದ ಭಾರತದ ಅತಿ ಕಿರಿಯ ಆಟಗಾರ್ತಿ ಹೂಡಾ ಎಂಟರ ಘಟ್ಟದಲ್ಲಿ ಹೊರಬಿದ್ದರು. 32 ನಿಮಿಷಗಳ ಹಣಾಹಣಿಯಲ್ಲಿ ಅವರು 12-15 13-15ರಲ್ಲಿ ನೇರ ಗೇಮ್‌ಗಳಿಂದ ಥಾಯ್ಲೆಂಡ್‌ನ ಅನ್ಯಪತ್ ಫಿಚಿಟ್‌ಪ್ರೋನ್ ಅವರಿಗೆ ಮಣಿದರು.

ಬಾಲಕರ ಸಿಂಗಲ್ಸ್ ಕ್ವಾರ್ಟರ್ ಫೈನಲ್‌ನಲ್ಲಿ ಜ್ಞಾನ ದತ್ತು 15-11, 15-13ರಿಂದ ಮೂರನೇ ಶ್ರೇಯಾಂಕದ ಲಿಯು ಯಾಂಗ್ ಮಿಂಗ್ (ಚೀನಾ) ಅವರಿಗೆ ಸೋತರು. ಮಿಶ್ರ ಡಬಲ್ಸ್‌ನಲ್ಲಿ ಭಾರತದ ಭವ್ಯಾ ಛಾಬ್ರಾ ಮತ್ತು ವಿಶಾಖ ಟೊಪ್ಪೊ ಜೋಡಿಯು ಕ್ವಾರ್ಟರ್ ಫೈನಲ್‌ನಲ್ಲಿ 9-15, 7-15ರಿಂದ ತೈವಾನ್‌ನ ಜೋಡಿಯಾದ ಹಂಗ್ ಬಿಂಗ್ ಫೂ ಮತ್ತು ಚೌ ಯುನ್ ಆನ್ ವಿರುದ್ಧ ಸೋತು, ಅಭಿಯಾನ ಮುಗಿಸಿತು.

ಡೆನ್ಮಾರ್ಕ್ ಓಪನ್: ಸೆಮಿಗೆ ಸಾತ್ವಿಕ್–ಚಿರಾಗ್ ಜೋಡಿ

ಒಡೆನ್ಸ್ (ಡೆನ್ಮಾರ್ಕ್), (ಪಿಟಿಐ): ಭಾರತದ ಸ್ಟಾರ್ ಡಬಲ್ಸ್ ಆಟಗಾರರಾದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ – ಚಿರಾಗ್ ಶೆಟ್ಟಿ ಅವರು ಮೂರು ಗೇಮ್‌ಗಳ ಸೆಣಸಾಟದಲ್ಲಿ ಇಂಡೊನೇಷ್ಯಾದ ಮುಹಮ್ಮದ್ ರಿಯಾನ್ ಅರ್ಡಿಯಾಂಟೊ–ರಹಮತ್ ಹಿದಾಯತ್ ಜೋಡಿಯನ್ನು ಸೋಲಿಸಿ ಡೆನ್ಮಾರ್ಕ್ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಸೆಮಿಫೈನಲ್ ತಲುಪಿದರು.

ಶುಕ್ರವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಭಾರತದ ಆಟಗಾರರು 21–15, 18–21, 21–16 ರಿಂದ ಇಂಡೊನೇಷ್ಯಾದ ಜೋಡಿಯನ್ನು ಸೋಲಿಸಿದರು.

ಭಾರತದ ಆಟಗಾರರು ಮುಂದಿನ ಸುತ್ತಿನಲ್ಲಿ ಜಪಾನ್‌ನ ತಾಕುರೊ ಹೊಕಿ- ಯುಗೊ ಕಬಾಯಾಶಿ ಅವರನ್ನು ಎದುರಿಸಲಿದ್ದಾರೆ.

ಸೇನ್‌ಗೆ ನಿರಾಸೆ: ಪುರುಷರ ಸಿಂಗಲ್ಸ್‌ನಲ್ಲಿ ಭಾರತದ ಲಕ್ಷ್ಯ ಸೇನ್ 9-21, 14-21ರಿಂದ ಡೆನ್ಮಾರ್ಕ್‌ನ ಆ್ಯಂಡರ್ಸ್ ಆಂಟನ್ಸೆನ್ ಅವರಿಗೆ ಮಣಿದರು.


ಯಾವಾಗಲೂ 100% ಅಸಲಿ ಉತ್ಪನ್ನಗಳು •ಅತ್ಯಂತ ಕಡಿಮೆ ಬೆಲೆ ಇತ್ತೀಚಿನ ಮಾಡೆಲ್‌ಗಳು •ಅತ್ಯುತ್ತಮ ಬ್ರ್ಯಾಂಡ್ •ಅತ್ಯುತ್ತಮ ಸರ್ವೀಸ್ •ಅತ್ಯುತ್ತಮ ಎಕ್ಸ್‌ಚೇಂಜ್ ವಾರಂಟಿ •ನೈಜ ಕೊಡುಗೆ •ನೈಜ ಬಹುಮಾನ
ಮೆಗಾ ಫೆಸ್ಟಿವಲ್ ಸೇಲ್
ದೀಪಾವಳಿ
ಹಬ್ಬದ ಶುಭಾಶಯಗಳು
ಗೆಲ್ಲಿರಿ 25 ಕಾರುಗಳು
ಗೆಲ್ಲಿರಿ 17 ಕೋಟಿ
ಪೈ ಲಾಯಲ್ಟಿ ಪಾಯಿಂಟ್ಸ್*
ಪೈ ಇಂಟರ್‌ನ್ಯಾಷನಲ್
ಪೈ ಫರ್ನಿಚರ್
ಪೈ ಮೊಬೈಲ್ಸ್
HDFC BANK
Up to ₹13000 Instant Discount* with HDFC Bank EASYEMI on Cards
AXIS BANK 5% INSTANT DISCOUNT* Min Order Value : ₹20,000 | CC EMI
DBS 5% INSTANT DISCOUNT* Min Order Value : ₹20,000 | CC EMI
IDFC FIRST Bank 6% INSTANT DISCOUNT* Min Order Value : ₹10,000 | CC EMI
IDFC FIRST Bank Upto ₹30,000 CASH BACK* Min Trxn : ₹20,000
HDB FINANCIAL SERVICES Upto ₹25,000 CASH BACK* Min Trxn : ₹10,000
BAJAJ FINSERV Upto ₹15,000 CASH BACK* Min Trxn : ₹20,000
TVS CREDIT Get 2 EMIs CASH BACK* On Latest Smart phone with Our Consumer Loans
MEGA FESTIVAL SALE - 2024
357th CAR WINNER
NAME : RENAKAVVA
Product Purchased
Mobile Phone
My Testimonial Scan Here
TILL DATE GENUINELY DISTRIBUTED! 360 CARS | 330 BIKES
236.77 CRORE PAI LOYALTY POINTS
₹26.84 CRORE worth FREE SHOPPING
₹7.32 CRORE worth FREE GOLD
₹4.15 CRORE worth CASH PRIZES
iPhone iphone 15,16 & 17 Up to ₹6000* Cash Back + Up to ₹8000* Exchange Bonus LOWEST PRICE GUARANTEE!!
SAMSUNG A17, A36, A56 & F17 5G Series Up to 10% Cash Back or ZERO Down Payment + Easy EMI + Just PAY Offer
vivo V 60 5G / X200 FE 5G Series Up to 10% Cash Back or ZERO Down Payment + Easy EMI + Just PAY Offer
Oneplus 13, 13S, 13R Up to 10% Cash Back or ZERO Down Payment + Easy EMI + Just PAY Offer
Redmi Note 14 Pro, 14 Pro + 5G Series Up to 10% Cash Back or ZERO Down Payment + Just PAY Offer LOWEST PRICE GUARANTEE!!
On MOBILES
Just Pay ₹9 Get Earphone*
Just Pay ₹99 Get Wireless Neckband*
Just Pay ₹199 Get Earpods*
Just Pay ₹299 Get Calling Smart Watch*
Just Pay ₹499 Get 20W BT Bar Speaker*
Just Pay ₹599 Get Party Speaker*
HENRY 109cm(43) EMI Starts @ ₹1,974
Haier 138cm(55) EMI Starts @ ₹2,994
Panasonic 164cm(65) EMI Starts @ ₹3,455
LG 189cm(75) LG NanoCell EMI Starts @ ₹7,434
SONY 248cm(98) BRAVIA 5 Offer Price ₹5,53,190
LLOYD 280 Ltr, Convertible Frost Free Double Door Refrigerator. Free* EMI Starts @ ₹2,425
Godrej 600 Ltr, Frost Free Inverter, Side By Side Refrigerator. 1+4 Years Warranty Free* EMI Starts @ ₹2,525
Whirlpool 9 KG Ozone Technology, Front Load Fully Automatic Washing Machine. Free* EMI Starts @ ₹1,811
LLOYD 10 KG Tru Auto Dos Fully Automatic Front Load Washing Machine. Free* Garment Steamer EMI Starts @ ₹2,025
BOSCH 15 Place, Series-6 Settings free-standing DISHWASHER. Free* EMI Starts @ ₹1,991
IFB MICROWAVE OVEN Rotisserie Convection. EMI Starts @ ₹1,784
FREE LAPTOP BAG Worth ₹1,999
hp . 13th Gen Core i5 . 16 GB RAM . 512 GB SSD . 4 GB Graphics . Windows 11 . MS Office H&S Flat ₹6,000 Cashback on Selected Cards. 2 Year Extended Warranty + 1 Year ADP + 3 Years Protegent Antivirus @ ₹3,998 EMI Starts @ ₹115/Day
MacBook . M4 CHIP . 16 GB RAM . 256 GB SSD Upto ₹10,000 Cashback on ICICI ,SBI & IDFC Cards. Upto 24 months EMI in Paper Finance. EMI Starts @ ₹124/Day
FREE LAPTOP BAG Worth ₹1,999
hp . R3 - 7320U . 8 GB RAM . 512 GB SSD . Windows 11 . MS Office H&S Upto ₹15,000 Instant Discount on Selected Models on CC*. Sky Bag Play Plus Strolley 55 + 1 Year Extended Warranty worth ₹10,000 @ ₹699 EMI Starts @ ₹128/Day
ASUS GAMING Model . R7 - 7445HS . 16 GB RAM . 512 GB SSD . 4 GB Graphics . Windows 11 ₹3,000 Instant Cashback on Selected Credit & Debit Cards. 1 Year Extended Warranty @ ₹99 on Selected Models. EMI Starts @ ₹142/Day
FREE LAPTOP BAG Worth ₹1,999
DELL . 13th Gen Core i5 . 8 + 8 GB RAM . 512 GB SSD . Windows 11 . MS Office H&S Flat ₹3,000 Cashback on Selected Cards. 1 Year Extended Warranty & First Year ADP worth ₹4,844 @ ₹598 EMI Starts @ ₹150/Day
Prestige VECTRA GLASSTOP 3 BURNER + Svachh Tri Ply Pressure cooker 5 Ltr Upto 31% OFF Offer Price ₹10,595
WATER PURIFIER BUY any Water Purifier Get Surprise GIFT Range Starts From ₹10,990
SMALL APPLIANCES Upto 67% OFF
HYDRAULIC QUEEN BED EMI Starts @ ₹3,333
ಪೈ ಫರ್ನಿಚರ್
INTRODUCING PAI INTERIORS Affordable Modular Solutions for Your Homes Modular Interiors
2 BHK STARTS @ ₹3.39* LAKHS
3 BHK STARTS @ ₹4.39* LAKHS
9108444777 6366383537
LOUNGER SOFA EMI Starts @ ₹4,666
iPhone vivo SAMSUNG oppo mi OnePlus realme MacBook hp DELL Lenovo ASUS LG SONY Panasonic HENRY TCL Haier BOSCH IFB
Godrej Whirlpool LLOYD PHILIPS A.O.Smith BAJAJ Butterfly EUREKA FORBES FABER pureit HAVELLS Prestige Preethi Pigeon KAFF V-GUARD boAt Hazel Polo RIVERSONG base
PRODUCT & SERVICE RELATED ENQUIRIES +91 91084 44777 SERVICE/HELPLINE: 080-42 46 43 43 10AM TO 7PM
FOLLOW US!
FREE DELIVERY FOR REFRIGERATORS, WASHING MACHINES, LED TV'S, FURNITURE
24 HOURS DELIVERY CHALLENGE* GET 100% ADDITIONAL LUCKY DRAW COUPON* IF NOT DELIVERED WITHIN 24 HOURS (Within City Limits)
WE ARE CELEBRATING 220+ OUTLETS
STORE LOCATOR

ಐಸಿಎಗೆ ಕನ್ನಡತಿ ಶಾಂತಾ ರಂಗಸ್ವಾಮಿ ಅಧ್ಯಕ್ಷೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಭಾರತ ಮಹಿಳಾ ಕ್ರಿಕೆಟ್ ತಂಡದ ಪ್ರಥಮ ನಾಯಕಿಯಾಗಿದ್ದ ಶಾಂತಾ ರಂಗಸ್ವಾಮಿ ಅವರನ್ನು ಭಾರತೀಯ ಕ್ರಿಕೆಟಿಗರ ಸಂಘಟನೆ (ಐಸಿಎ)ಗೆ ಅಧ್ಯಕ್ಷೆಯನ್ನಾಗಿ ಆಯ್ಕೆ ಮಾಡಲಾಗಿದೆ. ಕರ್ನಾಟಕದ ಶಾಂತಾ ಅವರು ಈ ಸ್ಥಾನಕ್ಕೆ ಆಯ್ಕೆಯಾದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ.

ಶುಕ್ರವಾರ ನಡೆದ ಚುನಾವಣೆ ಪ್ರಕ್ರಿಯೆಯಲ್ಲಿ ವೆಂಕಿಟ್ಟು ಸುಂದರಂ ಮತ್ತು ದೀಪಕ್ ಜೈನ್ ಅವರು ಕ್ರಮವಾಗಿ ಕಾರ್ಯದರ್ಶಿ ಹಾಗೂ ಖಜಾಂಚಿಯಾಗಿ ಆಯ್ಕೆಯಾದರು. ಸಂತೋಷ್ ಸುಬ್ರಮಣಿಯಂ ಮತ್ತು ಜ್ಯೋತಿ ಜಿ ತಟ್ಟೆ ಅವರನ್ನು ಸದಸ್ಯ ಪ್ರತಿನಿಧಿಗಳನ್ನಾಗಿ ನೇಮಕ ಮಾಡಲಾಯಿತು ಎಂದು ಐಸಿಎ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ವೆಂಕಿನಾ ಚಾಮುಂಡೇಶ್ವರ್ ನಾಥ್ ಮತ್ತು ಸುಧಾ ಶಾ ಅವರು ಕ್ರಮವಾಗಿ ಬಿಸಿಸಿಐನಲ್ಲಿ ಐಸಿಸಿ ಪ್ರತಿನಿಧಿಗಳಾಗಿ ಆಯ್ಕೆಯಾಗಿದ್ದಾರೆ. ಶುಭಾಂಗಿ ಡಿ ಕುಲಕರ್ಣಿ ಅವರನ್ನು ಐಪಿಎಲ್ ಆಡಳಿತ ಸಮಿತಿಗೆ ನಾಮನಿರ್ದೇಶನ ಮಾಡಲಾಯಿತು.

71 ವರ್ಷದ ಶಾಂತಾ, ಮೂಲತಃ ಬೆಂಗಳೂರಿನವರು. 1976 ರಿಂದ 1991ರ ಅವಧಿಯಲ್ಲಿ ಭಾರತ ಮಹಿಳಾ ತಂಡದಲ್ಲಿ ಆಡಿದ್ದರು.

ಅವರು 16 ಟೆಸ್ಟ್‌ಗಳಲ್ಲಿ ಆಡಿ ಒಂದು ಶತಕ ಹಾಗೂ ಆರು ಅರ್ಧಶತಕಗಳನ್ನು ಗಳಿಸಿದ್ದಾರೆ. ಒಟ್ಟು 750 ರನ್ ಗಳಿಸಿದ್ದಾರೆ. ಜೊತೆಗೆ 21 ವಿಕೆಟ್‌ಗಳನ್ನೂ ಪಡೆದಿದ್ದಾರೆ. 19 ಏಕದಿನ ಪಂದ್ಯಗಳಿಂದ 287 ರನ್ ಪೇರಿಸಿದ್ದಾರೆ.

ರ‍್ಯಾಂಕಿಂಗ್: 136ನೇ ಸ್ಥಾನಕ್ಕಿಳಿದ ಭಾರತ

ನವದೆಹಲಿ (ಪಿಟಿಐ): ಭಾರತ ಪುರುಷರ ಫುಟ್‌ಬಾಲ್ ತಂಡ, ಶುಕ್ರವಾರ ಪ್ರಕಟವಾದ ಫಿಫಾ ವಿಶ್ವ ರ‍್ಯಾಂಕಿಂಗ್‌ನಲ್ಲಿ 136ನೇ ಸ್ಥಾನಕ್ಕೆ ಕುಸಿದಿದೆ. 9 ವರ್ಷಗಳಲ್ಲಿ ಇದೇ ಮೊದಲ ಬಾರಿ ಭಾರತ ರ‍್ಯಾಂಕಿಂಗ್‌ನಲ್ಲಿ ಈ ಮಟ್ಟಕ್ಕೆ ಇಳಿದಿದೆ.

ಈ ಹಿಂದಿನ ರ‍್ಯಾಂಕಿಂಗ್‌ನಲ್ಲಿ ಭಾರತ 134ನೇ ಸ್ಥಾನದಲ್ಲಿದಲ್ಲಿತ್ತು. ಎರಡು ದಿನಗಳ ಹಿಂದೆಯಷ್ಟೇ ಭಾರತ ತಂಡವು ಎಎಫ್‌ಸಿ ಏಷ್ಯನ್ ಕಪ್ ರ‍್ಯಾಂಕಿಂಗ್‌ನಲ್ಲಿ ಸಿಂಗಪುರಕ್ಕೆ ಸೋತು, ಪ್ರಧಾನ ಸುತ್ತಿಗೆ ತಲುಪುವ ಕ್ಷೀಣ ಅವಕಾಶವನ್ನೂ ಕಳೆದುಕೊಂಡಿತ್ತು. ಭಾರತವು, ಕುವೈತ್‌ಗಿಂತ ಒಂದು ಸ್ಥಾನ ಕೆಳಗಿದ್ದು, ಬೋಟ್ಸ್‌ವಾನಾಗಿಂತ ಒಂದು ಸ್ಥಾನ ಮೇಲಿದೆ.

2016ರ ಅಕ್ಟೋಬರ್‌ನಲ್ಲಿ ಭಾರತ 137ನೇ ಸ್ಥಾನಕ್ಕೆ ಇಳಿದಿದ್ದು, ಈವರೆಗಿನ ಕಳಪೆ ಎನಿಸಿದೆ. 1996ರ ಫೆಬ್ರುವರಿಯಲ್ಲಿ 94ನೇ ಸ್ಥಾನಕ್ಕೇರಿದ್ದು ಇದುವರೆಗಿನ ಅತ್ಯುತ್ತಮ ಸಾಧನೆ ಎನಿಸಿದೆ.

ಸ್ಪೇನ್‌ಗೆ ಅಗ್ರಸ್ಥಾನ: ವಿಶ್ವ ರ‍್ಯಾಂಕಿಂಗ್‌ನಲ್ಲಿ ಸ್ಪೇನ್ ಅಗ್ರಸ್ಥಾನದಲ್ಲಿ ಉಳಿದುಕೊಂಡಿದೆ. ಜರ್ಮನಿ ಎರಡು ಸ್ಥಾನ ಮೇಲೇರಿದ್ದು ಅಗ್ರ 10ರೊಳಗೆ ಮರಳಿದೆ. 2018ರ ವಿಶ್ವಕಪ್ ರನ್ನರ್ ಅಪ್ ಕ್ರೊವೇಷ್ಯಾ 11ನೇ ಸ್ಥಾನದಲ್ಲಿದೆ.

ವಿಶ್ವ ಕಪ್ ವಿಜೇತ ಅರ್ಜೆಂಟೀನಾ ಎರಡನೇ, ಫ್ರಾನ್ಸ್ ಮೂರನೇ ಸ್ಥಾನದಲ್ಲಿವೆ. ಇಂಗ್ಲೆಂಡ್, ಪೋರ್ಚುಗಲ್, ನೆದರ್ಲೆಂಡ್ಸ್, ಬ್ರೆಜಿಲ್ ಮತ್ತು ಬೆಲ್ಜಿಯಂ ಕ್ರಮವಾಗಿ ನಾಲ್ಕರಿಂದ ಎಂಟರವರೆಗಿನ ಸ್ಥಾನಗಳನ್ನು ಪಡೆದಿವೆ.

ಶನಿವಾರ, ಅಕ್ಟೋಬರ್ 18, 2025 | ₹ 7.00
prajavani.net prajavani
www.prajavani.net

ದಮಾಮಿ ಕುಣಿತ...
ಕೊಪ್ಪಳದಲ್ಲಿ ಶುಕ್ರವಾರ ನಡೆದ ಯುವಜನೋತ್ಸವದಲ್ಲಿ ಕಾರಟಗಿಯ ಶ್ರೀ ಶರಣ ಬಸವೇಶ್ವರ ವಿದ್ಯಾ ಸಂಸ್ಥೆಯ ವಿದ್ಯಾರ್ಥಿಗಳು ಸಿದ್ದಿ ಬುಡಕಟ್ಟು ಸಮುದಾಯದ ವಿಶಿಷ್ಟ ಬಗೆಯ ದಮಾಮಿ ಕುಣಿತ ಪ್ರಸ್ತುತಪಡಿಸಿದರು



ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಓದುಗರ ಗಮನಕ್ಕೆ
ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ



ಕಾಂತಾರ ಗಳಿಕೆ ₹717 ಕೋಟಿ 2

2 ವಿಮೆ ಬಳಸಿದ 3 ಲಕ್ಷ ಮಂದಿ

ಆರೋಗ್ಯ ಇಲಾಖೆ ಪರಿಶೋಧನೆಯಲ್ಲಿ ಪತ್ತೆ • ಯಶಸ್ವಿನಿ ಫಲಾನುಭವಿಗಳಿಗೆ ಎಬಿ–ಎಆರ್‌ಕೆ ಅಡಿ ₹130 ಕೋಟಿ ವೆಚ್ಚ

• ವರುಣ ಹೆಗಡೆ

ಬೆಂಗಳೂರು: ರಾಜ್ಯದ 3.07 ಲಕ್ಷ ಮಂದಿ ಎರಡು ಆರೋಗ್ಯ ಯೋಜನೆಗಳನ್ನೂ ಬಳಸಿಕೊಂಡು ಒಟ್ಟು ₹130 ಕೋಟಿ ವೆಚ್ಚದಲ್ಲಿ ಚಿಕಿತ್ಸೆ ಪಡೆದಿರುವುದು ಆರೋಗ್ಯ ಇಲಾಖೆಯ ಪರಿಶೋಧನೆಯಿಂದ ಪತ್ತೆಯಾಗಿದೆ.

ಸಹಕಾರ ಇಲಾಖೆಯ 'ಯಶಸ್ವಿನಿ' ಯೋಜನೆಯ ಫಲಾನುಭವಿಗಳು, ಆರೋಗ್ಯ ಇಲಾಖೆ 'ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ' (ಎಬಿ-ಎಆರ್‌ಕೆ) ಯೋಜನೆಯಡಿಯೂ ಚಿಕಿತ್ಸೆ ಪಡೆದಿದ್ದಾರೆ. ಆರೋಗ್ಯ ಇಲಾಖೆಯು ಸಹಕಾರ ಇಲಾಖೆಯಿಂದ ಯಶಸ್ವಿನಿ ಫಲಾನುಭವಿಗಳ ಆಧಾರ್ ದತ್ತಾಂಶ ಪಡೆದು, ಎಬಿ-ಎಆರ್‌ಕೆ ಯೋಜನೆಯ ಫಲಾನುಭವಿಗಳ ಜತೆಗೆ ಹೋಲಿಕೆ ಮಾಡಿದಾಗ ಒಂದೇ ಕುಟುಂಬ ಹೀಗೆ ಎರಡು ಯೋಜನೆಯಡಿ ಚಿಕಿತ್ಸೆ ಪಡೆದಿರುವುದು ಗೊತ್ತಾಗಿದೆ.

ಎಬಿ-ಎಆರ್‌ಕೆ ಯೋಜನೆಯ ಮಾರ್ಗಸೂಚಿ ಪ್ರಕಾರ ಫಲಾನುಭವಿಗಳು ಬೇರೆ ಯಾವುದೇ ಸರ್ಕಾರಿ ಆರೋಗ್ಯ ವಿಮೆಯಡಿ ನೋಂದಣಿಯಾಗಿರಬಾರದು. ಆದ್ದರಿಂದ ಯಶಸ್ವಿನಿ ಯೋಜನೆಯಡಿ ನೋಂದಾಯಿತ ಅರ್ಹ ಫಲಾನುಭವಿಗಳು ಎಬಿ-ಎಆರ್‌ಕೆ ಯೋಜನೆಯಡಿ ಚಿಕಿತ್ಸೆ ಪಡೆಯಲು ಅರ್ಹರಲ್ಲ. ಇಷ್ಟಾಗಿಯೂ ಕೆಲವರು ಎರಡೂ ಯೋಜನೆಗಳ ಲಾಭ ಪಡೆದು ಕೊಳ್ಳುತ್ತಿದ್ದು, ವಾರ್ಷಿಕ ₹10 ಲಕ್ಷದವರೆಗೂ ಆರೋಗ್ಯ ರಕ್ಷಣೆಗೆ ಒಳಪಡುತ್ತಿದ್ದಾರೆ. 2024-25ನೇ ಸಾಲಿನಲ್ಲಿ ಯಶಸ್ವಿನಿ ಯೋಜನೆಯ ಫಲಾನುಭವಿಗಳಲ್ಲಿ, 3.07 ಲಕ್ಷ ಮಂದಿ ಎಬಿ-ಎಆರ್‌ಕೆ ಯೋಜನೆಯಡಿ ₹130 ಕೋಟಿ ವೆಚ್ಚದಲ್ಲಿ ಚಿಕಿತ್ಸೆ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ (ಸಾಸ್ಟ್) ಎರಡೂ ಯೋಜನೆಗಳನ್ನು ನಿರ್ವಹಣೆ ಮಾಡುತ್ತಿದೆ. ಸಹಕಾರ ಸಂಘದ ಸದಸ್ಯರು ಹಾಗೂ ಅವರ ಕುಟುಂಬದ ಸದಸ್ಯರ ಹಿತದೃಷ್ಟಿಯಿಂದ, ಸರ್ಕಾರವು 2023ರ ಜನವರಿಯಲ್ಲಿ 'ಯಶಸ್ವಿನಿ ಸಹಕಾರ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟ್' ಮೂಲಕ ಯಶಸ್ವಿನಿ ಯೋಜನೆಗೆ ಮರುಚಾಲನೆ ನೀಡಿತ್ತು. ಈ ಯೋಜನೆಯಡಿ ಫಲಾನುಭವಿಗಳು ಗರಿಷ್ಠ ₹5 ಲಕ್ಷದವರೆಗೆ ನಗದು ರಹಿತ ಚಿಕಿತ್ಸೆ ಪಡೆಯಬಹುದಾಗಿದೆ. 'ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ' ಯೋಜನೆ 2018ರಲ್ಲಿ ಆರಂಭವಾಗಿದೆ. ಯೋಜನೆಯಡಿ ಬಿಪಿಎಲ್ ಕುಟುಂಬದವರಿಗೆ ವರ್ಷಕ್ಕೆ ₹5 ಲಕ್ಷದವರೆಗೆ ಆರೋಗ್ಯ ವಿಮೆಗೆ ಅವಕಾಶವಿದೆ. ಎಪಿಎಲ್ ಕುಟುಂಬದ ಸದಸ್ಯರಿಗೆ ಗರಿಷ್ಠ ₹1.50 ಲಕ್ಷ ಚಿಕಿತ್ಸಾ ವೆಚ್ಚ ನಿಗದಿ ಮಾಡಿದ್ದು, ಶೇ 30ರಷ್ಟು ಹಣ ಪಾವತಿಸಲಾಗುತ್ತದೆ.

ಬಹುತೇಕರು ಫಲಾನುಭವಿಗಳು: ಆಧಾರ್ ದತ್ತಾಂಶ ವಿಶ್ಲೇಷಣೆ ವೇಳೆ 35.71 ಲಕ್ಷಕ್ಕೂ ಅಧಿಕ ಮಂದಿಯ ಆಧಾರ್ ವಿವರ ಎರಡೂ ಯೋಜನೆಗಳಲ್ಲಿ ಕಂಡುಬಂದಿದೆ. ಸಹಕಾರ ಇಲಾಖೆ ನೀಡಿದ ಆಧಾರ್ ದತ್ತಾಂಶದ ಪ್ರಕಾರ, 41.51 ಲಕ್ಷ ಮಂದಿ ಯಶಸ್ವಿನಿ ಯೋಜನೆಯ ಫಲಾನುಭವಿಗಳಾಗಿದ್ದಾರೆ. ಇವರಲ್ಲಿ ಬಹುತೇಕರು ಎಬಿ-ಎಆರ್‌ಕೆ ಯೋಜನೆಯ ಫಲಾನುಭವಿಯೂ ಆಗಿದ್ದು, ನಿಗದಿತ ಯೋಜನೆಯ ಗರಿಷ್ಠ ಆರೋಗ್ಯ ವಿಮೆ ₹5 ಲಕ್ಷ ದಾಟಿದ ಬಳಿಕ ಕುಟುಂಬದ ಸದಸ್ಯರು ಇನ್ನೊಂದು ಯೋಜನೆಯ ಮೊರೆಹೋಗುತ್ತಿದ್ದಾರೆ. ಖಾಸಗಿ ಆಸ್ಪತ್ರೆಗಳೂ ಪ್ಯಾಕೇಜ್ ದರ ಅಧಿಕ ಇರುವ ಯೋಜನೆಗಳಡಿ ಚಿಕಿತ್ಸೆಗೆ ಆದ್ಯತೆ ನೀಡುತ್ತಿವೆ. ಯಶಸ್ವಿನಿಯಡಿ ನೋಂದಾಯಿತ ಸದಸ್ಯರು ಯೋಜನೆಯಡಿ ಬರುವ ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆಗಳಿಗೆ ನೇರವಾಗಿ ತೆರಳಿ, ಚಿಕಿತ್ಸೆ ಪಡೆದುಕೊಳ್ಳಬಹುದಾಗಿದೆ. ಎಬಿ-ಎಆರ್‌ಕೆ ಫಲಾನುಭವಿಗಳು ಯೋಜನೆಯ ಪ್ರಯೋಜನ ಪಡೆಯಬೇಕಾದರೆ, ಮೊದಲು ಸರ್ಕಾರಿ ಆಸ್ಪತ್ರೆಗೆ ದಾಖಲಾಗಬೇಕು. ಅಲ್ಲಿ ಚಿಕಿತ್ಸೆ ಲಭ್ಯವಿಲ್ಲದಿದ್ದಲ್ಲಿ ಮಾತ್ರ ಖಾಸಗಿ ಆಸ್ಪತ್ರೆಗೆ ಶಿಫಾರಸು ಆಧಾರದಲ್ಲಿ ತೆರಳಿ ಚಿಕಿತ್ಸೆ ಪಡೆದುಕೊಳ್ಳಬೇಕು.

ಅಂಕಿ ಅಂಶಗಳು

637
ಯಶಸ್ವಿನಿ ಯೋಜನೆಯಡಿ ನೋಂದಾಯಿತ ಆಸ್ಪತ್ರೆಗಳು

3,557
ಎಬಿ-ಎಆರ್‌ಕೆ ಅಡಿ ನೋಂದಾಯಿತ ಆಸ್ಪತ್ರೆಗಳು


ಎಬಿ–ಎಆರ್‌ಕೆ ಅಡಿ ಚಿಕಿತ್ಸೆಗೆ ಕಡಿವಾಣ

'ಯಶಸ್ವಿನಿ' ಫಲಾನುಭವಿಗಳು 'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ' (ಎಬಿ-ಎಆರ್‌ಕೆ) ಯೋಜನೆಯಡಿ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವುದಕ್ಕೆ ಆರೋಗ್ಯ ಇಲಾಖೆ ಕಡಿವಾಣ ಹಾಕಿದೆ. ಫಲಾನುಭವಿಗಳು ಯಶಸ್ವಿನಿ ಯೋಜನೆಯಡಿಯೇ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳಬೇಕಿದೆ. ಆದರೆ, ಸರ್ಕಾರಿ ಆಸ್ಪತ್ರೆಗಳಲ್ಲಿ ಈ ನಿರ್ಬಂಧವಿಲ್ಲ. ಯಶಸ್ವಿನಿ ಫಲಾನುಭವಿಯು ಚಿಕಿತ್ಸೆಗಳಿಂದ ವಂಚಿತವಾಗಬಾರದು ಎಂಬ ಕಾರಣಕ್ಕೆ ಎಬಿ-ಎಆರ್‌ಕೆ ಅಡಿಯೂ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಅವಕಾಶವನ್ನು ಮುಂದುವರಿಸಲಾಗಿದೆ.

'ಎಬಿ-ಎಆರ್‌ಕೆ ಮಾರ್ಗಸೂಚಿ ಪ್ರಕಾರ ಫಲಾನುಭವಿಗಳು ಬೇರೆ ಸರ್ಕಾರಿ ಆರೋಗ್ಯ ವಿಮೆಯ ಫಲಾನುಭವಿಗಳಾಗಿರಬಾರದು. ಆದರೆ, ಹಲವರು ಎರಡೂ ಯೋಜನೆಯ ಲಾಭ ಪಡೆದುಕೊಳ್ಳುತ್ತಿದ್ದರು. ಯಶಸ್ವಿನಿ ಯೋಜನೆಯ ಫಲಾನುಭವಿಯು ಎಬಿ-ಎಆರ್‌ಕೆ ಫಲಾನುಭವಿ ಕೂಡ ಆಗಿದ್ದರೆ ಯಶಸ್ವಿನಿ ಯೋಜನೆಯಡಿಯೇ ಚಿಕಿತ್ಸೆ ಪಡೆಯಬೇಕು. ಖಾಸಗಿ ಆಸ್ಪತ್ರೆಗಳು ಕೂಡ ಪ್ಯಾಕೇಜ್ ದರ ಅಧಿಕ ಇರುವ ಯೋಜನೆಯಡಿ ಚಿಕಿತ್ಸೆ ಒದಗಿಸುತ್ತಿದ್ದವು. ಆದ್ದರಿಂದ ನಿರ್ಬಂಧ ವಿಧಿಸಲಾಗಿದೆ' ಎಂದು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.



ಯಶಸ್ವಿನಿ–ಎಬಿಎಆರ್‌ಕೆ ಯೋಜನೆಯಡಿ ಹೋಲಿಕೆ



• **ಯಶಸ್ವಿನಿ:** ಆಸ್ಪತ್ರೆ ಆಯ್ಕೆ– ನೇರವಾಗಿ ನೋಂದಾಯಿತ ಆಸ್ಪತ್ರೆಗೆ ತೆರಳುವ ಅವಕಾಶ
• **ಎಬಿಎಆರ್‌ಕೆ:** ಆಸ್ಪತ್ರೆ ಆಯ್ಕೆ– ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಲಭ್ಯವಿರದಿದ್ದರೆ ಶಿಫಾರಸು

ಉದ್ಯೋಗ ಮೇಳ

ಪ್ರಜಾವಾಣಿ ಚಿತ್ರ
ಅನೂಪ್ ರಾಘ. ಟಿ.



ಮೈಸೂರಿನಲ್ಲಿ ಶುಕ್ರವಾರ ನಡೆದ ವಿಭಾಗೀಯ ಮಟ್ಟದ ಉದ್ಯೋಗ ಮೇಳದಲ್ಲಿ ಸೇರಿದ್ದ ಉದ್ಯೋಗಾಕಾಂಕ್ಷಿಗಳು

ಹೈಕೋರ್ಟ್ ಆದೇಶ ಎತ್ತಿ ಹಿಡಿದ ಸುಪ್ರೀಂ ಕೋರ್ಟ್

ಶಿಕ್ಷಕರ ನೇಮಕಾತಿ ಸರಾಗ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ 13,352 ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಮುಂದುವರಿಸುವಂತೆ ಹೈಕೋರ್ಟ್ ನೀಡಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ.


ದ್ವಿಸದಸ್ಯ ಪೀಠದ ಆದೇಶ ಪ್ರಶ್ನಿಸಿ ಸಲ್ಲಿಕೆಯಾಗಿದ್ದ ವಿಶೇಷ ಮೇಲ್ಮನವಿ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಜೆ.ಕೆ. ಮಾಹೇಶ್ವರಿ ಮತ್ತು ವಿಜಯ್ ಬಿಷ್ಣೋಯ್ ಅವರ ಪೀಠವು, 'ನೇಮಕಾತಿ ಪ್ರಕ್ರಿಯೆಯಿಂದ ಉಂಟಾಗುವ ಸೇವಾ ಸಂಬಂಧಿತ ದೂರುಗಳನ್ನು ಪರಿಹರಿಸಲು ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ (ಕೆಎಸ್‌ಎಟಿ) ಸೂಕ್ತ ವೇದಿಕೆ' ಎಂದು ಹೇಳಿದೆ.

2023ರ ಅಕ್ಟೋಬರ್ 13ರಂದು ಏಕಸದಸ್ಯ ಪೀಠದ ಆದೇಶ ರದ್ದುಪಡಿಸಿದ್ದ ಆಗಿನ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ದ್ವಿಸದಸ್ಯ ಪೀಠ, 'ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ಇಲ್ಲದ ಅಭ್ಯರ್ಥಿಗಳು ತಮ್ಮ ತಕರಾರನ್ನು ನ್ಯಾಯಮಂಡಳಿ ಮುಂದೆ ಮಂಡಿಸಿ ಸೂಕ್ತ ನ್ಯಾಯ ಪಡೆಯಬಹುದು' ಎಂದು ಸೂಚಿಸಿತ್ತು. 2

ಪ್ರಕರಣವೇನು?

35 ಶೈಕ್ಷಣಿಕ ಜಿಲ್ಲೆಗಳಲ್ಲಿ 6ರಿಂದ 8ನೇ ತರಗತಿವರೆಗೆ 13,352 ಶಿಕ್ಷಕರ ನೇಮಕಕ್ಕೆ ಸಾರ್ವಜನಿಕ ಶಿಕ್ಷಣ ಇಲಾಖೆ 2022ರ ಮಾರ್ಚ್ 21ರಂದು ಅಧಿಸೂಚನೆ ಹೊರಡಿಸಿತ್ತು. 2022ರ ಮೇ ತಿಂಗಳಲ್ಲಿ ನಡೆದ ಲಿಖಿತ ಪರೀಕ್ಷೆಯ ಬಳಿಕ ನವೆಂಬರ್ 18ರಂದು ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲಾಗಿತ್ತು.

ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟಿಸುವಾಗ ವಿವಾಹಿತ ಮಹಿಳೆಯ ಪತಿಯ ಆದಾಯ ಪ್ರಮಾಣಪತ್ರ ಪರಿಗಣಿಸಲಾಗಿತ್ತು. 'ವಿವಾಹಿತ ಮಹಿಳೆಯರು ಪತಿಯ ಆದಾಯ ಪ್ರಮಾಣಪತ್ರವನ್ನೇ ಸಲ್ಲಿಸಬೇಕು ಎಂಬ ಬಗ್ಗೆ ನೇಮಕಾತಿ ಅಧಿಸೂಚನೆಯಲ್ಲಿ ಸ್ಪಷ್ಟ ನಿರ್ದೇಶನ ಇರಲಿಲ್ಲ. ಅರ್ಹತೆ ಇದ್ದರೂ ನಮ್ಮನ್ನು ನೇಮಕಾತಿ ಪಟ್ಟಿಯಿಂದ ಕೈಬಿಡಲಾಗಿದೆ' ಎಂದು ಆರೋಪಿಸಿ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಅವಕಾಶ ಪಡೆಯದವರು ಹೈಕೋರ್ಟ್‌ನ ಮೊರೆ ಹೋಗಿದ್ದರು.



'ವಿವಾಹಿತ ಮಹಿಳೆಯ ತಂದೆಯ ಆದಾಯ ಪ್ರಮಾಣಪತ್ರವನ್ನೂ ಪರಿಗಣಿಸಬೇಕು' ಎಂದು ಏಕಸದಸ್ಯ ಪೀಠ ಆದೇಶಿಸಿ, ತಾತ್ಕಾಲಿಕ ಆಯ್ಕೆಪಟ್ಟಿ ರದ್ದುಗೊಳಿಸಿತ್ತು. ಕೋರ್ಟ್ ಆದೇಶದಂತೆ ಆಯ್ಕೆಪಟ್ಟಿಯನ್ನು ಸರ್ಕಾರ ಪರಿಷ್ಕರಿಸಿತ್ತು. ಮೊದಲಿದ್ದ ಪಟ್ಟಿಯಲ್ಲಿದ್ದ 451 ಅಭ್ಯರ್ಥಿಗಳನ್ನು ಹೊಸ ಪಟ್ಟಿಯಲ್ಲಿ ಕೈಬಿಡಲಾಗಿತ್ತು. ಪ್ರಕರಣ ಮತ್ತೆ ಕೋರ್ಟ್ ಮೆಟ್ಟಿಲೇರಿತ್ತು. ಏಕಸದಸ್ಯ ಪೀಠದ ಆದೇಶವನ್ನು ದ್ವಿಸದಸ್ಯ ಪೀಠ ರದ್ದುಗೊಳಿಸಿತ್ತು.

ಎಡಿಜಿಪಿ ಚಂದ್ರಶೇಖರ್‌ಗೆ ಬೆದರಿಕೆ: ಮೇಲ್ಮನವಿ ವಜಾ, ಎಚ್‌ಡಿಕೆ ನಿರಾಳ

ರಾಜ್ಯ ಸರ್ಕಾರಕ್ಕೆ 'ಸುಪ್ರೀಂ' ತರಾಟೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಾಯುಕ್ತ ಎಡಿಜಿಪಿ ಎಂ.ಚಂದ್ರಶೇಖರ್ ಅವರಿಗೆ ಬೆದರಿಕೆ ಹಾಕಿರುವ ಆರೋಪ ಹೊತ್ತಿರುವ ಕೇಂದ್ರ ಭಾರಿ ಕೈಗಾರಿಕೆ ಸಚಿವ ಎಚ್.ಡಿ.ಕುಮಾರಸ್ವಾಮಿ ವಿರುದ್ಧದ ತನಿಖೆಗೆ ತಡೆ ನೀಡಿರುವ ಹೈಕೋರ್ಟ್‌ನ ಮಧ್ಯಂತರ ಆದೇಶ ರದ್ದುಗೊಳಿಸಬೇಕು ಎಂದು ಕೋರಿ ಕರ್ನಾಟಕ ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಜಾಗೊಳಿಸಿದೆ.

ವಿಶೇಷ ಮೇಲ್ಮನವಿ ಅರ್ಜಿ ವಿಚಾರಣೆ ನಡೆಸಿದ ಭಾರತದ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಹಾಗೂ ನ್ಯಾಯಮೂರ್ತಿ ಕೆ.ವಿನೋದ್ ಚಂದ್ರನ್ ಪೀಠವು, 'ರಾಜಕೀಯ ಹೋರಾಟಗಳಿಗೆ ನ್ಯಾಯಪೀಠವನ್ನೇಕೆ ವೇದಿಕೆ ಮಾಡಿಕೊಳ್ಳುತ್ತೀರಿ' ಎಂದು ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿತು.

ಆಗ ರಾಜ್ಯ ಸರ್ಕಾರದ ಪರ ವಕೀಲರು, 'ಅಕ್ರಮ ಗಣಿಗಾರಿಕೆಗೆ ಒಪ್ಪಿಗೆ ಕೊಟ್ಟ ಪ್ರಕರಣದಲ್ಲಿ ಕುಮಾರಸ್ವಾಮಿ ವಿರುದ್ಧ 2011ರಲ್ಲಿ ದೂರು ದಾಖಲಾಗಿತ್ತು. ನ್ಯಾಯಾಲಯದ ಸೂಚನೆ ಮೇರೆಗೆ 2014ರಲ್ಲಿ ಎಫ್‌ಐಆರ್ ದಾಖಲಿಸಲಾಗಿತ್ತು. ಇದು ಆ ಪ್ರಕರಣಕ್ಕೆ ಸಂಬಂಧಿಸಿದ್ದು' ಎಂದು ಹೇಳಲು ಮುಂದಾದರು. ಆಗ ಸಿಜೆಐ ಅವರು 'ಅರ್ಜಿ ವಜಾಗೊಳಿಸಲಾಗಿದೆ' ಎಂದು ಪ್ರಕಟಿಸಿದರು.



ಪ್ರಕರಣವೇನು?: ಮುಖ್ಯಮಂತ್ರಿಯಾಗಿದ್ದಾಗ ಕುಮಾರಸ್ವಾಮಿ ಅವರು ಸಂಡೂರಿನ ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್‌ಗೆ ಅಕ್ರಮವಾಗಿ 550 ಎಕರೆ ಗಣಿ ಗುತ್ತಿಗೆ ನೀಡಿದ್ದಾರೆ ಎಂದು ದೂರು ದಾಖಲಾಗಿತ್ತು. ಈ ಪ್ರಕರಣದಲ್ಲಿ ಕುಮಾರಸ್ವಾಮಿ ವಿರುದ್ಧ ತನಿಖೆಗೆ ಅನುಮತಿ ನೀಡಬೇಕು ಎಂದು ಲೋಕಾಯುಕ್ತ ಪೊಲೀಸರು ರಾಜ್ಯಪಾಲರಲ್ಲಿ 2023ರಲ್ಲಿ ಅನುಮತಿ ಕೋರಿದ್ದರು. 2024ರಲ್ಲಿ ಆರೋಪಪಟ್ಟಿ ಸಲ್ಲಿಸಿದ್ದರು. ಈ ಪ್ರಕರಣದಲ್ಲಿ ಕುಮಾರಸ್ವಾಮಿ ಅವರಿಗೆ ಜನಪ್ರತಿನಿಧಿಗಳ ನ್ಯಾಯಾಲಯವು ನಿರೀಕ್ಷಣಾ ಜಾಮೀನು ಮಂಜೂರು ಮಾಡಿತ್ತು. ಈ ಜಾಮೀನು ರದ್ದುಗೊಳಿಸಬೇಕು ಎಂದು ರಾಜ್ಯ ಸರ್ಕಾರವು ಅರ್ಜಿ ಸಲ್ಲಿಸಿತ್ತು.

ಕುಮಾರಸ್ವಾಮಿ ಪತ್ರಿಕಾಗೋಷ್ಠಿ ನಡೆಸಿ ಎಡಿಜಿಪಿ ಚಂದ್ರಶೇಖರ್ ವಿರುದ್ಧ ಆರೋಪಗಳನ್ನು ಮಾಡಿದ್ದರು. ಚಂದ್ರಶೇಖರ್ ಅವರಿಗೆ ಬೆದರಿಕೆ ಒಡ್ಡಿದ ಆರೋಪದ ಅಡಿ ಕುಮಾರಸ್ವಾಮಿ, ಅವರ ಪುತ್ರ ನಿಖಿಲ್ ಕುಮಾರಸ್ವಾಮಿ ಹಾಗೂ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು ವಿರುದ್ಧ ಸಂಜಯನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. 2

ನೋಟಿಸ್

ಚಿಕ್ಕಮಗಳೂರು: ಅಕ್ರಮ ಭೂ ಮಂಜೂರಾತಿ ಪ್ರಕರಣದಲ್ಲಿ ಕೊನೆಗೂ ಅಧಿಕಾರಿಗಳು ಮತ್ತು ಸಿಬ್ಬಂದಿ ವಿರುದ್ಧ ಕ್ರಮಕ್ಕೆ ರಾಜ್ಯ ಸರ್ಕಾರ ಮುಂದಾಗಿದೆ. ತನಿಖೆ ಪೂರ್ಣಗೊಳಿಸಿ ಮೂಡಿಗೆರೆ ತಾಲ್ಲೂಕಿನ 11 ಸಿಬ್ಬಂದಿ ವಿರುದ್ಧ ದೋಷಾರೋಪ ಪಟ್ಟಿಯನ್ನು ಕಂದಾಯ ಇಲಾಖೆ ಸಿದ್ಧಪಡಿಸಿದೆ. 2

ಛತ್ತೀಸಗಢ: 210 ನಕ್ಸಲರ ಶರಣಾಗತಿ



ಪ್ರಾತಿನಿಧಿಕ ಚಿತ್ರ

ಛತ್ತೀಸಗಢ (ಪಿಟಿಐ): ಮಾವೋವಾದಿ ಸಂಘಟನೆಯ ಕೇಂದ್ರ ಸಮಿತಿಯ ಸದಸ್ಯ ಸೇರಿದಂತೆ ಒಟ್ಟು 210 ನಕ್ಸಲರು ಶುಕ್ರವಾರ ಇಲ್ಲಿಗೆ ಸಮೀಪದ ಜಗದಲ್‌ಪುರದಲ್ಲಿ ಪೊಲೀಸರು ಮತ್ತು ಅರೆಸೇನಾ ಪಡೆ ಎದುರು ಶರಣಾದರು.

ಶರಣಾದ ನಕ್ಸಲರಿಂದ, 19 ಎಕೆ –47 ರೈಫಲ್, 23 ಐಎನ್‌ಎಸ್‌ಎಸ್ ರೈಫಲ್, ಲೈಟ್ ಮಷೀನ್ ಗನ್, ಗ್ರೆನೇಡ್ ಲಾಂಚರ್ ಸೇರಿದಂತೆ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ಭದ್ರತಾ ಸಿಬ್ಬಂದಿ ವಶಕ್ಕೆ ಒಪ್ಪಿಸಿದರು. ದಂಡಕಾರಣ್ಯ ವಿಶೇಷ ವಿಭಾಗೀಯ ಸಮಿತಿಯ (ಡಿಎಸ್‌ಜೆಡ್‌ಸಿ) ನಾಲ್ವರು ನಕ್ಸಲರು, ಈ ಸಮಿತಿಯ ಪ್ರಾಂತೀಯ ಸಮಿತಿಯ 21 ಸದಸ್ಯರು ಹಾಗೂ 61 ಮಂದಿ ಪ್ರದೇಶ ಸಮಿತಿ ಸದಸ್ಯರು ಶರಣಾಗಿದ್ದಾರೆ ಎಂದು ಪೊಲೀಸ್ ಮೂಲಗಳು ಖಚಿತಪಡಿಸಿವೆ.

ಶರಣಾದ ನಕ್ಸಲರಿಗೆ ಹೂವುಗಳನ್ನು ನೀಡಿ ಬುಡಕಟ್ಟು ಸಮುದಾಯದ ಮುಖಂಡರು ಸ್ವಾಗತಿಸಿ, ಅಭಿನಂದಿಸಿದರು. ಬಳಿಕ ಅವರನ್ನು ಭದ್ರತಾ ಪಡೆ ಸಿಬ್ಬಂದಿ ಕರೆದೊಯ್ದರು. ನಕ್ಸಲರ ಶರಣಾಗತಿಯ ಬಗ್ಗೆ ಮುಖ್ಯಮಂತ್ರಿ ವಿಷ್ಣುದೇವ್ ಸಾಯಿ ಹಾಗೂ ಉಪ ಮುಖ್ಯಮಂತ್ರಿ ವಿಜಯ್ ಶರ್ಮಾ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಛತ್ತೀಸಗಢದ ಬಸ್ತಾರ್ ವಲಯವೂ ಸೇರಿದಂತೆ 2026ರ ಮಾರ್ಚ್ 31ರ ಒಳಗಾಗಿ ಭಾರತವನ್ನು ನಕ್ಸಲ್ ಮುಕ್ತ ದೇಶವನ್ನಾಗಿ ಮಾಡಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಪುನರುಚ್ಚರಿಸಿದ್ದಾರೆ. ಛತ್ತೀಸಗಢದ ಅಭುಜಮರ್ಧ್ ಮತ್ತು ಉತ್ತರ ಬಸ್ತಾರ್ ಪ್ರದೇಶವನ್ನು ಅಮಿತ್ ಶಾ ಅವರು ನಕ್ಸಲ್ ಮುಕ್ತ ಪ್ರದೇಶಗಳೆಂದು ಶುಕ್ರವಾರವಷ್ಟೇ ಘೋಷಿಸಿದ್ದರು.

ಶರಣಾಗತಿ ಹೆಚ್ಚುವ ನಿರೀಕ್ಷೆ 2


ಕಾಜಲ್ ಕುಂದರ್

'ಕಾಂತಾರ' ಗಳಿಕೆ ₹717 ಕೋಟಿ


ರುಕ್ಮಿಣಿ ವಸಂತ್

ಅಕ್ಟೋಬರ್ 2ರಂದು ತೆರೆಕಂಡಿದ್ದ ನಟ ರಿಷಬ್ ಶೆಟ್ಟಿ ನಟಿಸಿ, ನಿರ್ದೇಶಿಸಿರುವ 'ಕಾಂತಾರ: ಒಂದು ದಂತಕಥೆ, ಚಾಪ್ಟರ್–1' ಸಿನಿಮಾ ಎರಡು ವಾರದಲ್ಲಿ ವಿಶ್ವದಾದ್ಯಂತ ₹717.50 ಕೋಟಿ ಗಳಿಸಿದೆ ಎಂದು ಹೊಂಬಾಳೆ ಫಿಲ್ಮ್ಸ್ ತಿಳಿಸಿದೆ.

ರುಕ್ಮಿಣಿ ವಸಂತ್ ನಾಯಕಿಯಾಗಿ ನಟಿಸಿರುವ ಈ ಸಿನಿಮಾ ಬಿಡುಗಡೆಯಾದ ವಾರದಲ್ಲಿ ₹509.25 ಕೋಟಿ ಗಳಿಸಿತ್ತು. ಕರ್ನಾಟಕದಲ್ಲೇ ಇಲ್ಲಿಯವರೆಗೆ ₹200 ಕೋಟಿಗಿಂತ ಹೆಚ್ಚಿನ ಹಣವನ್ನು ಸಿನಿಮಾ ಬಾಚಿದೆ. ದೇಶದಾದ್ಯಂತ ಏಳು ಸಾವಿರಕ್ಕೂ ಅಧಿಕ ತೆರೆಗಳಲ್ಲಿ ಬಿಡುಗಡೆಯಾಗಿದ್ದ ಈ ಸಿನಿಮಾದ ಓಟ ಇನ್ನೂ ನಿಂತಿಲ್ಲ. ಕನ್ನಡದಲ್ಲಿ ಅ.31ರವರೆಗೂ ದೊಡ್ಡ ಸಿನಿಮಾಗಳಿಲ್ಲ. ಹೀಗಾಗಿ ರಾಜ್ಯದ ಬಹುತೇಕ ಚಿತ್ರಮಂದಿರಗಳಲ್ಲಿ ಇನ್ನೆರಡು ವಾರ ಈ ಸಿನಿಮಾದ ಪ್ರದರ್ಶನ ಮುಂದುವರಿಯಲಿದೆ. ಹಿಂದಿಯಲ್ಲಿ ಆಯುಷ್ಮಾನ್ ಖುರಾನ ಹಾಗೂ ರಶ್ಮಿಕಾ ಮಂದಣ್ಣ ನಟನೆಯ 'ಥಮ್ಮ' ಸಿನಿಮಾ ಅ.21ರಂದು ಬಿಡುಗಡೆಯಾಗುತ್ತಿದೆ. ಅತ್ತ ತೆಲುಗು, ತಮಿಳಿನಲ್ಲೂ ದೊಡ್ಡ ಚಿತ್ರಗಳು ಸದ್ಯಕ್ಕಿಲ್ಲ. ಹೀಗಾಗಿ 'ಕಾಂತಾರ'ದ ಗಳಿಕೆ ಇನ್ನೆರಡು ವಾರಗಳಲ್ಲಿ ₹1000 ಕೋಟಿ ತಲುಪುವ ನಿರೀಕ್ಷೆಯಿದೆ.

ಸೆಟ್ಟೇರಿದ 'ಬೀಟ್ ಪೊಲೀಸ್'


ಪ್ರಿಯಾ

ಪ್ರಿಯಾ ಶಠಮರ್ಷಣ ಪೊಲೀಸ್ ಅಧಿಕಾರಿಯಾಗಿ ನಟಿಸುತ್ತಿರುವ 'ಬೀಟ್ ಪೊಲೀಸ್' ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಎಂ.ಆರ್.ಕಪಿಲ್ ಅವರ ನಿರ್ದೇಶನದ ಚಿತ್ರವಿದು. ನೆಲಮಂಗಲ ಪೊಲೀಸ್ ಠಾಣೆಯ ಬಳಿಯಲ್ಲಿಯೇ ಚಿತ್ರ ಮುಹೂರ್ತ ಸಮಾರಂಭ ನಡೆದಿದ್ದು ವಿಶೇಷವಾಗಿತ್ತು. ಆರ್ಯ ಫಿಲ್ಮ್ಸ್ ಲಾಂಛನದಲ್ಲಿ ಆರ್.ಲಕ್ಷ್ಮಿನಾರಾಯಣ ಗೌಡ ಬಂಡವಾಳ ಹೂಡುತ್ತಿದ್ದಾರೆ.

'ನಮ್ಮ ನಿರ್ಮಾಣ ಸಂಸ್ಥೆಯ ನಾಲ್ಕನೆ ಚಿತ್ರವಿದು. ನೈಜ ಘಟನೆಯ ಸುತ್ತ ನಡೆವ ಕಥಾಹಂದರ ಚಿತ್ರದಲ್ಲಿದ್ದು, ಕೌರವ ವೆಂಕಟೇಶ್ ಚಿತ್ರದ ನಾಯಕ. ಡ್ರ್ಯಾಗನ್ ಮಂಜು, ಸುಚೇಂದ್ರ ಪ್ರಸಾದ್, ಪಾಪ ಪಾಂಡು ಚಿದಾನಂದ್ ಸೇರಿದಂತೆ ಅನೇಕ ಪ್ರತಿಭಾವಂತ ಕಲಾವಿದರು ಚಿತ್ರದಲ್ಲಿದ್ದಾರೆ. ನಾಲ್ಕು ಹಾಡು, ನಾಲ್ಕು ಸಾಹಸ ದೃಶ್ಯಗಳಿವೆ. ಈಗಿನ ಕಾಲದ ಶಿಕ್ಷಣ ಕುರಿತು ಒಂದು ಗಟ್ಟಿ ಕಥೆಯನ್ನು ಈ ಚಿತ್ರದ ಮೂಲಕ ಹೇಳಲಾಗುತ್ತಿದ್ದು, ಜನರಿಗೆ ಎಚ್ಚರಿಕೆ ಕೊಡುವ ಪ್ರಯತ್ನ ಮಾಡಿದ್ದೇವೆ' ಎಂದರು ನಿರ್ಮಾಪಕರು.

ಎಂ.ಆರ್.ಕಪಿಲ್ ನೃತ್ಯ ಸಂಯೋಜಕರಾಗಿ ಚಿತ್ರರಂಗದಲ್ಲಿ ಗುರುತಿಸಿಕೊಂಡಿದ್ದಾರೆ. 'ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಹೇಗೆ ವಂಚನೆಯಾಗುತ್ತಿದೆ? ಅದರ ಪರಿಣಾಮಗಳೇನು? ಎಂಬುದು ನಮ್ಮ ಚಿತ್ರದ ಕಥಾವಸ್ತು. ಬೆಂಗಳೂರು ಸುತ್ತಮುತ್ತ 25 ದಿನಗಳ ಕಾಲ ಚಿತ್ರೀಕರಣ ನಡೆಯಲಿದೆ' ಎಂದರು ನಿರ್ದೇಶಕ.

ಮುಂಜಾನೆ ಮಂಜು ಛಾಯಾಚಿತ್ರಗ್ರಹಣ, ರಾಜೇಶ್ ಸಂಗೀತ ಸಂಯೋಜನೆ ಈ ಚಿತ್ರಕ್ಕಿದೆ.

ಬಿಡುಗಡೆಯಾಯ್ತು 'ಬಿಳಿಚುಕ್ಕಿ ಹಳ್ಳಿಹಕ್ಕಿ' ಟ್ರೇಲರ್

ಮಹೇಶ್ ಗೌಡ ನಿರ್ಮಾಣ, ನಿರ್ದೇಶನ ಮಾಡಿ ನಟಿಸಿರುವ 'ಬಿಳಿಚುಕ್ಕಿ ಹಳ್ಳಿಹಕ್ಕಿ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ತೊನ್ನಿನ ಸಮಸ್ಯೆ ಕುರಿತಾದ ಅಪರೂಪದ ಕಥಾವಸ್ತು ಹೊಂದಿರುವ ಚಿತ್ರವನ್ನು ಶ್ರೀಮುರಳಿ ಅರ್ಪಿಸುತ್ತಿದ್ದಾರೆ.

'ಭಾರತೀಯ ಚಿತ್ರರಂಗದಲ್ಲಿಯೇ ಮೊದಲ ಸಲ ತೊನ್ನು ಎಂಬ ಸಮಸ್ಯೆಯ ಸುತ್ತ ರೂಪುಗೊಂಡಿರುವ ಚಿತ್ರವಿದು. ಸ್ವತಃ ಆ ಸಮಸ್ಯೆ ಹೊಂದಿರುವ ವ್ಯಕ್ತಿಯೇ ನಿರ್ದೇಶನ ಮಾಡಿ, ನಿರ್ಮಾಣದ ಜವಾಬ್ದಾರಿ ಹೊತ್ತುಕೊಂಡು, ನಟಿಸಿದ್ದು ಇಷ್ಟವಾಯ್ತು. ಸಮಸ್ಯೆ ಎಂಬ ಗೋಳಿನ ಕಥೆ ಇದರಲ್ಲಿ ಇಲ್ಲ. ಬದಲಿಗೆ ಇದೊಂದು ರಾಂಕಾಮ್ ಜಾನರ್‌ನ ಚಿತ್ರ. ನಗಿಸುತ್ತಲೇ ಅಳು ಮೂಡಿಸುವ ಕಥೆ. ಇಂಥ ಸಿನಿಮಾವನ್ನು ಅರ್ಪಿಸುತ್ತಿರುವುದಕ್ಕೆ ಹೆಮ್ಮೆಯಿದೆ. ಇಂಥ ಅಪರೂಪದ ಕಥಾವಸ್ತು ಹೊಂದಿರುವ ಚಿತ್ರಗಳು ಬಂದಾಗ ಜನ ಕೂಡ ಅಷ್ಟೇ ಪ್ರೀತಿಯಿಂದ ಸ್ವೀಕರಿಸಬೇಕು' ಎಂದರು ಶ್ರೀಮುರಳಿ.

ಡಾ.ಅಂಜನಪ್ಪ ಮಾತನಾಡಿ, 'ತೊನ್ನು ಎಂಬುದು ಒಂದು ರೋಗವಲ್ಲ. ಬದಲಿಗೆ ನ್ಯೂನತೆ. ಈ ಸಮಸ್ಯೆ ಹೊಂದಿರುವವರನ್ನು ಅಸ್ಪೃಶ್ಯರಂತೆ ಕಾಣುವುದು ಸರಿಯಲ್ಲ. ಈ ಬಗ್ಗೆ ಚಿತ್ರದ ಮೂಲಕ ಜಾಗೃತಿ ಮೂಡಿಸಲು ಹೊರಟಿರುವ ಚಿತ್ರತಂಡಕ್ಕೆ ಅಭಿನಂದನೆಗಳು. ನಾನು ಕೂಡ ಈ ಸಮಸ್ಯೆ ಹೊಂದಿದ್ದು ಸಾಕಷ್ಟು ಅವಮಾನಗಳನ್ನು ಎದುರಿಸಿರುವೆ. ಆದಾಗ್ಯೂ ನನ್ನ ಸಾಧನೆಗೆ ಯಾವುದೂ ಅಡ್ಡಿಯಾಗಲಿಲ್ಲ' ಎಂದರು.

ಅಕ್ಟೋಬರ್ 24ರಂದು ಚಿತ್ರ ತೆರೆ ಕಾಣುತ್ತಿದೆ. ಕಾಜಲ್ ಕುಂದರ್ ಚಿತ್ರದ ನಾಯಕಿ. 'ವಿಟಿಲಿಗೋ ಸಮಸ್ಯೆಯ ಸುತ್ತ ಹೆಣೆದಿರುವ ಕಥೆ ಅಂದಾಕ್ಷಣ ಮನೋರಂಜನೆ ಇರುವುದಿಲ್ಲ ಅಂದುಕೊಳ್ಳಬೇಕಿಲ್ಲ. ಇದೊಂದು ಪಕ್ಕಾ ಕಮರ್ಶಿಯಲ್ ಸಿನಿಮಾ. ಎಂಥ ಗಹನವಾದ ಕಥೆಯನ್ನಾದರೂ ಗಂಭೀರವಾಗಿ ಕಟ್ಟಿಕೊಟ್ಟರೆ ಪ್ರೇಕ್ಷಕರಿಗೆ ತಲುಪುವುದು ಕಷ್ಟ. ಹೀಗಾಗಿ ದುಗುಡವನ್ನು ಕೂಡ ತೆಳು ಹಾಸ್ಯದ ಮೂಲಕ ದಾಟಿಸುತ್ತಲೇ ಸಾಮಾಜಿಕ ಸಂದೇಶ ನೀಡಲಾಗಿದೆ' ಎಂದರು ಮಹೇಶ್.

ವೀಣಾ ಸುಂದರ್, ರವಿ ಭಟ್, ಜಹಾಂಗೀರ್ ಮತ್ತು ಲಕ್ಷ್ಮಿ ಸಿದ್ದಯ್ಯ ಪ್ರಮುಖ ಪಾತ್ರಗಳಲ್ಲಿದ್ದಾರೆ. ಕಿರಣ್ ಸಿಹೆಚ್‌ಎಂ ಛಾಯಾಚಿತ್ರಗ್ರಹಣ, ಮೊನಿಷ್ ಸಂಕಲನ, ರಿಯೋ ಆಂಟನಿ ಸಂಗೀತ ಮತ್ತು ಹಿನ್ನೆಲೆ ಸಂಗೀತವಿದೆ.

'ವೃಷಭ'ಗೆ ಶೀರ್ಷಿಕೆ ಸಮಸ್ಯೆ

ಬಹುತೇಕ ಹೊಸಬರಿಂದ ಕೂಡಿರುವ 'ವೃಷಭ' ಚಿತ್ರ ಚಿತ್ರೀಕರಣ ಮುಗಿಸಿ ಬಿಡುಗಡೆ ಹಂತದಲ್ಲಿದೆ. ಆದರೆ ಮೋಹನ್ ಲಾಲ್ ಅಭಿನಯದ ತೆಲುಗು ಚಿತ್ರ 'ವೃಷಭ' ಕೂಡ ಬಿಡುಗಡೆ ಘೋಷಿಸಿದ್ದು ಕನ್ನಡದ ಚಿತ್ರಕ್ಕೆ ಶೀರ್ಷಿಕೆ ಸಂಕಷ್ಟ ಎದುರಾಗಿದೆ.


ಉಮೇಶ್ ಹೆಬ್ಬಾಳ ನಟಿಸಿ, ನಿರ್ದೇಶಿಸಿರುವ ಚಿತ್ರವಿದು. 'ಕನ್ನಡದಲ್ಲಿ 'ವೃಷಭ' ಶೀರ್ಷಿಕೆ ಮೂರು ವರ್ಷಗಳಿಂದ ನಮ್ಮ ಬಳಿಯೇ ಇದೆ. ಆದರೆ ಈಗ ತೆಲುಗು, ಮಲಯಾಳದ 'ವೃಷಭ' ಚಿತ್ರದ ಪೋಸ್ಟರ್ ಕನ್ನಡದಲ್ಲಿಯೂ ಬಿಡುಗಡೆಗೊಂಡಿದೆ. ಆ ಚಿತ್ರ ಘೋಷಣೆಯಾದಾಗಲೇ ಶೀರ್ಷಿಕೆ ನಮ್ಮ ಬಳಿ ಇದೆ ಎಂದು ನಿರ್ಮಾಣ ಸಂಸ್ಥೆಗೆ, ನಿರ್ದೇಶಕರಾದ ನಂದಕಿಶೋರ್ ಅವರಿಗೆ ತಿಳಿಸಿದ್ದೆವು. ಕನ್ನಡದಲ್ಲಿ ಈ ಚಿತ್ರ ಬಿಡುಗಡೆಯಾವುದಿಲ್ಲ ಎಂಬ ಭರವಸೆ ನಿರ್ದೇಶಕರಿಂದ ಸಿಕ್ಕಿತ್ತು. ಆದರೆ ಈಗ ಕನ್ನಡದಲ್ಲಿಯೂ ಚಿತ್ರದ ಪೋಸ್ಟರ್ ಬಿಡುಗಡೆ ಮಾಡಿದ್ದಾರೆ. ನಮ್ಮ ಇಡೀ ಚಿತ್ರ ಈ ಶೀರ್ಷಿಕೆ ಮೇಲೆಯೇ ಇದೆ' ಎಂದು ಉಮೇಶ್ ಹೆಬ್ಬಾಳ ಆತಂಕ ವ್ಯಕ್ತಪಡಿಸಿದರು.

'ಈ ಶೀರ್ಷಿಕೆಯ ಮೇಲೆಯೇ ಶೀರ್ಷಿಕೆ ಗೀತೆ ಮಾಡಿದ್ದೇವೆ. ಇಡೀ ಕಥೆ ನಿಂತಿದೆ. ಈಗ ಅದೇ ಹೆಸರಿನ ಚಿತ್ರ ಕನ್ನಡದಲ್ಲಿಯೂ ತೆರೆ ಕಂಡರೆ ನಮಗೆ ಸಮಸ್ಯೆಯಾಗುತ್ತದೆ. ಈ ಬಗ್ಗೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಗೂ ದೂರು ನೀಡಿದ್ದೇವೆ. ನ್ಯಾಯಾಲಯಕ್ಕೂ ಹೋಗುತ್ತೇವೆ. ನಮ್ಮ ಚಿತ್ರ ಚಿತ್ರೀಕರಣ ಮುಗಿದು ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಗೂಳಿ ಥರದ ವ್ಯಕ್ತಿತ್ವವಿರುವ ರೈತನೊಬ್ಬನ ಕಥೆ' ಎಂದು ಅವರು ಹೇಳಿದರು.

ರಾಯ ಬಡಿಗೇರ್ ಚಿತ್ರದ ಕ್ರಿಯೇಟಿವ್ ಹೆಡ್ ಆಗಿ ಕೆಲಸ ಮಾಡಿದ್ದಾರೆ. ಪ್ರಶಾಂತ್ ಸಾಗರ್ ಚಿತ್ರ ಛಾಯಾಚಿತ್ರಗ್ರಹಣ, ಪ್ರಣವ್ ಸಂಗೀತ ಸಂಯೋಜನೆ ಚಿತ್ರಕ್ಕಿದೆ.




ಐ ಆ್ಯಮ್ ಗಾಡ್‌ನಲ್ಲಿ ದಿಗಂತ್–ನಿವೇದಿತಾ ಹೆಜ್ಜೆ


ನಿವೇದಿತಾ, ದಿಗಂತ್

'ಐ ಆ್ಯಮ್ ಗಾಡ್' ಹೆಸರಿನ ಚಿತ್ರವೊಂದು ಬಿಡುಗಡೆಗೆ ಸಜ್ಜಾಗಿದೆ. ನಟ ಉಪೇಂದ್ರ ಅವರ ಜೊತೆ ಕೆಲವು ಸಿನಿಮಾಗಳಲ್ಲಿ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿರುವ ರವಿ ಗೌಡ ನಾಯಕನಾಗಿ ಈ ಸಿನಿಮಾದಲ್ಲಿ ನಟಿಸಿದ್ದಾರೆ. ಅವರೇ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುವುದರ ಜೊತೆಗೆ ನಿರ್ಮಾಣವನ್ನೂ ಮಾಡಿದ್ದಾರೆ.

ಈ ಸಿನಿಮಾದ ಮೊದಲ ಹಾಡು ಇತ್ತೀಚೆಗೆ ಬಿಡುಗಡೆಯಾಗಿದ್ದು, ನಟ ದಿಗಂತ್ ಮತ್ತು ಬಿಗ್‌ಬಾಸ್ ಖ್ಯಾತಿಯ ನಟಿ ನಿವೇದಿತಾ ಗೌಡ ಹೆಜ್ಜೆ ಹಾಕಿದ್ದಾರೆ. ವಿಭಿನ್ನವಾದ ಸಾಹಿತ್ಯವಿರುವ ಈ ಹಾಡು ಗಮನ ಸೆಳೆಯುತ್ತಿದೆ. ಅಜನೀಶ್ ಲೋಕನಾಥ್ ಸಂಗೀತ ನೀಡಿರುವ ಹಾಡಿಗೆ ರವಿ ಗೌಡ ಅವರೇ ಸಾಹಿತ್ಯ ರಚಿಸಿದ್ದಾರೆ. ಶಶಾಂಕ್ ಶೇಷಗಿರಿ, ಅನಿರುದ್ಧ ಶಾಸ್ತ್ರಿ ಮತ್ತು ಐಶ್ವರ್ಯ ರಂಗರಾಜನ್ ದನಿಯಲ್ಲಿ ಈ ಹಾಡು ಮೂಡಿಬಂದಿದೆ.

ಈ ಸಿನಿಮಾ ರೊಮ್ಯಾಂಟಿಕ್ ಥ್ರಿಲ್ಲರ್ ಕಥಾಹಂದರ ಹೊಂದಿದ್ದು, ನವೆಂಬರ್ 7ರಂದು ಸಿನಿಮಾ ತೆರೆಗೆ ಬರಲಿದೆ. ಈ ಚಿತ್ರದಲ್ಲಿ ರವಿ ಗೌಡಗೆ ಜೋಡಿಯಾಗಿ ವಿತೇಜಾ ಪರೀಕ್ ನಟಿಸಿದ್ದಾರೆ. ಇದು ಇವರ ಚೊಚ್ಚಲ ಸಿನಿಮಾ. ಚಿತ್ರದಲ್ಲಿ ರವಿಶಂಕರ್, ಅವಿನಾಶ್, ಅರುಣ ಬಾಲರಾಜ್ ಸೇರಿದಂತೆ ಅನೇಕ ಕಲಾವಿದರು ನಟಿಸಿದ್ದಾರೆ.


ನಿವೇದಿತಾ

ರಾಜ್ಯ ಸರ್ಕಾರಕ್ಕೆ 'ಸುಪ್ರೀಂ' ತರಾಟೆ

ಒಂದನೇ ಪುಟದಿಂದ...

'ಎಸ್‌ಐಟಿ ಮುಖ್ಯಸ್ಥನಾಗಿ ನಾನು ಗಣಿಗಾರಿಕೆ ಪ್ರಕರಣದ ತನಿಖೆ ಕೆಲಸ ಮಾಡುತ್ತಿದ್ದೇನೆ. ಕುಮಾರಸ್ವಾಮಿ ವಿರುದ್ಧ ದಾಖಲಾದ ಪ್ರಕರಣದಲ್ಲಿ ತನಿಖೆ ನಡೆಸುತ್ತಿದ್ದು, ತನಿಖೆ ವೇಳೆ ಹೆಚ್ಚುವರಿ ಸಾಕ್ಷ್ಯಾಧಾರಗಳು ದೊರೆತಿದ್ದವು. ಅವರ ವಿರುದ್ಧ ತನಿಖೆ ನಡೆಸಲು ರಾಜ್ಯಪಾಲರಲ್ಲಿ ಅನುಮತಿ ಕೋರಿದ್ದೆ. ಈ ಸಂದರ್ಭದಲ್ಲಿ ಕುಮಾರಸ್ವಾಮಿ ಪತ್ರಿಕಾಗೋಷ್ಠಿ ನಡೆಸಿ, ನನ್ನ ಬಗ್ಗೆ ಸುಳ್ಳು ಹಾಗೂ ದುರುದ್ದೇಶದ ಆರೋಪ ಮಾಡಿ ಬೆದರಿಕೆ ಒಡ್ಡಿದ್ದರು' ಎಂದು ಚಂದ್ರಶೇಖರ್ ದೂರು ನೀಡಿದ್ದರು.

'ನಿಖಿಲ್ ಕುಮಾರಸ್ವಾಮಿ ಪತ್ರಿಕಾಗೋಷ್ಠಿ ನಡೆಸಿ ಸುಳ್ಳು ಹೇಳಿಕೆ ಕೊಟ್ಟಿದ್ದರು. ಸುರೇಶ್ ಬಾಬು ಅವರು ನನ್ನ ವಿರುದ್ಧ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದು, ಅದನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕಿದ್ದರು' ಎಂದು ಉಲ್ಲೇಖಿಸಿದ್ದರು.

ಸಂಜಯನಗರ ಪೊಲೀಸರು ನಡೆಸುತ್ತಿದ್ದ ತನಿಖೆಗೆ ಹೈಕೋರ್ಟ್ 2025ರ ಮಾರ್ಚ್ 28ರಂದು ತಡೆ ನೀಡಿತ್ತು.

11 ಅಧಿಕಾರಿಗಳಿಗೆ ನೋಟಿಸ್

ಭೂ ಮಂಜೂರಾತಿ ಅಕ್ರಮ: ಕಂದಾಯ ಇಲಾಖೆಯಿಂದ ಆರೋಪಪಟ್ಟಿ ಸಿದ್ಧ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಅಕ್ರಮ ಭೂ ಮಂಜೂರಾತಿ ಪ್ರಕರಣದಲ್ಲಿ ಕೊನೆಗೂ ಅಧಿಕಾರಿಗಳು ಮತ್ತು ಸಿಬ್ಬಂದಿ ವಿರುದ್ಧ ಕ್ರಮಕ್ಕೆ ರಾಜ್ಯ ಸರ್ಕಾರ ಮುಂದಾಗಿದೆ. ತನಿಖೆ ಪೂರ್ಣಗೊಳಿಸಿ ಮೂಡಿಗೆರೆ ತಾಲ್ಲೂಕಿನ 11 ಸಿಬ್ಬಂದಿ ವಿರುದ್ಧ ದೋಷಾರೋಪ ಪಟ್ಟಿಯನ್ನು ಕಂದಾಯ ಇಲಾಖೆ ಸಿದ್ಧಪಡಿಸಿದೆ.

ಮೂಡಿಗೆರೆ ಮತ್ತು ಕಡೂರು ತಾಲ್ಲೂಕುಗಳಲ್ಲಿ ಅಕ್ರಮ ಭೂ ಮಂಜೂರಾತಿ ಬಗ್ಗೆ ತನಿಖೆ ನಡೆಸಲು 2023ರ ಆಗಸ್ಟ್‌ನಲ್ಲಿ 13 ತಹಶೀಲ್ದಾರ್‌ಗಳ ತಂಡವನ್ನು ಸರ್ಕಾರ ರಚಿಸಿತ್ತು. ಸರ್ಕಾರಕ್ಕೆ ತಂಡ ವರದಿ ಸಲ್ಲಿಸಿದ್ದು, ಅದರ ಪ್ರಕಾರ 10,598 ಎಕರೆ ಅಕ್ರಮ ಮಂಜೂರಾತಿ ಆಗಿದೆ.

4,204 ಪ್ರಕರಣಗಳ ಒಟ್ಟು 10,598 ಎಕರೆ ಅಕ್ರಮ ಭೂ ಮಂಜೂರಾತಿಯನ್ನು ಮೂರು ಭಾಗವಾಗಿ ಮಾಡಿಕೊಂಡಿದೆ. 2,225 ಪ್ರಕರಣಗಳ 6,248 ಎಕರೆಯನ್ನು ಅನರ್ಹ ಎಂದು ತನಿಖಾ ತಂಡ ವರದಿ ನೀಡಿತ್ತು. ಇದನ್ನು ಆಧರಿಸಿ ಅಷ್ಟೂ ಭೂಮಿಗೆ ಸಂಬಂಧಿಸಿದಂತೆ ಸ್ವಯಂ ಪ್ರೇರಿತ ವಿಚಾರಣೆಯನ್ನು ಇಬ್ಬರು ಉಪವಿಭಾಗಾಧಿಕಾರಿಗಳು ಮಾಡಿದ್ದಾರೆ. ಅಷ್ಟೂ ಜಾಗದ ಪಹಣಿಗಳಲ್ಲಿ 'ಸರ್ಕಾರಿ ಜಾಗ', 'ಪರಭಾರೆ ನಿಷೇಧ' ಎಂದು ನಮೂದಿಸಲಾಗಿದೆ.

ತನಿಖಾ ತಂಡದ ವರದಿ ಆಧರಿಸಿ, ನಿಯಮಬಾಹಿರವಾಗಿ ಭೂಮಿ ಮಂಜೂರು ಮಾಡಿರುವ ಅಧಿಕಾರಿ ಮತ್ತು ನೌಕರರ ಪಟ್ಟಿ ಮಾಡಿದೆ. ಅನರ್ಹರ ಹೆಸರು, ದಾಖಲೆಗಳನ್ನು ಲಾಗಿನ್‌ನಲ್ಲಿ ಅಪ್‌ಲೋಡ್ ಮಾಡಿದವರಿಂದ ತಹಶೀಲ್ದಾರ್ ತನಕದ ಸಿಬ್ಬಂದಿ ವಿರುದ್ಧ ಆರೋಪಪಟ್ಟಿ ಸಿದ್ಧಪಡಿಸಿದೆ.

ಮೂಡಿಗೆರೆ ತಾಲ್ಲೂಕಿನಲ್ಲಿ ಹಿಂದೆ ಕರ್ತವ್ಯ ನಿರ್ವಹಿಸಿದ್ದ ತಹಶೀಲ್ದಾರ್, ಶಿರಸ್ತೇದಾರ್, ಕಂದಾಯ ಅಧಿಕಾರಿಗಳು, ಗ್ರಾಮ ಆಡಳಿತಾಧಿಕಾರಿಗಳ ವಿರುದ್ಧ ಆರೋಪ ಹೊರಿಸಲಾಗಿದೆ.

ಎಲ್ಲಾ 11 ಜನರಿಗೂ ನೋಟಿಸ್ ಜಾರಿ ಮಾಡಲಾಗಿದೆ. ನಿಯಮ ಏನು ಹೇಳುತ್ತದೆ, ಮಾಡಿರುವ ತಪ್ಪುಗಳೇನು, ಆರೋಪಕ್ಕೆ ಸಂಬಂಧಿಸಿದ ಸಾಕ್ಷ್ಯ ಒಳಗೊಂಡ ದಾಖಲೆಗಳನ್ನೂ ನೀಡಲಾಗಿದೆ. 15 ದಿನಗಳಲ್ಲಿ ಲಿಖಿತವಾಗಿ ಉತ್ತರಿಸದಿದ್ದರೆ ಏಕಪಕ್ಷೀಯವಾಗಿ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಲಾಗಿದೆ.

ನೋಟಿಸ್ ನೀಡಲಾದ ಅಧಿಕಾರಿಗಳಲ್ಲಿ ಒಬ್ಬರು ತಹಶೀಲ್ದಾರ್ ಸೇರಿ ಮೂವರು ಅಧಿಕಾರಿಗಳು ನಿವೃತ್ತರಾಗಿದ್ದಾರೆ. ಹಿಂದೆ ಮೂಡಿಗೆರೆಯಲ್ಲಿ ಶಿರಸ್ತೇದಾರ್ ಆಗಿದ್ದವರು ಈಗ ಚಿತ್ರದುರ್ಗ ಜಿಲ್ಲೆಯಲ್ಲಿ ಗ್ರೇಡ್–2 ತಹಶೀಲ್ದಾರ್ ಆಗಿದ್ದಾರೆ. ಉಳಿದವರು ಜಿಲ್ಲೆಯ ವಿವಿಧೆಡೆ ಕಾರ್ಯ ನಿರ್ವಹಿಸುತ್ತಿದ್ದಾರೆ.

303 ಸಿಬ್ಬಂದಿ ಹೊಣೆ

ತನಿಖಾ ತಂಡ ನೀಡಿರುವ ವರದಿಯಲ್ಲಿ 104 ಗ್ರಾಮ ಆಡಳಿತಾಧಿಕಾರಿಗಳ ಹೆಸರುಗಳಿವೆ. ಅದರಲ್ಲೂ ಕಡೂರು ತಾಲ್ಲೂಕಿನಲ್ಲೇ 57 ಜನರ ಹೆಸರಿದೆ. ಇದಲ್ಲದೇ ಒಟ್ಟು 18 ಶಿರಸ್ತೇದಾರರು, 48 ಕಂದಾಯ ನಿರೀಕ್ಷಕರು, 36 ಕಚೇರಿ ಕಂದಾಯ ನಿರೀಕ್ಷಕರು, 35 ವಿಷಯ ನಿರ್ವಾಹಕರು (ಕೇಸ್ ವರ್ಕರ್), 26 ಭೂಮಿ ಆಪರೇಟರ್‌ಗಳು, 36 ಭೂಮಾಪಕರು ಕೂಡ ಹೊಣೆಗಾರರ ಪಟ್ಟಿಯಲ್ಲಿದ್ದಾರೆ.

ಇಬ್ಬರು ಉಪವಿಭಾಗಾಧಿಕಾರಿಗಳು ಪ್ರತಿಯೊಂದು ಮಂಜೂರಾತಿ ಕಡತಗಳ ವಿಚಾರಣೆ ನಡೆಸುತ್ತಿದ್ದಾರೆ. ವಿಚಾರಣೆ ಮುಗಿದಂತೆ ಹಂತ–ಹಂತವಾಗಿ ಸಿಬ್ಬಂದಿ ವಿರುದ್ಧ ದೋಷಾರೋಪ ಪಟ್ಟಿ ಸಿದ್ಧವಾಗುತ್ತಿದೆ ಎಂದು ಕಂದಾಯ ಇಲಾಖೆ ಮೂಲಗಳು ತಿಳಿಸಿವೆ.

ಉನ್ನತ ತನಿಖೆ ಸಾಧ್ಯತೆ

ಸದ್ಯ ಮೂಡಿಗೆರೆ ತಾಲ್ಲೂಕಿನ ಸಿಬ್ಬಂದಿ ವಿರುದ್ಧ ದೋಷಾರೋಪ ಸಿದ್ಧವಾಗಿದ್ದು, ಕಡೂರು ತಾಲ್ಲೂಕಿನ ಅಕ್ರಮ ಭೂಮಂಜೂರಾತಿ ಕುರಿತು ಕಂದಾಯ ಇಲಾಖೆ ತನಿಖೆ ಪೂರ್ಣಗೊಳಿಸಿದೆ.

ಅಧಿಕ ಪ್ರಮಾಣದಲ್ಲಿ ಅಕ್ರಮ ಭೂಮಂಜೂರಾತಿ ಆಗಿರುವುದರಿಂದ ಹೆಚ್ಚಿನ ತನಿಖೆಗೆ ಉನ್ನತ ಮಟ್ಟದ ತಂಡ ರಚಿಸುವ ಸಾಧ್ಯತೆಯೂ ಇವೆ ಎಂದು ಕಂದಾಯ ಇಲಾಖೆ ಮೂಲಗಳು ಹೇಳುತ್ತವೆ.

13,352 ಶಿಕ್ಷಕರ ನೇಮಕಾತಿ ಸರಾಗ

ಒಂದನೇ ಪುಟದಿಂದ...

'ಏಕ ಸದಸ್ಯ ಪೀಠ ನೀಡಿದ್ದ ತೀರ್ಪನ್ನು ಹೈಕೋರ್ಟ್‌ನ ವಿಭಾಗೀಯ ಪೀಠವು ಸರಿಯಾಗಿಯೇ ರದ್ದುಗೊಳಿಸಿದೆ. ಮೇಲ್ಮನವಿಗಳನ್ನು ಭಾಗಶಃ ಅನುಮತಿಸುವಲ್ಲಿ ಮತ್ತು ವಿಷಯವನ್ನು ನ್ಯಾಯಮಂಡಳಿಗೆ ವರ್ಗಾಯಿಸುವ ಸಂದರ್ಭದಲ್ಲಿ ಯಾವುದೇ ಲೋಪ ಎಸಗಿಲ್ಲ' ಎಂದು ತೀರ್ಪನ್ನು ಬರೆದ ನ್ಯಾಯಮೂರ್ತಿ ವಿಜಯ್ ಬಿಷ್ಣೋಯ್ ಹೇಳಿದರು.

'ಸೇವಾ ನ್ಯಾಯಮಂಡಳಿಗಳ ವ್ಯಾಪ್ತಿಗೆ ಬರುವ ವಿಷಯಗಳಲ್ಲಿ ಸಂವಿಧಾನದ 226ನೇ ವಿಧಿಯ ಅಡಿಯಲ್ಲಿ ಹೈಕೋರ್ಟ್‌ಗಳು ರಿಟ್ ಅರ್ಜಿಗಳನ್ನು ಸ್ವೀಕರಿಸಬಾರದು' ಎಂದು ನ್ಯಾಯಪೀಠ ಹೇಳಿದೆ.

ನ್ಯಾಯಮಂಡಳಿಯ ಅಂತಿಮ ತೀರ್ಪಿಗೆ ಅನುಗುಣವಾಗಿ 500 ಮೀಸಲು ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ಪೀಠ ನಿರ್ದೇಶನ ನೀಡಿದೆ.

ಶರಣಾಗತಿ ಹೆಚ್ಚುವ ನಿರೀಕ್ಷೆ

ಮುಂಬೈ (ಪಿಟಿಐ): 'ಇತ್ತೀಚೆಗೆ ನಕ್ಸಲರ ಪ್ರಮುಖ ನಾಯಕ ಮಲ್ಲೋಜುಲ ವೇಣುಗೋಪಾಲ್ ರಾವ್ ಅಲಿಯಾಸ್ ಭೂಪತಿ ಅವರ ಶರಣಾಗತಿಯು, ನಕ್ಸಲ್ ಚಳವಳಿಯಲ್ಲಿ ಬಿರುಕು ಹೆಚ್ಚಿರುವುದನ್ನು ತೋರಿಸುತ್ತಿದ್ದು, ಮುಂಬರುವ ದಿನಗಳಲ್ಲಿ ನಕ್ಸಲರ ಶರಣಾಗತಿ ಇನ್ನಷ್ಟು ಹೆಚ್ಚಲಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮಹಾರಾಷ್ಟ್ರದ ಗಢಚಿರೋಲಿ ಜಿಲ್ಲೆಯಲ್ಲಿ ಭೂಪತಿ ಅಥವಾ ಸೋನು ಶರಣಾಗಿದ್ದರು.

'ಅಂಗನವಾಡಿ: ಸೀರೆ ಪೂರೈಕೆ ಕೈಮಗ್ಗಕ್ಕೆ ವಹಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕರಿಗೆ ಸೀರೆ ಪೂರೈಕೆ ಮಾಡುವ ಗುತ್ತಿಗೆಯನ್ನು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ನೀಡಬೇಕು ಎಂದು ಜವಳಿ ಸಚಿವ ಶಿವಾನಂದ ಪಾಟೀಲ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕರಿಗೆ ಪೂರೈಸಲು 2.79 ಲಕ್ಷ ಸೀರೆಗಳನ್ನು ಐಸಿಡಿಎಸ್ ಯೋಜನೆ ಅಡಿ ಖರೀದಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಉದ್ದೇಶಿಸಿದೆ. ಇಷ್ಟು ಸೀರೆಗಳನ್ನು ಪೂರೈಸುವ ಹೊಣೆಗಾರಿಕೆಯನ್ನು ಕೈಮಗ್ಗ ಅಭಿವೃದ್ಧಿ ನಿಗಮಕ್ಕೇ ನೀಡಬೇಕು ಎಂದು ಅವರು ಕೋರಿದ್ದಾರೆ.

ಸರ್ಕಾರದ ವಿವಿಧ ಇಲಾಖೆಗಳಿಗೆ ಅಗತ್ಯವಿರುವ ಬಟ್ಟೆ, ಸೀರೆಗಳು ಮತ್ತು ಸಮವಸ್ತ್ರವನ್ನು ಜವಳಿ ಇಲಾಖೆ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಿಗಮಗಳಿಂದ ಖರೀದಿ ಮಾಡಲು ಈ ಹಿಂದೆ ಆದೇಶಿಸಲಾಗಿತ್ತು. ಅದರಂತೆ ಪೂರೈಕೆ ನಡೆಯುತ್ತಿದೆ. ಈಗಲೂ ಹಾಗೆಯೇ ಮಾಡಬೇಕು. ಇದರಿಂದ ನೇಕಾರರಿಗೆ ಉದ್ಯೋಗ ದೊರೆಯುವುದಲ್ಲದೆ, ನಷ್ಟದಲ್ಲಿರುವ ನಿಗಮದ ಪುನಶ್ಚೇತನಕ್ಕೂ ನೆರವಾಗಲಿದೆ ಎಂದು ಅವರು ಮನವಿ ಪತ್ರದಲ್ಲಿ ವಿವರಿಸಿದ್ದಾರೆ.

2025-26ನೇ ಸಾಲಿನಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ತಲಾ ಎರಡು ಸೀರೆಗಳಂತೆ ಒಟ್ಟು 2,79,688 ಸೀರೆಗಳನ್ನು, ಪ್ರತಿಯೊಂದಕ್ಕೆ ₹500ರಂತೆ ಖರೀದಿಸಲು ರಾಜ್ಯ ಸಚಿವ ಸಂಪುಟವು ಗುರುವಾರ ಒಪ್ಪಿಗೆ ನೀಡಿತ್ತು. ಕೇಂದ್ರ ಸರ್ಕಾರದ ಪಾಲು ₹7.91 ಕೋಟಿ ಮತ್ತು ರಾಜ್ಯ ಸರ್ಕಾರದ ಪಾಲು ₹6.07 ಕೋಟಿ ಸೇರಿ ಒಟ್ಟು ₹13.98 ಕೋಟಿ ವೆಚ್ಚದಲ್ಲಿ ಸೀರೆಗಳನ್ನು ಖರೀದಿಸಲಾಗುತ್ತದೆ.

ಬೆಂಗಳೂರು–ಕಲಬುರಗಿ ಮಧ್ಯೆ ವಿಶೇಷ ರೈಲು ಇಂದಿನಿಂದ

ಕಲಬುರಗಿ: ದೀಪಾವಳಿ ಹಬ್ಬದಲ್ಲಿ ಉಂಟಾಗುವ ಹೆಚ್ಚಿನ ಪ್ರಯಾಣಿಕರ ದಟ್ಟಣೆ ನಿವಾರಿಸಲು ನೈರುತ್ಯ ರೈಲ್ವೆಯು 18ರಿಂದ 22ರವರೆಗೆ ಬೆಂಗಳೂರು–ಕಲಬುರಗಿ ಮಧ್ಯೆ ವಿಶೇಷ ರೈಲುಗಳನ್ನು ಓಡಿಸಲಿದೆ.

ಅ. 18ರಂದು ಬೆಂಗಳೂರು ಕಂಟೋನ್ಮೆಂಟ್‌ನಿಂದ (06203) ರಾತ್ರಿ 7.40ಕ್ಕೆ ಹೊರಡುವ ರೈಲು 19ರಂದು ಬೆಳಿಗ್ಗೆ 7.30ಕ್ಕೆ ಕಲಬುರಗಿ ತಲುಪಲಿದೆ. ಕಲಬುರಗಿಯಿಂದ ಭಾನುವಾರ ಅ. 19ರಂದು ಬೆಳಿಗ್ಗೆ 9.30ಕ್ಕೆ ಹೊರಡುವ ರೈಲು (06204) ರಾತ್ರಿ 8.30ಕ್ಕೆ ಯಶವಂತಪುರ ತಲುಪಲಿದೆ.

ಅ 20ರಂದು ಸೋಮವಾರ ರಾತ್ರಿ 7.40ಕ್ಕೆ ಬೆಂಗಳೂರು ಕಂಟೋನ್ಮೆಂಟ್‌ನಿಂದ ಹೊರಡುವ ರೈಲು (06207) 21ರಂದು ಬೆಳಿಗ್ಗೆ 7.30ಕ್ಕೆ ಕಲಬುರಗಿ ತಲುಪಲಿದೆ. 21ರಂದು ಮಂಗಳವಾರ ಬೆಳಿಗ್ಗೆ 9.35ಕ್ಕೆ ಕಲಬುರಗಿಯಿಂದ ಹೊರಡುವ ರೈಲು (06204) ಅದೇ ದಿನ ರಾತ್ರಿ 8.30ಕ್ಕೆ ಯಶವಂತಪುರ ತಲುಪಲಿದೆ.

21ರಂದು ರಾತ್ರಿ 10.10ಕ್ಕೆ ಬೆಂಗಳೂರು ಕಂಟೋನ್ಮೆಂಟ್‌ನಿಂದ ಹೊರಡುವ ರೈಲು (06209) 22ರಂದು ಬುಧವಾರ ಬೆಳಿಗ್ಗೆ 9ಕ್ಕೆ ಕಲಬುರಗಿಗೆ ಬರಲಿದೆ. 22ರಂದು ಬೆಳಿಗ್ಗೆ 10.45ಕ್ಕೆ ಕಲಬುರಗಿಯಿಂದ ಹೊರಡುವ ರೈಲು (06210) ಅದೇ ದಿನ ರಾತ್ರಿ 10.30ಕ್ಕೆ ಬೆಂಗಳೂರು ಕಂಟೋನ್ಮೆಂಟ್ ತಲುಪಲಿದೆ. ಈ ರೈಲು ಬೆಂಗಳೂರು ಕಂಟೋನ್ಮೆಂಟ್, ಯಶವಂತಪುರ, ಯಲಹಂಕ, ಹಿಂದೂಪುರ, ಧರ್ಮಾವರಂ, ಅನಂತಪುರ, ಗುಂತಕಲ್, ಮಂತ್ರಾಲಯ, ರಾಯಚೂರು, ಕೃಷ್ಣಾ, ಯಾದಗಿರಿ, ವಾಡಿ, ಶಹಾಬಾದ್ ಮೂಲಕ ಕಲಬುರಗಿ ತಲುಪಲಿದೆ. ವಿಶೇಷ ರೈಲು ಆಗಿರುವುದರಿಂದ ತತ್ಕಾಲ್ ಟಿಕೆಟ್ ದರವನ್ನು ಆಕರಿಸಲಾಗುತ್ತದೆ.

ಮತದಾರರ ತಪ್ಪಾದ ಪಟ್ಟಿ: ದೂರು ದಾಖಲು

ಹೈದರಾಬಾದ್ (ಪಿಟಿಐ): ಸಾಮಾಜಿಕ ಜಾಲತಾಣದ ಮೂಲಕ ತಿದ್ದುಪಡಿ ಮಾಡಿದ, ಮತದಾರರ ತಪ್ಪಾದ ಪಟ್ಟಿಯನ್ನು ಹಂಚಿಕೊಂಡವರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ತಿದ್ದುಪಡಿ ಮಾಡಿದ ವಿಳಾಸ, ಭಾವಚಿತ್ರ ಮತ್ತು ಎಪಿಕ್ ಕಾರ್ಡ್‌ನೊಂದಿಗೆ ಕೆಲವು ಸಿನೆಮಾ ತಾರೆಯರ ಹೆಸರನ್ನು ಮತದಾರರ ಪಟ್ಟಿಯಲ್ಲಿ ಸೇರ್ಪಡೆ ಮಾಡಿ, ಸುಳ್ಳು ಮತದಾರರ ಪಟ್ಟಿಯನ್ನು ಸಾಮಾಜಿಕ ಜಾಲತಾಣದಲ್ಲಿ ಕೆಲವರು ಹಂಚಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿ, ಜ್ಯುಬಿಲಿ ಹಿಲ್ ವಿಧಾನಸಭಾ ಕ್ಷೇತ್ರದ ಸಹಾಯಕ ಚುನಾವಣಾ ನೋಂದಣಿ ಅಧಿಕಾರಿ ಮಧುರಾ ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಎಲ್ಲ ಮಕ್ಕಳೂ ಹೀಗೆನಾ?!



‘ಕೌನ್ ಬನೇಗಾ ಕರೋಡ್‌ಪತಿ’ ಟಿ.ವಿ. ಶೋನಲ್ಲಿ ನಿರ್ವಾಹಕ ಅಮಿತಾಭ್ ಬಚ್ಚನ್ ಅವರೊಂದಿಗೆ ಗುಜರಾತ್‌ನ ಬಾಲಕನೊಬ್ಬ ನಡೆದುಕೊಂಡ ರೀತಿಗೆ ಸಾಮಾಜಿಕ ಮಾಧ್ಯಮಗಳಲ್ಲಿ ಭಾರಿ ಟೀಕೆ ವ್ಯಕ್ತವಾಗುತ್ತಿದೆ. ದುರಹಂಕಾರದ ನಡೆ, ಪೋಷಕರ ವೈಫಲ್ಯ, ಮಾನಸಿಕ ಅಸ್ವಾಸ್ಥ್ಯ ಎಂಬೆಲ್ಲ ದಿಕ್ಕಿನಲ್ಲಿ ಚರ್ಚೆಗಳು ಸಾಗಿವೆ. ಮಕ್ಕಳ ಅಸಹಜ ವರ್ತನೆ ‘ಮನೆ ಮನೆ ಕಥೆ’ಯಾಗಿರುವ ಈ ಹೊತ್ತಿನಲ್ಲಿ, ಅದರಲ್ಲಿ ಪೋಷಕರ ಪಾತ್ರವೆಷ್ಟು, ಕೈತಪ್ಪಿ ಹೋಗದಂತೆ ನಮ್ಮ ಮಕ್ಕಳನ್ನು ಕಾಪಿಟ್ಟುಕೊಳ್ಳುವುದು ಹೇಗೆ ಎನ್ನುವುದನ್ನು ವಿಶ್ಲೇಷಿಸಿದೆ ಈ ಲೇಖನ

• ಸೌಜನ್ಯಾ ವಸಿಷ್ಠ



ಟಿ.ವಿ. ಶೋವೊಂದರಲ್ಲಿ ಅಮಿತಾಭ್ ಬಚ್ಚನ್ ಅವರೊಂದಿಗೆ ನಿರ್ಭಿಡೆಯಿಂದ ನಡೆದುಕೊಂಡ ಬಾಲಕ ಇಶಿತ್ ಭಟ್ ಈಗ ಸಾಮಾಜಿಕ ಮಾಧ್ಯಮಗಳಲ್ಲಿ ಚರ್ಚೆಯ ಕೇಂದ್ರಬಿಂದು. ಮಕ್ಕಳಲ್ಲಿ ಇಂತಹ ವಿಪರೀತದ ನಡವಳಿಕೆ ಕಂಡುಬಂದಾಗಲೆಲ್ಲ ಅದನ್ನು ಎಡಿಎಚ್‌ಡಿ (ಅಟೆನ್ಷನ್ ಡೆಫಿಸಿಟ್/ಹೈಪರ್ ಆ್ಯಕ್ಟಿವಿಟಿ ಡಿಸಾರ್ಡರ್) ಎಂದು ಹೇಳುವುದಿದೆ. ವಿಡಿಯೊ ತುಣುಕೊಂದನ್ನು ನೋಡಿ, ಮಗುವಿಗೆ ಅಂತಹ ಸಮಸ್ಯೆ ಇದೆ ಎಂಬ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ. ಮನೋವೈದ್ಯರು ಪರಿಶೀಲಿಸಿ ಅದನ್ನು ನಿರ್ಧರಿಸಬೇಕಷ್ಟೆ. ಅದನ್ನು ಹೊರತುಪಡಿಸಿ ನೋಡುವುದಾದರೆ, ಇದು ಈಗ ಇಶಿತ್ ಒಬ್ಬನ ಸಮಸ್ಯೆಯಾಗಿ ಉಳಿದಿಲ್ಲ. ಬಹುತೇಕ ಮಕ್ಕಳಲ್ಲಿ ಇಂತಹ ಅಸಹಜ ನಡವಳಿಕೆ ಕಂಡುಬರುತ್ತಿದೆ.

ಇದರ ಪ್ರಮುಖ ಮೂಲ ಪೋಷಕರು ಎನ್ನದೇ ವಿಧಿಯಿಲ್ಲ. ಪೋಷಕತ್ವದ ಸೋಲಿನ ಬಗ್ಗೆ ಆಧುನಿಕ ಪೋಷಕರು ಆತ್ಮವಿಮರ್ಶೆ ಮಾಡಿಕೊಳ್ಳಲೇಬೇಕಾದ ಹೊತ್ತಿದು. ಆತಂಕ, ಒತ್ತಡ, ಖಿನ್ನತೆಯಂತಹ ಪದಗಳನ್ನು ಕೇಳಿಯೂ ಗೊತ್ತಿರದಿದ್ದ ನಮ್ಮ ಮಕ್ಕಳೀಗ ಖುದ್ದು ಅವುಗಳ ‘ಫಲಾನುಭವಿ’ಗಳಾಗುತ್ತಿದ್ದಾರೆ. ಒತ್ತಡ ನಿರ್ವಹಣೆ ಎಂಬುದು ಒಂದು ಫ್ಯಾಷನ್ ಆಗಿರುವ, ಅದನ್ನೊಂದು ಸಾಮಾನ್ಯ ಸಂಗತಿ ಎಂಬಂತೆ ಬಿಂಬಿಸುತ್ತಿರುವ ಕಾಲಘಟ್ಟದಲ್ಲಿ ನಾವಿದ್ದೇವೆ.

ಸಾರ್ವಜನಿಕ ವೇದಿಕೆಯಲ್ಲಿ ಕುಳಿತಿದ್ದಾಗ ‘ಆತ್ಮವಿಶ್ವಾಸ ಕಳೆದುಕೊಳ್ಳಬೇಡ’ ಎಂದು ಹಿರಿಯರಾದ ನಮ್ಮನ್ನೇ ನಮ್ಮ ಮನಸ್ಸು ಪದೇಪದೇ ಎಚ್ಚರಿಸುತ್ತಿರುತ್ತದೆ. ಇನ್ನು ಪುಟ್ಟ ಮಕ್ಕಳ ಸ್ಥಿತಿ ಹೇಗಿರಬೇಡ? ಅಂತಹದ್ದೊಂದು ವೇದಿಕೆಯಲ್ಲಿ ಕುಳಿತಾಗ ಮಗು ತೀವ್ರ ಒತ್ತಡ ಅನುಭವಿಸುತ್ತಿರುತ್ತದೆ. ಹೇಗೆ ನಡೆದುಕೊಳ್ಳಬೇಕು ಎನ್ನುವುದು ತಿಳಿಯದೆ ಗೊಂದಲಕ್ಕೆ ಒಳಗಾಗುತ್ತದೆ. ಮುಖ್ಯವಾಗಿ, ದಿಟ್ಟತನಕ್ಕೂ ಅತಿಯಾದ ಆತ್ಮವಿಶ್ವಾಸಕ್ಕೂ ಇರುವ ವ್ಯತ್ಯಾಸವನ್ನು ನಾವು ಮಕ್ಕಳಿಗೆ ಮನದಟ್ಟು ಮಾಡಿಸದಿರುವುದೇ ಇದಕ್ಕೆ ಕಾರಣ. ನಮ್ರತೆ, ವಿನಯ, ಆಧ್ಯಾತ್ಮಿಕತೆಯನ್ನು ನಾವು ಅವರಿಗೆ ಹೇಳಿಕೊಡುತ್ತಿಲ್ಲ, ವಾಸ್ತವ ಅರಿತು ಬದುಕುವುದನ್ನು ಕಲಿಸುತ್ತಿಲ್ಲ. ಆಧ್ಯಾತ್ಮಿಕತೆ ಏನಿದ್ದರೂ ವಯಸ್ಕರಿಗಷ್ಟೇ ಅಂದುಕೊಳ್ಳುತ್ತೇವೆ. ವಾಸ್ತವದಲ್ಲಿ ಅದು ನಮ್ಮೆಲ್ಲರ ಬದುಕಿನ ಭಾಗವೇ ಆಗಿದೆ. ನಮ್ಮ ಪ್ರತಿ ಸಮಸ್ಯೆಗೂ ಭಗವದ್ಗೀತೆಯಲ್ಲಿ ಪರಿಹಾರವಿದೆ. ಅದರ ಮಹತ್ವವನ್ನು ಅರಿತು ಅದರ ಸದುಪಯೋಗಕ್ಕೆ ಮುಂದಾಗಿರುವ ಸಾವಿರಾರು ಪಾಶ್ಚಿಮಾತ್ಯ ಲೇಖಕರು ನಮಗೆ ಸಿಗುತ್ತಾರೆ. ಆದರೆ ‘ಹಿತ್ತಲ ಗಿಡ’ ನಮಗೆ ಮದ್ದಾಗುತ್ತಿಲ್ಲ.

ಮಕ್ಕಳ ಬುದ್ಧಿಕೋಶಕ್ಕೆ (ಐಕ್ಯು) ಈಗ ಎಲ್ಲಿಲ್ಲದ ಮಹತ್ವ. ಆದರೆ ನಾವೀಗ ಬಹುಮುಖ್ಯವಾಗಿ ಉದ್ದೀಪಿಸಬೇಕಾಗಿರುವುದು ಅವರ ಭಾವನಾತ್ಮಕ ಕೋಶ ಮತ್ತು ಸಾಮಾಜಿಕ ಕೋಶವನ್ನು. ಇದನ್ನು ಅರಿಯದ ಅರಿವುಗೇಡಿಗಳಾಗಿದ್ದೇವೆ. ನಾವು ಹೇರಿದ ನಿರೀಕ್ಷೆಗಳ ಭಾರದಲ್ಲಿ ಮಗುವಿನ ಆಕಾಂಕ್ಷೆಗಳು ನಲುಗಿಹೋಗುತ್ತಿವೆ. ಅದಕ್ಕೇ ಎಲ್ಲರ ಮನೆಯ ಮಕ್ಕಳಲ್ಲೂ ಈಗ ಮುಗ್ಧತೆ ಸದ್ದಿಲ್ಲದೇ ಮಾಯವಾಗಿದೆ. ನಮ್ಮಂತೆಯೇ ಬದಲಾಗಿರುವ ನಮ್ಮ ಮಕ್ಕಳು ಈಗ ಮಕ್ಕಳಾಗಿ ಉಳಿದಿಲ್ಲ, ಅವರೆಲ್ಲರೂ ಈಗ ‘ಮಿನಿ ಅಡಲ್ಟ್’ಗಳು, ಝೆನ್ ಜೀ ಪೀಳಿಗೆಯವರು! ಎಲ್ಲಾ ಇದ್ದೂ ಇಲ್ಲದಂತಾಗಿರುವ, ನಿಜವಾದ ಸಂತೋಷವನ್ನೇ ಅನುಭವಿಸಲಾಗದ ಸ್ಪಂದನಾರಹಿತರು.

ಅತಿಯಾದ ಮೊಬೈಲ್ ವೀಕ್ಷಣೆಯಿಂದ ನಿರಂತರವಾಗಿ ಬಿಡುಗಡೆಯಾಗುವ ರಾಸಾಯನಿಕಗಳ ಒತ್ತಡ ನಮ್ಮ ಮಕ್ಕಳ ಎಲ್ಲ ಖುಷಿಯನ್ನೂ ಕಸಿಯುತ್ತಿದೆ. ಅದಕ್ಕೇ ಕೇಳಿದ್ದನ್ನು ಕೈಗಿಟ್ಟರೂ, ಐಷಾರಾಮಿ ಪ್ರವಾಸ ಮಾಡಿಸಿಕೊಂಡು ಬಂದರೂ ಅವರ ಮುಖದಲ್ಲಿ ಸಂತೋಷ ಕುಡಿಯೊಡೆಯುತ್ತಿಲ್ಲ, ತೃಪ್ತಿಯ ಭಾವ ಮಿನುಗುತ್ತಿಲ್ಲ. ಮೊಬೈಲ್‌ನಲ್ಲಿ ನಾವು ವಿಡಿಯೊ ನೋಡುತ್ತಿರುವಾಗ, ಇನ್‌ಸ್ಟಾಗ್ರಾಂನಲ್ಲಿ ಸ್ಕ್ರೋಲ್ ಮಾಡುತ್ತಿರುವಾಗ ನಾನಾ ವಿಧದ ರಾಸಾಯನಿಕಗಳು ಮೆದುಳಿನಲ್ಲಿ ಬಿಡುಗಡೆಯಾಗುತ್ತವೆ. ಯಾರೋ ತಬ್ಬಿಕೊಂಡಿದ್ದು, ಮತ್ತ್ಯಾರೋ ಖುಷಿಯಿಂದ ಜಿಗಿಯುತ್ತಿರುವುದು, ಯಾರಿಗೆ ಇನ್ಯಾರೋ ಸಹಾಯ ಮಾಡುತ್ತಿರುವುದು ಎಲ್ಲವನ್ನೂ ನಿರಂತರವಾಗಿ ನೋಡುತ್ತಾ ಹೋದಾಗ, ಬಗೆಬಗೆಯ ರಾಸಾಯನಿಕಗಳು ಒಟ್ಟಿಗೇ ಬಿಡುಗಡೆಯಾಗುತ್ತಾ ಹೋಗುತ್ತವೆ. ಅವೆಲ್ಲವನ್ನೂ ತಾಳಿಕೊಳ್ಳುವ ಶಕ್ತಿ ಇಲ್ಲದಿರುವುದರಿಂದಲೇ ಈಗಿನ ಪೋಷಕರಲ್ಲಿ ಸದಾ ಒತ್ತಡ, ಒಂದಲ್ಲ ಒಂದು ವಿಷಯಕ್ಕೆ ಅನ್ಯಮನಸ್ಕತೆ, ಅಶಾಂತಿ... ದೊಡ್ಡವರೇ ಹೀಗಾಗಿರುವಾಗ ಇನ್ನು ಮಕ್ಕಳ ಸ್ಥಿತಿ ಹೇಗಿರಬೇಡ?

ಮಗುವಿಗೆ ಕೊಡಲು ಈಗ ನಮ್ಮ ಬಳಿ ಸಮಯವಿಲ್ಲ. ಅದರ ಕುತೂಹಲ ತಣಿಸುವ ಮನಃಸ್ಥಿತಿಯಲ್ಲಿ ನಾವಿಲ್ಲ. ಗಮನ ಬೇರೆಡೆ ತಿರುಗಿಸಲು ಅದರ ಕೈಗೆ ಮೊಬೈಲ್ ಕೊಟ್ಟು ಕೂರಿಸುತ್ತೇವೆ. ಮಗುವಿನ ಹೆಸರಿನಲ್ಲಿ ಇನ್‌ಸ್ಟಾಗ್ರಾಂ ಐ.ಡಿ ಕ್ರಿಯೇಟ್ ಮಾಡಿ ಏನೇನೋ ಪೋಸ್ಟ್ ಮಾಡುತ್ತೇವೆ. ಯೂಟ್ಯೂಬ್ ಚಾನೆಲ್ ಶುರು ಮಾಡಿ, ಅವರಿಗೂ ಸಬ್‌ಸ್ಕ್ರೈಬರ್‌ಗಳ ಲೆಕ್ಕ ಹಾಕುತ್ತಾ ಕೂರುವ ಹುಚ್ಚು ಹಿಡಿಸುತ್ತಿದ್ದೇವೆ. ಹೆಚ್ಚು ಲೈಕು, ಕಾಮೆಂಟ್‌ಗಳು ಬರಲಿಲ್ಲವೆಂದರೆ ಮಗುವಿನಲ್ಲಿ ಆತ್ಮವಿಶ್ವಾಸ ಕುಗ್ಗುತ್ತದೆ. ಇಂತಹ ಸಾಮಾಜಿಕ ಸಾಧನಗಳ ಒತ್ತಡವು ಮಕ್ಕಳ ಒಟ್ಟಾರೆ ಬೆಳವಣಿಗೆಯನ್ನು ಕುಗ್ಗಿಸುತ್ತದೆ. ಹೇಳಿಕೇಳಿ ಮಗುವಿನ ವ್ಯಕ್ತಿತ್ವ ಇರುವುದೇ ಸ್ಪಾಂಜ್‌ನಂತೆ. ಏನನ್ನು ನೋಡುತ್ತದೋ ಏನೆಲ್ಲ ಕೇಳುತ್ತದೋ ಅದೆಲ್ಲವನ್ನೂ ಹೀರಿಕೊಳ್ಳುತ್ತಲೇ ಅದರ ನಡವಳಿಕೆ ರೂಪುಗೊಳ್ಳುತ್ತಾ ಹೋಗುತ್ತದೆ. ಇಶಿತ್‌ನ ಅಸಹಜ ನಡವಳಿಕೆಯೂ ಅದರ ಪ್ರತಿಫಲನ ಅಷ್ಟೇ. ಲಿಂಗಾಧಾರಿತ ಪೋಷಕತ್ವ, ದ್ವಿಮುಖ ನೀತಿಯೂ ಇಂತಹ ದುಃಸ್ಥಿತಿಗೆ ಕೊಡುಗೆ ನೀಡುತ್ತಿವೆ. ಹೆಣ್ಣುಮಗುವೊಂದು ದಿಟ್ಟತನದಿಂದ ನಡೆದುಕೊಂಡರೆ ಅದಕ್ಕೆ ‘ಕೋಪಿಷ್ಟೆ’ ಎಂಬ ಹಣೆಪಟ್ಟಿ ಕಟ್ಟುತ್ತೇವೆ, ಅದೇ ಗಂಡುಮಗುವನ್ನು ‘ಶಕ್ತಿಶಾಲಿ’ ಎಂದು ಕೊಂಡಾಡುತ್ತೇವೆ. ಹಾಗೆಯೇ ಆರ್ಥಿಕವಾಗಿ ಸಬಲವಾಗಿರುವ ಕುಟುಂಬದ ಬಾಲಕನೊಬ್ಬ ತೋರುವ ಧಾರ್ಷ್ಟ್ಯವು ಆತ್ಮವಿಶ್ವಾಸ ಎನ್ನಿಸಿಕೊಂಡರೆ, ಬಡವರ ಮಗುವಿನ ಅಂತಹದೇ ವರ್ತನೆ ಅಗೌರವದಂತೆ ತೋರುತ್ತದೆ.

ಒಳ್ಳೆಯ ಪೋಷಕರಾಗಬೇಕೆಂಬ ಭರದಲ್ಲಿ, ನಮಗೆ ಸಿಗದಿದ್ದನ್ನೆಲ್ಲಾ ಮಕ್ಕಳಿಗೆ ಕರುಣಿಸಿಬಿಡುವ ಹುಂಬತನದಲ್ಲಿ ಅವಾಸ್ತವಿಕ ಪ್ರಪಂಚಕ್ಕೆ ಮಕ್ಕಳನ್ನು ದೂಡುತ್ತಿದ್ದೇವೆ. ಹೀಗೆ ಅವರ ಭಾವನೆಗಳಿಗೆ ಹಾನಿ ಮಾಡುತ್ತಾ ಹೋದರೆ, ಭವಿಷ್ಯದ ಬಲಿಪಶುಗಳು ನಾವೇ ಎಂಬುದು ಅರಗಿಸಿಕೊಳ್ಳಲು ಕಷ್ಟವೆನಿಸುವ ಕಹಿ ಸತ್ಯವೇ ಹೌದು. ಅದಾಗಬಾರದೆಂದರೆ, ನಮಗೆ ನಾವೇ ಹಾಕಿಕೊಳ್ಳುವ ಗಡಿಗಳೊಳಗೆ ಪ್ರಜ್ಞಾಪೂರ್ವಕವಾಗಿ ಮಕ್ಕಳನ್ನು ಬೆಳೆಸುವುದನ್ನು ಕಲಿಯಬೇಕು. ಬೇಡದ್ದನ್ನು ನಯವಾಗಿ, ಆದರೆ ಅಷ್ಟೇ ದೃಢವಾಗಿ ಹೇಳುವುದನ್ನು ನಾವು ರರೂಢಿಸಿಕೊಳ್ಳಲೇಬೇಕು.

ಲೇಖಕಿ: ಆಪ್ತ ಸಮಾಲೋಚಕಿ, ವೆಲ್‌ನೆಸ್ ಕೋಚ್

ಬೀಳಲಿ ಬಿಡಿ

ನೈತಿಕ ಮೌಲ್ಯಗಳನ್ನು ಕಲಿಯುತ್ತಾ, ಸ್ನೇಹಿತರ ಜೊತೆ ಕಲೆಯುತ್ತಾ, ಎದ್ದು ಬಿದ್ದು ಮಣ್ಣಿನಲ್ಲಿ ಆಟವಾಡುತ್ತಾ ಕಾಲ ಕಳೆಯುವುದು ಮಗುವಿನ ಬೆಳವಣಿಗೆಗೆ ಪೂರಕ. ದೇಹಕ್ಕೆ ಸ್ನಾನ ಎಷ್ಟು ಮುಖ್ಯವೋ ಧ್ಯಾನವೂ ಅಷ್ಟೇ ಮುಖ್ಯ. ನಿರಾಕರಣೆ, ಹತಾಶೆ, ಬೆದರಿಕೆಗೆ ಒಳಗಾಗುವ ಸಂದರ್ಭಗಳನ್ನು ನಿರ್ವಹಿಸುವ ಬಗೆಯನ್ನು ನಾವು ಮಕ್ಕಳಿಗೆ ಹೇಳಿಕೊಡಬೇಕು. ಕೂತಿದ್ದು, ನಿಂತಿದ್ದನ್ನೆಲ್ಲ ದೊಡ್ಡವರೇ ಹುಚ್ಚುಚ್ಚಾಗಿ ವಿಡಿಯೊ ಮಾಡಿ ಹಾಕುತ್ತಿರುವುದನ್ನು ನೋಡುತ್ತಿದ್ದೇವೆ. ಅವರೆಲ್ಲ ಮಾನಸಿಕವಾಗಿ ಸ್ಥಿಮಿತದಲ್ಲಿ ಇರುತ್ತಾರೆ ಎಂಬುದು ಖಾತರಿಯಿಲ್ಲ. ಮೊದಲೆಲ್ಲ ಮನೋವೈದ್ಯರೇ ಇರಲಿಲ್ಲ. ಈಗ ಮನೋವೈದ್ಯರ ಬಳಿ ಎಷ್ಟೊಂದು ರೋಗಿಗಳು ದಾಂಗುಡಿ ಇಡುತ್ತಿದ್ದಾರೆ. ಇದು ಗಮನಾರ್ಹವಾದ ಸಂಗತಿ.

ಹೊಣೆಗಾರಿಕೆ ಕಲಿಸೋಣ

ನನಗೆ ಏನು ಸಿಗಲಿಲ್ಲವೋ ಅದು ನನ್ನ ಮಗನಿಗೆ ಸಿಗಬೇಕು, ನಾನು ಏನೆಲ್ಲವನ್ನು ಕಲಿಯಲಿಲ್ಲವೋ ಅದೆಲ್ಲವನ್ನೂ ನನ್ನ ಮಗಳು ಕಲಿತುಬಿಡಬೇಕು, ನನಗೆ ಯಾವ ಶಾಲೆಯಲ್ಲಿ ಓದಲಾಗಲಿಲ್ಲವೋ ಅಲ್ಲಿ ನನ್ನ ಮಕ್ಕಳು ಓದಲೇಬೇಕು ಎನ್ನುವ ಹಪಹಪಿ ಹೆಚ್ಚಿನ ಪೋಷಕರದು. ಹಾಗಾಗಿ, ಮಕ್ಕಳು ಓದಿದರೆ ಸಾಕು ಬೇರೇನೂ ಮಾಡುವುದು ಬೇಡ ಎಂದುಕೊಂಡು, ಅವರಿಗೆ ಹೊಣೆಗಾರಿಕೆ ಕಲಿಸುವುದನ್ನೇ ಮರೆಯುತ್ತಾರೆ. ತಮ್ಮ ಕೋಣೆಯನ್ನು ಸ್ವಚ್ಛ ಮಾಡಿಕೊಳ್ಳುವುದು, ಊಟದ ಡಬ್ಬಿ ತೊಳೆದಿಡುವುದು, ಅಡುಗೆಯಲ್ಲಿ ತಂದೆ–ತಾಯಿಗೆ ಸಹಾಯ ಮಾಡುವುದು ಎಲ್ಲವೂ ಮುಖ್ಯ. ಯಾವಾಗ ನಾವು ಜಗಳ, ಗಲಾಟೆ ಮಾಡುತ್ತೇವೋ, ಕೋಪ ತೋರಿಸುತ್ತೇವೋ ಮಕ್ಕಳೂ ಅದನ್ನೇ ಕಲಿಯುತ್ತಾ ಹೋಗುತ್ತಾರೆ. ಅದರ ಬದಲು, ಹಿರಿಯರಲ್ಲಿ ಸಹನೆ, ಶಾಂತಿ, ಪ್ರೀತಿ ಮನೆಮಾಡಿದ್ದರೆ ಅದು ಮಕ್ಕಳಲ್ಲೂ ಪ್ರತಿಫಲಿಸದೆ ಇರುವುದೇ?



ಏನಿವರ ಬ್ಯೂಟಿ ಸೀಕ್ರೆಟ್?

ನಮ್ರತಾ ಗೌಡ, ಚಿತ್ರನಟಿ

ನನ್ನ ಚರ್ಮದಲ್ಲಿ ಏನೇನು ಆಗುತ್ತಿದೆ ಎಂಬುದನ್ನು ತಿಳಿದುಕೊಳ್ಳಲು ಪ್ರತಿ ತಿಂಗಳೂ ಒಂದು ಬಾರಿ ಚರ್ಮವೈದ್ಯರನ್ನು ಭೇಟಿಯಾಗುತ್ತೇನೆ. ಸಕ್ಕರೆ ಮತ್ತು ಡೈರಿ ಉತ್ಪನ್ನಗಳಿಂದ ನನ್ನ ಚರ್ಮ ಹಾಳಾಗುತ್ತದೆ. ಹಾಗಾಗಿ, ಆದಷ್ಟೂ ಅವುಗಳಿಂದ ದೂರವಿರುತ್ತೇನೆ. ಶೂಟಿಂಗ್ ಸಮಯದಲ್ಲಿ ಎಳನೀರು, ತರಹೇವಾರಿ ಹಣ್ಣು ಮತ್ತು ಹಸಿರುಸೊಪ್ಪುಗಳು ನನ್ನ ಪಥ್ಯದಲ್ಲಿ ಇರುವಂತೆ ನೋಡಿಕೊಳ್ಳುತ್ತೇನೆ. ಇವು ಚರ್ಮವನ್ನು ಆರೋಗ್ಯವಾಗಿಡಲು ತುಂಬಾ ಸಹಾಯ ಮಾಡಿವೆ.

ಆಲೊವೆರಾ ಹಚ್ಚುತ್ತೇನೆ. ಇದೊಂದು ನನ್ನ ಚರ್ಮಕ್ಕೆ ಆಗಿಬರುತ್ತಿದೆ. ಇದು ಬಿಟ್ಟರೆ ಯಾವುದೇ ರೀತಿಯ ಮನೆಮದ್ದು ಉಪಯೋಗಿಸುವುದಿಲ್ಲ. ಮೊದಲು ಅರಸಿನ, ಟೊಮೆಟೊ, ಜೇನುತುಪ್ಪ ಅಂತ ಏನೇನೋ ಹಚ್ಚಿ, ಯಾವುದೂ ನನ್ನ ಚರ್ಮಕ್ಕೆ ಆಗಿಬರಲಿಲ್ಲ. ಇದರಿಂದ ಚರ್ಮ ಹಾಳಾಯಿತು. ಚರ್ಮವೈದ್ಯರು ಇಂಥ ಮನೆಮದ್ದುಗಳನ್ನು ಶಿಫಾರಸು ಮಾಡುವುದಿಲ್ಲ. ಹಾಗಾಗಿ, ಅವನ್ನೆಲ್ಲ ಹಚ್ಚುವುದನ್ನು ಬಿಟ್ಟಿದ್ದೇನೆ.

ರಾತ್ರಿ ಒಂದು ನೈಟ್ ಕ್ರೀಂ ಹಚ್ಚಿ ಮಲಗುತ್ತೇನೆ. ಬೆಳಿಗ್ಗೆ ಮಾಯಿಶ್ಚರೈಸರ್, ಸನ್‌ಸ್ಕ್ರೀನ್ ಹಚ್ಚಿದ ನಂತರ ಫೇಷಿಯಲ್ ಮಿಸ್ಟ್ ಎನ್ನುವ ಸ್ಪ್ರೇ ಹಾಕಿಕೊಳ್ಳುತ್ತೇನೆ. ಬಳಿಕ ಶೂಟಿಂಗ್‌ಗೆ ಪ್ರೈಮರ್ ಹಾಕಿ ಮೇಕಪ್ ಮಾಡುತ್ತೇನೆ. ರಾತ್ರಿ ಡಬಲ್ ಕ್ಲೆನ್ಸ್ ಮಾಡಿ ಮೇಕಪ್ ತೆಗೆಯುತ್ತೇನೆ. ಸ್ನಾನ ಆದ ಮೇಲೆ ರಾತ್ರಿ ಹಚ್ಚುವ ಒಂದು ಕ್ರೀಂ ಇರುತ್ತದೆ. ಆದಷ್ಟೂ ಕಡಿಮೆ ಕ್ರೀಂಗಳನ್ನು ಬಳಸುತ್ತೇನೆ. ಜಾಸ್ತಿ ಕ್ರೀಂ ಹಚ್ಚಿದಷ್ಟೂ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ.

ತಿಂಗಳಲ್ಲಿ ಎರಡು ಸಾರಿ ಸ್ಪಾ ಮಾಡಿಸುತ್ತೇನೆ. ಆಲೊವೆರಾ, ಅಗಸೆ ಬೀಜ ಅಥವಾ ಮೆಂತ್ಯದಿಂದ ಮಾಡಿದ ಹೇರ್‌ಪ್ಯಾಕ್ ಮಾಡಿಕೊಳ್ಳುತ್ತೇನೆ. ಕರಿಬೇವು, ಮೆಂತ್ಯ, ಈರುಳ್ಳಿ ಹಾಕಿ ಅಮ್ಮ ಮನೆಯಲ್ಲಿಯೇ ತಯಾರಿಸಿದ ಎಣ್ಣೆಯನ್ನು ವಾರದಲ್ಲಿ ಎರಡು ಬಾರಿ ಹಚ್ಚುತ್ತೇನೆ. ಮೊದಲು ರಾತ್ರಿ ಹಚ್ಚಿ ಬೆಳಿಗ್ಗೆವರೆಗೂ ಬಿಡುತ್ತಿದ್ದೆ. ಅದು ಸಹ ನನ್ನ ಚರ್ಮಕ್ಕೆ ಆಗಿಬರುವುದಿಲ್ಲ. ಹಾಗಾಗಿ, ಹೆಚ್ಚೆಂದರೆ ಒಂದು ಅಥವಾ ಎರಡು ಗಂಟೆ ಮಾತ್ರ ಬಿಟ್ಟು ನಂತರ ಸ್ನಾನ ಮಾಡಿಬಿಡುತ್ತೇನೆ.

ನಿತ್ಯ ಎಳನೀರು ಕುಡಿಯುತ್ತೇನೆ. ಸ್ಟ್ರಾಬೆರ್ರಿ, ಬ್ಲೂಬೆರ್ರಿ, ರಾಸ್ಪ್‌ಬೆರ್ರಿಯನ್ನು ಹೆಚ್ಚಾಗಿ ತಿನ್ನುತ್ತೇನೆ. ಒಣಹಣ್ಣುಗಳಿಂದ ಮಾಡಿದ ಲಡ್ಡು ದಿನವೂ ಇರಬೇಕು. ನನ್ನ ಪ್ರಕಾರ, ಸೌಂದರ್ಯ ಎನ್ನುವುದು ಆತ್ಮವಿಶ್ವಾಸ. ಎಂಥದ್ದೇ ಪರಿಸ್ಥಿತಿಯಲ್ಲೂ ಆತ್ಮವಿಶ್ವಾಸದಿಂದ ಹೊಳೆದರೆ ಅದೇ ನಿಜವಾದ ಸೌಂದರ್ಯ. ನಾವು ಮೊದಲು ನಮ್ಮನ್ನು ನಂಬಿ, ಪ್ರತಿಕ್ಷಣವೂ ನನ್ನದು ಎಂದುಕೊಂಡು ಬದುಕಿದರೆ ಅದೇ ಹೊಳಪು.

‘ವಯಸ್ಸಿನ ಭ್ರಾಂತಿ’ ನಿಮ್ಮನ್ನು ಕುಗ್ಗಿಸದಿರಲಿ

• **ಮಹಿಳೆಯರ ವಯಸ್ಸು ಕೇಳಬಾರದು ಎನ್ನುವ ನಾಣ್ಣುಡಿ ಇರುವುದೇನೋ ಸರಿ. ಆದರೆ ಕೆಲವು ಹೆಣ್ಣುಮಕ್ಕಳಲ್ಲಿ ಇದು ಮಿತಿಮೀರಿದ ಹಂತಕ್ಕೆ ಹೋಗಿರುತ್ತದೆ. ತಮಗಿಂತ ನಾಲ್ಕೈದು ವರ್ಷಗಳಷ್ಟೇ ದೊಡ್ಡವರಾದ ಮಹಿಳೆಯರನ್ನೂ ‘ನಿಮಗೆ ವಯಸ್ಸಾಯಿತಲ್ಲಾ’ ಎಂದು ಆಗಾಗ್ಗೆ ಹೇಳಿ ಮಾನಸಿಕವಾಗಿ ಅವರನ್ನು ಕುಗ್ಗಿಸುತ್ತಲೇ ಇರುತ್ತಾರೆ. ವಯಸ್ಸು ದೇಹಕ್ಕಷ್ಟೇ ಮನಸ್ಸಿಗಲ್ಲ ಎನ್ನುವ ವಾಸ್ತವ ಅರಿಯದವರನ್ನು, ‘ವಯಸ್ಸಿನ ಭ್ರಾಂತಿ’ಯಿಂದ ಹೊರತರುವುದು ಹೇಗೆ?**

ಶ್ವೇತಾ, ಸೊಂಡೆಕೊಪ್ಪ



ಅಂತರಂಗ

ಅಕ್ಷರ ದಾಮ್ಲೆ , ಮನಃಶಾಸ್ತ್ರಜ್ಞ

ಈ ಪ್ರಶ್ನೆಯನ್ನು ಓದಿದಾಗ ನನ್ನ ಮನಸ್ಸಿನಲ್ಲಿ ಮೂಡಿದ್ದು ಮೂರು ಪ್ರಶ್ನೆಗಳು:

1. ‘ವಯಸ್ಸಿನ ಭ್ರಾಂತಿ’ಯಲ್ಲಿ ಇರುವವರನ್ನು ಅದರಿಂದ ಹೊರತರುವುದು ಹೇಗೆ?
2. ಅದಕ್ಕಿಂತಲೂ ಆಳವಾಗಿ ಕಾಡುತ್ತಿರುವುದು, ಅವರು ಮಾಡುವ ಹೇಳಿಕೆಗಳಿಂದ ಉಂಟಾಗಿರುವಂತಹ ಮಾನಸಿಕ ಕುಗ್ಗುವಿಕೆ ಮತ್ತು ಅದರಿಂದ ಹೊರಬರುವುದು ಹೇಗೆ ಎಂಬ ಪ್ರಶ್ನೆ.
3. ಮೂರನೆಯದಾಗಿ ‘ವಯಸ್ಸಾಯಿತು’ ಎಂಬುದು ಅವಹೇಳನಕಾರಿ ಅಥವಾ ಅಗೌರವಯುತವಾದಂತಹ ಮಾತು ಯಾಕಾಗಬೇಕು?

ಮೊದಲಿಗೆ, ನಿಮ್ಮ ಮುಖ್ಯ ಪ್ರಶ್ನೆಯನ್ನು ಭೇದಿಸಲು, ನಾನು ಎತ್ತಿರುವ ಕೊನೆಯ ಪ್ರಶ್ನೆಯಿಂದ ಆರಂಭಿಸೋಣ. ವಯಸ್ಸಾಗುವುದು ಒಂದು ಸಾಮಾನ್ಯ ಪ್ರಕ್ರಿಯೆ. ಹುಟ್ಟಿದ ಮಗು ದೊಡ್ಡದಾಗುವುದನ್ನು ನಾವು ಎಷ್ಟು ಸಂಭ್ರಮಿಸುತ್ತೇವೋ ಮಧ್ಯವಯಸ್ಸಿನ ನಂತರ ಇಳಿವಯಸ್ಸಿನ ಕಡೆ ಬೆಳೆಯುವುದರ ಬಗ್ಗೆ ಅಷ್ಟೇ ಹಲುಬುತ್ತೇವೆ. ಆದರೆ ಇವೆರಡೂ ಅದೇ ಬೆಳವಣಿಗೆಯ ಎರಡು ಮುಖಗಳು ಎಂಬುದನ್ನು ನಾವು ಅರ್ಥೈಸಿಕೊಳ್ಳಬೇಕು.

ಅವರ ಧ್ವನಿಯಲ್ಲಿ ಇರಬಹುದಾದ ಅಣಕವನ್ನು ಮನದಲ್ಲಿಟ್ಟುಕೊಂಡು ಕುಚೋದ್ಯಗಳಿಗೆ ಬಲಿಯಾಗುವುದರ ಹಿಂದೆ, ಅವರ ಪಾತ್ರಕ್ಕಿಂತ ನಮ್ಮ ಪಾತ್ರವೇ ಹೆಚ್ಚಿರುತ್ತದೆ. ಯಾಕೆಂದರೆ, ಅವರು ಒಂದು ಮಾತಿನಲ್ಲಿ ಹೇಳಿರುತ್ತಾರೆ. ಆದರೆ, ಅದನ್ನು ಹತ್ತುಸಾವಿರ ಮಾತುಗಳನ್ನಾಗಿ ಮಾಡುವುದು ನಮ್ಮ ಮನಸ್ಸು. ಹಾಗಾಗಿ, ಮೊದಲು ನಮ್ಮ ನಕಾರಾತ್ಮಕ ಯೋಚನೆಗಳನ್ನು ತಡೆಯುವುದು ಮುಖ್ಯ.

ಕೆಲವೊಮ್ಮೆ ಸ್ಥೂಲಕಾಯದವರನ್ನು ಕೂಡಾ ಜನ ಅಣಕಿಸುತ್ತಾರೆ. ಹಾಗೆಯೇ ನಮ್ಮಲ್ಲಿರುವ ಅನೇಕ ವಿಚಾರಗಳನ್ನು ಕುರಿತು ಜನ ನಗಬಹುದು, ವ್ಯಂಗ್ಯವಾಡಬಹುದು. ಆದರೆ, ಹಾಗೆಂದ ಮಾತ್ರಕ್ಕೆ ನಾವು ಅಂತಹ ನಗೆಪಾಟಲಿನ ವಸ್ತುವಾಗಿ ಬಲಿಪಶುವಾಗಬೇಕೇ ಎಂದು ಕೇಳಿಕೊಳ್ಳಬೇಕು.

ಆಗ, ನಾನು ಎತ್ತಿದ ಎರಡನೆಯ ಪ್ರಶ್ನೆಗೆ ಉತ್ತರ ಸಿಗುತ್ತದೆ. ಅದೇನೆಂದರೆ, ನಮಗೆ ನಮ್ಮ ಐಡೆಂಟಿಟಿಯ ಕುರಿತು ಯಾವಾಗ ಸ್ಪಷ್ಟತೆ ಇಲ್ಲವೋ ಆಗ ನಾವು ಇತರರ ಮಾತುಗಳಿಂದ ಅಥವಾ ಹೇಳಿಕೆಗಳಿಂದ ಕುಗ್ಗುವ ಅಥವಾ ಹಿಗ್ಗುವ ಪರಿಪಾಟಕ್ಕೆ ತೊಡಗುತ್ತೇವೆ. ಒಂದು ವೇಳೆ ನಮಗೆ ನಮ್ಮ ಕುರಿತು ಸ್ಪಷ್ಟತೆ ಇದ್ದರೆ, ಜನ ಏನು ಮಾತನಾಡಿದರೂ ಅದು ನಮಗೆ ನಾಟುವುದಿಲ್ಲ. ಹಾಗಂತ, ಇತರರ ಮಾತುಗಳನ್ನು ನಿರ್ಲಕ್ಷಿಸಿ ಎಂದು ಅರ್ಥವಲ್ಲ. ಬದಲಾಗಿ, ಅವರ ಮಾತುಗಳನ್ನು ನಾವು ನಮ್ಮ ಬೆಳವಣಿಗೆಗೆ ಬಳಸಿಕೊಳ್ಳಬೇಕು. ಒಂದು ವೇಳೆ, ಯಾರದ್ದಾದರೂ ಟೀಕೆ - ಟಿಪ್ಪಣಿಗಳಲ್ಲಿ ಹುರುಳಿದ್ದರೆ, ಅವುಗಳ ಆಳಕ್ಕೆ ಹೋಗಿ, ನಿಮ್ಮನ್ನು ನೀವು ತಿದ್ದಿಕೊಳ್ಳಬಹುದು. ತನ್ಮೂಲಕ ನಿಮ್ಮಲ್ಲಿರುವ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಬಹುದು. ಹುರುಳಿಲ್ಲದಿದ್ದರೆ, ಅವರ ಮಾತುಗಳನ್ನು ಬಿಟ್ಟುಬಿಡಬಹುದು. ಇನ್ನೀಗ ನೀವು ಕೇಳಿರುವ ಪ್ರಶ್ನೆ, ‘ಇಂತಹವರನ್ನು ‘ವಯಸ್ಸಿನ ಭ್ರಾಂತಿ’ಯಿಂದ ಹೊರತರುವುದು ಹೇಗೆ?’ ಇದಕ್ಕೆ ನನ್ನ ಮರುಪ್ರಶ್ನೆ ಏನೆಂದರೆ, ಯಾಕೆ ಹೊರತರಬೇಕು? ಅವರಿಗೆ ತಮ್ಮ ಮಾತುಗಳಲ್ಲಿ ಏನೂ ತಪ್ಪು ಕಾಣಿಸುತ್ತಿರುವುದಿಲ್ಲ. ಹಾಗಿರುವಾಗ, ಅವರನ್ನು ಅದರಿಂದ ಹೊರತರುವುದು ಸಾಧ್ಯವಿಲ್ಲ. ಒಂದು ವೇಳೆ ನೀವು ಅದಕ್ಕೆ ಮುಂದಾದರೂ ಅದು ವ್ಯರ್ಥ ಪ್ರಯತ್ನವಾದೀತು ಅಥವಾ ಒಂದಷ್ಟು ಜಗಳಗಳಾಗಬಹುದು. ಹಾಗಿರುವಾಗ, ಯಾಕೆ ಅಂತಹ ವಿಚಾರಕ್ಕೆ ಕೈಹಾಕಬೇಕು? ಅವರ ಕಾರಣದಿಂದಾಗಿ ಕುಗ್ಗುತ್ತಿರುವ ನಿಮ್ಮ ಮನಸ್ಸನ್ನು ಸರಿಪಡಿಸಿಕೊಳ್ಳಿ. ಸಮಸ್ಯೆ ತನ್ನಿಂದ ತಾನೇ ಬಗೆಹರಿಯುತ್ತದೆ.

ಮನೆಯಲ್ಲೇ ಮಾಡಿ ಮದುವೆಮನೆ ಊಟ



ಕಲೆಯನ್ನು ಒಲಿಸಿಕೊಳ್ಳಲು ಶ್ರದ್ಧೆ ಹೇಗೆ ಅಗತ್ಯವೋ ಹಾಗೇ ನಮ್ಮ ಸಾಂಪ್ರದಾಯಿಕ ಖಾದ್ಯಗಳನ್ನು ಕರಗತ ಮಾಡಿಕೊಳ್ಳಲೂ ಶ್ರದ್ಧೆ ಇರಬೇಕು.
ವಿನಯ್ ಶ್ರೀನಿವಾಸ್ ಕೆ.ಆರ್.

ಅಪ್ಪ–ಮಗ: ವಿನಯ್, ರಂಗನಾಥ್

ರಸಾಸ್ವಾದ

ದೊಡ್ಡ ಬಾಣಲೆ, ಉದ್ದನೆ ಸ್ಟೀಲ್ ಚಮಚ, ಅವೆರಡರ ಜುಗಲ್‌ಬಂದಿಯಲ್ಲಿ ಹೊರಹೊಮ್ಮುವ ‘ಕಟ್ ಕಟ್’ ಸದ್ದು, ಆ ಸದ್ದು ಸಣ್ಣದಾಗುತ್ತಲೇ ಅಪ್ಪ–ಮಗನ ಜೋಡಿಯಲ್ಲಿ ತಯಾರಾಗಿ ಸುತ್ತಲಿನವರ ನಾಲಿಗೆಯ ರುಚಿಮೊಗ್ಗುಗಳನ್ನು ಅರಳಿಸುವ ರಸಪಾಕ... ಹೀಗೆ ಸಾಂಪ್ರದಾಯಿಕ ಹಾಗೂ ಮದುವೆಮನೆ ಶೈಲಿಯ ಅಡುಗೆಗಳನ್ನು ಹೇಳಿಕೊಡುತ್ತಾರೆ ರಂಗನಾಥ್ ಐಯ್ಯಂಗಾರ್ ಹಾಗೂ ವಿನಯ್ ಶ್ರೀನಿವಾಸ್.

ಮದುವೆ ಮನೆಯಲ್ಲಿ ಮಾಡುವ ಅಡುಗೆಯ ಗಮ್ಮತ್ತೇ ಬೇರೆ. ಮನೆಯಲ್ಲಿ ಎಷ್ಟೇ ಪ್ರಯತ್ನಿಸಿದರೂ ಆ ರುಚಿ ಬಾರದು. ದೊಡ್ಡ ಪ್ರಮಾಣದಲ್ಲಿ ಮಾಡುವುದರಿಂದ ಅಲ್ಲಿ ರುಚಿ ಹೆಚ್ಚು ಎಂದು ಜನ ಭಾವಿಸುತ್ತಾರೆ. ಆದರೆ ಈ ಮಾತನ್ನು ಅಲ್ಲಗಳೆಯುವ ಅಪ್ಪ–ಮಗ, ಅದೇ ಸ್ವಾದವನ್ನು ಸಣ್ಣ ಪ್ರಮಾಣದಲ್ಲೂ ಮಾಡಿ ತೋರಿಸಿ ಖಾತರಿಪಡಿಸುತ್ತಾರೆ.

ಬೆಂಗಳೂರಿನಲ್ಲಿರುವ ಆರ್‌ವಿಆರ್ ಕೇಟರಿಂಗ್‌ನ ರಂಗನಾಥ್ ಅವರಿಗೆ ಮಗ ವಿನಯ್ ಸಾಥ್ ನೀಡುತ್ತಿದ್ದಾರೆ. ‘ಕಲರ್ ಟಾಕೀಸ್’ ಯೂಟ್ಯೂಬ್ ಚಾನೆಲ್ ಮೂಲಕವೂ ತಿನಿಸುಪ್ರಿಯರಿಗೆ ತಮ್ಮ ಪಾಕ ಪ್ರಾವೀಣ್ಯದ ರುಚಿ ಹತ್ತಿಸಿದ್ದಾರೆ. ಬ್ರಾಹ್ಮಣ ಶೈಲಿಯ ಸಾಂಪ್ರದಾಯಿಕ ಅಡುಗೆಗಳು, ದೊಡ್ಡ ಸಮಾರಂಭಗಳಲ್ಲಿ ಮಾಡುವ ಅಡುಗೆಗಳ ಗುಟ್ಟುಗಳನ್ನು ಸರಳ ವಿಧಾನದಲ್ಲಿ ನಮ್ಮ ಮುಂದೆ ಬಿಚ್ಚಿಡುತ್ತಾರೆ. ನಾಲ್ಕೈದು ಸಾವಿರ ಜನರಿಗಾಗುವಂತೆ ತಯಾರಿಸುವ ಅಡುಗೆಗಳನ್ನು ಕೇವಲ ಇಬ್ಬರು– ಮೂವರಿಗಾಗುವಷ್ಟು ಅಳತೆಯಲ್ಲಿ ಹೇಳಿಕೊಡುವುದು ನಿಜಕ್ಕೂ ಸವಾಲಿನ ಕೆಲಸ. ಅದನ್ನು ಅಷ್ಟೇ ಅಚ್ಚುಕಟ್ಟಾಗಿ ನಿಭಾಯಿಸುವ ಈ ಜೋಡಿಯ ಅಡುಗೆ ತಯಾರಿ ಒಂದು ರೀತಿ ಜುಗಲ್‌ಬಂದಿಯಂತೆ. ನಗುಮೊಗದಿಂದಲೇ ಬಹುತೇಕರನ್ನು ಸೆಳೆಯುವ ವಿನಯ್ ತಮ್ಮ ಅಜ್ಜಿ, ಅಪ್ಪ, ಅಮ್ಮನಿಂದ ಕಲಿತು, ಪ್ರಯೋಗಿಸಿದ ಪಾಕಗಳೂ ಸೇರಿದಂತೆ ಈವರೆಗೆ 600ಕ್ಕೂ ಹೆಚ್ಚು ಖಾದ್ಯಗಳನ್ನು ಹಂಚಿಕೊಂಡಿದ್ದಾರೆ. ಸ್ನೇಹಿತರಂತೆ ಅಕ್ಕಪಕ್ಕ ಕುಳಿತು, ಪರಸ್ಪರ ಮೆಚ್ಚುಗೆ ಸೂಚಿಸುತ್ತಾ ಇಬ್ಬರೂ ಸೇರಿ ಹೇಳಿಕೊಟ್ಟಿರುವ ಕೋಡುಬಳೆ ರೆಸಿಪಿಯಂತೂ ಬಹುತೇಕರ ಮನೆಮಾತಾಗಿದೆ. ಎಷ್ಟೇ ಸಣ್ಣ ಪ್ರಮಾಣದ ಅಡುಗೆಯಾದರೂ ಅವರು ಬಳಸುವ ದೊಡ್ಡ ಬಾಣಲೆ ಅವರ ಅಡುಗೆಮನೆಗೊಂದು ಕಲಶವಿದ್ದಂತೆ. ವೀಕ್ಷಕ ವಲಯದಿಂದ ಆ ಬಾಣಲೆಗೂ ಮೆಚ್ಚುಗೆ, ಪ್ರತಿಕ್ರಿಯೆಗಳು ಬಂದಿವೆ.

-ಸುಮಾ ಬಿ.

ಗೊತ್ತೇ ‘ಕತುಹಾಸ’?

ಕ–ಕಡಲೆಹಿಟ್ಟು, ತು–ತುಪ್ಪ, ಹಾ–ಹಾಲು, ಸ–ಸಕ್ಕರೆ... ಕತುಹಾಸ ಎಂಬ ಸಿಹಿ ಖಾದ್ಯದ ವಿಸ್ತೃತ ರೂಪ ಇದು! ಈ ಖಾದ್ಯ ವಿನಯ್ ಅವರ ಮುತ್ತಜ್ಜಿ ಕಾಲದ್ದಂತೆ. ಹಳೆ ಪುಸ್ತಕದಲ್ಲಿ ಬರೆದಿಟ್ಟದ್ದನ್ನು ಅವರಿಲ್ಲಿ ಹಂಚಿಕೊಂಡಿದ್ದಾರೆ.

ಏನೆಲ್ಲ ಬೇಕು?: ಒಂದು ಕಪ್ ಕಡಲೆಹಿಟ್ಟು, ಎರಡು ಕಪ್ ತುಪ್ಪ, ಮೂರು ಕಪ್ ಹಾಲು, ನಾಲ್ಕು ಕಪ್ ಸಕ್ಕರೆ (ಬೆಲ್ಲವನ್ನೂ ಬಳಸಬಹುದು)



ಹೀಗೆ ಮಾಡಿ: ಬಾಣಲೆಗೆ ತುಪ್ಪ ಹಾಕಿ, ಕಡಲೆಹಿಟ್ಟು ಸೇರಿಸಿ ಹಸಿ ವಾಸನೆ ಹೋಗುವವರೆಗೂ ಹುರಿದುಕೊಳ್ಳಬೇಕು. ನಂತರ ಹಾಲನ್ನು ಹಾಕಿ, ಬಳಿಕ ಸಕ್ಕರೆ ಸೇರಿಸಿ ಸಣ್ಣ ಉರಿಯಲ್ಲಿ ಕೈಯಾಡಿಸುತ್ತಿರಬೇಕು. 15–20 ನಿಮಿಷ ಕುದಿದು ಕೋವಾ ಹದಕ್ಕೆ ಬರುತ್ತದೆ. ಆಗ ತುಪ್ಪ ಸವರಿದ ತಟ್ಟೆಗೆ ಹಾಕಿ ಸಮತಟ್ಟು ಮಾಡಿ, ಸ್ವಲ್ಪ ತಣಿದಾದ ಬಳಿಕ ಬೇಕಾದ ಶೈಲಿಯಲ್ಲಿ ಕತ್ತರಿಸಬೇಕು.

ವಿನಯ್ ಹೇಳ್ತಾರೆ...

- ಮಜ್ಜಿಗೆಹುಳಿ ಮಂದವಾಗಿ ಬರಲು ತೊಗರಿಬೇಳೆ ಹಾಗೂ ಅದರ ಅರ್ಧದಷ್ಟು ಕಡಲೆಬೇಳೆಯನ್ನು ಮಸಾಲೆಯೊಂದಿಗೆ ರುಬ್ಬಿಕೊಳ್ಳಬೇಕು.
- ಬಾದುಷಾ ಮಾಡುವಾಗ ಅದು ಕ್ರಿಸ್ಪಿ ಆಗಲು ಸೋಡಾ ಅಥವಾ ಡಾಲ್ಡಾ ಬದಲು ತುಪ್ಪ ಬಳಸಿ.
- ರಸಂ ಮಾಡುವಾಗ ಮಸಾಲೆ ಪದಾರ್ಥಗಳನ್ನು ಹಸಿಯಾಗಿ ಬಳಸುವ ಬದಲು ಹುರಿದು ರುಬ್ಬಿಕೊಂಡರೆ ಎದೆಯುರಿ ಬಾರದು.
- ಮಜ್ಜಿಗೆಹುಳಿ ನಾಲ್ಕೈದು ಗಂಟೆ ಕಾಲ ಹುಳಿ ಬಾರದೇ ಇರಬೇಕೆಂದರೆ ಸ್ವಲ್ಪ ಬೆಲ್ಲ ಹಾಕಬೇಕು.
- ಮಸಾಲೆದೋಸೆ ಸ್ವಾದ ಹೆಚ್ಚಿಸಲು ದೋಸೆ ಅಕ್ಕಿ ಹಾಗೂ ಕೆಂಪಕ್ಕಿಯನ್ನು 50–50 ಅಳತೆಯಲ್ಲಿ ಬಳಸಬೇಕು.

ಮುಟ್ಟಿನ ರಜೆ ಸ್ಪಂದನೆ, ಸಂವೇದನೆ

ಮಹಿಳಾ ಉದ್ಯೋಗಿಗಳಿಗೆ ತಿಂಗಳಿಗೊಂದು ‘ಮುಟ್ಟಿನ ರಜೆ’ ನೀಡುವ ಸರ್ಕಾರದ ನಿರ್ಧಾರಕ್ಕೆ ರಾಜ್ಯದಾದ್ಯಂತ ವ್ಯಾಪಕ ಪ್ರಶಂಸೆ ವ್ಯಕ್ತವಾಗಿದೆ. ಋತುಚಕ್ರದ ವಿಷಯದಲ್ಲಿ ಸಮಾಜವನ್ನು ಸ್ಪಂದನಶೀಲವಾಗಿಸುವ ಈ ನಡೆಯ ಬಗ್ಗೆ ವಿವಿಧ ಕ್ಷೇತ್ರಗಳ ಮಹಿಳೆಯರ ಪ್ರಾತಿನಿಧಿಕ ಅಭಿಪ್ರಾಯ ಇಲ್ಲಿದೆ:

ಸೂಕ್ಷ್ಮ ಸಂಗತಿಗಳಿವೆ

ಕಂಡಕ್ಟರ್ ಕೆಲಸ ಹೇಗೆಂದು ಗೊತ್ತೇ ಇದೆ. ಇಪ್ಪತ್ತೆರಡು ವರ್ಷಗಳಿಂದ ಈ ವೃತ್ತಿಯಲ್ಲಿದ್ದೇನೆ. ಆ ದಿನಗಳಲ್ಲಿ ಗಂಡಸರ ಮಧ್ಯೆಯೆಲ್ಲಾ ಓಡಾಡಿ ಟಿಕೆಟ್ ನೀಡುವುದು ಎಂದರೆ ಹಿಂಸೆಯೇ ಆಗುತ್ತದೆ. ಒಮ್ಮೊಮ್ಮೆ ನಮ್ಮ ದೇಹದಲ್ಲಿ ಒಂದು ರೀತಿಯ ವಾಸನೆ ಬರುತ್ತದೆ. ಇದು ಬೇರೆಯವರಿಗೂ ಗೊತ್ತಾಗುತ್ತದೇನೋ ಎಂದು ನೆನೆಸಿಕೊಂಡು ಹಿಂಸೆಯಾಗುತ್ತದೆ.

ಕೆಲವು ವರ್ಷಗಳ ಹಿಂದಿನ ಮಾತು. ಒಮ್ಮೆ ನನಗೆ ಎದ್ದು ಹೋಗಿ ಟಿಕೆಟ್ ಕೊಡಲು ಸಾಧ್ಯವೇ ಆಗಲಿಲ್ಲ. ಇದರಿಂದ ನನಗೆ ನೋಟಿಸ್ ನೀಡಲಾಯಿತು. ಮುಟ್ಟಿನ ಸಮಸ್ಯೆಯನ್ನೇ ಬರೆದು ಉತ್ತರ ಕೊಟ್ಟೆ. ಆದರೂ ನನಗೆ ದಂಡ ವಿಧಿಸಿದ್ದರು. ಇಂಥ ಸಮಯದಲ್ಲಿ ಶೇ 10ರಷ್ಟು ಬಸ್ ಚಾಲಕರು ಮಾತ್ರ ಹೆಣ್ಣುಮಕ್ಕಳ ಸಮಸ್ಯೆ ಅರ್ಥ ಮಾಡಿಕೊಳ್ಳುತ್ತಾರಷ್ಟೆ. ಹಿಂಸೆಯಾದರೆ ಮಾರ್ಗ ಮಧ್ಯೆ ಇಳಿದುಕೊಳ್ಳುವ ಅನುಕೂಲವೂ ಮೂಲಸೌಕರ್ಯವೂ ನಮಗಿಲ್ಲ. ಹೀಗಾಗಿ ಒಬ್ಬ ಮಹಿಳೆಯಾಗಿ, ಮಹಿಳಾ ಕಂಡಕ್ಟರ್ ಆಗಿ ನಾನು ಸರ್ಕಾರದ ಈ ನಿರ್ಧಾರವನ್ನು ಸ್ವಾಗತಿಸುತ್ತೇನೆ.

ಜ್ಯೋತಿ , ಬಿಎಂಟಿಸಿ ಬಸ್ ಚಾಲಕಿ



ನಿಜಕ್ಕೂ ಒಳ್ಳೆಯ ಸಂಗತಿ

ಮುಟ್ಟಿನ ಸಂದರ್ಭದಲ್ಲಿ ದೇಹ ಹಾಗೂ ಮನಸ್ಸು ಹಲವು ರೀತಿಯ ಏರಿಳಿತಗಳನ್ನು ಕಾಣುತ್ತದೆ. ಅದು ಅನುಭವಿಸಿದವರಿಗೆ ಮಾತ್ರ ಗೊತ್ತಿರುತ್ತದೆ. ಹಾಗಾಗಿ, ಇಂಥ ಸಂದರ್ಭದಲ್ಲಿ ಸ್ವಲ್ಪ ಸಮಯ ವಿಶ್ರಾಂತಿ ಸಿಕ್ಕರೂ ಹೆಣ್ಣುಮಕ್ಕಳು ಮತ್ತೆ ಕೆಲಸದಲ್ಲಿ ಆಸಕ್ತಿಯಿಂದ ತೊಡಗಿಕೊಳ್ಳಲು ಸಹಾಯವಾಗುತ್ತದೆ. ಮುಟ್ಟಿನ ಸಂದರ್ಭದಲ್ಲಿ ಒಂದು ರಜೆ ಸಿಗುವುದು ನಿಜಕ್ಕೂ ಒಳ್ಳೆಯ ಸಂಗತಿ. ಮೊದಲಿಗೆ, ಹೆಣ್ಣುಮಕ್ಕಳಿಗೆ ಆಗುವ ಈ ಕಷ್ಟವನ್ನು ಒಪ್ಪಿಕೊಂಡು, ಅದಕ್ಕೆ ಅನುಗುಣವಾಗಿ ಯೋಚಿಸಿರುವುದು ಒಳ್ಳೆಯ ಬೆಳವಣಿಗೆ. ಸೂಕ್ತ ರೀತಿಯಲ್ಲಿ ಸ್ಪಂದಿಸಿರುವ ಸರ್ಕಾರದ ಈ ನಡೆಯನ್ನು ಶ್ಲಾಘಿಸುತ್ತೇನೆ. ಇದರ ನಡುವೆ, ಮುಟ್ಟಿನ ನೋವು ಎಲ್ಲರಿಗೂ ಒಂದೇ ರೀತಿ ಇರುವುದಿಲ್ಲ ಎನ್ನುವುದೂ ನಿಜ. ವೈಯಕ್ತಿಕ ನೋವಿನ ನಡುವೆಯೂ ವೃತ್ತಿಪರವಾಗಿಯೂ ಹೆಣ್ಣುಮಕ್ಕಳು ಯೋಚಿಸಬೇಕು.

ಸಾರಾ ಫಾತಿಮಾ
ಡಿಸಿಪಿ, ಆಗ್ನೇಯ ವಿಭಾಗ



‘ಹೆಚ್ಚುವರಿ ಹೊರೆ’ಯಲ್ಲ

ಉದ್ಯೋಗಸ್ಥ ಮಹಿಳೆಯರ ಪರವಾಗಿ ಸರ್ಕಾರ ಉತ್ತಮವಾದ ನಿರ್ಣಯ ಕೈಗೊಂಡಿದೆ. ಆದರೆ ನಮ್ಮ ನಟನಾ ಕ್ಷೇತ್ರಕ್ಕೆ ಇದು ಅನ್ವಯಿಸದು. ಶೂಟಿಂಗ್ ಇದ್ದಾಗ ಮುಟ್ಟಿನ ರಜೆ ಪಡೆಯಲೇಬೇಕಾದದ್ದು ಅನಿವಾರ್ಯವಾದರೆ ಅನಾರೋಗ್ಯದ ಕಾರಣ ಹೇಳಿ ಬಿಡುವು ಪಡೆಯುತ್ತೇವೆ. ಆಗ ಬೇರೆ ಸೀನ್ ಶೂಟಿಂಗ್ ಮಾಡುತ್ತಾರೆ. ಎಲ್ಲರಿಗೂ ಈ ಬಗೆಯ ರಜೆಯ ಅಗತ್ಯ ಇಲ್ಲದೇ ಇರಬಹುದು. ಕೆಲವರಿಗೆ ಅದೊಂದು ತೀರಾ ಸಾಮಾನ್ಯವಾದ ಸಂಗತಿಯಾದರೆ, ಮತ್ತೆ ಕೆಲವರು ತುಂಬಾ ನೋವು, ಕಿರಿಕಿರಿ ಅನುಭವಿಸುತ್ತಾರೆ. ಉದ್ಯೋಗದಾತರು ಈ ರಜೆಯನ್ನು ಹೆಚ್ಚುವರಿ ಹೊರೆ ಎಂದು ಭಾವಿಸಿ ಮಹಿಳೆಯರನ್ನು ಕೆಲಸಕ್ಕೆ ನೇಮಿಸಿಕೊಳ್ಳುವಲ್ಲಿ ನಿರಾಸಕ್ತಿ ತೋರಬಾರದು. ಮಾನವೀಯ ನೆಲೆಯಲ್ಲಿ ಇದನ್ನು ಪರಿಗಣಿಸಬೇಕು, ಅವರ ಕಷ್ಟಕ್ಕೆ ಸ್ಪಂದಿಸಬೇಕು

ಐಶಾನಿ ಶೆಟ್ಟಿ, ನಟಿ



ಹೊಣೆಗಾರಿಕೆ ನಮ್ಮದೇ

ಸರ್ಕಾರದ ಈ ಕ್ರಮವು ಖಾಸಗಿ ಮತ್ತು ಸರ್ಕಾರಿ ಉದ್ಯೋಗ ವಲಯದಲ್ಲಿ ಒಂದೇ ರೀತಿ ಪ್ರಯೋಜನಕಾರಿ ಆಗಲಾರದು ಎನ್ನುವುದು ಗಮನಿಸಬೇಕಾದ ಅಂಶ. ಮುಟ್ಟಿನ ದಿನಗಳಲ್ಲಿ ಬಹುತೇಕ ಹೆಣ್ಣುಮಕ್ಕಳಲ್ಲಿ ದೈಹಿಕ ಮತ್ತು ಮಾನಸಿಕವಾಗಿ ಅನೇಕ ಬದಲಾವಣೆಗಳಾಗುವುದರಿಂದ, ಆ ದಿನಗಳಲ್ಲಿ ಸಿಗುವ ರಜೆಯು ಅವರನ್ನು ಸ್ವಲ್ಪ ಮಟ್ಟಿಗೆ ಒತ್ತಡ ಮುಕ್ತರನ್ನಾಗಿಸುತ್ತದೆ. ಹೆಣ್ಣಿನ ಋತುಚಕ್ರದ ಬಗ್ಗೆ ಸಾರ್ವಜನಿಕ ಸಂವೇದನೆಯನ್ನು ರೂಪಿಸಲು ಸಹಾಯವಾಗುತ್ತದೆ ಮತ್ತು ಹೆಣ್ಣುಮಕ್ಕಳು ತಮ್ಮ ಋತುಚಕ್ರದ ಬಗ್ಗೆ ಮುಕ್ತವಾಗಿ ಮಾತನಾಡುವ ವಾತಾವರಣವನ್ನು ಸೃಷ್ಟಿಸುತ್ತದೆ. ಆದರೆ, ಮನರಂಜನಾ ಕ್ಷೇತ್ರದಲ್ಲಿ ಈ ರಜೆಯಿಂದ ಪೂರ್ವನಿಗದಿತ ಕಾರ್ಯಕ್ರಮ ಅಥವಾ ಚಿತ್ರೀಕರಣಕ್ಕೆ ಅಡ್ಡಿಯಾಗಬಹುದು. ಇದರಿಂದ ಕಲಾವಿದರು ತಮ್ಮ ಅವಕಾಶವನ್ನು ಕಳೆದುಕೊಳ್ಳುವ ಸಾಧ್ಯತೆ ಇರುತ್ತದೆ. ಆದ್ದರಿಂದ ಅವಶ್ಯಕತೆ ಇದ್ದರೆ ಮಾತ್ರ ರಜೆ ತೆಗೆದುಕೊಳ್ಳುವ ಮೂಲಕ ನಾವೂ ನಮ್ಮ ಹೊಣೆಗಾರಿಕೆಯನ್ನು ತೋರುವುದು ಅಗತ್ಯ.

ಶೃತಿ ಪ್ರಹ್ಲಾದ್, ಗಾಯಕಿ



ಇರಲಿ ಸಂವೇದನೆ

ಮುಟ್ಟಿನ ಸಂದರ್ಭದಲ್ಲಿ ಮಹಿಳೆಯರಿಗೆ ವಿಶ್ರಾಂತಿ ಬೇಕು ಎನ್ನುವುದನ್ನೇ ಮರೆತಿದ್ದೇವೆ. ಉದ್ಯೋಗಸ್ಥ ಪುರುಷ ಮತ್ತು ಮಹಿಳೆಯರ ಜವಾಬ್ದಾರಿಗಳನ್ನು ಹೋಲಿಕೆ ಮಾಡಿದಾಗ ಮಹಿಳೆ ಮೇಲೆಯೇ ಹೊರೆ ಹೆಚ್ಚು. ಮಹಿಳೆಗೆ ಆ ದಿನಗಳಲ್ಲಿ ವಿಶ್ರಾಂತಿ ತೀರಾ ಅಗತ್ಯ ಎನ್ನುವುದನ್ನು ಸಮಾಜ ಒಪ್ಪಿಕೊಳ್ಳಬೇಕೆಂದರೆ ಸರ್ಕಾರ ಇಂಥ ಸಂವೇದನಾತ್ಮಕ ನಿರ್ಣಯಗಳನ್ನು ಕೈಗೊಳ್ಳುವುದು ಅವಶ್ಯ. ಲಿಂಗಸೂಕ್ಷ್ಮ, ಮಹಿಳಾಪರವಾದ ಸರ್ಕಾರದ ನಿರ್ಧಾರವು ಯಶಸ್ವಿಯಾಗಬೇಕಾದರೆ ಮೊದಲು ಗಂಡಸರನ್ನು ಸಂವೇದನಾಶೀಲರನ್ನಾಗಿ ಮಾಡಬೇಕು. ಆಗ ಮಹಿಳೆಯು ಆ ದಿನಗಳ ನೋವಿನ ಬಗ್ಗೆ ಮುಜುಗರ ಇಲ್ಲದೆ ಹೇಳಿಕೊಂಡು ರಜೆ ಪಡೆಯಬಹುದು. ಅಂತಹ ವಾತಾವರಣವನ್ನು ಉದ್ಯೋಗಸ್ಥ ಸಂಸ್ಥೆಗಳು ನಿರ್ಮಾಣ ಮಾಡಬೇಕು.

ಮಮತಾ ಸಾಗರ, ಕವಯಿತ್ರಿ

ನಿರೂಪಣೆ: ರೂಪಾ ಕೆ.ಎಂ., ಅಭಿಲಾಷ ಬಿ.ಸಿ., ಸಿಂಧು ಕೆ.ಟಿ., ಕೀರ್ತಿಕುಮಾರಿ ಎಂ., ಸುಕೃತ ಎಸ್.


LG
ಪೈ ಇಂಟರ್‌ನ್ಯಾಷನಲ್
Celebrating Trust Across Generations
ಮೆಗಾ ಫೆಸ್ಟಿವಲ್ ಸೇಲ್
ಗೆಲ್ಲಿರಿ 25 ಕಾರುಗಳು*
ಗೆಲ್ಲಿರಿ 17 ಕೋಟಿ
ಪೈ ಲಾಯಲ್ಟಿ ಪಾಯಿಂಟ್ಸ್*
Generations change, the celebrations continue with
LG – India's Most Trusted Brand*
CELEBRATION OFFERS
Up to 26%* Cashback (On Select Debit/Credit Cards)
Max. up to ₹50000 (On Select Models)
Fixed EMI ₹ 888* Onwards (On Select Models)
LG BEST Care Ask for AMC*
*Annual Maintenance Contract
LG OLED evo AI
3 YEAR WARRANTY
UP TO 26% CASHBACK Max. up to ₹26000
FIXED EMI STARTING FROM ₹2999*
RANGE STARTS FROM : ₹109990*
LG QNED evo AI
MiniLED
3 YEAR WARRANTY
UP TO 10% CASHBACK Max. up to ₹10000
FIXED EMI STARTING FROM ₹1999*
RANGE STARTS FROM : ₹45990*
LG NanoCell AI
3 YEAR WARRANTY
UP TO 10% CASHBACK Max. up to ₹10000
UP TO 30% OFF ON LG SOUNDBAR (With Select 4K TVs)
RANGE STARTS FROM : ₹36990*
LG UHD AI
3 YEAR WARRANTY
UP TO 10% CASHBACK Max. up to ₹7500
FIXED EMI STARTING FROM ₹1999*
RANGE STARTS FROM : ₹31990*
SOUND BAR
Dolby Atmos
World's 1st CENTRE UP-FIRING SPEAKER
NO DRILLING REQUIRED
UP TO 5% CASHBACK Max. up to ₹2500 (On Select Models)
FIXED EMI STARTING FROM ₹ 999*
RANGE STARTS FROM : ₹11799*
SIDE-BY-SIDE REFRIGERATOR
FREE* MINI REFRIGERATOR worth up to ₹13999* & ₹11999* (On Select Side-by-Side Refrigerators)
FIXED EMI STARTING FROM ₹2999*
RANGE STARTS FROM : ₹71990*
TOP FREEZER REFRIGERATOR
BOTTOM FREEZER REFRIGERATOR
FIXED EMI STARTING FROM ₹1499*
RANGE STARTS FROM : ₹23990*
SINGLE DOOR REFRIGERATOR
Smart Inverter Compressor
FIXED EMI STARTING FROM ₹999*
RANGE STARTS FROM : ₹12990*
FRONT LOAD WASHING MACHINE
DD MOTOR
FIXED EMI STARTING FROM ₹1999*
RANGE STARTS FROM : ₹29990*
TOP LOAD WASHING MACHINE
DD MOTOR
AI DD*
TurboWash*
FIXED EMI STARTING FROM ₹1499*
RANGE STARTS FROM : ₹18990*
DISHWASHER
INVERTER DIRECT DRIVE MOTOR
FIXED EMI STARTING FROM ₹2999* (On Select Models)
RANGE STARTS FROM : ₹46900*
AIR CONDITIONERS
New 2025 SERIES
6in1
10% RETURN AVAILABLE AS CASHBACK up to ₹4000*
FREE STANDARD INSTALLATION* on Split ACs
FIXED EMI STARTING FROM @ ₹1999* (Offer on 5 Star/Hot and Cold ACs)
RANGE STARTS FROM : ₹36990*
YOUR HOME CHEF Wi-Fi ENABLED MICROWAVE OVEN
40* SCAN TO COOK MENU
CHARCOAL Lighting Heater™
FREE* GLASS BOWL SET (On Select Convection Models)
FIXED EMI STARTING FROM ₹1499*
RANGE STARTS FROM : ₹7990*
AMERICAN EXPRESS
AXIS BANK
BOBCARD
DBS
FEDERAL BANK
HDFC BANK
ICICI Bank
IDFC FIRST Bank Credit & Debit Cards
J&K Bank
SBI card
PRODUCT & SERVICE RELATED ENQUIRIES +91 91084 44777
SERVICE/HELPLINE: 080-42 46 43 43 10AM TO 7PM
FOLLOW US!
FREE DELIVERY FOR REFRIGERATORS, WASHING MACHINES, LED TV'S
24 HOURS DELIVERY CHALLENGE*
GET 100% ADDITIONAL LUCKY DRAW COUPON* IF NOT DELIVERED WITHIN 24 HOURS (Within City Limits)
WE ARE CELEBRATING 220+ OUTLETS
STORE LOCATOR
*Terms and Conditions Apply. For more information please visit www.lg.com

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 **editpage@prajavani.co.in**

ಅಭಿಮತ



ಸುಭಾಷಿತ

ಒಡೆದ ಮಡಕೆಗೆ ಒತ್ತು ಮಣ್ಣ ಕೊಟ್ಟಡೆ ನಿಲಬಲ್ಲುದೆ?

–ಅಲ್ಲಮಪ್ರಭು

ಸಂಪಾದಕೀಯ

ದೆಹಲಿ: ಪಟಾಕಿಗೆ 'ಹಸಿರು' ನಿಶಾನೆ ಪರಿಸರ–ಆರೋಗ್ಯ ಕಾಳಜಿ ನಿರ್ಲಕ್ಷ್ಯ

ದೆಹಲಿ ಮತ್ತು ರಾಷ್ಟ್ರ ರಾಜಧಾನಿ ಪ್ರದೇಶಗಳಲ್ಲಿ (ಎನ್‌ಸಿಆರ್) ಪಟಾಕಿಗೆ ಹೇರಿದ್ದ ಸಂಪೂರ್ಣ ನಿರ್ಬಂಧವನ್ನು ತೆರವುಗೊಳಿಸಿ, ಅಕ್ಟೋಬರ್ 18ರಿಂದ 20ರವರೆಗೆ ಹಸಿರು ಪಟಾಕಿಗಳ ತಯಾರಿಕೆ, ಮಾರಾಟ ಮತ್ತು ಬಳಕೆಗೆ ಸುಪ್ರೀಂ ಕೋರ್ಟ್‌ ಅವಕಾಶ ಕಲ್ಪಿಸಿರುವುದು ದುರದೃಷ್ಟಕರ. ಪಟಾಕಿಗಳ ಮಾರಾಟ ಮತ್ತು ಬಳಕೆಗೆ ಆರು ವರ್ಷಗಳಿಂದ ಜಾರಿಯಲ್ಲಿದ್ದ ನಿರ್ಬಂಧವನ್ನು ಸಡಿಲಿಸಿ, ಹಸಿರು ಪಟಾಕಿ ಬಳಕೆಗೆ ಅನುಮತಿ ನೀಡುವಂತೆ ಕೇಂದ್ರ ಸರ್ಕಾರ ಮತ್ತು ದೆಹಲಿ ಸರ್ಕಾರಗಳು ಮಾಡಿಕೊಂಡಿದ್ದ ಮನವಿಯನ್ನು ಸುಪ್ರೀಂ ಕೋರ್ಟ್‌ ಪುರಸ್ಕರಿಸಿದೆ. ಇದರಿಂದಾಗಿ, ಮುಂದಿನ ವಾರದ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಪಟಾಕಿಗಳ ಮಾರಾಟ ಮತ್ತು ಬಳಕೆಗೆ ಷರತ್ತುಬದ್ಧ ಅವಕಾಶ ದೊರೆತಿದೆ. ರಾಷ್ಟ್ರ ರಾಜಧಾನಿ ಪ್ರದೇಶದಲ್ಲಿ ವಾಯುಮಾಲಿನ್ಯ ಉಲ್ಬಣಗೊಳ್ಳುತ್ತದೆ ಹಾಗೂ ಜನರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಉಂಟಾಗುತ್ತದೆ ಎನ್ನುವ ಕಾರಣಕ್ಕಾಗಿ ಪಟಾಕಿ ತಯಾರಿಕೆ–ಬಳಕೆಯ ಮೇಲೆ ಸಂಪೂರ್ಣ ನಿರ್ಬಂಧ ವಿಧಿಸಲಾಗಿತ್ತು. ಈ ನಿರ್ಬಂಧವನ್ನು ಸಡಿಲಿಸಿರುವ ಸುಪ್ರೀಂ ಕೋರ್ಟ್‌, ಇದೊಂದು ತಾತ್ಕಾಲಿಕ ಕ್ರಮವಾಗಿದ್ದು, ಪರಿಸರ ಕಾಳಜಿಗೆ ಸಂಬಂಧಿಸಿದಂತೆ ರಾಜಿ ಮಾಡಿಕೊಳ್ಳದೆ ಪಟಾಕಿಗಳ ಬಳಕೆಗೆ ಅವಕಾಶ ಕಲ್ಪಿಸಬೇಕಾಗಿದೆ ಎಂದು ಹೇಳಿದೆ. ಪಟಾಕಿ ಉದ್ಯಮದಲ್ಲಿ ತೊಡಗಿಕೊಂಡಿರುವವರ ಹಿತಾಸಕ್ತಿ ಹಾಗೂ ಪರಿಸರ ಕಾಳಜಿಗೆ ಸಂಬಂಧಿಸಿದಂತೆ, ವಿರೋಧಾಭಾಸದ ಹಿತಾಸಕ್ತಿಗಳ ಸಂದರ್ಭದಲ್ಲಿ ಸಮತೋಲನದ ದಾರಿಯೊಂದನ್ನು ಕಂಡುಕೊಳ್ಳುವ ಅಗತ್ಯವನ್ನು ನ್ಯಾಯಾಲಯ ಪ್ರಸ್ತಾಪಿಸಿದೆ.



ದೆಹಲಿಯಲ್ಲಿ ಹಸಿರು ಪಟಾಕಿಗಳ ಬಳಕೆಗೆ ಸುಪ್ರೀಂ ಕೋರ್ಟ್‌ ಷರತ್ತುಬದ್ಧ ಅನುಮತಿ ನೀಡಿದೆ. ಆ ಷರತ್ತುಗಳ ಪಾಲನೆ ಕಾಗದದ ಮೇಲಷ್ಟೇ ಆದಲ್ಲಿ ಅಚ್ಚರಿಯೇನಿಲ್ಲ.

ಪರಿಸರ ಮಾಲಿನ್ಯದ ದೃಷ್ಟಿಯಿಂದ ಸ್ವೀಕಾರಾರ್ಹವಲ್ಲದ ಹಸಿರು ಪಟಾಕಿಗಳನ್ನು ಪರಿಚಯಿಸುವ ಸರ್ಕಾರದ ಚಿಂತನೆ ಕಾನೂನಿನ ಕಣ್ಣಿಗೆ ಮಣ್ಣು ಎರಚುವಂತಹದ್ದು ಹಾಗೂ ರಾಜಕೀಯ ಉದ್ದೇಶಗಳನ್ನು ಹೊಂದಿರುವಂತಹದ್ದಾಗಿದೆ. ಹಸಿರು ಪಟಾಕಿಗಳು ತಮ್ಮ ಹೆಸರಿಗೆ ತಕ್ಕಂತೆ ಪರಿಸರಕ್ಕೆ ಪೂರಕ ಅಥವಾ ಸುರಕ್ಷಿತ ಅಲ್ಲ. ಹಸಿರು ಪಟಾಕಿ ಎನ್ನುವ ಪರಿಕಲ್ಪನೆಯೇ ವಿರೋಧಾಭಾಸದಿಂದ ಕೂಡಿದೆ. ಸಾಂಪ್ರದಾಯಿಕ ಪಟಾಕಿಗಳಿಂತಲೂ ಶೇ 30ರಷ್ಟು ಕಡಿಮೆ ಮಾಲಿನ್ಯವನ್ನು ಉಂಟುಮಾಡುತ್ತವೆ ಹಾಗೂ ಭಾರಲೋಹಗಳನ್ನು ಕಡಿಮೆ ಪ್ರಮಾಣದಲ್ಲಿ ಹೊಂದಿವೆ ಎನ್ನುವುದು ನಿಜವಾದರೂ, ದೆಹಲಿಯ ಪರಿಸರ ಮತ್ತು ನಾಗರಿಕರ ಆರೋಗ್ಯದ ಮೇಲೆ ಹಸಿರು ಪಟಾಕಿಗಳು ಉಂಟು ಮಾಡುವ ಪರಿಣಾಮ ಗಂಭೀರವಾದುದೇ ಆಗಿದೆ; ಮಕ್ಕಳು, ಹಿರಿಯ ನಾಗರಿಕರು ಹಾಗೂ ಆರೋಗ್ಯದ ಸಮಸ್ಯೆಗಳನ್ನು ಹೊಂದಿರುವವರು ಹೆಚ್ಚಿನ ತೊಂದರೆ ಅನುಭವಿಸಬೇಕಾಗುತ್ತದೆ. ಹಸಿರು ಪಟಾಕಿಗಳ ಬಳಕೆಗೆ ನ್ಯಾಯಾಲಯ 2018ರಲ್ಲಿ ಅವಕಾಶ ಕಲ್ಪಿಸಿತ್ತಾದರೂ, ಹಸಿರು ಪಟಾಕಿ ಮತ್ತು ಸಾಂಪ್ರದಾಯಿಕ ಪಟಾಕಿಗಳ ವಿಂಗಡಣೆ ಕಷ್ಟಕರ ಎನ್ನುವ ಕಾರಣ ನೀಡಿ, ಎಲ್ಲ ಬಗೆಯ ಪಟಾಕಿ ಮಾರಾಟ ಮತ್ತು ಬಳಕೆಯನ್ನು ದೆಹಲಿ ಸರ್ಕಾರ 2020ರಲ್ಲಿ ಸಂಪೂರ್ಣವಾಗಿ ನಿಷೇಧಿಸಿತ್ತು.

ನಾಗರಿಕರ ಆರೋಗ್ಯ ಹಾಗೂ ಪರಿಸರ ಕಾಳಜಿಯನ್ನು ಗಮನದಲ್ಲಿರಿಸಿಕೊಂಡು ರಾಷ್ಟ್ರ ರಾಜಧಾನಿ ವ್ಯಾಪ್ತಿಯಲ್ಲಿ ಯಾವುದೇ ಬಗೆಯ ಪಟಾಕಿಯ ತಯಾರಿಕೆ, ಮಾರಾಟ ಮತ್ತು ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸುವ ಕ್ರಮವನ್ನು ಸರ್ಕಾರಗಳು ಕೈಗೊಳ್ಳುವುದು ಅನಿವಾರ್ಯ; ಇದಕ್ಕೆ ಬದಲಾಗಿ, ತಮ್ಮ ರಾಜಕೀಯ ಹಿತಾಸಕ್ತಿಗಾಗಿ ಅನುಮಾನಕ್ಕೆ ಆಸ್ಪದ ಕಲ್ಪಿಸುವ ಕ್ರಮಗಳನ್ನು ಕೈಗೊಳ್ಳುತ್ತಿವೆ. ಹಸಿರು ಪಟಾಕಿ ಬಳಕೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ ಗೊತ್ತುಪಡಿಸಿರುವ ಹಾಗೂ ಸರ್ಕಾರ ಜಾರಿಗೊಳಿಸುವುದಾಗಿ ಒಪ್ಪಿಕೊಂಡಿರುವ ಷರತ್ತುಗಳು, ಸುರಕ್ಷತಾ ಕ್ರಮಗಳು ಹಾಗೂ ಮುನ್ನೆಚ್ಚರಿಕೆಗಳು ಉಲ್ಲಂಘನೆಯಾಗುವುದರಲ್ಲಿ ಯಾವುದೇ ಅನುಮಾನವಿಲ್ಲ. ಅಂತಿಮವಾಗಿ, ಕಾನೂನಿಗೆ ಸಂಬಂಧಿಸಿದ ಸಂಗತಿಗಳು ಕಾಗದದ ಮೇಲಷ್ಟೇ ಪಾಲನೆಯಾಗುತ್ತವೆ. ಸಂಪೂರ್ಣ ನಿಷೇಧವಾಗಿದ್ದಾಗಲೂ, ಅದರ ಅನುಷ್ಠಾನ ದುರ್ಬಲವಾಗಿತ್ತು ಎನ್ನುವುದನ್ನು ನ್ಯಾಯಾಲಯವೂ ಗಮನಿಸಿರುವಾಗ, ಆಂಶಿಕ ನಿರ್ಬಂಧಗಳು ಪಾಲನೆಯಾಗುತ್ತವೆ ಎಂದು ಹೇಳಲಾಗದು. ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸಿದ ವಿಷಯಗಳಿಗೆ ಸಂಬಂಧಿಸಿದಂತೆ ಸಮತೋಲನದ ಧೋರಣೆಯ ಅಳವಡಿಕೆ ಎನ್ನುವ ಚಿಂತನೆಯೂ ಸಮಸ್ಯಾತ್ಮಕವಾದುದು. ಪಟಾಕಿಗಳನ್ನು ಸಂಪೂರ್ಣವಾಗಿ ನಿಷೇಧಿಸುವುದು ಹಾಗೂ ಆ ನಿರ್ಬಂಧವನ್ನು ಪರಿಣಾಮಕಾರಿಯಾಗಿ, ಪ್ರಾಮಾಣಿಕವಾಗಿ ಜಾರಿಗೊಳಿಸುವುದರಲ್ಲಷ್ಟೇ ಸಾರ್ವಜನಿಕ ಹಿತ ಅಡಗಿದೆ.

ತಪ್ಪು ಸಮೀಕರಣ



ಭಾರತವನ್ನು ಪ್ರೀತಿಸುವವರು ಆರ್‌ಎಸ್‌ಎಸ್ ಅನ್ನು ಪ್ರೀತಿಸುತ್ತಾರೆ ಎಂಬ ಘೋಷಣೆಯೊಂದು ಕೇಳಿಬರುತ್ತಿದೆ. ನೀವು ಆರ್‌ಎಸ್‌ಎಸ್ ಬಗ್ಗೆ ಏನು ಬೇಕಾದರೂ ಹೇಳಿಕೊಳ್ಳಿ. ಅದು ನಿಮ್ಮ ಹಕ್ಕು. ಆದರೆ, ಭಾರತವನ್ನು ಆರ್‌ಎಸ್‌ಎಸ್ ಜೊತೆ ಸಮೀಕರಿಸುವುದು ಎಲ್ಲ ರೀತಿಯಿಂದಲೂ ತಪ್ಪು.

ಕೆ. ವೆಂಕಟರಾಜು, ರಂಗಕರ್ಮಿ, ಫೇಸ್‌ಬುಕ್‌ನಿಂದ

ಕಿಡಿನುಡಿ



ಸಂಸ್ಥೆಗಳನ್ನು ಜಗದಗಲ ಬೆಳೆಸಲು ಜನರಿಂದ ಆಯ್ಕೆಯಾದ ಸರ್ಕಾರದಿಂದಲೇ ಅನೇಕ ಸವಲತ್ತು-ಗಳನ್ನು ಪಡೆಯುವ ಸಂಸ್ಥೆಗಳ ಮಾಲೀಕರು, ಜನರ ಏಳಿಗೆಗಾಗಿ ನಡೆಯುತ್ತಿರುವ ಸಮೀಕ್ಷೆಯನ್ನೇ ತಿರಸ್ಕರಿಸುವುದು ಆತ್ಮಸಾಕ್ಷಿಗೆ ಬಗೆಯುವ ದ್ರೋಹ ಮಾತ್ರವಲ್ಲ, ಉದ್ಧಟತನದ ಪರಮಾವಧಿ. ಸರಳತೆ ಶ್ರೀಮಂತಿಕೆಯನ್ನು ಮುಚ್ಚಿಡಬಹುದೇ ಹೊರತು, ಜಾತಿಗ್ರಸ್ತ ಮನಃಸ್ಥಿತಿಯನ್ನಲ್ಲ.

ಬಿ.ಕೆ. ಹರಿಪ್ರಸಾದ್, ವಿಧಾನ ಪರಿಷತ್ ಸದಸ್ಯ

25 ವರ್ಷಗಳ ಹಿಂದೆ

ಬುಧವಾರ, 18-10-2000

● **ರಾಜ್ಯದ ಎಲ್ಲ ಪ್ರದೇಶಗಳಲ್ಲಿ ಮರು ಮೋಜಣಿ: ಸರ್ಕಾರದ ನಿರ್ಧಾರ**

ಬೆಂಗಳೂರು, ಅ. 17– ಆಸ್ತಿಗಳಿಗಾಗಿ ನಡೆಯುತ್ತಿರುವ ವ್ಯಾಜ್ಯಗಳನ್ನು ಕಡಿಮೆ ಮಾಡುವ ದೃಷ್ಟಿಯಿಂದ ರಾಜ್ಯದ ಎಲ್ಲಾ ಪ್ರದೇಶಗಳಲ್ಲಿ 'ಮರು ಮೋಜಣಿ' (ಸರ್ವೆ) ನಡೆಸುವ ಬೃಹತ್ ಯೋಜನೆಯನ್ನು ರಾಜ್ಯದ ಇತಿಹಾಸದಲ್ಲಿ ಮೊದಲ ಬಾರಿಗೆ ಜಾರಿಗೊಳಿಸಲು ರಾಜ್ಯ ಸರ್ಕಾರ ಕ್ರಮ ತೆಗೆದುಕೊಂಡಿದೆ.

ಮುಂದಿನ 10 ವರ್ಷಗಳಲ್ಲಿ ಈ ಯೋಜನೆಯನ್ನು ಪೂರ್ಣಗೊಳಿಸಲು ನಿರ್ಧರಿಸಲಾಗಿದ್ದು, ಪ್ರಾರಂಭದಲ್ಲಿ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕನ್ನು ಇದಕ್ಕಾಗಿ ಆರಿಸಿಕೊಳ್ಳಲಾಗಿದೆ. ಅತ್ಯಾಧುನಿಕ ಗ್ಲೋಬಲ್ ಪೊಸಿಷನಿಂಗ್ ವ್ಯವಸ್ಥೆಯನ್ನು ಅಳವಡಿಸಿಕೊಂಡು ಈ ಕೆಲಸ ಮಾಡಲಾಗುತ್ತದೆ.

● **ಸಹಸ್ರಮಾನದ ಮೊದಲ ತೀರ್ಥೋದ್ಭವ**

ತಲಕಾವೇರಿ (ಕೊಡಗು), ಅ. 17– ಬ್ರಹ್ಮಗಿರಿ ತಪ್ಪಲಿನ ತಲಕಾವೇರಿಯಲ್ಲಿ ಜಮಾಯಿಸಿದ್ದ ಸಹಸ್ರಾರು ಸಂಖ್ಯೆಯ ಯಾತ್ರಾರ್ಥಿಗಳ ಸಮ್ಮುಖದಲ್ಲಿ ಇಂದು ಮಧ್ಯಾಹ್ನ 12.31ರ ತುಲಾ ಸಂಕ್ರಮಣ ಮುಹೂರ್ತದಲ್ಲಿ ಕಾವೇರಿ ತೀರ್ಥ ಆವಿರ್ಭವಿಸಿತು.

ಜೀವನದಿ ಕಾವೇರಿಯ ಉಗಮಸ್ಥಾನದಿಂದ ತಲಕಾವೇರಿಗೆ ಹೊಂದಿಕೊಂಡ ಕೊಳದ ಬಳಿ ತೀರ್ಥ ಉದ್ಭವಕ್ಕೆ ಅರ್ಧ ಗಂಟೆಗೆ ಮುನ್ನವೇ ಪೊಲೀಸ್ ಬಿಗಿ ಪಹರೆಯನ್ನು ಭೇದಿಸಿ ಭಕ್ತ ಸಮೂಹವೂ ಕಾದು ನಿಂತಿತ್ತು.

75 ವರ್ಷಗಳ ಹಿಂದೆ

ಬುಧವಾರ, 18-10-1950

● **ಕೇಂಬ್ರಿಡ್ಜ್ ವಿಶ್ವವಿದ್ಯಾಲಯ ಉಪಸ್ಥಾನಪತಿ ಪದವಿಗೆ ಪಂಡಿತ ನೆಹರೂ ಹೆಸರು?**

ಲಂಡನ್, ಅ. 17– ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದ ಪತ್ರಿಕೆ 'ವಾರ್ಸಿಟಿ'ಯು ಫೀಲ್ಡ್ ಮಾರ್ಷಲ್ ಸ್ಮಟ್ಸ್‌ರ ಮರಣಾನಂತರ ಪಂಡಿತ ನೆಹರೂ ಅವರನ್ನು, ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದ ಸ್ಥಾನಪತಿ ಪದವಿಗೆ ಆಯ್ಕೆ ಮಾಡಿದೆ.

ಈ ಪದವಿಗೆ ಅರ್ಲ್ ಮೌಂಟ್ ಬ್ಯಾಟನ್‌ರವರು ಬರುವ ನಿರೀಕ್ಷೆ ಇದೆಯೆಂದೂ 'ವಾರ್ಸಿಟಿ' ಪತ್ರಿಕೆಯು ತಿಳಿಸಿದ್ದು, 'ನೆಹರೂ ಏಕಾಗಬಾರದು?' ಎಂದು ಕೇಳಿದೆ.

ಕಾಮನ್‌ವೆಲ್ತ್ ಕೂಟದಲ್ಲಿ ನೆಹರೂರವರು ಸ್ಮಟ್ಸ್‌ರವರಷ್ಟೇ ಗೌರವಾನ್ವಿತರಾಗಿರುವರೆಂದೂ ಪತ್ರಿಕೆಯು ಸೂಚಿಸಿದೆ.

ವಲಸೆಯ ಸುಳಿಯಲ್ಲಿ ದೇಶಪ್ರೀತಿ



ವಿಶ್ಲೇಷಣೆ

ಕ್ಯಾಪ್ಟನ್ ಜಿ.ಆರ್. ಗೋಪಿನಾಥ್

ಹಿಂದಿನ ತಲೆಮಾರುಗಳ ಪ್ರತಿಭಾವಂತರು ವಿದೇಶಗಳಿಗೆ ಹೋಗಿ ಕಲಿತರೂ, ಅಲ್ಲಿನ ಅವಕಾಶಗಳಿಗೆ ಮಾರುಹೋಗದೆ ತವರಿಗೆ ಮರಳಿ ದೇಶಸೇವೆಯಲ್ಲಿ ತೊಡಗುತ್ತಿದ್ದರು. ಈಗ, ಇಲ್ಲಿಂದ ಹೋದವರು ಮರಳಲು ಮನಸ್ಸು ಮಾಡದ ಸ್ಥಿತಿ! ಈ ಬದಲಾವಣೆ ಏನನ್ನು ಹೇಳುತ್ತದೆ?

ಕಳೆದ ಕೆಲವು ದಶಕಗಳಿಂದ ಭಾರತದಲ್ಲಿ ಭ್ರಮನಿರಸನಗೊಂಡ ನಮ್ಮ ಯುವಕರು ಪಶ್ಚಿಮವನ್ನೇ ತಮ್ಮ ನೆಲೆಯನ್ನಾಗಿಸಿಕೊಳ್ಳಲು ಆರಂಭಿಸಿದರು. 1960ರ ದಶಕದ ಮಧ್ಯಭಾಗದಲ್ಲಿ ಪ್ರಾರಂಭವಾದ ಈ ವಲಸೆ ಅನಂತರದಲ್ಲಿ ಅಮೆರಿಕದ ಶ್ರೀಮಂತ ವೈದ್ಯರು ಮತ್ತು ಎಂಜಿನಿಯರ್‌ಗಳ ಯಶಸ್ವಿ ಕಥೆಗಳ ಜೊತೆ ಜೊತೆಗೇ ಹೆಚ್ಚುತ್ತಹೋಯಿತು.

ಪೆಪ್ಸಿ ಕಂಪನಿಯ ಇಂದಿರಾ ನೂಯಿ, ಗೂಗಲ್‌ನ ಸುಂದರ್ ಪಿಚೈ ಮತ್ತು ಮೈಕ್ರೊಸಾಫ್ಟ್‌ನ ಸತ್ಯ ನಾಡೆಲ್ಲಾ ಮತ್ತು ಇತರರ ಹೆಜ್ಜೆಗಳನ್ನು ಅನುಸರಿಸಿ ಈಗ ಫಾರ್ಚೂನ್ 500 ಕಂಪನಿಯ ಸಿಇಒ ಆಗಿ ಮತ್ತೊಬ್ಬ ಭಾರತೀಯ ನೇಮಕಗೊಂಡಿದ್ದಾರೆ ಎಂಬ ಸುದ್ದಿ ಹೊರಬಿದ್ದಾಗ ಅಮೆರಿಕದಲ್ಲಿ ಭಾರತೀಯರ ಬಗ್ಗೆ ಉಕ್ಕಿ ಹರಿದ ಪ್ರಶಂಸೆಗಳೇ ಕೇಳಿಬಂದವು. ಇದರಿಂದ ಉಂಟಾದ ವಲಸೆಯು ಅನಂತರದಲ್ಲಿ ಪ್ರವಾಹವಾಗಿಯೇ ಮಾರ್ಪಟ್ಟಿತು. ಕಳೆದ ಐದು ದಶಕಗಳಿಂದ ನಿರಂತರವಾಗಿ ನಾವು ಭಾರತೀಯ ಪ್ರತಿಭೆಗಳನ್ನು ಕಳೆದುಕೊಳ್ಳುತ್ತಿದ್ದೇವೆ. ಹೀಗೆ ಹೊರಹೊರಟ ಯುವಕ–ಯುವತಿಯರು ತುಂಬ ಪ್ರತಿಭಾನ್ವಿತರು; ಮಾತ್ರವಲ್ಲ, ಅವರೆಲ್ಲರೂ ನಮ್ಮ ಪ್ರತಿಷ್ಠಿತ ಸಂಸ್ಥೆಗಳಿಂದ ಸಬ್ಸಿಡಿ ರೂಪದಲ್ಲಿ ಶಿಕ್ಷಣ ಪಡೆದುಕೊಂಡು ವಲಸೆ ಹೋದವರು.

ಇದೀಗ 'ಟ್ರಂಪ್ ಶಾಕ್'! ಎಚ್‌-1ಬಿ ಉದ್ಯೋಗ ವೀಸಾವನ್ನು ಬಯಸುವ ಹೊಸ ಅರ್ಜಿದಾರರಿಗೆ ಈಗ ಒಂದು ಲಕ್ಷ ಡಾಲರ್ ಶುಲ್ಕ ವಿಧಿಸಲಾಗಿದೆ. ಯಾವುದೇ ಸೂಚನೆಯಿಲ್ಲದೆ ಕೆಲವು ವಾರಗಳ ಹಿಂದೆಯಷ್ಟೇ ಜಾರಿಗೆ ಬಂದ ವ್ಯವಸ್ಥೆ ಒಂದು ವಿಧದಲ್ಲಿ ಅವ್ಯವಸ್ಥೆಯನ್ನೇ ಸೃಷ್ಟಿಸಿತು. ಇನ್ನೇನು ಇಲ್ಲಿಂದ ವಿಮಾನವನ್ನು ಹತ್ತಿ ಹೊರಡಲು ಸಿದ್ಧರಾಗಿದ್ದವರನ್ನು ಕಂಗಾಲಾಗಿಸಿತು; ಈಗಾಗಲೇ ವೀಸಾವನ್ನು ಹೊಂದಿರುವವರನ್ನೂ ಆತಂಕಕ್ಕೆ ದೂಡಿತು. ಅಮೆರಿಕದ ಅಧ್ಯಕ್ಷ, ಯಾರ ಊಹೆಗೂ ನಿಲುಕದಂಥ ವ್ಯಕ್ತಿತ್ವದ ಡೊನಾಲ್ಡ್ ಟ್ರಂಪ್ ಆಳ್ವಿಕೆಯಲ್ಲಿ ಇವರೆಲ್ಲರೂ ಅನಿಶ್ಚಿತ ಸ್ಥಿತಿಯಲ್ಲಿದ್ದಾರೆ. ಅಮೆರಿಕ ಎಂಬ ಕುಬೇರಲೋಕವನ್ನು ಕುರಿತಾದ ಇವರೆಲ್ಲರ ಹತಾಶೆ–ಆಕರ್ಷಣೆಗಳ ಬಗ್ಗೆ ನನಗೆ ಅತೀವ ಸಂಕಟವಾಗುತ್ತಿದೆ.

ಲಕ್ಷಾಂತರ ವಲಸೆ ಕಾರ್ಮಿಕರು ನಮ್ಮಲ್ಲಿದ್ದಾರೆ. ಅನೇಕರು ಅರಬ್ ರಾಷ್ಟ್ರಗಳಲ್ಲಿ ಕಟ್ಟಡ ನಿರ್ಮಾಣದ ಕೆಲಸಗಾರರಾಗಿ, ತೈಲಬಾವಿಗಳ ಕೆಲಸಗಾರರಾಗಿ ದುಡಿಯುತ್ತಿದ್ದಾರೆ. ನರ್ಸ್‌ಗಳು, ಹೋಟೆಲ್ ಕಾರ್ಮಿಕರು – ಹೀಗೆ ನಾನಾ ರೀತಿಯ ದುಡಿತಗಳಲ್ಲಿ ತೊಡಗಿಕೊಂಡಿದ್ದಾರೆ. ವೈದ್ಯರು–ಎಂಜಿನಿಯರ್‌ಗಳಾಗಿರುವವರೂ ಉದ್ಯಮಿಗಳಾಗಿರುವವರೂ ಇದ್ದಾರೆ. ಸ್ಥಳೀಯ ಅರಬ್ಬರ ಸಂಖ್ಯೆಗಿಂತಲೂ ಹೆಚ್ಚಾಗಿರುವ ಈ ಕಾರ್ಮಿಕರು ಆ ದೇಶಗಳ ಆರ್ಥಿಕತೆಯ ಬೆನ್ನೆಲುಬಾಗಿದ್ದಾರೆ.

ಭಾರತದ ಹೊರಗೆ ಅವಕಾಶಗಳನ್ನು ಹುಡುಕುತ್ತಿರುವ ಅಕ್ರಮ ವಲಸಿಗರೂ ಇದ್ದಾರೆ; ಆದರೆ, ಹೆಚ್ಚುತ್ತಲೇ ಇರುವ ಈ ವರ್ಗವನ್ನು ದೇಶದ ಆರ್ಥಿಕತೆಯ ಭಾಗವಾಗಿಸಿಕೊಳ್ಳಲು ಸಾಧ್ಯವಾಗದಿರುವುದು ವಿಷಾದಕರ. ಇವರು ಕಪಟ ಏಜೆಂಟ್‌ಗಳ ಮೋಸದ ಜಾಲಕ್ಕೆ ಬಲಿಯಾಗುತ್ತಾರೆ. ಅಮೆರಿಕಕ್ಕೋ ಕೆನಡಾಕ್ಕೋ ಯುರೋಪಿಗೋ ಅಕ್ರಮವಾಗಿ ನುಸುಳಲು ಪ್ರಯತ್ನಿಸುತ್ತಾರೆ. ಈ ಪ್ರಯತ್ನದಲ್ಲಿ ಕೆಲವರು ಸಾವಿಗೆ ತುತ್ತಾಗುತ್ತಾರೆ; ಹಲವರು ಜೈಲು ಪಾಲಾಗುತ್ತಾರೆ; ಇನ್ನು ಕೆಲವರು ಗಡಿಪಾರಿಗೆ ಒಳಗಾಗುತ್ತಾರೆ.

ನಮ್ಮಲ್ಲಿ ಇನ್ನೊಂದು ವರ್ಗವಿದೆ; ಗುಜರಾತ್‌ನ ವ್ಯಾಪಾರಿ ಸಮುದಾಯ. ಮೊದಲು ಆಫ್ರಿಕಾದಲ್ಲಿ ನೆಲೆಸಿ, ನಂತರ ಅಲ್ಲಿಂದ ಹೊರದೂಡಲ್ಪಟ್ಟು, ಬ್ರಿಟನ್ ಮತ್ತು ಅಮೆರಿಕದಲ್ಲಿ ನೆಲೆ ಕಂಡುಕೊಂಡವರು. ಇವರು ಉದ್ಯಮಶೀಲರು, ಪರಿಶ್ರಮಿಗಳು; 'ಪಟೇಲ್ಸ್ ಮೋಟೆಲ್'ಗಳ ಹೆಸರಿನಲ್ಲಿ ಹೆದ್ದಾರಿ ಹೋಟೆಲ್ ಉದ್ಯಮದಲ್ಲಿ ಏಕಸ್ವಾಮ್ಯವನ್ನೇ ಸಾಧಿಸಿದ್ದಾರೆ.

ಸುಮಾರು ಒಂದು ಶತಮಾನದ ಹಿಂದೆ ಪಶ್ಚಿಮಕ್ಕೆ ಉನ್ನತ ವ್ಯಾಸಂಗಕ್ಕಾಗಿ ವಿದೇಶಕ್ಕೆ ಹೋಗಿದ್ದ ಹಲವರು ಭಾರತೀಯರು ಆ ದೇಶಗಳಲ್ಲಿಯ ಲಾಭದಾಯಕ ವೃತ್ತಿಜೀವನವನ್ನು ತ್ಯಜಿಸಿ, ಭಾರತಕ್ಕೆ ಮರಳಿದರು; ಅಲ್ಲಿಯೇ ಉಳಿಯುವ ಪ್ರಲೋಭನೆಗೂ ಅವರು ಸೋಲಲಿಲ್ಲ. ಅಂಥವರು ಭಾರತದ ಅತ್ಯಂತ ಕರಾಳ ಕಾಲದಲ್ಲಿಯೂ ಹಾಗೆಯೇ ನಡೆದುಕೊಂಡರು; ಬ್ರಿಟಿಷರಿಂದ ಸ್ವಾತಂತ್ರ್ಯವನ್ನು ಗಳಿಸಲು ಹೋರಾಡಿದವರಿಗೂ, ಬಡತನ, ಅಜ್ಞಾನ, ಸಾಮಾಜಿಕ ಅನಿಷ್ಟಗಳು ಮತ್ತು ಅನ್ಯಾಯಗಳನ್ನು ತೊಡೆದುಹಾಕಲು ಶ್ರಮಿಸಿದ ಅಸಂಖ್ಯಾತ ಜನರಿಗೂ ಸ್ಫೂರ್ತಿಯಾದರು. ಅವರು ಕಂಡ ಭಾರತವೂ ಇತರರು ಕಂಡ ಭಾರತವೇ ಆಗಿತ್ತು. ಆದರೆ, ಅವರು ಬೇರೆಡೆ ಅವಕಾಶಗಳು ಕಾಣಿಸಿದ ಕೂಡಲೇ ಭಾರತವನ್ನು ಜರಿದು, ಹೊರದೇಶದಲ್ಲಿ ತಮ್ಮ ಜೀವನವನ್ನು ರೂಪಿಸಿಕೊಳ್ಳಲು ಮುಂದಾಗದೆ, ಸ್ವದೇಶವನ್ನು ಉತ್ತಮಗೊಳಿಸಲು ಪ್ರಯತ್ನಿಸಿದರು. ಅವರ ತ್ಯಾಗ ಪ್ರಶಂಸಾರ್ಹ.

ದಕ್ಷಿಣ ಆಫ್ರಿಕಾದಲ್ಲಿ ಲಾಭದಾಯಕ ಕಾನೂನು ವೃತ್ತಿಯಲ್ಲಿದ್ದ ಗಾಂಧಿಯವರು ಭಾರತಕ್ಕೆ ಮರಳಿದ್ದು ಎಲ್ಲರಿಗೂ ತಿಳಿದಿದೆ. ಅಂಬೇಡ್ಕರ್ ಅವರು ಅಮೆರಿಕದ ಕೊಲಂಬಿಯಾ ವಿಶ್ವವಿದ್ಯಾಲಯ ಮತ್ತು ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ – ಈ ಎರಡು ಅತ್ಯಂತ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಅಧ್ಯಯನ ಮಾಡಿದರು. ಮುಂದೆ ನಮ್ಮ ಸಂವಿಧಾನದ ಶಿಲ್ಪಿ ಎನಿಸಿಕೊಂಡರು. ಜವಾಹರಲಾಲ್ ನೆಹರೂ, ಹ್ಯಾರೋ ಮತ್ತು ಕೇಂಬ್ರಿಡ್ಜ್‌ನಲ್ಲಿ ಶಿಕ್ಷಣ ಪಡೆದು ಇನ್ನರ್ ಟೆಂಪಲ್‌ನಲ್ಲಿ ಕಾನೂನು ತರಬೇತಿಯನ್ನು ಪಡೆದ ನಂತರ ಬ್ಯಾರಿಸ್ಟರ್ ಆಗಿ, ಕೊನೆಗೆ ಎಲ್ಲವನ್ನೂ ತ್ಯಜಿಸಿ ಸ್ವಾತಂತ್ರ್ಯ ಚಳವಳಿಯಲ್ಲಿ ಸೇರಲು ಭಾರತಕ್ಕೆ ಹಿಂದಿರುಗಿದರು. ಕೇಂಬ್ರಿಡ್ಜ್‌ನಿಂದ ಹಿಂದಿರುಗಿದ ಬೋಸ್ ಕಾಂಗ್ರೆಸ್‌ನಲ್ಲಿ ಮತ್ತು ನಂತರ ಆಜಾದ್ ಹಿಂದ್ ಫೌಜ್‌ನಲ್ಲಿ ವಹಿಸಿದ ಧೈರ್ಯಶಾಲಿ ನಾಯಕತ್ವದ ಕಥೆ ರೋಮಾಂಚನಕಾರಿಯಾಗಿದೆ. ಸರ್ದಾರ್ ಪಟೇಲ್ ಹಣವನ್ನು ಕೂಡಿಟ್ಟು ಲಂಡನ್‌ಗೆ ಹೋದವರು; ಮಿಡಲ್ ಟೆಂಪಲ್ ಇನ್‌ನಲ್ಲಿ ಕಾನೂನು ತರಬೇತಿ ಪಡೆದು ಬ್ಯಾರಿಸ್ಟರ್ ಆದರು. ಆದರೆ, ಸ್ವಾತಂತ್ರ್ಯ ಹೋರಾಟದಲ್ಲಿ ಸೇರಲು ಭಾರತಕ್ಕೆ ಹಿಂದಿರುಗಿದರು. ಕೇಂಬ್ರಿಡ್ಜ್‌ನಿಂದ ಹಿಂದಿರುಗಿದ ಅರವಿಂದ ಘೋಷ್ ಕ್ರಾಂತಿಕಾರರಾದರು; ಯೋಗಿಗಳಾದರು. ಕಿಂಗ್ಸ್ ಕಾಲೇಜ್ ಲಂಡನ್ ಮತ್ತು ಕೇಂಬ್ರಿಡ್ಜ್‌ಗಳ ವಿದ್ಯಾರ್ಥಿನಿ 'ಭಾರತದ ಕೋಗಿಲೆ' ಸರೋಜಿನಿ ನಾಯ್ಡು ಸ್ವಾತಂತ್ರ್ಯ ಸಂಗ್ರಾಮದಲ್ಲಿ ತೊಡಗಿಕೊಂಡರು. ಲಿಂಕನ್ಸ್ ಇನ್‌ನಿಂದ ಪದವಿಯನ್ನು ಪಡೆದ ಶ್ಯಾಮ ಪ್ರಸಾದ್ ಮುಖರ್ಜಿ ಬ್ಯಾರಿಸ್ಟರ್ ಆದವರು, ಹಿಂದೂ ಮಹಾಸಭಾವನ್ನು ಮುನ್ನಡೆಸಿದರು; ಗಾಂಧಿಯವರ ಹತ್ಯೆಯ ನಂತರ ಅದರಿಂದ ದೂರ ಸರಿದರು, ನೆಹರೂ ಸಂಪುಟದಲ್ಲಿ ಸಚಿವರಾದರು. ಬಳಿಕ ರಾಜೀನಾಮೆ ನೀಡಿ ಭಾರತೀಯ ಜನಸಂಘವನ್ನು ಸ್ಥಾಪಿಸಿದರು.

ಇವರೆಲ್ಲರ ಜೀವನ–ಹೋರಾಟಗಳು, ಸಂಕಲ್ಪಶಕ್ತಿ, ಸಮಾಜ ಸುಧಾರಣೆಯ ಉತ್ಸಾಹ ಮತ್ತು ಅಕ್ಷಯ ಆಶಾವಾದ, ದೇಶಪ್ರೀತಿಗಳು ಚೇತೋಹಾರಿಯಾಗಿವೆ. ಬ್ರಿಟಿಷರ ದಬ್ಬಾಳಿಕೆಯ ಕರಾಳ ಅವಧಿಯಲ್ಲಿ ಆಂತರಿಕ ಕಲಹಗಳಿಂದ ದೇಶ ಛಿದ್ರಗೊಂಡಿದ್ದಾಗ, ಜಾತೀಯತೆ–ಕೋಮುವಾದಗಳ ಸುಳಿಯಲ್ಲಿದ್ದಾಗ, ಬಡತನದಲ್ಲಿ ಮುಳುಗಿದ್ದ ಜನರಿಗಾಗಿ ವಿದೇಶಗಳಿಂದ ಇವರು ಮರಳಿದರು; ಪೆಟ್ಟು–ಬುಲೆಟ್ಟುಗಳನ್ನು ಎದುರಿಸಿದರು; ಜೈಲುವಾಸ ಅನುಭವಿಸಿದರು. ಈ ಅಸಾಧಾರಣ ವ್ಯಕ್ತಿಗಳು ನಮ್ಮ ಸಮಾಜದ ಕೇಡುಗಳನ್ನು ಸರಿಪಡಿಸುವ ಕಾಯಕದಲ್ಲಿ ತೊಡಗಿದರು. ಅವಕಾಶಗಳ ಕೊರತೆ, ಜಾತಿವಾದ ಮತ್ತು ದೋಷಪೂರಿತ ಮೀಸಲಾತಿ ವ್ಯವಸ್ಥೆ, ಸಾಮಾಜಿಕ ಮತ್ತು ಕೋಮು ಕಲಹಗಳು, ಭ್ರಷ್ಟಾಚಾರ ಮತ್ತು ಅರ್ಹತೆಗೆ ತಕ್ಕ ಫಲ ನೀಡದ ಸಮಾಜ – ಇಂಥವು ಈಗ ದೇಶವನ್ನು ತೊರೆದು ಅಮೆರಿಕವನ್ನು ಸೇರಲು ಬಯಸುತ್ತಿರುವವರಿಗೆ ಕಾರಣವಾಗುತ್ತಿವೆ ಎಂಬುದು ಆತಂಕದ ವಿಷಯ.

ನಮ್ಮ ಯುವಜನರು ನಮ್ಮ ಸಮಾಜದ ಸಮಸ್ಯೆಗಳಿಗೆ ವಿಮುಖರಾಗಿ ಪಶ್ಚಿಮದತ್ತ ಏಕೆ ಮುಖ ಮಾಡುತ್ತಿದ್ದಾರೆ? ಇಂದಿನವರಲ್ಲಿ ಅಂದಿನವರ ಉತ್ಸಾಹ ಏಕೆ ಕಾಣೆಯಾಗಿದೆ? ಜಾಗತೀಕರಣ ನಮ್ಮ ಉದಾತ್ತ ಭಾವನೆಗಳನ್ನು ಕೊಂದುಬಿಟ್ಟಿವೆಯೆ? ಪಶ್ಚಿಮದ ಐಷಾರಾಮಿತನದ ಅಂಧಾರಾಧನೆಯು ನಮ್ಮ ಇಂದ್ರಿಯಗಳನ್ನು ಮಂದಗೊಳಿಸಿವೆಯೆ? ಉತ್ತಮ ಉದ್ಯೋಗಗಳಿದ್ದರೂ ವಿದೇಶಗಳಲ್ಲಿ ನೆಲಸಿರುವವರು ಇಂದು ಹೆಚ್ಚು ಅಸುರಕ್ಷಿತ ಭಾವದಲ್ಲಿರುವುದು ಏಕೆ? ಅಬ್ಬರದ ದೇಶಭಕ್ತಿಯನ್ನು ಪ್ರತಿಪಾದಿಸುತ್ತಿರುವುದಾದರೂ ಏಕೆ?

ಸ್ವಾತಂತ್ರ್ಯಪೂರ್ವದಲ್ಲೂ ಸ್ವಾತಂತ್ರ್ಯಾ ನಂತರದಲ್ಲೂ, ಪಾಶ್ಚಾತ್ಯ ದೇಶಗಳು ನಿರ್ಬಂಧಗಳನ್ನು ಹೇರುವ ತನಕ, ನೆಹರೂ ಮತ್ತು ಇಂದಿರಾ ಗಾಂಧಿಯವರಂಥಾಗಲಿ, ಹೋಮಿ ಭಾಭಾ ಮತ್ತು ವಿಕ್ರಮ್ ಸಾರಾಭಾಯ್ ಅವರಂಥವರಾಗಲಿ ವಿಜ್ಞಾನಿಗಳು, ಎಂಜಿನಿಯರ್‌ಗಳು, ಕಲಾವಿದರು, ಶಿಕ್ಷಣತಜ್ಞರನ್ನು ವಿದೇಶಕ್ಕೆ ಕಳುಹಿಸುತ್ತಿದ್ದರು; ಭಾರತಕ್ಕೆ ಮರಳಿ ಸೇವೆ ಸಲ್ಲಿಸಲು ಅವರಿಗೆ ಅವಕಾಶಗಳನ್ನು ಒದಗಿಸುತ್ತಿದ್ದರು. ನೆಹರೂ ಅವರ ಆಹ್ವಾನದ ಮೇರೆಗೆ ವಿಸ್ಕಾನ್ಸಿನ್ ವಿಶ್ವವಿದ್ಯಾಲಯದಿಂದ ಹಿಂದಿರುಗಿದ ಜಯಪ್ರಕಾಶ್ ನಾರಾಯಣ್ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ಗೆ ಸೇರಿದರು, ಕ್ವಿಟ್ ಇಂಡಿಯಾ ಚಳವಳಿಯ ನಾಯಕರಾದರು; ನಂತರ ಇಂದಿರಾ ಗಾಂಧಿ ಮತ್ತು ತುರ್ತು ಪರಿಸ್ಥಿತಿಯನ್ನು ವಿರೋಧಿಸಿ, ದೇಶದ ಯುವಕರು ಮತ್ತು ವಿರೋಧ ಪಕ್ಷಗಳನ್ನು ಹುರಿದುಂಬಿಸಿದರು. ವರ್ಗೀಸ್ ಕುರಿಯನ್ ಅವರನ್ನು ನೆಹರೂ ಸರ್ಕಾರ ಪರಮಾಣು ಎಂಜಿನಿಯರಿಂಗ್ ಅಧ್ಯಯನ ಮಾಡಲು ವಿದೇಶಕ್ಕೆ ಕಳುಹಿಸಿತು; ಅಲ್ಲಿಂದ ಹಿಂದಿರುಗಿದ ಮೇಲೆ ಅವರನ್ನು ಅಮುಲ್ ಡೈರಿ ಚಳವಳಿಗಾಗಿ ಕಳುಹಿಸಲಾಯಿತು. ಹೀಗೆ ನೂರಾರು ವಿಜ್ಞಾನಿಗಳು ಮತ್ತು ಎಂಜಿನಿಯರ್‌ಗಳು ವಿದೇಶಗಳಿಗೆ ಹೋದರು; ಆದರೆ ಅವರು ಭಾರತಕ್ಕೆ ಸೇವೆ ಸಲ್ಲಿಸಲು ಹಿಂದಿರುಗಿದರು; ಹಲವರು ಹಲವು ಸಾಮಾಜಿಕ ಸಂಸ್ಥೆಗಳನ್ನು ಕಟ್ಟಿದರು; ಇನ್ನೂ ಕೆಲವರು ಐಐಟಿ, ಐಐಎಂ ಮತ್ತು ಏಮ್ಸ್ ಮುಂತಾದ ವಿದ್ಯಾಸಂಸ್ಥೆಗಳಲ್ಲಿ ಬೋಧಿಸಲು ಹಿಂದಿರುಗಿದರು.

ನಮ್ಮ ಭಿನ್ನಾಭಿಪ್ರಾಯಗಳು ಏನೇ ಇರಲಿ, ನೂತನ ದೇಶವನ್ನು ಅನ್ವೇಷಿಸಲು ಸಾಗರಗಳನ್ನು ದಾಟುವವರ ಬಗ್ಗೆ ನಾವು ಔದಾರ್ಯದಿಂದ ನಡೆದುಕೊಳ್ಳಬೇಕು. ತಾಯ್ನಾಡಿಗೆ ಮರಳಲು ಉತ್ಸುಕರಾಗಿರುವ ಎಲ್ಲರನ್ನೂ ಮುಕ್ತವಾಗಿ ಸ್ವಾಗತಿಸಬೇಕು; 'ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ'ಯ ಚೈತನ್ಯವನ್ನು ಅವರಲ್ಲಿ ತುಂಬಬೇಕು.



ವಾಚಕರ ವಾಣಿ

ಖಾಸಗಿ ಬಸ್ ದರಕ್ಕೆ ಲಗಾಮು ಬೇಕು

ವಾರಾಂತ್ಯದಲ್ಲಿ ಸಾಲು ಸಾಲು ಹಬ್ಬದ ರಜೆಗಳು ಬಂದರೆ ಜನರ ಸಂತಸಕ್ಕೆ ಪಾರವೇ ಇರುವುದಿಲ್ಲ. ಸಾರ್ವಜನಿಕರ ಈ ಸಂತೋಷದ ಬಲೂನ್‌ಗೆ ಖಾಸಗಿ ಬಸ್ ಮಾಲೀಕರು ಸೂಜಿ ಚುಚ್ಚುವ ಕೆಲಸವನ್ನು ಚೊಕ್ಕಟವಾಗಿಯೇ ಮಾಡುತ್ತಾರೆ. ಯಾವುದೇ ಮಾರ್ಗದ ಬಸ್ ಆಗಿರಲಿ, ಸಾಮಾನ್ಯ ದರಕ್ಕಿಂತ ಮೂರ್ನಾಲ್ಕು ಪಟ್ಟು ಟಿಕೆಟ್ ದರ ಏರಿಸುತ್ತಾರೆ. ಇದರ ವಿರುದ್ಧ ಕೂಗೆದ್ದಾಗ ರಾಜ್ಯ ಸರ್ಕಾರ ಕ್ರಮ ತೆಗೆದುಕೊಂಡಂತೆ ನಾಟಕವಾಡುತ್ತದೆ. ಖಾಸಗಿ ಬಸ್‌ಗಳ ಮಾಲೀಕರು ರಾಜಕಾರಣಿಗಳಾಗಿರುವುದು ಅಥವಾ ಅವರು ರಾಜಕಾರಣಿಗಳ ಸಖ್ಯದಲ್ಲಿರುವುದೇ ಇದಕ್ಕೆ ಕಾರಣ.

ಸಂತೋಷ ಬಸ್ತಿ, ಧಾರವಾಡ

ಅಲ್ಯೂಮಿನಿಯಂ ಪಾತ್ರೆ ಬಳಕೆಗೆ ನಿಷೇಧ

ರಾಜ್ಯ ಸರ್ಕಾರವು ಶಾಲೆಗಳಲ್ಲಿ ಅಡುಗೆ ತಯಾರಿಕೆಗೆ ಅಲ್ಯೂಮಿನಿಯಂ ಪಾತ್ರೆ ಬಳಸದಂತೆ ಆದೇಶಿಸಿರುವುದು ಶ್ಲಾಘನೀಯ. ಅಲ್ಯೂಮಿನಿಯಂ ಪಾತ್ರೆಗಳಲ್ಲಿ ದೀರ್ಘಕಾಲ ಅಡುಗೆ ಮಾಡುವುದರಿಂದ ಆಹಾರದಲ್ಲಿ ಹಾನಿಕರ ರಾಸಾಯನಿಕ ಅಂಶಗಳು ಸೇರ್ಪಡೆಗೊಳ್ಳುತ್ತವೆ. ಇದು ಮೆದುಳಿನ ಬೆಳವಣಿಗೆ, ನರಮಂಡಲದ ಚಟುವಟಿಕೆ ಹಾಗೂ ದೇಹದ ಪ್ರತಿರೋಧಶಕ್ತಿಯ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆಯಿದೆ. ಅಡುಗೆ ತಯಾರಿಕೆಗೆ ಸ್ಟೇನ್‌ಲೆಸ್ ಸ್ಟೀಲ್ ಅಥವಾ ತಾಮ್ರದ ಪಾತ್ರೆ ಬಳಸುವುದು ಆರೋಗ್ಯಕರ ಮತ್ತು ದೀರ್ಘಾವಧಿಯಲ್ಲಿ ಪ್ರಯೋಜನಕಾರಿ.

ವಿಜಯಕುಮಾರ್ ಎಚ್‌.ಕೆ., ರಾಯಚೂರು

'ಕಾಂತಾರ' ತಂಡ ಎಸಗಿದ ಹಗುರ ತಪ್ಪು

ಕುಟುಂಬ ಸಮೇತ ಹೋಗಿ 'ಕಾಂತಾರ ಚಾಪ್ಟರ್ 1' ಸಿನಿಮಾ ನೋಡಿದೆ. ಸಿನಿಮಾದಲ್ಲಿ ದೇಶದ ಪುರಾತನವಾದ ತಂತಿವಾದ್ಯ ವೀಣೆಯನ್ನು ಬಳಸಿಕೊಳ್ಳಲಾಗಿದೆ. ಆ ವೀಣೆಗೆ ಮೇಣದಮೆಟ್ಟುಗಳು ಇಲ್ಲದುದನ್ನು ಕಂಡು ಬೇಸರವಾಯಿತು.

ಈ ಸಿನಿಮಾವು ಪೌರಾಣಿಕ ಕಥೆ ಹೇಳುವುದರಿಂದ ಇಂತಹ ಅಜಾಗರೂಕತೆಗೆ ಅವಕಾಶವಿರಬಾರದು. ಸಿನಿಮಾಗಳಲ್ಲಿ ಇಂತಹ ವಾದ್ಯಗಳನ್ನು ಬಳಸುವಾಗ ಆ ವಾದ್ಯಗಳ ಆಕಾರ ಮತ್ತು ರಚನೆ ಬಗ್ಗೆ ಸಂಬಂಧಪಟ್ಟವರು ಗಮನಿಸಬೇಕು. ವೀಣೆಗೆ ದೇಶದ ಸಂಗೀತ ಪರಂಪರೆಯಲ್ಲಿ ವಿಶಿಷ್ಟ ಸ್ಥಾನವಿದೆ. ಚಿತ್ರತಂಡದವರು ಇಂತಹ 'ಹಗುರ ತಪ್ಪು'ಗಳಿಗೆ ಅವಕಾಶ ಕಲ್ಪಿಸಬಾರದಿತ್ತು.

ಆಶಾ ನಾಗರಾಜ್, ಬೆಂಗಳೂರು

ಮೌಲ್ಯಾಧಾರಿತ ಶಿಕ್ಷಣ ಮಕ್ಕಳಿಗೆ ಅಗತ್ಯ

'ಕೌನ್ ಬನೇಗಾ ಕರೋಡ್ ಪತಿ' ವೇದಿಕೆಯಲ್ಲಿ ಬಾಲಪ್ರತಿಭೆ ಇಶಿತ್ ಭಟ್ ತೋರಿದ ಬುದ್ಧಿವಂತಿಕೆ, ಧೈರ್ಯ ಮತ್ತು ಆತ್ಮವಿಶ್ವಾಸ ಪ್ರಾರಂಭದಲ್ಲಿ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಆದರೆ, ಮುಂದೆ ಆ ಬಾಲಕನ ವರ್ತನೆಯಲ್ಲಿ ಅಹಂಕಾರದ ಬೀಜ ಮೊಳೆತು, ಅದುವೇ ತಪ್ಪು ನಿರ್ಧಾರಗಳಿಗೆ ಕಾರಣವಾಗಿ, ಸೋಲಲ್ಲಿ ಪರ್ಯಾವಸಾನಗೊಂಡಿತು.

ಮಕ್ಕಳು ಮತ್ತು ಅವರ ಹೆತ್ತವರು ಈ ಘಟನೆಯಿಂದ ತಿಳಿಯಬೇಕಾದ ಹಲವಾರು ಅಂಶಗಳಿವೆ. ಅಹಂಕಾರವು ಯಶಸ್ಸಿನ ಶತ್ರು, ವಿನಯವೇ ನಿಜವಾದ ಜ್ಞಾನ. ವಿದ್ಯೆಯೇ ವಿನಯದ ಮೂಲ ಎಂಬುದನ್ನು ಪೋಷಕರು ಮಕ್ಕಳಿಗೆ ಮನನ ಮಾಡಿಸಬೇಕಿದೆ. ಹುಡುಗ ಎಷ್ಟೇ ಬುದ್ಧಿವಂತನಾಗಿರಲಿ, ಅವನ ನಡವಳಿಕೆ ವಯೋಸಹಜವಾಗಿದ್ದರೂ ವಿದ್ಯಾರ್ಥಿಯಾದ ಆತನಿಂದ ಈ ರೀತಿಯ ನಡತೆ ಅನಪೇಕ್ಷಿತವಾಗಿತ್ತು. ಮೌಲ್ಯಾಧಾರಿತ ವ್ಯಕ್ತಿತ್ವವೇ ನಿಜವಾದ ಗೆಲುವು ಎನ್ನುವ ಸತ್ಯವನ್ನು ಪೋಷಕರು ಅರ್ಥೈಸಿಕೊಳ್ಳಬೇಕಿದೆ. ಬಾಲ್ಯದಲ್ಲಿಯೇ ಮಕ್ಕಳಿಗೆ ಮೌಲ್ಯಶಿಕ್ಷಣ ಮತ್ತು ನೈತಿಕಶಿಕ್ಷಣ ಕಲಿಸಬೇಕಿದೆ.

ಎಸ್‌.ಎನ್. ಭಟ್, ಕಾಸರಗೋಡು

ಸೇವಾ ನಿಯಮ ಪಾಲನೆ: ನೌಕರರ ಹೊಣೆ

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು, 'ನಾನು ಸರ್ಕಾರಿ ನೌಕರ' ಎಂದಿದ್ದಾರೆ. ಅವರು ಸೇವಕರು ಹೌದು; ನೌಕರರಲ್ಲ. ನೌಕರರಿಗೆ 'ಕರ್ನಾಟಕ ರಾಜ್ಯ ನಾಗರಿಕ ಸೇವಾ ನಿಯಮಾವಳಿ'ಗಳು ಅನ್ವಯವಾಗುತ್ತವೆ; ಜನಪ್ರತಿನಿಧಿಗಳಿಗಲ್ಲ. ಕಾರ್ಯಾಂಗದ ಪ್ರಮುಖ ಅಂಗ ಸರ್ಕಾರಿ ನೌಕರರು. ಅವರು ನಿಷ್ಪಕ್ಷಪಾತದಿಂದ ಕೆಲಸ ಮಾಡಬೇಕಾಗುತ್ತದೆ. ಆರ್‌ಎಸ್‌ಎಸ್ ತಾನು ಏನೇ ಬಣ್ಣಿಸಿಕೊಂಡರೂ ಅದು ರಾಜಕೀಯ ಪಕ್ಷವೊಂದರ ಪಿತೃವಿನಂತೆ ಕೆಲಸ ಮಾಡುತ್ತದೆ. ದೇಶಭಕ್ತಿ ಎಂಬ ಸಿಹಿಲೇಪನದಲ್ಲಿ ಜನಸಾಮಾನ್ಯರ ತಲೆಯಲ್ಲಿ ಅದು ಏನನ್ನು ತುಂಬಿಸುತ್ತದೆ ಎಂಬುದು ಗೋಪ್ಯವೇನಲ್ಲ. ಪಕ್ಷಪಾತ ಗುಣೋತ್ಥಾನಗೊಳಿಸುವ ಸಂಸ್ಥೆಯೊಂದಿಗೆ ನೌಕರನೊಬ್ಬ ನಿತ್ಯ ಬಹಿರಂಗವಾಗಿ ಸೇರಿಕೊಂಡರೆ ಅವನು ಕಚೇರಿಯಲ್ಲಿ ಭೇದಭಾವರಹಿತವಾಗಿ ಕೆಲಸ ಮಾಡಲು ಸಾಧ್ಯವಿಲ್ಲ.

ತಿರುಪತಿ ನಾಯಕ್, ಕಲಬುರಗಿ

ಅಂಚೆ ಕಚೇರಿ ಮರಳಿ ತೆರೆಯಿರಿ

ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕಿನ ಮುತ್ತಾನಲ್ಲೂರು ಗ್ರಾಮದಲ್ಲಿ ಈ ಮುಂಚೆ ಅಂಚೆ ಕಚೇರಿ ಇತ್ತು. ಮೂರ್ನಾಲ್ಕು ವರ್ಷದ ಹಿಂದೆ ಇದನ್ನು ಸ್ಥಳಾಂತರಿಸಲಾಗಿದೆ. ಮುತ್ತಾನಲ್ಲೂರು ಗ್ರಾಮ ಪಂಚಾಯಿತಿ ಕೇಂದ್ರವೂ ಆಗಿದೆ. ಸುತ್ತಮುತ್ತಲಿನ ಹತ್ತಾರು ಹಳ್ಳಿಗಳಲ್ಲಿ ಸುಮಾರು 10 ಸಾವಿರ ಜನಸಂಖ್ಯೆಯಿದೆ. ಗ್ರಾಮಕ್ಕೆ ಹತ್ತಿರ ಇರುವ ಅಂಚೆ ಕಚೇರಿಗೆ ಹೋಗಬೇಕೆಂದರೆ ಸುಮಾರು 5 ಕಿ.ಮೀ. ದೂರವಾಗುತ್ತದೆ. ಗ್ರಾಮದಲ್ಲಿ ಮತ್ತೆ ಅಂಚೆ ಕಚೇರಿ ಪ್ರಾರಂಭಿಸಿ, ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಲು ಅಂಚೆ ಇಲಾಖೆಯು ಕ್ರಮವಹಿಸಬೇಕಿದೆ.

ಎಸ್‌.ಎಂ. ಚಂದ್ರಮೌಳಿ ಸ್ವಾಮಿ, ಮುತ್ತಾನಲ್ಲೂರು

ಚುರುಮುರಿ



ಓಟಿ ಹಬ್!

● ತುರುವೇಕೆರೆ ಪ್ರಸಾದ್

'ಲೇಯ್ ನಮ್ ರಾಜಕೀಯದೋರಿಗೆಲ್ಲಾ ತಲೆ ಸಿಕ್ಕಾಪಟ್ಟೆ ಶಾಕ್ ಆಗದೆ ಕಣ್ರಲಾ' ಎಂದ ಗುದ್ಲಿಂಗ ಹರಟೆಕಟ್ಟೇಲಿ!

'ಯಾಕ್ಲಾ? ಇನ್ನೂ ವೈಶಾಖನೇ ಬಂದಿಲ್ವಲ್ಲ! ವೈ ಮೈಶಾಖ?' ಕೇಳಿದ ಮಾಲಿಂಗ.

'ಅಯ್ಯೋ! ವೈಶಾಖ ಬರೋದಲ್ಲ, ಗೂಗಲ್ ಮ್ಯಾಪು ದಾರಿತಪ್ಪಿ ಐ.ಟಿ ಹಬ್ಬು ವಿಶಾಖಕ್ಕೆ ಹೋಯ್ತಲ್ಲ ಅಂತ'.

'ಯದಾ ಯದಾ ರಸ್ತೆ ಗಬ್ಬು ಭವತಿ, ತದಾ ತದಾ ಹಬ್ಬು ಗಡಿಬಿಟ್ಟು ಹೋಗ್ಯೆಂತಿ' ಎಂದು ಹುಬ್ಬು ಹಾರಿಸಿದ ಕಲ್ಲೇಶಿ.

'ಇಂಗ್ ಆಗ್ಬಾರ್ದಾಗಿತ್ತು ಕಣ್ಲಾ, ರಸ್ತೆ ಗುಂಡಿಯಿಂದಲೇ ಆಂಧ್ರದೋರು 'ರಾಂಡಿ ರಾಂಡಿ' ಅಂತ ಕರೆದು ಹಬ್ ಬುಟ್ಟಿಗಾಕ್ಕಂಡವ್ರೆ ಅಂತ ಕಮಲದೋರು ಕೊಂಡಿ ಬಿಚ್ಚಿಕಚ್ಚುತಾವ್ರಲ್ಲ'.

'ಅಂಗೂ ಇರ್ಬಹುದು, ಬೆಂಗಳೂರು ತುಂಬಾ ಗುಂಡಿ, ಕೊಚ್ಚೆ ಅಂತ ಪಿಚ್ಚೈ ಅದನ್ನ ಆಂಧ್ರಕ್ಕೆ ಕೊಟ್ಟಿರಬಹುದು'.

'ಕೊಟ್ರೆ ಕೊಡ್ತಾರೆ ಬಿಡ್ಲಾ, ಇದ್ಕೆಲ್ಲಾ ನಾವು ಸೊಪ್ಪು ಆಕಕಿಲ್ಲ, ನಮ್ ಕೊಚ್ಚೆ, ನಮ್ಮ ಹೆಮ್ಮೆ! ನಮ್ ಗುಂಡಿ, ನಮ್ ಎಮ್ಮೆ, ಇದೆಲ್ಲಾ ಒಂಥರಾ ಬೆಂಗಳೂರು ಬ್ರಾಂಡು ಕಣ್ಲಾ'.

'ಊ ಕಣ್ಲಾ, ಏನ್ ಪಿಚ್ಚೈ ಒಬ್ನೇನಾ ಇರೋದು? ಅಲನ್ ಮಸ್ಕ್ ಇಲ್ವಾ? ಮಸ್ಕಾ ಒಡ್ದು ಅವನನ್ನ ಕರ್ಕಂಡು ಬಂದ್ರಾಯ್ತು'.

'ಆದ್ರೂ 10 ಸಾವಿರ ಕೋಟಿ ಓಯ್ತಂತಲ್ಲ, ಅದ್ನೆಂಗ್ ಕರ್ಕಳಾದು?'.

'ಇಲ್ಲೇ ರಸ್ತೇಲೇ ಒಂದು ರಾಷ್ಟ್ರಮಟ್ಟದ ಕಂಬಳ ಮಾಡ್ಬಹುದು!'

'ಹೌದು, ಅಂಗೇ ಈ ರಿಯಾಲಿಟಿ ಶೋಗಳಿಗೆ ಟಾಸ್ಕ್ ಮಾಡಕ್ಕೆ ರಸ್ತೆ ಬಾಡಿಗೆ ಕೊಟ್ರೆ ಒಂದಿಷ್ಟು ಕೋಟಿ ಬತ್ತದೆ'.

'ಹಬ್ ಓದ್ರೆ ಓಯ್ತು ಬಿಡ್ರುಲಾ! ಇನ್ನೊಂದು ಸಾವಿರ ಪಬ್ ತೆಗುದ್ರಾಯ್ತು. ಅಲ್ಲೇ ಒಂದಿಷ್ಟು ಕೋಟಿ ಬಾಚ್ಕಬೋದಲ್ಲ'.

'ಕುಡ್ಡೋರೆಲ್ಲ ಬಂದು ಇಲ್ಲೇ ಗುಂಡಿಗೆ ಬಿದ್ರೆ ಅದೆಲ್ಲಾ ಪರಿಹಾರ ಕೊಡಕ್ಕೇ ಆಯ್ತದೆ. ಐಟಿ ಹಬ್ ಬದ್ಲು, ಓಟಿ (ಆಪರೇಷನ್ ಥಿಯೇಟರ್) ಹಬ್ ಮಾಡ್ಬೇಕಾಯ್ತದೆ' ಎಂದ ಪರ್ಮೇಶಿ.

ಎಲ್ಲಾ ಗೊಳ್ಳನೆ ನಕ್ಕರು.

ಸಂಗತ


ಪೂಜಾರಿಯವರ ಸುಳ್ಳುಗಳ ಗೋಪುರ

ಆರ್‌ಎಸ್‌ಎಸ್ ಕುರಿತ ಅನೇಕ ಸಂಕಥನಗಳು ಸಂಘಟನೆಯ ಒಳಗಿನಿಂದಲೇ ಹುಟ್ಟಿಕೊಂಡ ಕಟ್ಟುಕಥೆಗಳಾಗಿವೆ. ಅವುಗಳಿಗೆ ಸೂಕ್ತ ಸಾಕ್ಷ್ಯಗಳ ಬೆನ್ನುಮೂಳೆಯಿಲ್ಲ.

● ದೇವನೂರ ಮಹಾದೇವ

'ಆರ್‌ಎಸ್‌ಎಸ್‌ಗೆ ನೂರು ವರ್ಷಗಳಂತೆ! ಹೌದಾ?' (ಅ. 3) ಎನ್ನುವ ನನ್ನ ಲೇಖನಕ್ಕೆ ಸಂಸದರಾದ ಕೋಟ ಶ್ರೀನಿವಾಸ ಪೂಜಾರಿಯವರು ಪ್ರತಿಕ್ರಿಯಿಸುತ್ತಾ 'ದೇವನೂರರಿಗೊಂದು ದಾಳಿಂಬೆ ಕೊಡಿ' (ಅ. 11) ಎಂದು ಕರೆ ನೀಡಿದ್ದಾರೆ. ಇವರ ಕರೆಗೆ ಓಗೊಟ್ಟು ಆರ್‌ಎಸ್‌ಎಸ್, ಬಿಜೆಪಿ, ಸಂಘಪರಿವಾರಗಳ ಕಾರ್ಯಕರ್ತರ ಸಮೂಹದಿಂದ ದಾಳಿಂಬೆ ಬಂದರೆ ನಾನೊಂದು ಗೋಡೌನ್ ಕಟ್ಟಿಸಬೇಕಾಗುತ್ತದೆ. ಇಲ್ಲ, ನಾನು ಗೋಡೌನ್ ಕಟ್ಟಿಸುವುದಿಲ್ಲ. ಬದಲಿಗೆ ಬರುವ ದಾಳಿಂಬೆಯಲ್ಲಿ ನಾನೂ ಒಂದು ಸೇವಿಸುತ್ತೇನೆ. ಪೂಜಾರಿಯವರಿಗೂ ಎರಡು ಕೊಡುತ್ತೇನೆ. ಹಾಗೇ ಎಲ್ಲಾ ಸಂಘಟನೆಗಳಿಗೂ ಹಂಚುವೆ. ವಿಶೇಷವಾಗಿ, ಸಮ್ಮೋಹನಕ್ಕೆ ಒಳಗಾಗಿ ಪ್ರಜ್ಞಾಹೀನರಾಗಿ ಹುಸಿ ದೇಶಪ್ರೇಮ, ಹುಸಿ ಧರ್ಮಪ್ರೇಮ ಗೀಳಿನ ಮತಾಂಧ ಅತಿರೇಕದ ಸಂಘಟನೆಗಳಿಗೂ ಹೆಚ್ಚು ಪಾಲು ನೀಡುವೆ. ಸಮಾನತಾವಾದಿ ನ್ಯಾಯಮೂರ್ತಿಗೆ ಚಪ್ಪಲಿ ಎಸೆಯಲು ಯತ್ನಿಸಿದ ಸನಾತನವಾದಿ ಭೂತಕಾಲದ ಪಳೆಯುಳಿಕೆ ರಾಕೇಶ್ ಕಿಶೋರ್ ಅಂಥವರಿಗೂ ಎಲ್ಲರಿಗಿಂತ ಹೆಚ್ಚೇ ನೀಡುವೆ.

ಆಯ್ತು, ಪೂಜಾರಿಯವರ ಲೇಖನಕ್ಕೆ ಈಗ ಬರುವೆ. 1939ರ ಮೇ 12ರಂದು ಪುಣೆಯ ಆರ್‌ಎಸ್‌ಎಸ್ ಶಿಬಿರಕ್ಕೆ ಅಂಬೇಡ್ಕರ್ ಭೇಟಿ ನೀಡಿ ಆರ್‌ಎಸ್‌ಎಸ್ ಬಗ್ಗೆ ಮೆಚ್ಚುಗೆ ಮಾತನಾಡಿದ್ದರು ಎಂದು ಬರೆದಿದ್ದಾರೆ. ಈ ಸುಳ್ಳಿನ ಹಿಂದಿರುವ ಸತ್ಯ ಹೀಗಿದೆ: ಆಯುಸ್ ನದೀಂಪಳ್ಳಿ ಮತ್ತು ರಾಹುಲ್ ಶಾಸ್ತ್ರಿ ಬರೆದಿರುವ 'The Founder of RSS: Dr. Hedgewar Seer Patriot and Nation Builder' ಪುಸ್ತಕದಲ್ಲಿ ಈ ಸುಳ್ಳನ್ನು ಬಿತ್ತರಿಸಲಾಗಿದೆ. ಇದಕ್ಕೆ ಯಾವುದೇ ಮಾಹಿತಿ ಮೂಲಗಳನ್ನು ತಿಳಿಸಿಲ್ಲ; ಪತ್ರಿಕಾ ವರದಿ, ಫೋಟೊ ಇತ್ಯಾದಿ ಸಾಕ್ಷಿಗಳನ್ನೂ ತಿಳಿಸಿಲ್ಲ.



ಇಂತಹ ಕಟ್ಟುಕತೆಯ ಆಧಾರಗಳನ್ನೇ ನಮ್ಮ ಸಂಸದರು ತಮ್ಮ ಲೇಖನಕ್ಕೆ ಬಳಸಿಕೊಂಡಿದ್ದಾರೆ. ದಯವಿಟ್ಟು ಗಮನಿಸಿ, ಅಂಬೇಡ್ಕರ್ ಆರ್‌ಎಸ್‌ಎಸ್ ಬಗ್ಗೆ ಹೀಗೆ ಹೇಳುತ್ತಾರೆ: 'ಹಿಂದೂ ಮಹಾಸಭಾ ಅಥವಾ ಆರ್‌ಎಸ್‌ಎಸ್‌ನಂತಹ ಪ್ರತಿಗಾಮಿ ಗುಂಪುಗಳೊಂದಿಗೆ ಯಾವುದೇ ಹೊಂದಾಣಿಕೆ-ಗಳನ್ನು ಮಾಡಿಕೊಳ್ಳುವಂತಿಲ್ಲ' (ಬಾಬಾ ಸಾಹೇಬ್ ಅವರ ಬರಹಗಳು ಮತ್ತು ಭಾಷಣಗಳು, ಸಂಪುಟ 17, ಪುಟ 359), 'ಆರ್‌ಎಸ್‌ಎಸ್ ಒಂದು ಅಪಾಯಕಾರಿ ಸಂಘಟನೆ' (ಇಂಗ್ಲಿಷ್ ಸಂಪುಟ 15, ಪುಟ 560) – ಹೀಗೆಲ್ಲಾ ಎಚ್ಚರಿಸಿದ್ದಾರೆ.

ಪೂಜಾರಿಯವರು ಬರೆದಿರುವ ಇನ್ನೊಂದು ಉಲ್ಲೇಖ ಹೀಗಿದೆ: 1962ರ ಭಾರತ–ಚೀನಾ ಯುದ್ಧದ ಉದ್ವಿಗ್ನತೆಯಲ್ಲಿ ಅಂದಿನ ಪ್ರಧಾನಿ ನೆಹರೂ ಏರ್ಪಡಿಸಿದ್ದ ದುಂಡುಮೇಜಿನ ಸಭೆಯಲ್ಲಿ ಗೋಲ್ವಲ್ಕರ್ ಆಹ್ವಾನದ ಮೇಲೆ ಭಾಗವಹಿಸಿದ್ದಾರೆಂದೂ, ಆ ಸಭೆಯಲ್ಲಿ ವಿಪಕ್ಷಗಳು ನೆಹರೂ ಸರ್ಕಾರವನ್ನು ಟೀಕಿಸುತ್ತ, 'ಚೀನಿ' ಸರ್ಕಾರ ಭಾರತದ ಭೂಭಾಗ ಆವರಿಸಿಕೊಳ್ಳುವಾಗ ನಿಮ್ಮ ಸೇನೆ ಏನು ಮಾಡುತ್ತಿತ್ತು' ಎಂದು ಪ್ರಶ್ನಿಸಿದರೆಂದೂ, ಆಗ ಗೋಲ್ವಲ್ಕರ್ 'ನಿಮ್ಮ ಸೇನೆ ಎನ್ನುವ ಬದಲು ನಮ್ಮ ಸೇನೆ ಎಂಬ ಶಬ್ದ ಪ್ರಯೋಗ ಮಾಡಬಹುದೆ?' ಎಂದು ತಿದ್ದಿ ಹೇಳಿದರೆಂದೂ, ಗೋಲ್ವಲ್ಕರ್ ಮಾತಿಗೆ ನೆಹರೂ ಕಣ್ಣಲ್ಲೇ ಕೃತಜ್ಞತೆ ಅರ್ಪಿಸಿದ್ದರೆಂದೂ ಬರೆದಿದ್ದಾರೆ. ಈ ವಾಕ್ಯಗಳನ್ನು, ಅಲ್ಲೇ ಇದ್ದು ಕಣ್ಣಾರೆ ಕಂಡಂತೆ ಪೂಜಾರಿಯವರು ವಿವರಿಸಿದ್ದಾರೆ. ಆದರೆ ಈ ಬಗ್ಗೆ ಆರ್ಕೈವ್ಸ್ ಪರಿಶೀಲಿಸಿದರೆ, ಅವರು ಹೇಳುವ ಯಾವ ದಾಖಲೆಗಳೂ ಇಲ್ಲ! ಇದೇನು ಕಥೆ? ಈ ಕಟ್ಟುಕಥೆಯನ್ನು ಕಟ್ಟಿ ವಾಸ್ತವ ಎಂಬಂತೆ ಆರ್‌ಎಸ್‌ಎಸ್‌ನ ರತನ್ ಶ್ರದ್ಧಾ ಅವರು 2018ರಲ್ಲಿ ಬರೆದ 'ಆರ್‌ಎಸ್‌ಎಸ್ 360' ಪುಸ್ತಕದಲ್ಲಿ ಹುಟ್ಟಿಸಿದ್ದು, ಇದನ್ನೇ ಆರ್‌ಎಸ್‌ಎ-ಸ್‌ನಿಂದ ತರಬೇತಿ ಪಡೆದವರು ಜಪಿಸುತ್ತಾ ತಿರುಗುತ್ತಿದ್ದಾರೆ. ಈ ಕಥನಶೈಲಿಯ ಮಾಯಾಜಾಲವು ಮುಸುಕುಧಾರಿ ಸಂಘಟನೆಗಳಿಗೆ ಉಸಿರಾಟದಂತಾಗಿ ಬಿಟ್ಟಿದೆ.

ಎಷ್ಟೆಂದರೆ, ಮುಂದೆ ಪೂಜಾರಿಯವರು ಬರೆದಿರುವಂತೆ ಎಡಪಂಥೀಯ ವಿಚಾರಧಾರೆಯ ಲೇಖಕರೊಬ್ಬರು ಬರೆದಿದ್ದ 'ಆರ್‌ಎಸ್‌ಎಸ್ ಆಳ ಮತ್ತು ಅಗಲ' ಎಂಬ ಕಿರುಪುಸ್ತಕಕ್ಕೆ ಪೂರಕ ಪ್ರಾಸ್ತಾವಿಕ ನುಡಿ ಬರೆದ ಗಣ್ಯರೊಬ್ಬರು 'ಈ ಕಿರುಪುಸ್ತಕ ಆರ್‌ಎಸ್‌ಎಸ್‌ನ ನಿಜಸ್ವರೂಪವನ್ನು ತಿಳಿಸಿ, ಭಾರತದ ಸಂವಿಧಾನದ ಮತ್ತು ದೇಶದ ಏಕತೆಯನ್ನು ಗಟ್ಟಿಗೊಳಿಸಲು ಶಕ್ತಿ ನೀಡುತ್ತದೆ ಎಂದು ಘೋಷಿಸಿದ್ದರು' ಎಂದು ಬರೆದಿದ್ದಾರೆ. 'ಆರ್‌ಎಸ್‌ಎಸ್ ಆಳ ಮತ್ತು ಅಗಲ' ಎಂಬ ಕಿರುಪುಸ್ತಕ ಬರೆದವನು ನಾನೇ ಅಲ್ಲವೆ? ಪೂರಕ ಪ್ರಾಸ್ತಾವಿಕ ನುಡಿಯ ಪ್ರಸ್ತಾಪ ನನಗೇ ಗೊತ್ತೇ ಇಲ್ಲವಲ್ಲ! ಇದೆಂಥ ಬಾಯಿಚಳಕ?

ಸರ್, ಪೂಜಾರಿಯವರೇ, ತಾವು ಸರಳ ಸಜ್ಜನರೆಂದು ಕೇಳಿದ್ದೇನೆ, ಜನರ ಕಷ್ಟ ಸುಖಕ್ಕೆ ಸ್ಪಂದಿಸುವ ವ್ಯಕ್ತಿತ್ವದವ-ರೆಂದೂ ಕೇಳಿದ್ದೇನೆ. ಈ ವಿಶ್ವಾಸದಿಂದ ಸದ್ಯಕ್ಕೆ ಒಂದೆರಡು ವಿಚಾರಗಳನ್ನು ತಮ್ಮ ಮುಂದಿಡುವೆ.

ಸನಾತನ(ಶಾಶ್ವತ)ಗಳೆಂದು ಹೇಳಿಕೊಳ್ಳುವವರಿಗೆ ಪರಮಪೂಜ್ಯರೆನ್ನಿಸಿಕೊಂಡ ಗೋಲ್ವಲ್ಕರ್, ಸಾವರ್ಕರ್ ಅವರ ಎದೆಯೊಳಗಿನ ಎರಡು ಮಾತುಗಳನ್ನು ಇಲ್ಲಿ ಉಲ್ಲೇಖಿಸುವೆ. ತಾವು ಈಗಾಗಲೇ ಓದಿರುವ ನನ್ನ ಲೇಖನ 'ಆರ್‌ಎಸ್‌ಎಸ್‌ಗೆ ನೂರು ವರ್ಷಗಳಂತೆ! ಹೌದಾ?'ದಲ್ಲಿ ಇದನ್ನು ವಿವರವಾಗಿ ಬರೆದಿರುವೆ. ನನ್ನ ಪ್ರಶ್ನೆ ಇಷ್ಟೆ: ಗೋಲ್ವಲ್ಕರ್ ಅವರು– 'ಈ ಚತುರ್ವಿಧ (ಚಾತುರ್ವರ್ಣ) ವ್ಯವಸ್ಥೆ ಹೊಂದಿದವರು ಎಂದರೆ ಹಿಂದೂ ಜನಾಂಗ, ಇದೇ ನಮ್ಮ ದೇವರು' ಎಂದರೆ, ಸಾವರ್ಕರ್ ಅವರು 'ಇವತ್ತು ಮನುಸ್ಮೃತಿಯೇ ಹಿಂದೂ ಕಾಯ್ದೆ' ಎಂದಿದ್ದಾರೆ.

ಈಗ ನಾನು ತಮ್ಮಲ್ಲಿ ವಿನಂತಿಸುವುದು ಇಷ್ಟೇ:

1. ದೇವನೂರರು ಉಲ್ಲೇಖಿಸಿರುವ ಗೋಲ್ವಲ್ಕರ್, ಸಾವರ್ಕರ್ ಹೇಳಿಕೆಗಳನ್ನು ಸುಳ್ಳು ಎಂದಾದರೂ ಹೇಳಿರಿ,
2. ಆ ಉಲ್ಲೇಖಗಳನ್ನು ಗೋಲ್ವಲ್ಕರ್, ಸಾವರ್ಕರ್ ಹೇಳಿದ್ದಾರೆ, ಅದನ್ನು ಸಮ್ಮತಿಸುತ್ತೇನೆ ಎಂದಾದರೂ ಹೇಳಿರಿ,
3. ಗೋಲ್ವಲ್ಕರ್, ಸಾವರ್ಕರ್ ಹೇಳಿರುವ ಉಲ್ಲೇಖಗಳನ್ನು ನಾನು ಸಮ್ಮತಿಸುವುದಿಲ್ಲ ಎಂದಾದರೂ ಹೇಳಿರಿ. ದಯವಿಟ್ಟು ಯಾವುದಾದರೂ ಒಂದನ್ನು ತಿಳಿಸುವಿರಾ?

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ. ನರೇಂದ್ರಸ್ವಾಮಿ

ನಾವು ಪೊಲೀಸರಲ್ಲ

ಲೋಪ ತಿಳಿಸಿ ಸರಿಪಡಿಸುವ ಮಾರ್ಗದರ್ಶಕರು

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ 50 ವರ್ಷ ತುಂಬಿದೆ. ರಾಜ್ಯದಾದ್ಯಂತ ಸುವರ್ಣ ಮಹೋತ್ಸವ ಕಾರ್ಯಕ್ರಮಗಳನ್ನು ಮಂಡಳಿ ಆಯೋಜಿಸುತ್ತಿದೆ. ಈ ಸಂದರ್ಭದಲ್ಲಿ ಮಾಲಿನ್ಯ ನಿಯಂತ್ರಿಸುವಲ್ಲಿ ನಾಗರಿಕರು, ಸಂಸ್ಥೆ–ಕಂಪನಿಗಳ ಜವಾಬ್ದಾರಿಗಳ ಬಗ್ಗೆ ಮಾತನಾಡಿರುವ ಮಂಡಳಿ ಅಧ್ಯಕ್ಷ ಪಿ.ಎಂ.ನರೇಂದ್ರ ಸ್ವಾಮಿ, 'ನಾವು ಪೊಲೀಸರಲ್ಲ, ಕಾಯ್ದೆಯಡಿ ಆಗಿರುವ ಲೋಪಗಳನ್ನು ತಿಳಿಸಿ, ಸರಿಪಡಿಸಿಕೊಳ್ಳಲು ಅವಕಾಶ ನೀಡುವ ಮಾರ್ಗದರ್ಶಕರು' ಎಂದು 'ಪ್ರಜಾವಾಣಿ'ಗೆ ಹೇಳಿದ್ದಾರೆ. ಅವರೊಂದಿಗೆ ನಡೆಸಿದ ಸಂದರ್ಶನದ ಆಯ್ದ ಭಾಗ ಇಲ್ಲಿದೆ

● ಆರ್.ಮಂಜುನಾಥ್

● ಮಾಲಿನ್ಯ ನಿಯಂತ್ರಣ ಮಂಡಳಿಯು ಜನರ ದೂರಿಗೆ ಸ್ಪಂದಿಸುವುದಿಲ್ಲ ಎಂಬ ಆರೋಪ ಇದೆಯಲ್ಲಾ?

ಜನರಿಂದ ಬಂದ ಎಲ್ಲ ದೂರುಗಳನ್ನೂ ನಮ್ಮ ಅಧಿಕಾರಿಗಳು ಪರಿಶೀಲಿಸುತ್ತಾರೆ. ಎಲ್ಲದರಲ್ಲೂ ನಿಜ ಇರುವುದಿಲ್ಲ, ವೈಯಕ್ತಿಕ ಕಾರಣದ ದೂರುಗಳೂ ಇರುತ್ತವೆ. ಇವುಗಳೆಲ್ಲವನ್ನೂ ಪರಿಶೀಲಿಸಿ, ಮುಂದಿನ ಕ್ರಮಕ್ಕೆ ಸ್ಥಳೀಯ ಆಡಳಿತಕ್ಕೆ ಸೂಚನೆ ನೀಡಲಾಗುತ್ತದೆ. ನಿಮಗೆ ಗೊತ್ತಿರಲಿ, ನಾವು ಪೊಲೀಸರಲ್ಲ. ಜಲ, ವಾಯು ಮಾಲಿನ್ಯ ನಿಯಂತ್ರಣ ಕಾನೂನುಗಳ ಅಡಿ ಆಗಿರುವ ಲೋಪಗಳನ್ನು ತಿಳಿಸಿ, ಅವಕಾಶ ಕೊಟ್ಟು ಸರಿಪಡಿಸಿಕೊಳ್ಳುವುದಕ್ಕೆ ಮಾರ್ಗದರ್ಶನ ನೀಡುವುದು ನಮ್ಮ ಜವಾಬ್ದಾರಿ. ಮಾಲಿನ್ಯವಾಗುತ್ತಿರುವ ಬಗ್ಗೆ ಆರಂಭದಲ್ಲಿ ಮಾರ್ಗದರ್ಶನ ನೀಡುತ್ತೇವೆ. ನಂತರ ಹಂತಹಂತವಾಗಿ ಪ್ರಕ್ರಿಯೆ ನಡೆಸಿ, ಕಾಯ್ದೆ ಉಲ್ಲಂಘಿಸಿದ ಸಂಸ್ಥೆಗಳಿಗೆ ಬೀಗಮುದ್ರೆಯನ್ನೂ ಹಾಕಲು ಆದೇಶ ಹೊರಡಿಸುತ್ತೇವೆ. ಮಂಡಳಿ ನೀಡಿದ ಆದೇಶವನ್ನು ಅನುಷ್ಠಾನಕ್ಕೆ ತರಬೇಕಾದ್ದು ಸ್ಥಳೀಯ ಆಡಳಿತವೇ ವಿನಾ ಮಂಡಳಿಯಲ್ಲ. ಪೊಲೀಸರಂತೆ ನಾವು ಕಾರ್ಯನಿರ್ವಹಿಸಲು ಸಾಧ್ಯವಿಲ್ಲ. ನಮ್ಮ ಆದೇಶವನ್ನು ಅನುಷ್ಠಾನಕ್ಕೆ ತರುವುದು ಸ್ಥಳೀಯ ಆಡಳಿತ, ಪೊಲೀಸರು ಸೇರಿದಂತೆ ಸಂಬಂಧಪಟ್ಟ ಇಲಾಖೆಗಳ ಜವಾಬ್ದಾರಿ.

● ಗಣಿಗಾರಿಕೆಯಿಂದ ಆಗುವ ಮಾಲಿನ್ಯ ಮಂಡಳಿಯ ವ್ಯಾಪ್ತಿಗೆ ಬರುವುದಿಲ್ಲವೇ?

ಎಲ್ಲ ರೀತಿಯ ಮಾಲಿನ್ಯಗಳು, ವಿವಿಧ ಕಾಯ್ದೆಗಳಡಿ ನಮ್ಮ ವ್ಯಾಪ್ತಿಗೇ ಬರುತ್ತವೆ. ಅವುಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನ ಮಾಡಲು ಪೂರ್ಣ ಪ್ರಮಾಣದ ಪ್ರಯತ್ನವಾಗಿಲ್ಲ. ಗಣಿ ಚಟುವಟಿಕೆಗಳು ಹೆಚ್ಚಾಗುತ್ತಿರುವುದರಿಂದ ದೂಳಿನ ಕಣಗಳು ಹಲವು ಕಿಲೋಮೀಟರ್‌ವರೆಗೂ ಹರಡುತ್ತಿವೆ. ಪ್ರತಿ ದಿನ ಸಾವಿರಾರು ತೆರೆದ ವಾಹನಗಳು ಅದಿರು ತುಂಬಿಕೊಂಡು ಸಂಚರಿಸುತ್ತಿವೆ. ಈ ವಾಹನಗಳಿಂದ ಹೊರಬರುವ ದೂಳು ಎಲ್ಲೆಡೆ ಪಸರಿಸಿಕೊಂಡು, ಹಸಿರು ಹಾಗೂ ಜಲಚರದ ಮೇಲೆ ಪರಿಣಾಮ ಬೀರುತ್ತಿದೆ. ಇದರ ಬಗ್ಗೆ ಕ್ರಮ ಕೈಗೊಳ್ಳಲು ಗಣಿ ಕಾಯ್ದೆಯಲ್ಲಿ ನಮಗೆ ಅವಕಾಶವಿದೆ. ಈ ದಿಸೆಯಲ್ಲಿ ಕೆಲವು ನಿರ್ಣಾಯಕ ಕ್ರಮಗಳನ್ನು ಕೈಗೊಳ್ಳುವ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ. ಕೈಗಾರಿಕೋದ್ಯಮಿಗಳು ತಮ್ಮ ಲಾಭ ಹೆಚ್ಚಿಸಿಕೊಳ್ಳಲು ಹಲವು ತಪ್ಪುಗಳನ್ನು ಮಾಡುತ್ತಾರೆ. ಮಾಲಿನ್ಯ ನಿಯಂತ್ರಣಕ್ಕೆ ಜಲ ಸಂಸ್ಕರಣೆಯಂತಹ ಕೆಲವು ವ್ಯವಸ್ಥೆಗಳು ಅವರ ಬಳಿ ಇದ್ದರೂ ವೆಚ್ಚ ಕಡಿತಗೊಳಿಸಲು ರಾತ್ರಿಯಲ್ಲಿ ಅವನ್ನು ಸ್ಥಗಿತಗೊಳಿಸುತ್ತಾರೆ. ಇದರಿಂದ ಪರಿಸರದ ಮೇಲಾಗುತ್ತಿರುವ ಪರಿಣಾಮವನ್ನು ತಿಳಿಸಿ ಹೇಳುತ್ತಿದ್ದರೂ ಅವರು ಸರಿಪಡಿಸಿಕೊಳ್ಳುವುದಿಲ್ಲ. ಅಂತಹವರಿಗೆ ಬೀಗಮುದ್ರೆಯಂತಹ ಶಿಕ್ಷೆ ನೀಡಲಾಗುತ್ತಿದೆ.

● ಮಂಡಳಿ ಕಾರ್ಯವೈಖರಿಯ ಬಗ್ಗೆ ದೂರುಗಳಿವೆ. ಅದು ಬದಲಾಗುವುದಿಲ್ಲವೇ?

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಶೇ 60ರಷ್ಟು ಸಿಬ್ಬಂದಿ ಕೊರತೆ ಇದೆ. ಇದರಿಂದ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲು ಸಾಧ್ಯವಾಗುತ್ತಿರಲಿಲ್ಲ. ಹೀಗಾಗಿ, ಹುದ್ದೆಗಳ ಭರ್ತಿಗೆ ಅನುಮೋದನೆ ನೀಡಲು ಮುಖ್ಯಮಂತ್ರಿಯವರಲ್ಲಿ ಮನವಿ ಮಾಡಲಾಗಿತ್ತು. ಅವರ ಆದೇಶದಂತೆ ಹಣಕಾಸು ಇಲಾಖೆ ಒಪ್ಪಿಗೆ ನೀಡಿದೆ. 300ಕ್ಕೂ ಹೆಚ್ಚು ಹುದ್ದೆಗಳನ್ನು ಶೀಘ್ರವೇ ನೇಮಕಾತಿ ಮಾಡಿಕೊಳ್ಳಲಿದ್ದೇವೆ. ಇದಾದರೆ, ಎಲ್ಲ ಪ್ರಾದೇಶಿಕ ಕಚೇರಿಗಳು, ವಲಯ ಕಚೇರಿಗಳಲ್ಲಿ ಸಿಬ್ಬಂದಿ ಇರುತ್ತಾರೆ. ಅದಾದ ನಂತರ ಮಂಡಳಿಯ ಚಟುವಟಿಕೆಗಳಿಗೆ ಇನ್ನಷ್ಟು ವೇಗ ಸಿಗಲಿದೆ. ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲೇ 15 ವರ್ಷಗಳಿಗಿಂತ ಹಳೆಯ ವಾಹನಗಳಿದ್ದವು. ಸರ್ಕಾರದ ಅನುಮೋದನೆ ಮೇರೆಗೆ, ಮಂಡಳಿಯ ಹಣದಿಂದಲೇ ಹೊಸ ವಾಹನಗಳನ್ನು ಖರೀದಿಸಿದ್ದೇವೆ. ಮಂಡಳಿಯ ಕಾರ್ಯವೈಖರಿಯನ್ನು ಬದಲಾಯಿಸಿಕೊಳ್ಳುವತ್ತ ಚಿತ್ತ ಹರಿಸಿದ್ದೇವೆ. ಹಿಂದಿನ ಸವಾಲುಗಳ ಪರಾಮರ್ಶೆಯೊಂದಿಗೆ ಭವಿಷ್ಯಕ್ಕೆ ನೀಡಬೇಕಾದ ಕೊಡುಗೆಗಳತ್ತ ನೋಟ ಹರಿಸಿದ್ದೇವೆ. ಎಲ್ಲಕ್ಕೂ ಮಿಗಿಲಾಗಿ, ಕೇಂದ್ರ ಜಲ ಹಾಗೂ ವಾಯು ಮಾಲಿನ್ಯ ಕಾಯ್ದೆಯಲ್ಲಿರುವ ಅವಕಾಶದಂತೆ ಮಂಡಳಿಯ ಜವಾಬ್ದಾರಿಯನ್ನು ನಿರ್ವಹಿಸಲು ಪಣತೊಟ್ಟಿದ್ದೇವೆ.

ಪ್ರಜಾವಾಣಿ ಸಂದರ್ಶನ

● ಮಂಡ್ಯ ಜಿಲ್ಲೆಯಲ್ಲಿ ಕೃಷಿ ಚಟುವಟಿಕೆಗಳಲ್ಲಿ ರಾಸಾಯನಿಕಗಳ ಬಳಕೆ ಹೆಚ್ಚಾಗುತ್ತಿದೆ ಎಂಬ ಮಾತಿದೆ. ನೀವೇನಂತೀರಿ?

ನಾನು ಮಂಡ್ಯದವನೇ. ನನಗೆ ಅದರ ಅರಿವಿದೆ. ಜಿಲ್ಲೆಯ ಸ್ಥಿತಿ ಶೋಚನೀಯವಾಗಿದೆ. ನಮ್ಮ ಭೂಮಿ ತಾಯಿಯನ್ನು ನಾವು ಸಾಯಿಸಿಬಿಟ್ಟಿದ್ದೇವೆ. ಮಂಡ್ಯದ ಭೂಮಿಯಲ್ಲಿ ಸತ್ವ ಇಲ್ಲ. ಅಲ್ಲಿನ ನೆಲದಲ್ಲಿ ಬರೀ ರಾಸಾಯನಿಕವೇ ತುಂಬಿಹೋಗಿದೆ. ನಾವು ಬೆಳೆಯುತ್ತಿರುವ ಬೆಳೆಯಲ್ಲಿ ಸತ್ವಗಳು ಇಲ್ಲವೇ ಇಲ್ಲ. ನಾವೇ ಕಲುಷಿತ ಮಾಡಿರುವ ವಾತಾವರಣದಲ್ಲಿ ಅರಿವಿಲ್ಲದೆ ಬದುಕುತ್ತಿದ್ದೇವೆ. ನಾನೊಬ್ಬ ಮಂಡ್ಯದವನಾಗಿ, ರೈತನ ಮಗನಾಗಿ ಈ ಭಾಗವನ್ನು ಕಂಡಿರುವುದರಿಂದ ಇಲ್ಲಿನ ವಾಸ್ತವಾಂಶ ಹೇಳುತ್ತಿದ್ದೇನೆ. ಆದರೆ, ಇದು ಮಂಡ್ಯಕ್ಕೆ ಸೀಮಿತವಾಗಿಲ್ಲ. ರಾಜ್ಯದೆಲ್ಲೆಡೆ ಅರಿವಿಲ್ಲದೆ ಇಂತಹ ಪರಿಸ್ಥಿತಿ ಸೃಷ್ಟಿಯಾಗಿದೆ. ಬೆಂಕಿ ಬೀಳುವ ತನಕ ಕಾಯದೆ ಎಚ್ಚೆತ್ತುಕೊಳ್ಳಬೇಕು. ಸಾವಯವ ಕೃಷಿ ಜೊತೆಗೆ ಭೂಮಿಯ ಸತ್ವ ಕಾಪಾಡಿಕೊಳ್ಳಲು ರಾಸಾಯನಿಕಮುಕ್ತ ಪರಿಸರ ಕಟ್ಟಿಕೊಳ್ಳಬೇಕು.



● ಪರಿಸರ ಮಾಲಿನ್ಯಕ್ಕೆ ಸಂಬಂಧಿಸಿದಂತೆ ಮಂಡಳಿ ನೀಡುವ ವರದಿಗೂ ವಾಸ್ತವ ಸ್ಥಿತಿಗೂ ಬಹಳ ವ್ಯತ್ಯಾಸ ಇರುತ್ತದೆಯಲ್ಲಾ?

ನಮಗೂ ಹಲವು ಬಾರಿ ಇಂತಹ ದೂರುಗಳು ಬಂದಿವೆ. ಮಾಲಿನ್ಯ ಕಾಣುತ್ತಿದ್ದರೂ 'ಇಲ್ಲ' ಎಂಬ ವರದಿ ನೀಡಲಾಗಿದೆ ಎನ್ನುತ್ತಾರೆ. ಆದರೆ, ಎಲ್ಲ ಪ್ರಕರಣಗಳಲ್ಲೂ ತಾಂತ್ರಿಕವಾಗಿ ಮತ್ತು ಕೂಲಂಕಷವಾಗಿ ಪರಿಶೀಲಿಸಿಯೇ ವರದಿಯನ್ನು ಮಂಡಳಿಯ ಅಧಿಕಾರಿಗಳು ನೀಡುತ್ತಾರೆ. ತಪ್ಪಾಗಿರುವ ಬಗ್ಗೆ ಈಗಾಗಲೇ ಒಂದೆರಡು ಪ್ರಕರಣಗಳು ನನ್ನ ಗಮನಕ್ಕೆ ಬಂದವು. ಅದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗಿದೆ. ಲೋಪಗಳು ಕಂಡುಬಂದರೆ ಜನರು ದೂರು ನೀಡಬಹುದು. ಇನ್ನು ಕೆಲವು ದಿನಗಳಲ್ಲಿ ಆನ್‌ಲೈನ್‌ನಲ್ಲಿ ದೂರು ಕೊಡುವ ವ್ಯವಸ್ಥೆ ಜಾರಿಗೆ ತರಲಾಗುತ್ತದೆ. ದೂರು ಸಲ್ಲಿಸಿದ ಮೇಲೆ ಅದರ ಸಂಪೂರ್ಣ ಪ್ರಕ್ರಿಯೆ, ಸ್ಥಿತಿ–ಗತಿಯನ್ನು ಆನ್‌ಲೈನ್‌ನಲ್ಲೇ ಅರಿತುಕೊಳ್ಳಬಹುದು. ನಿಗದಿತ ಸಮಯದಲ್ಲಿ ಪರಿಹಾರ ನೀಡದ ಅಧಿಕಾರಿಗಳ ಮೇಲೆ ಕ್ರಮವೂ ಆಗುತ್ತದೆ.

ದಿಟ್ಟ ನಿಲುವಿನಿಂದ ಎಲ್ಲವೂ ಸಾಧ್ಯ

ರಾಜ್ಯದಲ್ಲಿರುವ ಏಳು ಕೋಟಿ ಜನರಲ್ಲಿ ಅರ್ಧದಷ್ಟು ಜನರು ಪರಿಸರ ಕಾಪಾಡುವತ್ತ ದಿಟ್ಟ ನಿರ್ಧಾರ ಕೈಗೊಂಡರೆ ಮಾಲಿನ್ಯವೇ ಆಗುವುದಿಲ್ಲ. ನಿಯಂತ್ರಣಕ್ಕೆ ಮಂಡಳಿಯ ಅಗತ್ಯವೂ ಇರುವುದಿಲ್ಲ. ಮೂರೂವರೆ ಕೋಟಿ ಜನ ಕಾಳಜಿ ವಹಿಸಿ, ಹಸಿರು ಪರಿಸರದತ್ತ ಮುನ್ನಡೆದು, ಪ್ಲಾಸ್ಟಿಕ್ ಬಳಕೆ ನಿಲ್ಲಿಸಿದರೆ, ಪಿಒಪಿ ಮೂರ್ತಿ ಬೇಡ, ಮಾಲಿನ್ಯ ಪಟಾಕಿ ಬೇಡ ಎಂದು ನಿರ್ಧರಿಸಿದರೆ ಪರಿಸರ ಸುಖಮಯವಾಗುತ್ತದೆ. ಸಾರ್ವಜನಿಕರು ತಿಳಿವಳಿಕೆ, ಅಳವಡಿಕೆ, ಭಾಗವಹಿಸುವಿಕೆಯ ಜವಾಬ್ದಾರಿ ಹೊಂದಿದರೆ ಎಲ್ಲವನ್ನೂ ಸಾಧಿಸಲು ಸಾಧ್ಯ.

● ನಿರ್ದೇಶನ ಪಾಲಿಸದ ಅಧಿಕಾರಿಗಳ ಮೇಲೆ ಕ್ರಮವಾಗಿದೆಯೇ?

ನಮ್ಮ ಕಾಯ್ದೆಗಳು ಸ್ಪಷ್ಟವಾಗಿವೆ. ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಿದರೆ ಯಾರೂ ನುಣುಚಿಕೊಳ್ಳಲು ಸಾಧ್ಯವಿಲ್ಲ. ಇದನ್ನು ಸಂಬಂಧಿಸಿದ ಇಲಾಖೆ ಅಥವಾ ಅಧಿಕಾರಿಗಳು ಅರಿತುಕೊಳ್ಳಬೇಕು. ಮಂಡಳಿ ತೀಕ್ಷ್ಣವಾಗಿ ಕ್ರಮ ಕೈಗೊಳ್ಳುವ ಸಂದರ್ಭದಲ್ಲಿ ವ್ಯತಿರಿಕ್ತವಾಗಿರದೆ ಜವಾಬ್ದಾರಿಯುತವಾಗಿ ಕೆಲಸ ಮಾಡಬೇಕು. ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ), ಬೆಂಗಳೂರು ಜಲಮಂಡಳಿ, ನಗರಾಭಿವೃದ್ಧಿ ಇಲಾಖೆಗಳ ಅಧಿಕಾರಿಗಳು ನಮ್ಮ ಆದೇಶಗಳನ್ನು ಸರಿಯಾಗಿ ಪಾಲಿಸುತ್ತಿಲ್ಲ. ರಾಜ್ಯದಲ್ಲಿ ಬಹುತೇಕ ತ್ಯಾಜ್ಯ ಸಂಸ್ಕರಣಾ ಘಟಕಗಳು (ಎಸ್‌ಟಿಪಿ) ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂಬ ವರದಿ ನಮ್ಮಲ್ಲಿದೆ. ಸರಿಪಡಿಸಿಕೊಳ್ಳಲು ಅವರಿಗೆ ಅವಕಾಶ ನೀಡಲಾಗಿದೆ. ಬೇಜವಾಬ್ದಾರಿ ಮುಂದುವರಿದರೆ ಮುಂದಿನ ದಿನಗಳಲ್ಲಿ ಕಠಿಣ ಕ್ರಮ ಕೈಗೊಳ್ಳಲು ಹಿಂಜರಿಯುವುದಿಲ್ಲ. ನಮಗೆ ಹಸಿರು ನ್ಯಾಯ ಮಂಡಳಿಯ (ಎನ್‌ಜಿಟಿ) ಆದೇಶ, ಸಹಕಾರವೂ ಇದೆ.

● ಪಿಒಪಿ ಗಣೇಶನ ಮೂರ್ತಿ, ಪಟಾಕಿಗಳನ್ನು ಪ್ರತಿ ವರ್ಷ ಕೊನೆ ಕ್ಷಣದಲ್ಲಿ ನಿಷೇಧಿಸುವುದೇಕೆ?

ಮಾಲಿನ್ಯಕಾರಕ ವಸ್ತುಗಳನ್ನು ನಿಷೇಧಿಸುವುದು ಮಂಡಳಿಯ ಜವಾಬ್ದಾರಿ. ಆದರೆ, ಆ ವಸ್ತುಗಳ ತಯಾರಿಕೆಯನ್ನು ನಿಯಂತ್ರಿಸುವುದು ಸರ್ಕಾರ ಹಾಗೂ ಸ್ಥಳೀಯ ಆಡಳಿತದ ಹೊಣೆ. ತಯಾರಿಕೆಗಳ ಬಗ್ಗೆ ಗಮನವಹಿಸಿ, ಅವುಗಳನ್ನು ತಡೆಗಟ್ಟಬೇಕು. ಕುಂಬಳಗೋಡು ಬಳಿ ಇತ್ತೀಚೆಗೆ ಪಿಒಪಿ ಮೂರ್ತಿಗಳನ್ನು ಬೃಹತ್ ಪ್ರಮಾಣದಲ್ಲಿ ಸ್ಥಳೀಯ ಆಡಳಿತ ಸಹಯೋಗದಲ್ಲಿ ಜಪ್ತಿ ಮಾಡಲಾಯಿತು. ನಾಗರಿಕರು ಗಮನಿಸಿ ಮಾಹಿತಿ ನೀಡಿದರೆ, ವರ್ಷಪೂರ್ತಿ ಸ್ಥಳೀಯ ಆಡಳಿತ ಕಾರ್ಯನಿರ್ವಹಿಸುತ್ತದೆ. ಈ ಮೂಲಕವಷ್ಟೇ ಪಿಒಪಿ ಮೂರ್ತಿ, ರಾಸಾಯನಿಕ ಪಟಾಕಿಗಳನ್ನು ಸಂಪೂರ್ಣವಾಗಿ ನಿಯಂತ್ರಿಸಬಹುದು.

● ಸುವರ್ಣ ಸಂಭ್ರಮದ ಕಾರ್ಯಕ್ರಮ ಹೇಗಿರಲಿದೆ?

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸ್ಥಾಪನೆಯಾಗಿದ್ದು 1974ರಲ್ಲಿಯಾದರೂ ಕಾಯ್ದೆಗಳು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ಬಂದಿದ್ದು 2000 ಇಸವಿಯ ನಂತರ ಎಂದೇ ಹೇಳಬಹುದು. 50 ವರ್ಷ ಪೂರೈಸಿರುವ ಮಂಡಳಿಯ ಸುವರ್ಣ ಮಹೋತ್ಸವದ ಕಾರ್ಯಕ್ರಮಗಳನ್ನು ಒಂದೇ ವೇದಿಕೆ, ಒಂದೇ ದಿನಕ್ಕೆ ಸೀಮಿತಗೊಳಿಸುತ್ತಿಲ್ಲ. ಮಂಡಳಿ ಸ್ಥಾಪನೆಗೆ ಕಾರಣರಾದ, ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರ ಸ್ಮರಣೆಯೊಂದಿಗೆ ರಾಜ್ಯದಾದ್ಯಂತ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಇದೇ 10ರಿಂದ ಜಿಲ್ಲಾ ಕೇಂದ್ರಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಿ, ಜಾಗೃತಿ ಅಭಿಯಾನ ನಡೆಸಲಾಗುತ್ತಿದೆ. ವಿಧಾನಸಭೆ ಕ್ಷೇತ್ರಗಳಲ್ಲಿ ಕಾರ್ಯಕ್ರಮಗಳ ಜೊತೆಗೆ, ಸ್ಪರ್ಧೆಗಳನ್ನೂ ಆಯೋಜಿಸಲಾಗುತ್ತಿದೆ. ಈ ಮೂಲಕ ಯುವಕರಲ್ಲಿ ಪರಿಸರ ಕಾಳಜಿಯನ್ನು ಹೆಚ್ಚಿಸಲು ಕ್ರಮ ಕೈಗೊಂಡಿದ್ದೇವೆ. ಸಂವಾದ, ಚರ್ಚೆಗಳು, ಚಿತ್ರ ಸ್ಪರ್ಧೆಗಳು, ರೀಲ್ಸ್ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.ಪ್ರತಿಯೊಂದು ಜಿಲ್ಲೆಯಲ್ಲಿ ಕಾರ್ಯಕ್ರಮ ನಡೆಸಲು ಅವಕಾಶ ಮಾಡಿಕೊಡಲು ಜಿಲ್ಲಾಡಳಿತಕ್ಕೆ ಸೂಚಿಸಬೇಕು ಎಂದು ಮುಖ್ಯಮಂತ್ರಿಯವರಲ್ಲಿ ಮನವಿ ಮಾಡಿಕೊಂಡಿದ್ದೇವೆ. ಅವರ ಸೂಚನೆಯಂತೆ ಜಿಲ್ಲಾಡಳಿತಗಳು ಕಾರ್ಯಕ್ರಮ ನಿರ್ವಹಿಸುತ್ತಿದ್ದು, ಹಣವನ್ನು ಮಂಡಳಿಯಿಂದ ಭರಿಸಲಾಗುತ್ತದೆ. ಇಂದಿರಾ ಗಾಂಧಿಯವರ ಜನ್ಮದಿನವಾದ ನ.19ರಂದು ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ಮಟ್ಟದ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಲೋಕಸಭೆ ವಿಪಕ್ಷದ ನಾಯಕ ರಾಹುಲ್ ಗಾಂಧಿಯವರನ್ನೂ ಆಹ್ವಾನಿಸಲಾಗುತ್ತಿದೆ.

ನೊಬೆಲ್ ಶಾಂತಿ ಪ್ರಶಸ್ತಿ

ಗೆದ್ದು ಸೋತರೇ ಮಾರಿಯಾ?



● ಬಿ.ವಿ.ಶ್ರೀನಾಥ್

ಹಿಂದೆಂದೂ ಕಾಣದ ರೀತಿಯಲ್ಲಿ ಈ ಬಾರಿಯ ನೊಬೆಲ್ ಶಾಂತಿ ಪ್ರಶಸ್ತಿಯ ಬಗ್ಗೆ ಜನ ಉತ್ಕಂಠಿತರಾಗಿದ್ದರು. 'ಎಂಟು ಯುದ್ಧಗಳನ್ನು ನಿಲ್ಲಿಸಿದ್ದೇನೆ' ಎನ್ನುವ ಮೂಲಕ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಶಾಂತಿ ಪ್ರಶಸ್ತಿ ತನಗೇ ಸಲ್ಲಬೇಕು ಎಂದು ನೇರವಾಗಿಯೇ ಪ್ರತಿಪಾದಿಸಿದ್ದರು. ಅಮೆರಿಕದ ಅಧ್ಯಕ್ಷರಾಗಿದ್ದ ಥಿಯೊಡರ್ ರೂಸ್‌ವೆಲ್ಟ್, ವುಡ್ರೋ ವಿಲ್ಸನ್, ಜಿಮ್ಮಿ ಕಾರ್ಟರ್, ಬರಾಕ್ ಒಬಾಮ ಅವರು ನೊಬೆಲ್ ಶಾಂತಿ ಪ್ರಶಸ್ತಿಗೆ ಭಾಜನರಾದ ಇತಿಹಾಸ ಅವರ ಕಣ್ಣಮುಂದಿತ್ತು. ಟ್ರಂಪ್ ಅವರ ಹೆಸರು ಘೋಷಣೆಯೊಂದೇ ಬಾಕಿ ಎನ್ನುವಷ್ಟು ತೀವ್ರವಾಗಿತ್ತು ಅವರ ಮತ್ತು ಬೆಂಬಲಿಗರ ವಕಾಲತ್ತು.

ನಾರ್ವೆಯ ನೊಬೆಲ್ ಸಮಿತಿಯು ಪ್ರಶಸ್ತಿ ಪುರಸ್ಕೃತರ ಹೆಸರು ಘೋಷಿಸಿದಾಗ ಅಚ್ಚರಿ ಕಾದಿತ್ತು. ಟ್ರಂಪ್ ಅವರ ಪ್ರಬಲ 'ಸ್ಪರ್ಧೆ'ಯನ್ನೂ ಮೀರಿ ಮಾರಿಯಾ ಕೊರಿನಾ ಮಚಾದೊ ಅವರು ಪ್ರಶಸ್ತಿಗೆ ಆಯ್ಕೆಯಾದರು. ಶತಮಾನಕ್ಕೂ ಹೆಚ್ಚಿನ ಇತಿಹಾಸವಿರುವ ನೊಬೆಲ್ ಶಾಂತಿ ಪ್ರಶಸ್ತಿಯ 143 ಪುರಸ್ಕೃತರ ಪೈಕಿ ಮಾರಿಯಾ 20ನೇ ಮಹಿಳೆ. ವಿಶ್ವದ 'ದೊಡ್ಡಣ್ಣ'ನ ಅಧ್ಯಕ್ಷ ಸ್ಥಾನದಲ್ಲಿ ಕುಳಿತು ಜಗತ್ತನ್ನೇ ತನ್ನ ಅಂಕೆಗೆ ತಕ್ಕಂತೆ ಕುಣಿಸಲು ಹೊರಟಿರುವ, ಅಧಿಕಾರ, ಪೌರುಷದ ಪ್ರತೀಕದಂತಿರುವ ಟ್ರಂಪ್ ಅವರ ಬದಲಿಗೆ ಮಹಿಳೆಯೊಬ್ಬರಿಗೆ ಪ್ರಶಸ್ತಿ ದಕ್ಕಿದ್ದನ್ನು ಅನೇಕರು ಸ್ವಾಗತಿಸಿದರು.

ಮಾರಿಯಾ ಕೊರಿನಾ ಮಚಾದೊ, ವೆನೆಜುವೆಲಾದ ವಿರೋಧ ಪಕ್ಷವಾದ 'ವೆಂಟೆ ವೆನೆಜುವೆಲಾ' ನಾಯಕಿ; ಉಕ್ಕಿನ ಮಹಿಳೆ ಎಂದೇ ಅಲ್ಲಿ ಪ್ರಸಿದ್ಧರಾಗಿರುವವರು. ಸರ್ವಾಧಿಕಾರದ ಕಬಂಧ ಬಾಹುಗಳ ಹಿಡಿತ ಬಿಗಿಯಾಗುತ್ತಿರುವ ಕಾಲದಲ್ಲಿ ಪ್ರಜಾಪ್ರಭುತ್ವವನ್ನು ಬಲಪಡಿಸಲು ಹೋರಾಡುತ್ತಿರುವುರಿಂದ ಮಾರಿಯಾ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ನೊಬೆಲ್ ಸಮಿತಿ ಹೇಳಿದೆ.

ಕರಾಕಸ್‌ನ ಪ್ರತಿಷ್ಠಿತ ಕೈಗಾರಿಕೋದ್ಯಮಿಯ ಕುಟುಂಬದಲ್ಲಿ ಹಿರಿಯ ಮಗಳಾಗಿ ಜನಿಸಿದ (1967) ಮಾರಿಯಾ, ಮೊದಲು ಕರಾಕಸ್‌ನ ಕ್ಯಾಥೋಲಿಕ್ ಗರ್ಲ್ಸ್ ಸ್ಕೂಲ್ ಮತ್ತು ನಂತರ ಮೆಸಾಚುಸೆಟ್ಸ್‌ನ ವೆಲ್ಲೆಸ್ಲಿ ಬೋರ್ಡಿಂಗ್ ಸ್ಕೂಲ್‌ನಲ್ಲಿ ವಿದ್ಯಾಭ್ಯಾಸ ಮಾಡಿದರು. ಎಂಜಿನಿಯರಿಂಗ್ ಮತ್ತು ಹಣಕಾಸು ವಿಷಯಗಳಲ್ಲಿ ಉನ್ನತ ಶಿಕ್ಷಣ ಪಡೆದು, ಅಲ್ಪಕಾಲ ತಮ್ಮ ಕುಟುಂಬದ ಉಕ್ಕಿನ ಉದ್ಯಮದಲ್ಲಿ ಕೆಲಸ ಮಾಡಿದರು.

ಅದು ವೆನೆಜುವೆಲಾ ತೀವ್ರವಾದ ಪಲ್ಲಟಗಳಿಗೆ ಸಾಕ್ಷಿಯಾಗುತ್ತಿದ್ದ ಕಾಲ. ಎಡಪಂಥೀಯರಾಗಿದ್ದ ಹುಗೋ ಚಾವೇಸ್, 1998ರಲ್ಲಿ ಅಧಿಕಾರಕ್ಕೇರಿದ ನಂತರ ಸಮಾಜವಾದದ ಪ್ರಯೋಗಗಳಿಗೆ ದೇಶವನ್ನು ಒಡ್ಡಿ, ಮಹತ್ವದ ಬದಲಾವಣೆಗಳಿಗೆ ನಾಂದಿ ಹಾಡಿದ್ದರು. ಅದರಿಂದ ಸಮಸ್ಯೆಗಳು ಬಹುಮಟ್ಟಿಗೆ ಪರಿಹಾರವಾದವಲ್ಲದೇ, ದೇಶವು ಆರ್ಥಿಕವಾಗಿಯೂ ಬೆಳವಣಿಗೆ ಕಂಡಿತು. ಜತೆಯಲ್ಲೇ, ಚಾವೇಸ್ ಸರ್ವಾಧಿಕಾರಿ ಧೋರಣೆಯನ್ನು ರೂಢಿಸಿಕೊಂಡರು.

2002ರಲ್ಲಿ 'ಸುಮಾಟೆ' ಎನ್ನುವ ಸರ್ಕಾರೇತರ ಸಂಸ್ಥೆಯನ್ನು ಆರಂಭಿಸುವ ಮೂಲಕ ಮಾರಿಯಾ ಸಾರ್ವಜನಿಕ ಜೀವನ ಪ್ರವೇಶಿಸಿದರು. ಅಧ್ಯಕ್ಷ ಹುಗೋ ಚಾವೇಸ್ ನೇತೃತ್ವದ ಸರ್ಕಾರದ ವಿರುದ್ಧ ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯದಲ್ಲಿ ತೊಡಗಿದರು. ಚುನಾವಣಾ ವ್ಯವಸ್ಥೆಯ ಸುಧಾರಣೆ ಮಾಡುವ ದಿಸೆಯಲ್ಲಿ ಸಂಸ್ಥೆ ಕಾರ್ಯನಿರ್ವಹಿಸತೊಡಗಿತು. ಇದೇ ಅವಧಿಯಲ್ಲಿ ಅವರು ಚಾವೇಸ್ ಅವರನ್ನು ಹುದ್ದೆಯಿಂದ ಕೆಳಗಿಳಿಸುವ ಪ್ರಯತ್ನ ನಡೆಸಿದರಾದರೂ, ಅದು ಕೈಗೂಡಲಿಲ್ಲ.

ದೇಶದಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತಂದ ಅಧ್ಯಕ್ಷ ಹುಗೋ ಚಾವೇಸ್, 2010ರಲ್ಲಿ ಕೈಗಾರಿಕೆಗಳನ್ನು ರಾಷ್ಟ್ರೀಕರಣ ಮಾಡಿದರು. ಪರಿಣಾಮವಾಗಿ, ಮಾರಿಯಾ ಕುಟುಂಬದ ಒಡೆತನದಲ್ಲಿದ್ದ ದೇಶದಲ್ಲಿಯೇ ಅತಿ ಹೆಚ್ಚು ಉಕ್ಕು ಉತ್ಪಾದನೆ ಮಾಡುತ್ತಿದ್ದ ಸಿವೆನ್ಸಾ ಕಂಪನಿ ಭಾಗಶಃ ಸರ್ಕಾರದ ಪಾಲಾಯಿತು. 'ರಾಷ್ಟ್ರೀಕರಣ ಎಂದರೆ, ಒಂದು ರೀತಿಯ ದರೋಡೆ' ಎಂದೇ ಭಾವಿಸಿದ್ದ ಮಾರಿಯಾ, ಅದನ್ನು ನ್ಯಾಷನಲ್ ಅಸೆಂಬ್ಲಿಯಲ್ಲಿ ಚಾವೇಸ್ ಅವರಿಗೇ ಹೇಳಿದ್ದರು.

'ಸುಮಾಟೆ'ಯು ಅಧ್ಯಕ್ಷರ ವಿರುದ್ಧದ ಹೋರಾಟವನ್ನು ತೀವ್ರಗೊಳಿಸಿತು. ಚಾವೇಸ್ ಬೆಂಬಲಿಗರಿಂದ ಮಾರಿಯಾ ಕುಟುಂಬಸ್ಥರು ಜೀವಬೆದರಿಕೆಗಳನ್ನೂ ಎದುರಿಸಬೇಕಾಯಿತು. ವಕೀಲರೊಬ್ಬರನ್ನು ಮದುವೆಯಾಗಿ ಮೂರು ಮಕ್ಕಳ ತಾಯಿಯಾಗಿದ್ದ ಮಾರಿಯಾ, ಬೆದರಿಕೆಯ ಕಾರಣಕ್ಕೆ ಮಕ್ಕಳನ್ನು ವಿದೇಶಕ್ಕೆ ಕಳುಹಿಸಿದರು. 2010ರಲ್ಲಿ ದೇಶದಲ್ಲಿಯೇ ಅತ್ಯಧಿಕ ಮತಗಳನ್ನು ಪಡೆಯುವ ಮೂಲಕ ನ್ಯಾಷನಲ್ ಅಸೆಂಬ್ಲಿಗೆ ಆರಿಸಿ ಬಂದರು.

ಚಾವೇಸ್ ಕ್ಯಾನ್ಸರ್‌ಗೆ ಒಳಗಾಗಿ ಸಾವಿಗೀಡಾದ ನಂತರ ಉತ್ತರಾಧಿಕಾರಿಯಾಗಿ ದೇಶದ ಅಧ್ಯಕ್ಷ ಸ್ಥಾನಕ್ಕೇರಿದವರು ನಿಕೋಲಸ್ ಮಡುರೊ. ಸರ್ವಾಧಿಕಾರದ ಪಟ್ಟುಗಳನ್ನು ಮತ್ತಷ್ಟು ಬಿಗಿಗೊಳಿಸಿದ ಮಡುರೊ, ದೇಶದ ಮೇಲೆ ಸಂಪೂರ್ಣ ಹಿಡಿತ ಸಾಧಿಸಿದರು. ಮಾರಿಯಾ ಅವರೂ ಸೇರಿದಂತೆ ವಿರೋಧ ಪಕ್ಷಗಳ ಮುಖಂಡರು ಸರ್ವಪ್ರಯತ್ನ ಮಾಡಿದರೂ, ಅಂದಿನಿಂದಲೂ ಮಡುರೊ ಅವರೇ ಅಧ್ಯಕ್ಷರಾಗಿ ಮುಂದುವರಿದಿದ್ದಾರೆ. ಮಡುರೊ ಮೂರು ಬಾರಿ ಚುನಾವಣೆಯನ್ನು (2013, 20118 ಮತ್ತು 2024) ಎದುರಿಸಿದ್ದು, ಪ್ರತಿ ಚುನಾವಣೆಯನ್ನೂ ಅಕ್ರಮವಾಗಿಯೇ ಗೆಲ್ಲುತ್ತಿದ್ದಾರೆ ಎಂದು ಮಾರಿಯಾ ದೇಶದ ಒಳಗೆ ಮತ್ತು ಹೊರಗೆ ಅದರ ಬಗ್ಗೆ ಪ್ರಸ್ತಾಪಿಸುತ್ತಲೇ ಇದ್ದಾರೆ.

ವಿವಿಧ ಗುಂಪುಗಳಲ್ಲಿ ಹಂಚಿಹೋಗಿದ್ದ ವೆನೆಜುವೆಲಾದ ವಿರೋಧ ಪಕ್ಷಗಳನ್ನು ಒಗ್ಗೂಡಿಸುವ ಪ್ರಯತ್ನ ಮಾಡಿ, ಅದರಲ್ಲಿ ಒಂದಿಷ್ಟು ಯಶಸ್ಸನ್ನೂ ಕಂಡರು. ದೇಶದಲ್ಲಿ ಸರ್ವಾಧಿಕಾರ ಅಂತ್ಯಗೊಳಿಸಿ, ಪ್ರಜಾಪ್ರಭುತ್ವ ತರುವುದು ತಮ್ಮ ಧ್ಯೇಯ ಎಂದು ಪ್ರತಿಪಾದಿಸಿದ ಅವರು, 2023ರಲ್ಲಿ ಪಕ್ಷದ ಪದಾಧಿಕಾರಿಗಳ ಪ್ರಾಥಮಿಕ ಚುನಾವಣೆಯಲ್ಲಿ ಗೆಲುವು ಸಾಧಿಸಿದರು. 2024ರ ಅಧ್ಯಕ್ಷೀಯ ಚುನಾವಣೆಗೆ ಸ್ಪರ್ಧಿಸುವುದು ಅವರ ಗುರಿಯಾಗಿತ್ತು. ಆದರೆ, ಹಣಕಾಸು ಅವ್ಯವಹಾರ, ಅಮೆರಿಕವನ್ನು ಬೆಂಬಲಿಸಿದ್ದು ಸೇರಿದಂತೆ ಹಲವು ಆರೋಪಗಳ ಮೇರೆಗೆ ಚುನಾವಣೆಗೆ ಸ್ಪರ್ಧಿಸುವುದಕ್ಕೆ ಸುಪ್ರೀಂ ಕೋರ್ಟ್ ನಿರ್ಬಂಧ ಹೇರಿತು. ಮಾರಿಯಾ ಅವರ ಪರವಾಗಿ ಎಡ್ಮಂಡೊ ಗೋನ್ಸಾಲ್ವೆಸ್ ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸಿದರೂ, ಮಡುರೋ ವಿರುದ್ಧ ಸೋತರು. ಚುನಾವಣೆಯಲ್ಲಿ ಅಕ್ರಮ ನಡೆದಿದೆ ಎಂದು ಮಾರಿಯಾ ಮತ್ತೆ ಕೂಗೆಬ್ಬಿಸಿದರು.

ಮಡುರೊ ಸರ್ಕಾರ ಮತ್ತು ಮಾರಿಯಾ ನಡುವಿನ ಸಂಘರ್ಷ ತೀವ್ರವಾಗಿದೆ. ಎಡ್ಮಂಡೋ ದೇಶ ತೊರೆದಿದ್ದಾರೆ. ಅವರ ಬೆಂಬಲಿಗರ ಪೈಕಿ ಬಹುತೇಕರು ಜೈಲು ಸೇರಿದ್ದಾರೆ. ವೆನೆಜುವೆಲಾದಲ್ಲಿ ಮಾರಿಯಾ ಒಬ್ಬಂಟಿ ಹೋರಾಟ ಮುಂದುವರಿಸಿದ್ದಾರೆ. ಇಂಥ ಬಿಕ್ಕಟ್ಟಿನ ವೇಳೆಯಲ್ಲಿ ಅವರಿಗೆ ನೊಬೆಲ್ ಶಾಂತಿ ಪ್ರಶಸ್ತಿ ಸಂದಿದೆ. ಆದರೆ, ತಮಗೆ ಸಿಕ್ಕ ಪ್ರಶಸ್ತಿಯನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಅರ್ಪಿಸುವ ಮೂಲಕವೂ ಅವರು ಪ್ರಶಸ್ತಿಯ ಗೌರವವನ್ನು ಕುಗ್ಗಿಸಿದ್ದಾರೆ ಎಂದು ಭಾವಿಸುವವರ ಸಂಖ್ಯೆ ದೊಡ್ಡದಾಗಿಯೇ ಇದೆ.

ಡೊನಾಲ್ಡ್ ಟ್ರಂಪ್‌ಗೆ ಪ್ರಶಸ್ತಿ ಅರ್ಪಿಸಿದ್ದು ಏಕೆ?

ಮಾರಿಯಾ ಅವರಿಗೆ ನೊಬೆಲ್ ಶಾಂತಿ ಪ್ರಶಸ್ತಿ ಸಂದಿರುವುದರ ಬಗ್ಗೆ ಕೆಲವು ವಲಯಗಳಲ್ಲಿ ಅಸಮಾಧಾನ, ವಿರೋಧ ವ್ಯಕ್ತವಾಗಿದೆ.

ಒಪೆಕ್ ರಾಷ್ಟ್ರಗಳಲ್ಲಿ ಒಂದಾಗಿರುವ, ಅನಿಲ ಮತ್ತು ಕಚ್ಚಾ ತೈಲಕ್ಕೆ ಹೆಸರಾಗಿರುವ ವೆನೆಜುವೆಲಾ ಮೇಲೆ ಅಮೆರಿಕ ಮೊದಲಿನಿಂದಲೂ ಕಣ್ಣಿಟ್ಟಿದೆ. ಆದರೆ, ಚಾವೇಸ್ ಅಧ್ಯಕ್ಷರಾಗಿದ್ದಾಗ ಅಮೆರಿಕ ವಿರೋಧಿ ನಿಲುವು ತಳೆದರು. ಹಾಲಿ ಅಧ್ಯಕ್ಷ ಮಡುರೊ ಕೂಡ ಅದನ್ನೇ ಮುಂದುವರಿಸುತ್ತಿದ್ದಾರೆ. ಅಮೆರಿಕವು ಹಿಂದಿನಿಂದಲೂ ವೆನೆಜುವೆಲಾ ಮೇಲೆ ಹಲವು ನಿರ್ಬಂಧಗಳನ್ನು ವಿಧಿಸುತ್ತಲೇ ಬಂದಿದ್ದು, ಟ್ರಂಪ್ ಕಾಲದಲ್ಲೂ ಅದು ಮುಂದುವರಿದಿದೆ. ಆದಾಗ್ಯೂ, ಮಾರಿಯಾ ಅವರು ಬಹಿರಂಗವಾಗಿಯೇ ಟ್ರಂಪ್ ಅವರನ್ನು ಬೆಂಬಲಿಸುತ್ತಿದ್ದಾರೆ. ಟ್ರಂಪ್ ಅವರ ತೀವ್ರ 'ಸ್ಪರ್ಧೆ' ಎದುರಿಸಿ ನೊಬೆಲ್ ಶಾಂತಿ ಪ್ರಶಸ್ತಿಗೆ ಪಾತ್ರರಾದ ಮಾರಿಯಾ, ಪ್ರಶಸ್ತಿಯನ್ನು ವೆನೆಜುವೆಲಾದ ಹೋರಾಟಗಾರರ ಜತೆಗೆ ಟ್ರಂಪ್ ಅವರಿಗೂ ಅರ್ಪಿಸಿದ್ದು ಉಲ್ಲೇಖಾರ್ಹ.

ಕಳೆದ ಕೆಲವು ವಾರಗಳಲ್ಲಿ ವೆನೆಜುವೆಲಾದ ಕರಾವಳಿ ಮೂಲಕ ಸಾಗುತ್ತಿದ್ದ ಹಡಗುಗಳ ಮೇಲೆ ಅಮೆರಿಕ ದಾಳಿ ನಡೆಸಿದೆ. ವೆನೆಜುವೆಲಾದ 27 ಮಂದಿ ಸಾವಿಗೀಡಾಗಿದ್ದರು. ಅದರ ವಿರುದ್ಧ ವೆನೆಜುವೆಲಾದಲ್ಲಿ ಆಕ್ರೋಶ ವ್ಯಕ್ತವಾಗಿದೆ. ಅವರು ಮಾದಕ ದ್ರವ್ಯ ಕಳ್ಳಸಾಗಣೆ ಮಾಡುತ್ತಿದ್ದರು ಎಂದು ಅಮೆರಿಕ ತನ್ನ ಕಾರ್ಯಾಚರಣೆ ಸಮರ್ಥಿಸಿಕೊಂಡಿದೆ. ಮಾರಿಯಾ ಕೂಡ ಅಮೆರಿಕದ ವಾದವನ್ನೇ ಮುಂದುವರಿಸಿ, ಟ್ರಂಪ್ ಅವರ ಕಾರ್ಯಾಚರಣೆಯನ್ನು ಬೆಂಬಲಿಸಿ ಟೀಕೆಗಳಿಗೆ ಗುರಿಯಾಗಿದ್ದಾರೆ. ವೆನೆಜುವೆಲಾ ಮೇಲೆ ಅಮೆರಿಕ ನಿರ್ಬಂಧ ಹೇರಿದ್ದನ್ನು ಅವರು ಸ್ವಾಗತಿಸಿದ್ದರು. ದೇಶದಲ್ಲಿ ಆರ್ಥಿಕತೆ ಕುಸಿದು, ಜನ ತೀವ್ರ ಬಡತನ ಅನುಭವಿಸುತ್ತಿದ್ದರೂ ಮಾರಿಯಾ ಅಮೆರಿಕ ಪರ ನಿಲುವು ಮುಂದುವರಿಸಿದ್ದಾರೆ ಎನ್ನುವ ಅಸಮಾಧಾನ ಜನರಲ್ಲಿದೆ.

ಟ್ರಂಪ್ ಅವರ ಬೆಂಬಲದಿಂದ ಮಡುರೊ ಅವರನ್ನು ಅಧಿಕಾರದಿಂದ ಕೆಳಗಿಳಿಸುವುದು ಮಾರಿಯಾ ಅವರ ಗುರಿ ಎನ್ನಲಾಗುತ್ತಿದೆ. ಸೇನಾ ದಾಳಿ, ಹಿಂಸೆಯ ಮೂಲಕವಾದರೂ ಸರಿ, ವೆನೆಜುವೆಲಾದ ಸರ್ಕಾರವನ್ನು ಬದಲಿಸಬೇಕು ಎನ್ನುವುದು ಅವರ ಪ್ರತಿಪಾದನೆಯಾಗಿದ್ದು, ಅವರಿಗೆ ನೊಬೆಲ್ ಶಾಂತಿ ಪ್ರಶಸ್ತಿ ನೀಡಿರುವುದು ಸರಿ ಅಲ್ಲ ಎಂದು ಕೆಲವರು ವಿರೋಧ ವ್ಯಕ್ತಪಡಿಸಿದ್ದಾರೆ. ಕೌನ್ಸಿಲ್ ಆನ್ ಅಮೆರಿಕನ್ ಇಸ್ಲಾಮಿಕ್ ರಿಲೇಷನ್ಸ್ (ಸಿಎಐಆರ್) ನೊಬೆಲ್ ಸಮಿತಿಯು ಪ್ರಶಸ್ತಿಯನ್ನು ಪುನರ್ ಪರಿಶೀಲನೆ ಮಾಡಬೇಕು ಎಂದೂ ಒತ್ತಾಯಿಸಿದೆ.

ಉದಾರವಾದಿ ಆರ್ಥಿಕ ನೀತಿಗಳ ಪ್ರತಿಪಾದಕಿಯಾದ ಮಾರಿಯಾ ಅವರು, ದೇಶದ ಅನಿಲ ಮತ್ತು ತೈಲ ಉತ್ಪಾದನೆಯನ್ನು ಖಾಸಗೀಕರಣಗೊಳಿಸುವ ಇರಾದೆಯನ್ನೂ ಹೊಂದಿದ್ದಾರೆ ಎಂದೂ ಮಾಧ್ಯಮಗಳು ವರದಿ ಮಾಡಿವೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

18 ಅಕ್ಟೋಬರ್ 2025 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣದ್ವಾದಶಿ ಗಂ. 12-20, **ನಕ್ಷತ್ರ:** ಪೂರ್ವಾಫಲ್ಗುಣಿ ಗಂ. 15-42, **ಯೋಗ:** ಬ್ರಹ್ಮ ಗಂ. 25-48, **ಕರಣ:** ತೈತಿಲ ಗಂ. 12-20 ತುಲಾ ಮಾಸದ 01 ನೇ ದಿನ. **ಮಳೆ ನಕ್ಷತ್ರ:** ಚಿತ್ತಾ 3 ನೇ ಪಾದ. **ರಾಹುಕಾಲ:** ಬೆಳಿಗ್ಗೆ 09-00 10-30, **ಸೂರ್ಯೋದಯ:** 06-25 **ಸೂರ್ಯಾಸ್ತ :** 06-06, **ಮುಸ್ಲಿಂ ದಿನಾಂಕ:** 25 ರಬಿಯುಸ್ಸಾನಿ, **ದಿನ ವಿಶೇಷ:** ಶನಿ ಪ್ರದೋಷ, **ಅದೃಷ್ಟ ಸಂಖ್ಯೆ:** 7, 12

ಮೇಷ: ವ್ಯಕ್ತಿತ್ವದಲ್ಲಿ ಹಾಗೂ ಧನಲಾಭದಲ್ಲಿ ಒಂದು ರೀತಿಯ ಹೊಸ ಅನುಭವ ಹಾಗೂ ಅದೃಷ್ಟವನ್ನು ಕಾಣುವಿರಿ. ಬಟ್ಟೆ ವ್ಯಾಪಾರಿಗಳಿಗೆ ಲಾಭ ಸಿಗುವುದು. ಜಲ ಮಂಡಳಿ ನೌಕರರಿಗೆ ವೇತನ ಹೆಚ್ಚಳವಾಗಲಿದೆ.

ವೃಷಭ: ವ್ಯವಹಾರ ವೃದ್ಧಿಯಾಗಿ ಸಮಸ್ಯೆಗಳು ಬಗೆ ಹರಿಯಲಿವೆ. ಲೆಕ್ಕ ಪರಿಶೋಧಕರ ಕೆಲಸದಲ್ಲಿ ತೃಪ್ತಿಯಿದೆ. ಸ್ವತ್ತು ವಿವಾದ ರಾಜಿ ಸಂಧಾನದ ಮೂಲಕ ಬಗೆಹರಿಯಲಿದೆ. ಕಾರ್ಯಕ್ಷೇತ್ರದಲ್ಲಿ ಒಳ್ಳೆಯ ಅವಕಾಶ ಸಿಗಲಿದೆ.

ಮಿಥುನ: ಸೃಜನಶೀಲತೆಯನ್ನು ಪ್ರದರ್ಶಿಸಲು ಬೇಕಾದಷ್ಟು ಅವಕಾಶಗಳು ಒದಗಿ ಬರಲಿವೆ. ಮಾನಸಿಕ ಸ್ಥೈರ್ಯ ದೃಢವಾಗಿದೆ. ಹಲವು ಕಾರಣಗಳಿಗೆ ಸ್ನೇಹಿತರ ಮಾರ್ಗದರ್ಶನ, ಬೆಂಬಲವನ್ನು ಅಪೇಕ್ಷಿಸುವಂತಾಗುವುದು.

ಕರ್ಕಾಟಕ: ವ್ಯವಹಾರಗಳಲ್ಲಿ ಈ ದಿನ ಹಿಡಿತವನ್ನು ಸಾಧಿಸಲಿದ್ದೀರಿ. ಮನೆಯ ರಿಪೇರಿ ಕೆಲಸಗಳಿಗೆ ಹಣ ವ್ಯಯವಾಗುತ್ತದೆ. ಹಿರಿಯರ ಆಶೀರ್ವಾದ ಪಡೆದು ಕೆಲಸ ಆರಂಭಿಸಿದಲ್ಲಿ ಜಯ ನಿಮ್ಮದೇ ಆಗಿರುತ್ತದೆ.

ಸಿಂಹ: ಕೌಟುಂಬಿಕ ವಿಷಯಗಳಲ್ಲಿ ಬಹಳ ಖುಷಿ ಸಿಗುವುದು. ಪ್ರೀತಿ ಪಾತ್ರರೊಂದಿಗೆ ಹೊಸ ಯೋಜನೆಯನ್ನು ಆರಂಭಿಸುವ ಬಗ್ಗೆ ಚರ್ಚೆ ನಡೆಸುವಿರಿ. ನಿರ್ಣಯ ಕೈಗೊಳ್ಳುವ ಸಮಯದಲ್ಲಿ ಸಹನೆಯಿಂದ ಇರಿ.

ಕನ್ಯಾ: ಆರ್ಥಿಕ ಸಮಸ್ಯೆ ಎದುರಾಗಿ ಸಹೋದರರ ಅಥವಾ ಸಂಬಂಧಿಕರ ಸಹಾಯ ಕೇಳುವುದು ಅನಿವಾರ್ಯ. ಸೋದರ ಮಾವನ ಮಾತನ್ನು ಕೇಳಿ. ದೇಹದಲ್ಲಿನ ಅಧಿಕ ಉಷ್ಣಾಂಶದಿಂದ ದಂತವ್ಯಾಧಿ ಸಂಭವಿಸಬಹುದು.

ತುಲಾ: ನಿಮ್ಮೊಳಗಿನ ಶಕ್ತಿ ಪ್ರಕಾಶಿಸಲಿದೆ. ಅಪರೂಪದ ಸಮಾರಂಭಕ್ಕೆ ಆಹ್ವಾನ ಬರುವುದು. ಹಾಲು ಮಾರಾಟಗಾರರಿಗೆ ಲಾಭವಿದೆ. ಹೊಸದಾಗಿ ಹಣ ಹೂಡಿಕೆ ಮಾಡಬೇಕಾದರೆ ಪರಿಶೀಲನೆ ಅಗತ್ಯ.

ವೃಶ್ಚಿಕ: ನಂಬಿಕಸ್ಥರಿಂದ ಮೋಸದ ಕೃತ್ಯಗಳು ನಡೆಯುವ ಸಂದರ್ಭಗಳಿವೆ. ವ್ಯವಹಾರಗಳ ಬಗ್ಗೆ ಗಮನ ಹರಿಸುವುದು ಮುಖ್ಯವಾಗಿದೆ. ಶತ್ರುಗಳ ಬಲೆಗೆ ಬೀಳದಂತೆ ಎಚ್ಚರವಹಿಸಬೇಕು.

ಧನು: ವೃತ್ತಿ ಬದಲಾವಣೆಯ ಸಮಸ್ಯೆ ನಿವಾರಣೆಯಾಗುವುದು. ಬಂಗಾರದ ಮೇಲಿನ ಧನ ಹೂಡಿಕೆಯಲ್ಲಿ ಲಾಭವಿದೆ. ಬಾಲ ಕಲಾವಿದರಿಗೆ ಉತ್ತಮ ಹೆಸರು ಬರಲಿದೆ. ದ್ವಿಚಕ್ರ ವಾಹನಗಳ ಮಾರಾಟಗಾರರಿಗೆ ಉತ್ತಮ ವಹಿವಾಟು.

ಮಕರ: ಚರ್ಚೆ ಹಾಗೂ ವ್ಯವಹಾರಗಳಲ್ಲಿ ಬಹಳ ಜಾಗರೂಕತೆಯನ್ನು ವಹಿಸಿ. ಯಂತ್ರಗಳ ಕೆಲಸ ಮಾಡುವಾಗ ಜಾಗರೂಕರಾಗಿರಿ. ಕುಟುಂಬದ ವ್ಯಕ್ತಿಗಳನ್ನು ಬಿಟ್ಟು ಹೋಗುವುದು ಮನಸ್ತಾಪಗಳಿಗೆ ಕಾರಣವಾಗಬಹುದು.

ಕುಂಭ: ಉತ್ತಮರ ಅಥವಾ ಸಾಧನೆ ಮಾಡಿರುವವರ ಸಹವಾಸ ಮಾಡುವುದು ಅಭಿವೃದ್ಧಿಗೆ ಸಹಾಯವಾಗುತ್ತದೆ. ಸಕಲ ವಿಘ್ನ, ವಿಪತ್ತುಗಳನ್ನು ಕಳೆದುಕೊಂಡು ಕಾರ್ಯಸಾಧನೆಗಾಗಿ ಮಹಾಗಣಪತಿಯನ್ನು ಪ್ರಾರ್ಥಿಸಿ.

ಮೀನ: ಮನೆಯಲ್ಲಿನ ಸಂತೋಷವು ಅನಿರೀಕ್ಷಿತ ಭೇಟಿಯಿಂದ ಇಮ್ಮಡಿಯಾಗುತ್ತದೆ. ಪುಷ್ಪವಿನ್ಯಾಸಕರ ಅಪರೂಪದ ಪುಷ್ಪ ಸಂಯೋಜನೆಯು ಪ್ರಸಿದ್ಧಿಯನ್ನು ಗಳಿಸುವುದು. ಚರ್ಮ ಸಂಬಂಧಿ ತೊಂದರೆಗಳು ಪೀಡಿಸಬಹುದು.

ಪದಬಂಧ 6197

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಆತುರಾತುರವಾಗಿ ಓಡುತ್ತಿರುವ ಕುದುರೆ (3)
3.ಕೆಡುಕಾಗಲೆಂದು ಬಯಸಿ ಹೇಳುವ ಮಾತು (2)
5.ಅತ್ತಿತ್ತ ನೋಡುವಾಗ ಮೊಟ್ಟೆ ಕಾಣಿಸಿತಲ್ಲಾ! (2)
6.ಅನ್ನ ಮಾಡುವ ಪಾತ್ರೆ ಉಲ್ಟಾ ಆಗಿಬಿಟ್ಟಿದೆ (3)
7.ಪ್ಲೀಹಕೋಶವನ್ನು ಹೀಗೂ ಹೇಳುತ್ತಾರೆ (2)
8.ಆಲೋಚನೆಯ ರೀತಿಯಿದು (6)
10.ಅನೇಕ ಸುಂದರ ಜಲಪಾತಗಳಿರುವ ಕರಾವಳಿ ಜಿಲ್ಲೆ (6)
14.ಅರಣ್ಯ ಇಲ್ಲಿ ಕಾಣುತ್ತಿದೆ (2)
15.ಅವಸರ ಅಥವಾ ಕುತೂಹಲ (3)
16.ನಾಡಾಡಿಯ ಧಮನಿ (2)
17. ಈಕೆ ಮನ್ಮಥನ ಪತ್ನಿ (2)
18.ಇಲ್ಲಣ ನೋಡಿದ್ದಕ್ಕೆ ಈ ಹೆದರಿಕೆಯೇ? (3)

ಮೇಲಿಂದ ಕೆಳಕ್ಕೆ

1.ಕಳವಿನಿಂದ ಬದುಕುವ ವೃತ್ತಿ (4)
2. ಹಂಚಿಕೆಯಲ್ಲಿ ತಿರುವುಮುರುವಾಗಿದೆ (4)
4.ಅಣಕ ಈ ಪರಿ ಕಾಣುತ್ತಿದೆ (4)
5.ತಡವಾಗಿ ಬಿತ್ತಿರುವ ಅಲಸಂದೆ (4)
9.ಅಗಸನನ್ನು ಹೀಗೂ ಕರೆಯುತ್ತಾರೆ (3)
10.ಶರಣೆ ಅಕ್ಕಮಹಾದೇವಿಯ ಹುಟ್ಟೂರು (4)
11.ಬೆಲೆ ಬಾಳುವ ಮಣಿಗಳನ್ನು ಅಡಗಿಸಿಕೊಂಡಿರುವ ಸಮುದ್ರ (4)
12.ಕೊಳ್ಳೆ ಹೊಡೆಯುವವನು (4)
13.ಪಣದಲ್ಲಿರುವ ಅಳತೆ (4)

1		2	■	3	4	■	5	
	■		■	■	6			■
	■		■	■		■	7	
	■	8		9				■
■	■	■	■		■	■	■	■
■	10		11			12	■	13
14		■		■	■		■	
■	15			■	■		■	
16		■	17		■	18		

6196ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಪರಿತಾಪ 3.ಕೂಗಳತೆ
5.ಮಾರ್ಮಿಕ 6.ಅವಗುಣ
8.ಷರಬತ್ತು 10.ಅಂತರ್ಧಾನ
12.ತರಗತಿ 13.ವಠಾರ
16.ಪರಿಹಾಸ 17.ಮಧುಚಂದ್ರ

ಮೇಲಿಂದ ಕೆಳಕ್ಕೆ:

1.ಪತ್ತೆ 2.ಪರಿಮಾಣ
3.ಕೂಲಂಕಷ 4.ತೆಪ್ಪ
7.ವರಾತ 9.ಬಳಗ
11.ನವಮಾಸ 12.ತರತಮ
14.ದ್ವೀಪ 15.ಲಾಂದ್ರ


ಸುಡೊಕು 6581

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5			4		3	9	6	
7		8						5
		3	5		8	7	2	1
		9						7
	3	7	1	8	6	4	5	
8						2	1	
6		5		2				4
3						5		2
	8	2		5			7	

6580 ಸುಡೊಕು

3	4	8	2	7	9	6	5	1
9	6	1	5	8	3	2	7	4
5	7	2	1	6	4	3	9	8
6	9	4	7	3	5	1	8	2
2	8	5	6	9	1	7	4	3
1	3	7	4	2	8	9	6	5
8	5	9	3	1	6	4	2	7
7	1	6	8	4	2	5	3	9
4	2	3	9	5	7	8	1	6



ಆದೀಶ್ವರ್
ಎಲೆಕ್ಟ್ರೋ ವರ್ಲ್ಡ್
gadget for every budget!
ಧಂತೇರಸ್ ಸೇಲ್
GET UPTO
₹ 25,000/-
INSTANT
CASH BACK
ON CREDIT & DEBIT CARD EMI
QLED 85inch
FESTIVAL PRICE
₹ 1,64,990/-
QLED 75 inch
FESTIVAL PRICE
₹ 79,990/-
HOTTEST DEALS ON
BIGGER SCREENS
QLED 65 inch
FESTIVAL PRICE
₹ 57,990/-
QLED 100 inch
NETFLIX
hotstar
SONY liv
prime video
YouTube
Z5
FESTIVAL PRICE ₹ 2,99,990/-
QLED 55 inch
FESTIVAL PRICE
₹ 38,990/-
SONY
BRAVIA 2 | 4K ULTRA HD
75
EMI ₹2,490/-
UPTO ₹5,000/- INSTANT CASH BACK ON YOUR CREDIT CARD EMI LOW DOWNPAYMENT LOW EMI
LG Life's Good
QNED AI TV
75
EMI ₹1,994/-
UPTO ₹7,500/- INSTANT CASH BACK ON YOUR CREDIT CARD EMI LOW DOWNPAYMENT LOW EMI
Haier
4K ULTRA HD
75
EMI ₹2,994/-
UPTO ₹8,000/- INSTANT CASH BACK ON YOUR CREDIT CARD EMI LOW DOWNPAYMENT LOW EMI
Panasonic
UHD 4K
55
EMI ₹3,499/-
UPTO ₹5,000/- INSTANT CASH BACK ON YOUR CREDIT CARD EMI LOW DOWNPAYMENT LOW EMI
iphone17
Get OG adapter FREE
JUST PAY | ₹2,599*/-
ONEPLUS Nord 5 5G
Get OG Neck band FREE
JUST PAY | ₹999*/-
SAMSUNG S25 Ultra
Get OG Neck band FREE
JUST PAY | ₹3,699*/-
realme 15X 5G
Get OG Neck band FREE
JUST PAY | ₹999*/-
Redmi 15 5G
Get OG Neck band FREE
JUST PAY | ₹999*/-
ASSURED GIFT
ON EVERY PURCHASE*
SAMSUNG
ONEPLUS
realme
mi
vivo
oppo
Price Inclusive of Bank Offers*
BAJAJ FINSERV
IDFC FIRST Bank
Pine Labs
*T&C apply
ಚನ್ನಪಟ್ಟಣ
ಶಿರಸಿ
ಕೋಲಾರ
ಬೆಳಗಾವಿ
ಬಳ್ಳಾರಿ
ಚಿತ್ರದುರ್ಗ
ದಾವಣಗೆರೆ
ತಿಪಟೂರು
ತುಮಕೂರು
ಯಾದಗಿರಿ
ಗೋಣಿಕೊಪ್ಪ
ಹುಬ್ಬಳ್ಳಿ
ಬೀದರ್
ಕಲಬುರ್ಗಿ
ಕೆ.ಆರ್. ನಗರ
ದೊಡ್ಡಬಳ್ಳಾಪುರ
ವಿಜಯಪುರ
ಸಿಂಧನೂರ್
ಕುಶಾಲನಗರ
ಮಂಡ್ಯ
ಚಿಕ್ಕಮಗಳೂರು
ಹಾಸನ
ತುಮಕೂರು
ಮೈಸೂರು 5 ಸ್ಟೋರ್ಸ್
ಕುವೆಂಪುನಗರ
ಹಿನಕಲ್
ಉದಯಗಿರಿ
ಜೆ.ಪಿ ನಗರ
ಡಾ. ರಾಜ್‌ಕುಮಾರ್ ರಸ್ತೆ
Free Gifts depends on Brands & Selective Models • Products shown here are only indicative • Exchange Rates Conditions apply • Finance at the sole discretion of the financiers • Offers not applicable on Sony & Samsung.
HELPLINE 080 - 408 33 999
Shop Online @ www.adishwarestore.com

ಶಬರಿಮಲೆ ಚಿನ್ನ ಕಳವು ಪ್ರಕರಣ ಪೋಟಿ ಎಸ್‌ಐಟಿ ವಶಕ್ಕೆ

ಪತ್ತನಂತಿಟ್ಟ/ಕೇರಳ (ಪಿಟಿಐ): ಶಬರಿಮಲೆ ಅಯ್ಯಪ್ಪಸ್ವಾಮಿ ದೇವಸ್ಥಾನದ ಚಿನ್ನ ಕಳವು ಪ್ರಕರಣದ ಪ್ರಮುಖ ಆರೋಪಿ, ಬೆಂಗಳೂರು ಮೂಲದ ಉದ್ಯಮಿ ಉಣ್ಣಿಕೃಷ್ಣನ್ ಪೋಟಿ ಅವರನ್ನು ಅ.30ರವರೆಗೆ ವಿಶೇಷ ತನಿಖಾ ತಂಡದ (ಎಸ್‌ಐಟಿ) ವಶಕ್ಕೆ ಒಪ್ಪಿಸಿ ಕೇರಳ ಹೈಕೋರ್ಟ್ ಶುಕ್ರವಾರ ಆದೇಶಿಸಿದೆ.

‘ಕೆಲವರು ನಡೆಸಿರುವ ಕುತಂತ್ರಕ್ಕೆ ನಾನು ಬಲಿಯಾಗಿದ್ದೇನೆ. ನನ್ನನ್ನು ಈ ಪ್ರಕರಣದಲ್ಲಿ ಸಿಕ್ಕಿಸಿದವರನ್ನು ಕಾನೂನಿನ ಮುಂದೆ ತರಬೇಕು’ ಎಂದು ಉಣ್ಣಿಕೃಷ್ಣನ್ ಪೋಟಿ ನ್ಯಾಯಾಲಯದ ಆವರಣದಲ್ಲಿ ಸುದ್ದಿಗಾರರಿಗೆ ತಿಳಿಸಿದರು. ಪೋಟಿಯನ್ನು ನ್ಯಾಯಾಲಯದಿಂದ ಹೊರಗೆ ಕರೆತರುವಾಗ, ಗುಂಪಿನಿಂದ ವ್ಯಕ್ತಿಯೊಬ್ಬ ಅವರತ್ತ ಚಪ್ಪಲಿ ತೂರಿದರು.

ಗುರುವಾರ ಬೆಳಿಗ್ಗೆ ಪೋಟಿ ಅವರನ್ನು ತಿರುವನಂತಪುರದ ಪುಳಿಮಾತ್‌ನ ಅವರ ನಿವಾಸದಲ್ಲಿ ಬಂಧಿಸಿದ್ದ ಪೊಲೀಸರು, ಕ್ರೈಂ ಬ್ರ್ಯಾಂಚ್ ಕಚೇರಿಗೆ ಕರೆತಂದು 14 ಗಂಟೆ ಸತತ ವಿಚಾರಣೆಗೆ ಒಳಪಡಿಸಿದ್ದರು.

ದೇವಸ್ಥಾನದ ದ್ವಾರಪಾಲಕ ಮೂರ್ತಿಗಳ ತಾಮ್ರದ ಕವಚಕ್ಕೆ ಲೇಪಿಸಿದ್ದ ಚಿನ್ನ ಹಾಗೂ ಶ್ರೀಕೋವಿಲ್‌ನ ಬಾಗಿಲ ಚೌಕಟ್ಟಿನ ಚಿನ್ನದ ತೂಕ ಕಡಿಮೆಯಾಗಿರುವ ಬಗ್ಗೆ ಎಸ್‌ಐಟಿ ತನಿಖೆ ನಡೆಸುತ್ತಿದೆ. ಈ ಎರಡೂ ಪ್ರಕರಣಗಳಲ್ಲಿ ಉಣ್ಣಿಕೃಷ್ಣನ್ ಪೋಟಿ ಪ್ರಮುಖ ಆರೋಪಿಯಾಗಿದ್ದಾರೆ.

ಈ ಪ್ರಕರಣದಲ್ಲಿ ಹೊರ ರಾಜ್ಯಗಳೂ ಸೇರಿ ಹಲವೆಡೆಯಿಂದ ಸಾಕ್ಷ್ಯಗಳನ್ನು ಸಂಗ್ರಹಿಸಬೇಕಿರುವುದರಿಂದ ಪೋಟಿ ಅವರನ್ನು 14 ದಿನ ವಶಕ್ಕೆ ನೀಡುವಂತೆ ಎಸ್‌ಐಟಿ ಮನವಿ ಮಾಡಿತ್ತು. ಅನಾರೋಗ್ಯದ ಕಾರಣದಿಂದ ಪೋಟಿಯನ್ನು ಎಸ್‌ಐಟಿ ವಶಕ್ಕೆ ನೀಡಬಾರದು ಎಂದು ಅವರ ಪರ ವಕೀಲರು ವಾದಿಸಿದರು. ಆದರೆ, ಕೋರ್ಟ್ ಇದನ್ನು ಒಪ್ಪಲಿಲ್ಲ. ಜತೆಗೆ ಚಿನ್ನ ಲೇಪನ ಕಾರ್ಯ ನಿರ್ವಹಿಸಿದ್ದ ಚೆನ್ನೈ ಮೂಲದ ಸ್ಮಾರ್ಟ್ ಕ್ರಿಯೇಷನ್ಸ್ ಮತ್ತು ಕೆಲವು ವ್ಯಕ್ತಿಗಳ ವಿರುದ್ಧವೂ ಸಮಗ್ರವಾದ ತನಿಖೆ ನಡೆಯಬೇಕಿದೆ ಎಂದು ಪ್ರಾಸಿಕ್ಯೂಷನ್ ಕೋರ್ಟ್‌ಗೆ ಮಾಹಿತಿ ನೀಡಿತು.

ಸದ್ಯ ಪೋಟಿಯನ್ನು ಪತ್ತನಂತಿಟ್ಟ ಪೊಲೀಸ್ ಕ್ಯಾಂಪ್‌ಗೆ ಸ್ಥಳಾಂತರಿಸಲಾಗಿದೆ. ಪ್ರಕರಣದ ತನಿಖೆ ಪೂರ್ಣಗೊಳಿಸಲು ಎಸ್‌ಐಟಿಗೆ ಕೇರಳ ಹೈಕೋರ್ಟ್ ಆರು ವಾರಗಳ ಗಡುವು ನಿಗದಿಪಡಿಸಿದೆ.

2 ಕೆ.ಜಿಯಷ್ಟು ಚಿನ್ನ ದುರ್ಬಳಕೆ

ಉಣ್ಣಿಕೃಷ್ಣನ್ ಪೋಟಿ ಅವರ ಕಸ್ಟಡಿ ಕೋರಿ ನ್ಯಾಯಾಲಯಕ್ಕೆ ಎಸ್‌ಐಟಿ ಸಲ್ಲಿಸಿದ್ದ ಅರ್ಜಿಯಲ್ಲಿ, ‘ಆರೋಪಿಯು ದೇವಸ್ಥಾನದ ದ್ವಾರಪಾಲಕ ಮೂರ್ತಿಯ ಕವಚದಿಂದ 2 ಕೆ.ಜಿಯಷ್ಟು ಚಿನ್ನ ದುರ್ಬಳಕೆ ಮಾಡಿಕೊಂಡಿದ್ದಾರೆ’ ಎಂದು ಉಲ್ಲೇಖಿಸಲಾಗಿದೆ.

ತನಿಖಾಧಿಕಾರಿ ಎಸ್.ಶಶಿಧರನ್, ಶುಕ್ರವಾರ ರಾನ್ನಿ ನ್ಯಾಯಾಲಯಕ್ಕೆ ಉಣ್ಣಿಕೃಷ್ಣನ್ ಪೋಟಿ ಕಸ್ಟಡಿ ಕೋರಿ ಅರ್ಜಿ ಸಲ್ಲಿಸಿದರು.

2004ರಿಂದ 2008ರವರೆಗೆ ಉಣ್ಣಿಕೃಷ್ಣನ್ ಪೋಟಿ ಶಬರಿಮಲೆ ಅಯ್ಯಪ್ಪ ದೇವಸ್ಥಾನದ ಅರ್ಚಕರಿಗೆ ಸಹಾಯಕರಾಗಿದ್ದರು. 1998ರಲ್ಲಿ ದೇವಸ್ಥಾನದ ದ್ವಾರಪಾಲಕ ಮೂರ್ತಿಗಳ ತಾಮ್ರದ ಕವಚಕ್ಕೆ 2 ಕೆ.ಜಿಯಷ್ಟು ಚಿನ್ನ ಲೇಪನ ಮಾಡಿದ್ದರ ಬಗ್ಗೆ ಅವರಿಗೆ ಮಾಹಿತಿ ಇತ್ತು. ಇದನ್ನು ಗಮನದಲ್ಲಿ ಇಟ್ಟುಕೊಂಡು ಚಿನ್ನ ಕಳವಿಗೆ ಯೋಜನೆ ರೂಪಿಸಿದ ಆರೋಪಿ, 2019ರಲ್ಲಿ ದ್ವಾರಪಾಲಕ ಮೂರ್ತಿಗಳ ತಾಮ್ರದ ಕವಚದ ರಿಪೇರಿ ಕೆಲಸ ಇದೆ ಎಂದು ದೇವಸ್ವಂ ಬೋರ್ಡ್‌ಗೆ ಅರ್ಜಿ ಸಲ್ಲಿಸಿದ್ದರು.

ದ್ವಾರಪಾಲಕ ಮೂರ್ತಿಯಿಂದ ತಾಮ್ರದ ಕವಚವನ್ನು ತೆಗೆದು ಅದನ್ನು ದುರಸ್ತಿಗಾಗಿ ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ ಮತ್ತಿತರ ಕಡೆ ತೆಗೆದುಕೊಂಡು ಹೋಗಲಾಗಿತ್ತು. ಅಲ್ಲಿ ಚಿನ್ನವನ್ನು ಅಕ್ರಮವಾಗಿ ತೆಗೆದು, ಅಂತಿಮವಾಗಿ ಚಿನ್ನದ ಮರು ಲೇಪನಕ್ಕಾಗಿ ಚೆನ್ನೈನ ಅಂಬತ್ತೂರ್ ಸಮೀಪದ ಸ್ಮಾರ್ಟ್ ಕ್ರಿಯೇಷನ್ಸ್ ಸಂಸ್ಥೆಗೆ ಒಪ್ಪಿಸಲಾಗಿತ್ತು. ಅಲ್ಲಿ ಕೇವಲ 394.9 ಗ್ರಾಂನಷ್ಟು ಚಿನ್ನವನ್ನು ಮಾತ್ರ ಮರುಲೇಪನಕ್ಕೆ ಬಳಸಲಾಗಿತ್ತು ಎಂದು ಎಸ್‌ಐಟಿ ಅರ್ಜಿಯಲ್ಲಿ ಹೇಳಿದೆ.

ಉಪರಾಷ್ಟ್ರಪತಿ ಮನೆಗೆ ಬಾಂಬ್ ಬೆದರಿಕೆ

ಚೆನ್ನೈ (ಪಿಟಿಐ): ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರ ಪೊಯಸ್ ಗಾರ್ಡನ್ ನಿವಾಸದಲ್ಲಿ ಬಾಂಬ್ ಇಟ್ಟಿರುವುದಾಗಿ ಬೆದರಿಕೆ ಕರೆ ಬಂದಿತ್ತು ಎಂದು ಪೊಲೀಸರು ಶುಕ್ರವಾರ ತಿಳಿಸಿದರು.

‘ಸಹಾಯಕ ಪೊಲೀಸ್ ಕಮಿಷನರ್ ಕಚೇರಿಗೆ ಇ–ಮೇಲ್ ಮೂಲಕ ಬೆದರಿಕೆ ಕರೆ ಬಂದಿತ್ತು. ಕೂಡಲೇ ಬಾಂಬ್ ನಿಷ್ಕ್ರಿಯ ದಳವನ್ನು ಒಳಗೊಂಡ ಪೊಲೀಸರ ತಂಡವು ಉಪ ರಾಷ್ಟ್ರಪತಿ ಅವರ ನಿವಾಸಕ್ಕೆ ತೆರಳಿ ಪರಿಶೀಲನೆ ನಡೆಸಿತು. ಅಲ್ಲಿ ಯಾವುದೇ ಸ್ಫೋಟಕ ಪತ್ತೆಯಾಗಿಲ್ಲ. ಹೀಗಾಗಿ ಇದೊಂದು ಹುಸಿ ಬಾಂಬ್ ಬೆದರಿಕೆಯಾಗಿರಬಹುದು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

₹2 ಕೋಟಿ ಮೌಲ್ಯದ ಸಿರಪ್ ವಶ



ಅಗರ್ತಲಾ (ಪಿಟಿಐ): ಸುಮಾರು ₹2 ಕೋಟಿ ಮೌಲ್ಯದ ಕೆಮ್ಮಿನ ನಿಷೇಧಿತ ಸಿರಪ್ ಅನ್ನು ತ್ರಿಪುರಾದ ಜಿರಾನಿಯಾ ರೈಲು ನಿಲ್ದಾಣದಲ್ಲಿ ವಶಪಡಿಸಿಕೊಳ್ಳಲಾಗಿದೆ.

ಸರ್ಕಾರಿ ರೈಲ್ವೆ ಪೊಲೀಸ್ ಪಡೆ (ಜಿಆರ್‌ಪಿ), ಕಸ್ಟಮ್ಸ್ ಇಲಾಖೆ ಮತ್ತು ವಿಶೇಷ ಕಾರ್ಯಪಡೆ (ಎಸ್‌ಟಿಎಫ್) ಗುರುವಾರ ಸಂಜೆ ಜಂಟಿ ಶೋಧ ಕಾರ್ಯಾಚರಣೆಯನ್ನು ಆರಂಭಿಸಿದ್ದು, ಶುಕ್ರವಾರ ಮುಂಜಾನೆಯವರೆಗೂ ನಡೆದಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಾರ್ಯಾಚರಣೆಯ ವೇಳೆ ನಿಲ್ದಾಣದಲ್ಲಿದ್ದ ಎರಡು ಸರಕು ಸಾಗಣೆ ರೈಲಿನ ವ್ಯಾಗನ್‌ಗಳಿಂದ ನಿಷೇಧಿತ ‘ಎಸ್ಕಫ್’ ಕೆಮ್ಮಿನ ಸಿರಪ್‌ನ 90,000 ಬಾಟಲಿಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಪ್ರತಿ ಬಾಟಲ್‌ನಲ್ಲೂ 100 ಮಿಲಿ ಲೀಟರ್‌ನಷ್ಟು ಸಿರಪ್ ಇದೆ. ಪ್ರಕರಣದ ಸಂಬಂಧ ಇದುವರೆಗೂ ಯಾರನ್ನೂ ಬಂಧಿಸಿಲ್ಲ ಎಂದು ಅಧಿಕಾರಿ ಶುಕ್ರವಾರ ಹೇಳಿದ್ದಾರೆ.

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Sites

Anjanapura

SALE BDA 30x40 Anjanapura 5th G Block South facing 40x60 west facing commercial site 2nd Block. Contact 9620041313, 9945373839

ANJANAPURA BDA Site For Sale, 1ST Block 20x30, W/F Price 65 Lakhs Negotiable 9740150364/8884707773

Airport Road

"40X60 WITH E KATHA BIAAPA`approved old`Layout formed`in`2008 Bagalur`near KIADB`Aero`park 6`kms before`Airport, excellent`place for`investment, 75%`Bank Loan available, ₹6000/-P.sft "Sri.Ganesh Estate" 9845286505"

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

SALE BSK 6th Stage 4th B-Block 40x60 west facing 2Cr also 40x60 South Facing 6th Block 2.10Cr behind 100ft Road, site owners 9945373839, 9620041313

BANASHANKARI 6TH Stage,BDA 40x60, Site For Sale Near 100 Feet Road Cheque Payment: 9916817739

Basavanagudi

NORTH FACING SITE FOR Sale At Thyagarajanagar Basavanagudi measuring 690 Sq.Ft Brokers Excuse. Call: 9880137031

BASAVANAGUDI 100FT Road Excellent Location Around 14,000 Sqft Corner Property For Sale Near Lalbagh: 9742211233

Chandapura

KHB SITE SALE at Surya Nagar Phase 2 30x40, 20x30, Near Anekal Road, Chandrapura 9066865343

Devanahalli

FOR SALE PRIME PROPERTY WITH THREE SIDES ROAD, BANGALORE- HYDERABAD NATIONAL HIGHWAY, OPPOSITE TO NANDI UPACHAR HOTEL, NANDI HILLS ROAD, STRR 320FEET DABASPET- CHENNAI EXPRESS HIGHWAY AND STRR SERVICE ROAD, 1-05GUNTAS, CORNER PROPERTY WITH 3.5 FAR, CONTACT VICTORY PROPERTIES. www.victoryproperties.in, info@victoryproperties.in. 7411692219/ 8618576685/ 9482303339/ 9686894972

Anekal

KHB Sites in Surya City Near Jigani
STRRA & BMRDA APPROVED PLOTS
Near Bannerghatta Road Akhata & Ekhata Plots Ready for Registration SBI & Nationalised Bank Loan (Land Owner Share) **Call : 74115 54412**

Double Road

SHANTHINAGAR VACANT SITE Near KH Road, 4000 Sqft North Facing Prime Location 40,000/- PSft: 9341906338

Kempegowda Layout

NADA PRABHU Kempegowda layout BDA Site For Sale 30x40, 40x60, 50x80 Contact: 7676900174 6363496142

NADA PRABHU Kempegowda layout BDA Site For Sale 30x40, 40x60, 50x80 Contact: 7676900174 6363496142

Magadi Road

30X40 WEST FACE BEL 1st Stage, BDA Allotment, Nearest East West College, Herohalli Magadi Road. No Broker. Call 9008652533

Nagarabhavi

SITE FOR SALE 30x50 WEST`SOUTH CORNER BDA NAGARABHAVI 'D' GROUP RAJAJINAGAR HOUSING COOPERATIVE SOCIETY 'E' BLOCK. Contact: 8105688602.

Out-Station

2 PLOTS 30x40 in gated community along Bangalore-Kolar state highway, 40 kms from airport. For immediate sale. Contact 7829775548

Uttarahalli

UTTARAHALLI PLOT Sale 27.5'x65' BBMP A Khatha. North facing & Lake View. Rs.15,000/sft. Call: 6362348146

Vishweshwariah Layout

"40X60 NORTH FACING TOP LOCATION RESIDENTIAL BDA SITE 6TH BLOCK VISHVESHWARAIAH LAYOUT IMMEDIATE SALE- 9845143579"

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, BANASHANKARI 6th Stage. Contact: 8892901567

"AVAILABLE VISHVESWARAIAH 1st- 50x80, 5th-40x60 North, 3rd-40x60, MPM 40x60 Good location, Genuine Buyers/Seller. 9448733456/ 7259675150"

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, Contact: 9035470616

***BUYING/SELLING* 20X30** 30x40,40x60,50X80 BDA SITES VISHWESHWARAIAH KEMPEGOWDA LAYOUT. Contact:SREENIDHI PROPERTY JUNCTION. 9742681666

SIR M Vishveswaraiah Layout 20x30 BDA Site Sale West Facing of Rs. 65L. Lokesh 9886201690

Malur

MALUR. LUXURY Resort Villa Plots, 0 KMS from Xpress Highway, MPA/ BMRDA Approved, Ekatha Ready for Registration. 50 + Premium Amenities. Call :8404084041.

Mysore

50×80 PRIME RESIDENTIAL SITE FOR SALE
40 Feet Road,South Face, Behind 80 Ft. Road, Vijayanagar 4th Stage, Close to Marimallapa Compound, Mysore. Resale Property 2.9cr Negotiable
Contact: **9739703467 9686895205**

Arishina Kunte

ADARSHANAGAR/ ARISHINAKUNTE, Bangalore-Tumkur Highway, SITE:40'x60', N/F(Park) Road, CMC E-Khata Rs.6000/SFT, Call: 7892206438.

Multiple Locations

SELLING/ BUYING HOUSES, SITES:30x40 40x60 FLATS, COMMERCIAL, Jayanagar, JP.Nagar BASAVANAGUDI Kanakapura Road, BANASHANKARI, BTM, HSR. CALL 7760019494

Kanakapura Road

SITE FOR SALE: MARUTHI LAYOUT Subramanyapura 30x50 West Facing 30 Feet Road, BBMP A katha. Call 9740148870 9341050991.

3BHK APARTMENT for`Sale 40x60, 2400.Sqft. Individual Floor near Vajarahalli and Raghuvanahalli Metro Station 1`KM. Call 9740148870 9341050991.

House

Banashankari

BSK 2ND Stage 60x90 Prime Residential Property With Old House For-Sale Only Genuine Buyers No Brokers GTR 9986490019

J P Nagar

FOR SALE: JP.NAGAR 5th Phase Fully Furnished 4BHK 30 Squares DUPLEX Residential Building on 40x60- 8 Crores. Buyers Call: 9343728200.

Kengeri

RESIDENCIAL BUILDING SALE 30x50`BBMP E-katha 1 Lakh Rental`Income 2BHK:5units, 3BHK:1Unit Near Hoysala circle Kengeri Upanagar. Brokers`Excuse. Call 9738016535

Vidyaranyapura

4-STORY HOUSE FOR-SALE in Ramchandrapura, Jalahalli (post), Bangalore 560013. The property boasts of 5 Houses with 2 BHK (3 Houses)and 1 BHK (2 Houses) with Parking Space. Price: 17500000/-. Property Size:600 sqft. Total built-up area:2700sqft. Constructed: April 2025. South-Facing Road, All House East-Facing. Contact: D.Gopal 9880450523/ 8496085574.

Yelahanka

1500 SFT site with rental residential units at Dwarakanagar, Bagalur Main Road. Contact 9986037756

Flat

Banashankari

SALE FLAT NANDI ENCLAVE BSK 3RD STAGE 2BHK FURNISHED 1050 SQFT CARPARKING RS.70 LAKHS DETAILS: 7892035229

Hennur

3BHK LUXURY Flats For-Sale/ Rent at Promax Dreamville Home, Hennur Main-Road Kothanur Bangalore-77. 8073977742 6364588805

Kengeri

KENGERI, 1 BHK BDA Apartment 1st Floor For Sale of Rs. 17 Lakhs, Lokesh: 9886201690

Jayanagar

SALE 2-BHK FLAT G.F. NORTH FULLY FURNISHED JAYANAGAR 1st BLOCK EAST GENUINE BUYERS 7795936271 9480338676

Commerical

Anjanapura

COMMERCIAL SITE FOR SALE Site No. 685 Anjanapura 8th block, north facing 50*80. Call 6362874644.

Vishweshwariah Layout

BDA COMMERCIAL 40×60 Site,s Sale SMVL 5th Block Near KLE Law College 60ft Road: 9980433004

Industrial & Factory

Out-Station

INDUSTRIAL LAND FOR SALE
10/5 - acre Corner Plot Located in APIIC Industrial Area Gollapuram Village, Hindupur, Andhra Pradesh
Enquiries:
948 083 4451
944 828 6981

Residential/ Commercial

Mysore

FOR SALE Two spacious independent houses on 49 x 125 site at V V Mohalla, Mysuru. Furnished North East Corner house at Kuvempunagar, Mysuru. 9480733541

Agricultural Land

Out-Station

LAND @ Reasonable Price Tumkur 110acre, Pavagada 550, Mysore 280, Gulbarga 7000, Maharashtra 3500, 9535195656

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd. Bengaluru

ಕ್ಲಾಸಿಫೈಡ್ಸ್ WEEKEND CORNER





REAL ESTATE BUYING

Joint Development

General

WANTED INVESTORS ON PROPERTIES WITH GOOD PROFIT SHARING RETURNS WITH LEGAL BOUNDED TERMS, FOR A 35 YEARS EXPERIENCED REAL ESTATE COMPANY HAVING RERA APPROVAL ON INDIVIDUAL NAME, MEMBER OF BRAI (BANGALORE REALTORS ASSOCIATION OF INDIA) BASED IN BANGALORE SOUTH, CONTACT: 7411692219/ 8618576685/ 9482303339/ 9686894972. www.victoryproperties.in, info@victoryproperties.in

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

Basaveshwaranagar

WANTED COMMERCIAL/ Semi Commercial 30x50, 40x50 Property in Basaveswarangr, Bangalore, Brokers Excuse Call Owner's: 7975999568

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, SAPTHAGIRI (Opp.BDA Head Office, Kumara Park). 9036360366.

Vishweshwariah Layout

WANTED BDA Sites (NRI) Nagarbhavi, Vishweshwaraiah Layout, Banashankari, Kempegowda Layout Contact: 9620696913/ 9880781399 Immediate Settlement

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

Real Estate Agents

Mysore Road

ANY PROPERTY only Buyers and Sellers in Around Mysore Road Contact: 9845810954 / 9353992532

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

Bareshell 5000 Sqft OFFICE SPACE
available in 2nd Floor, in Majestic Terraces Building in Electronic city Phase-1. Contact : 9844023523

House

FIRST FLOOR Accommodation available 2Bedroom, Verandah, Dining, Hall Vegetarian only. Geleyarabalaga, Mahalakshmipura. Contact: 9342782113

BUSINESS

Business to Business

Business

WE BUY RUNNING/ Sick Industries, Industrial Metal Scraps,Copper, Aluminium, Building Dismantle/ Demolition,Immediate Payment. Contact Verna Metals, Barton Centre, MG Road. 9620253180.

PROPERY COLLATERALS/ Joint Ventures/ Schools/ Colleges/ Hospitals/ Takeovers/ Selling/ Buying/ New Ideas. Dr. Swamy Naidu (Vamshadhara Projects & Serivces).... 9342247637.

JOB OPPORTUNITIES

General

WANTED STORE Assistants in Jayanagar and Koramangala Timings 9:30 am to 9 pm Sunday holiday salary Rs. 15,000. Location Room can be provided. Call 8050666007

REQUIRED SPORTS teacher, maths and english Teacher for high school contact Kenmore School 9901501185 or email kenmoreschool@gmail.com

TOURS & TRAVEL

Travel

SRILANKA TOUR, WONDERFUL ONE WEEK, IMPORTANT PLACES INCLUDED. BEST ARRANGEMENTS. LIMITED SEATS. GANESH SHENOY 8310028157

PERSONAL

Lost

DOCUMENT LOST
Loss of Marksheet I, **B. Kalpana, daughter of G. Balatchandirane** residing at A1705 Shriram Southern Crest, Bangalore, have lost my Final MA Marksheet issued by Jawaharlal Nehru University, Delhi on 23/07/12 while traveling.
Finders Please Contact: 9899334083

Change of Name

I, SHUSHRUTHA S R daughter of Shivalingappa V, residing at 39 Merudhama 1st cross cmv layout guddadahalli hebbal RT nagar post Bangalore 560032, have changed my name from SHUSHRUTHA S R to ANKITHA SUSHMA by affidavit sworn before a Notary Public (LEELA Bangalore) on 15/10/2025. Henceforth, I shall be known as Ankitha Sushma for all official and legal purposes.

I, MAIMUNA IQBAL, W/o Mr. Iqbal Ahmed residing at No. 12, Serpentine Street, Richmond Town, Bengaluru 560025 have changed my name from MAIMUNA IQBAL AHMED to MAIMUNA IQBAL, Vide Affidavit dated 15-10-2025 sworn before Notary Syed Masood Ahmed, Bangalore. This is applicable for all Purposes, including passport.

CHANGE OF NAME
I, **P Lakshmanan** S/o Perumal, residing at No. 202, Manjunatha Colony, Bengaluru South, Banashankari 3rd Stage, Bengaluru-560085 have changed my name to **DANIEL** vide affidavit dated 17.10.2025 before notary Veena K, Bengaluru. Henceforth I shall be called **DANIEL** only

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331